ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ಗರ್ಲ್‌ಗೈಡ್ ಮಾರ್ಗದರ್ಶಿ

(ಪ್ರವೇಶದಿಂದ ರಾಷ್ಟ್ರಪತಿ ಪುರಸ್ಕಾರದವರೆಗೆ)

The Bharat Scouts & Guides, Karnataka State Association

Do Your Best - Be Prepared - Service

ಬನ್ನಿ, ಜೊತೆಗೂಡಿ, ಕಲಿಯೋಣ, ನಲಿಯೋಣ, ಬೆಳೆಯೋಣ

The Bharat Scouts & Guides

STRUCTURE OF THE ORGANISATION



ಗರ್ಲ್ ಗೈಡ್ ಮಾರ್ಗದರ್ಶಿ

ಪ್ರಕಾಶಕರು

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ

ರಾಜ್ಯ ಪ್ರಧಾನ ಕಾರ್ಯಾಲಯ

39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು–560001

E-Mail : info@bsgkarnataka.org

ಗರ್ಲ್ ಗೈಡ್ ಮಾರ್ಗದರ್ಶಿ: ಪ್ರಕಾಶಕರು: **ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ**
ರಾಜ್ಯ ಪ್ರಧಾನ ಕಾರ್ಯಾಲಯ # 39, ಶಾಂತಿಗೃಹ, ಅರಮನೆರಸ್ತೆ, ಬೆಂಗಳೂರು – 560 001

ದೂರವಾಣಿ	:	ರಾಜ್ಯ ಕೇಂದ್ರ ಕಛೇರಿ	:	080–22260017
		ರಾಜ್ಯ ಗೈಡ್ ಕಛೇರಿ	:	080–22267470

ಮೊದಲನೆಯ ಮುದ್ರಣ	:	1996
ಎರಡನೆಯ ಮುದ್ರಣ	:	2009
ಮೂರನೇ ಮುದ್ರಣ	:	2010
ನಾಲ್ಕನೇ ಮುದ್ರಣ	:	2013
ಐದನೇ ಮುದ್ರಣ	:	2019
ಆರನೇ ಮುದ್ರಣ	:	2024
© ಹಕ್ಕುಗಳು	:	ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್, ಕರ್ನಾಟಕ
ಪ್ರತಿಗಳು	:	2,000
ಪುಟಗಳು	:	x+188=198

Girl Guide Margadarshi : Publisher : **Bharat Scouts & Guides, Karnataka,** # 39, Shanthi Gruha, Palace Road, Bengaluru-560001.

Telephone	:	State Headquarters	:	22260017
		State Guide Office	:	22267470

First Edition	:	1996
Second Edition	:	2009
Third Edition	:	2010
Fourth Edition	:	2013
Fifth Edition	:	2019
Sixth Edition	:	2024
©	:	Bharat Scouts & Guides, Karnataka
Copies	:	2,000
Pages	:	x+186=196
Price	:	**Rs. 75 /-**

Printers :
Raja Printers
No. 20/1, 1st Cross, 3rd Main
Pukhraj Layout, Bannerghatta Road
Bengaluru - 560030. Ph.: 080-22234066 / 42185018

ಮುನ್ನುಡಿ

ಯುವಜನಾಂಗಕ್ಕಾಗಿ ದೇಶ, ಜಾತಿ, ಮತಗಳ ಭೇದವಿಲ್ಲದೆ ರಾಜಕೀಯ ಮುಕ್ತ ಶಿಕ್ಷಣಕ್ಕೆ ಪೂರಕವಾಗಿ ತನ್ನದೇ ಆದ ಧ್ಯೇಯೋದ್ದೇಶ, ಸಿದ್ಧಾಂತ ಮತ್ತು ವಿಧಾನಗಳನ್ನೊಳಗೊಂಡ ಜಾಗತಿಕ ಸಮುದಾಯಗಳ ಜವಾಬ್ದಾರಿಯುತ ಪ್ರಜೆಗಳನ್ನು ರೂಪಿಸುವಲ್ಲಿ ಗರ್ಲ್‌ಗೈಡ್ ಚಟುವಟಿಕೆ ಪ್ರಮುಖ ಪಾತ್ರವಹಿಸುತ್ತಿರುವುದು ಅತ್ಯಂತ ಸಂತೋಷದ ಸಂಗತಿ. 1909 ರಲ್ಲಿ ಮಹಿಳಾಲೋಕಕ್ಕೆ ಉಡುಗೊರೆಯಾಗಿ ಬಂದ **'ಗರ್ಲ್‌ಗೈಡ್'** ಚಳುವಳಿಯು ಕ್ರಿಯಾಶೀಲವಾಗಿ ಕಾರ್ಯನಿರ್ವಹಿಸುತ್ತಿರುವುದು ಹೆಮ್ಮೆಯ ವಿಷಯವಾಗಿದೆ.

ಸುದೀರ್ಘ ಇತಿಹಾಸ ಹೊಂದಿದ ಸಮಾಜದಲ್ಲಿ ಅತ್ಯಂತ ಪ್ರಮುಖವಾದ ಕ್ರಿಯಾಶೀಲ ಸೇವಾ ವಲಯವಾಗಿ, ಸುದೀರ್ಘ ಸೇವೆ ಸಲ್ಲಿಸುತ್ತಿರುವುದಕ್ಕೆ ಉದಾಹರಣೆಯಾಗಿದೆ. ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯಮಟ್ಟದಲ್ಲಿ ಗರ್ಲ್ ಗೈಡ್‌ಗಳು ಅತ್ಯಂತ ರಚನಾತ್ಮಕ ಕಾರ್ಯಗಳಲ್ಲಿ ಕ್ರಿಯಾಶೀಲವಾಗಿ ಭಾಗವಹಿಸಿ, ಸಮಾಜದ ಮೆಚ್ಚುಗೆಗೆ ಪಾತ್ರವಾಗಿರುತ್ತಾರೆ. ಇಷ್ಟು ದೀರ್ಘಕಾಲ ಒಂದು ಸಂಸ್ಥೆ ಕ್ರಿಯಾಶೀಲವಾಗಿದೆ ಎಂದರೆ ಆ ಸಂಸ್ಥೆಯ ತತ್ವಗಳು ಹಾಗೂ ಕಾರ್ಯಕ್ಷಮತೆಯೇ ಮೂಲ ಆಧಾರ. **"ಚಿಕ್ಕಂದಿನಲಿ ಕಲಿ, ಮುಪ್ಪಿನಲಿ ನಲಿ"** ಎಂಬ ಗಾದೆಯಂತೆ ಚಿಕ್ಕವಯಸ್ಸಿನಲ್ಲಿ ಹೆಣ್ಣುಮಕ್ಕಳಲ್ಲಿ ಧೈರ್ಯ, ಸಾಹಸ, ಕ್ರಿಯಾಶೀಲತೆ, ಆತ್ಮವಿಶ್ವಾಸಗಳನ್ನೊಳಗೊಂಡ ಕೌಶಲ್ಯಗಳು ಮಹತ್ವವಾದ ಬದಲಾವಣೆಯನ್ನು ತರುತ್ತವೆಂಬುದು ಮನವರಿಕೆಯಾಗಿದೆ. ಸ್ಕೌಟಿಂಗ್ ಮತ್ತು ಗೈಡಿಂಗ್‌ಗೆ ಸಂಬಂಧಿಸಿದ ಬಹಳ ಪುಸ್ತಕಗಳು ಆಂಗ್ಲಭಾಷೆಯಲ್ಲಿ ಲಭ್ಯವಿರುತ್ತದೆ. ನಮ್ಮ ರಾಜ್ಯ ಭಾಷೆಯಾದ ಕನ್ನಡಕ್ಕೆ ತರ್ಜುಮೆಯಾಗುವುದರಿಂದ ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಸ್ಕೌಟಿಂಗ್-ಗೈಡಿಂಗ್ ಕಾರ್ಯಕ್ಷಮತೆ, ಗುಣಮಟ್ಟಹೆಚ್ಚಿಸಲು ಸಹಾಯಕವಾಗಿದೆ. ಆಧುನಿಕ ವಿಜ್ಞಾನ ಯುಗದಲ್ಲಿ ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗೆ ಸ್ಪಂದಿಸಿ ತಮ್ಮ ಉತ್ತಮ ಭವಿಷ್ಯ ರೂಪಿಸಿಕೊಳ್ಳಲು **'ಗರ್ಲ್‌ಗೈಡ್'** ಚಟುವಟಿಕೆಯು ಅತ್ಯಂತ ಪ್ರಭಾವ ಬೀರುತ್ತಿದೆ. ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕರ್ನಾಟಕ ರಾಜ್ಯ ಸಂಸ್ಥೆ, **'ಗರ್ಲ್ ಗೈಡ್'** ಮಾರ್ಗದರ್ಶಿ ಪುಸ್ತಕಗಳನ್ನು ಇದುವರೆಗೆ 6 ಬಾರಿ

ತರ್ಜುಮೆಗೊಳಿಸಿದ್ದು ಇದು ಇತ್ತೀಚಿನ ಪರಿಷ್ಕೃತಗಳನ್ನೊಳಗೊಂಡು 6ನೇ ಆವೃತ್ತಿಯು ಪ್ರಕಟಣೆಗೊಳ್ಳುತ್ತಿರುವುದು ಅತ್ಯಂತ ಸಂತೋಷದ ವಿಷಯ.

ಪ್ರಕಟಣಾಸಮಿತಿಯ ಅಧ್ಯಕ್ಷರಾಗಿ ಮಾರ್ಗದರ್ಶನ ನೀಡಿದ ಶ್ರೀ ಗೊ.ರು. ಚೆನ್ನಬಸಪ್ಪರವರ ಪ್ರೋತ್ಸಾಹಕ್ಕೆ ಕೃತಜ್ಞತೆಗಳು. ಈ ಪುಸ್ತಕವನ್ನು ಹೊರತರಲು ಶ್ರಮಿಸಿದ ರಾಜ್ಯ ಸಂಸ್ಥೆಯ ಅಧಿಕಾರಿಗಳನ್ನು ಮತ್ತು ನೌಕರರನ್ನು ಅಭಿನಂದಿಸುತ್ತೇನೆ ಹಾಗೂ ಉತ್ತಮವಾಗಿ ಮುದ್ರಿಸಿಕೊಟ್ಟ ಸತ್ಯಶ್ರೀ ಮುದ್ರಣದವರಿಗೂ ಸಹ ಅಭಿನಂದನೆಗಳು. ಕರ್ನಾಟಕ ರಾಜ್ಯದಲ್ಲಿ ಗೈಡ್ ಚಳವಳಿಯನ್ನು ಅತ್ಯಂತ ಕ್ರಿಯಾಶೀಲಗೊಳಿಸಿ ಸಮಾಜಕ್ಕೆ ಉತ್ತಮ ಸೇವೆ ಸಲ್ಲಿಸುವ ಅವಕಾಶ ಕಲ್ಪಿಸಬೇಕೆಂಬುದು ರಾಜ್ಯ ಸಂಸ್ಥೆಯ ಸದಾಶಯವಾಗಿದೆ.

ಗರ್ಲ್‌ಗೈಡ್ ಮಾರ್ಗದರ್ಶಿ (ಪರಿಷ್ಕೃತ ಆವೃತ್ತಿ)ಯು ರಾಜ್ಯದ ಗೈಡಿಂಗ್ ಚಳವಳಿಯನ್ನು ಅತ್ಯಂತ ಕ್ರಿಯಾಶೀಲಗೊಳಿಸುವಲ್ಲಿ ಮಾರ್ಗದರ್ಶಿಯಾಗಿ ಪ್ರಮುಖ ಪಾತ್ರವಹಿಸಲಿದೆಯೆಂದು ಭಾವಿಸುತ್ತೇನೆ ಹಾಗೂ ಸುಶಿಕ್ಷಿತ ಸಮಾಜ ನಿರ್ಮಾಣದಲ್ಲಿ ನಾವೆಲ್ಲ ಭಾಗಿಗಳಾಗೋಣ ಎಂದು ಆಶಿಸುತ್ತೇನೆ.

– ಪಿ.ಜಿ.ಆರ್. ಸಿಂಧ್ಯ
ರಾಜ್ಯ ಮುಖ್ಯ ಆಯುಕ್ತರು

ಹಾರೈಕೆ

ಜಾಗತಿಕ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯ ಅಂಗವಾಗಿರುವುದೇ ಒಂದು ಅದೃಷ್ಟದ ಅವಕಾಶ. ಲೋಕ ಸೇವೆಗಾಗಿ ವ್ಯಕ್ತಿಗಳನ್ನು ಬಾಲ್ಯದಿಂದಲೇ ಸಜ್ಜುಗೊಳಿಸುವ ಈ ಚಳವಳಿ ಲಾರ್ಡ್ ಬೇಡನ್ ಪೊವೆಲ್ ಅವರು ವಿಶ್ವಕ್ಕೆ ನೀಡಿದ ಒಂದು ಅಮೂಲ್ಯ ಕೊಡುಗೆ.

ಈ ಚಳವಳಿಯ ಶತಮಾನೋತ್ಸವ ಆಚರಿಸಿ ಮುನ್ನಡೆದಿರುವ ಕರ್ನಾಟಕದ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ಪ್ರಧಾನ ಕಾರ್ಯಾಲಯವು ಚಳವಳಿಯಲ್ಲಿ ಪಾಲುಗೊಳ್ಳುವವರಿಗಾಗಿ ಉಪಯುಕ್ತವಾಗಿರುವುದು ಅಭಿಮಾನದ ಸಂಗತಿ. ಚಳವಳಿಗೆ ಸಂಬಂಧಿಸಿದಂತೆ ಈಗಾಗಲೇ ನಾನಾ ರೂಪದ ಸಾಹಿತ್ಯ ಪ್ರಕಟಿಸಿರುವ ಸಂಸ್ಥೆಯು ಇದೀಗ "ಗರ್ಲ್ ಗೈಡ್ ಮಾರ್ಗದರ್ಶಿ" ಕೃತಿಯನ್ನು ಪ್ರಕಟಿಸಿದೆ. ಈ ಕೃತಿಯ ಮೊದಲ ಆವೃತ್ತಿ ಪ್ರಕಟವಾದದ್ದು 1996ರಲ್ಲಿ ಇದು ಆರನೆಯ ಆವೃತ್ತಿ.

ಈ ಕೃತಿಯನ್ನು "ಗರ್ಲ್ ಗೈಡ್ ಮಾರ್ಗದರ್ಶಿ" ಎಂದು ಕರೆದಿದ್ದರೂ ಇದೇ ಸ್ಕೌಟ್ ಮತ್ತು ಗೈಡ್ ಚಳವಳಿಗೇ ಇದು ಅನ್ವಯವಾಗುತ್ತದೆ ಎನ್ನಬಹುದು. ಇದರಲ್ಲಿ ಗೈಡ್ ಆಗಲು ಬೇಕಾದ ಅರ್ಹತೆ, ಅಭ್ಯಾಸ ನಂತರದ ಪ್ರವೇಶ, ಶಿಸ್ತು ಪಾಲನೆ, ಕರಕೌಶಲ್ಯ, ಶಿಬಿರಾನುಭವ, ವಿವಿಧ ಪರೀಕ್ಷೆ–ಪುರಸ್ಕಾರಗಳು ಇತ್ಯಾದಿಯಾಗಿ ಕೊಟ್ಟಿರುವ ಮಾಹಿತಿ ಮತ್ತು ಮಾರ್ಗದರ್ಶನ ಒಂದು ದೃಷ್ಟಿಯಿಂದ ಗೈಡ್‌ಗಳು ಮಾತ್ರವಲ್ಲ ಪ್ರತಿಯೊಬ್ಬ ವ್ಯಕ್ತಿಗೂ ಅಗತ್ಯವಾದ ಅಂಶಗಳೇ ಆಗಿವೆ. ಬಾಲಕಿಯರು ಹೇಗೆ ತಮ್ಮ ಜೀವನದಲ್ಲಿ ಶಿಸ್ತು–ಸಂಯಮಗಳನ್ನು, ನಿಷ್ಠೆ–ನಿಯಮಗಳನ್ನು ರೂಢಿಸಿಕೊಂಡು ಮುಂದೆ ಹೇಗೆ ಸಮಾಜ ಮತ್ತು ರಾಷ್ಟ್ರ ಸೇವೆ ಸಲ್ಲಿಸಬಹುದೆಂಬುದಕ್ಕೆ ಈ ಕೃತಿ ನಿಜವಾದ ಅರ್ಥದಲ್ಲಿ ಮಾರ್ಗದರ್ಶಕವಾಗಿದೆ. ಇದೊಂದು ರೀತಿಯಲ್ಲಿ ಗೈಡ್ ಚಳವಳಿಯ ವಿಶ್ವಕೋಶದಂತಿದೆ ಎಂದು ಹೇಳಿದರೆ ಅತಿಶಯೋಕ್ತಿಯೇನಲ್ಲ.

ಈ ಕೃತಿಯಲ್ಲಿ ಹೆಣ್ಣುಮಕ್ಕಳ ವೈಯಕ್ತಿಕ, ಸಾಮಾಜಿಕ, ರಾಷ್ಟ್ರೀಯ ಮತ್ತು ಜಾಗತಿಕ ಬದುಕಿಗೆ ಬೇಕಾದ ಜೀವನ ಸೂತ್ರಗಳೆಲ್ಲ ಇವೆ ಎಂದು ಹೇಳಬಹುದು. ಇದರಲ್ಲಿ ವೈಯಕ್ತಿಕ ಶಿಸ್ತಿನಿಂದ ಹಿಡಿದು ಸಾವಾಜಿಕ ಸೇವೆಯುವರೆಗೆ,

ಕರಕೌಶಲ್ಯತೆಯಿಂದ ಹಿಡಿದು ಹೊರಸಂಚಾರದವರೆಗೆ, ಅಂಗಳದ ಅಭ್ಯಾಸದಿಂದ ಹಿಡಿದು ತಂಗು ಶಿಬಿರ ಸಿದ್ಧತೆಯವರೆಗೆ, ಅಡಿಗೆ ಮಾಡುವುದರಿಂದ ಹಿಡಿದು ಆಕಾಶ ವಿಜ್ಞಾನದವರೆಗೆ, ಆಹಾರ ಕ್ರಮದಿಂದ ಹಿಡಿದು ವಿಹಾರ ವಿದಾಯದವರೆಗೆ, ಪ್ರಾರ್ಥನೆಯ ಕ್ರಮದಿಂದ ಹಿಡಿದು ಪ್ರಥಮಚಿಕಿತ್ಸೆಯವರೆಗೆ, ಗೈಡ್ ಚಳವಳಿಯ ಪ್ರವೇಶ ಪರೀಕ್ಷೆಯಿಂದ ರಾಷ್ಟ್ರಪತಿ ಪದಕದ ವರೆಗೆ, ಒಟ್ಟಾರೆ ನಿಷ್ಠೆಯ ಅಧ್ಯಯನದಿಂದ ಹಿಡಿದು ವಾಸ್ತವ ಅನುಷ್ಠಾನದವರೆಗೆ ಲೋಕ ಜೀವನಕ್ಕೆ ಅಗತ್ಯವಾದ ಎಲ್ಲಾ ವಿಷಯಗಳನ್ನು ಈ ಮಾರ್ಗದರ್ಶಿಯಲ್ಲಿ ಕೊಡಲಾಗಿದೆ.

ಕೊನೆಯಲ್ಲಿ ಸ್ಕೌಟ್-ಗೈಡ್ ಚಳವಳಿಯ ಜಾಗತಿಕ, ರಾಷ್ಟ್ರೀಯ, ಪ್ರಾದೇಶಿಕ (ಕರ್ನಾಟಕ) ಬೆಳವಣಿಗೆಯ ಸಂಕ್ಷಿಪ್ತ ಇತಿಹಾಸವನ್ನು ಕೊಟ್ಟಿರುವುದು ಸೂಕ್ತವಾಗಿದೆ.

ಯಾವುದೇ ಸ್ವಯಂ ಸೇವಾ ಚಳವಳಿಯ ವಿಸ್ತೃತ ಬೆಳವಣಿಗೆಗೆ ಇಂತಹ ಅರಿವಿನ ಸಾಹಿತ್ಯ ಅಗತ್ಯವೆಂಬುದನ್ನು ಮನಗಂಡು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ನಮ್ಮ ಕರ್ನಾಟಕ ರಾಜ್ಯ ಸಂಸ್ಥೆಯ ಮುಖ್ಯ ಆಯುಕ್ತರಾದ ಶ್ರೀ ಪಿ.ಜಿ.ಆರ್. ಸಿಂಧ್ಯ ಅವರು ಈ ಬಗೆಗೆ ವಹಿಸಿರುವ ಆಸಕ್ತಿ ನಿಜಕ್ಕೂ ಅಭಿನಂದನೀಯ. ಅವರ ಆಶಯಕ್ಕೆ ಅನುಗುಣವಾಗಿ ಚಳವಳಿಗೆ ಸಂಬಂಧಿಸಿದ ಸಾಹಿತ್ಯ ಸಿದ್ಧಪಡಿಸಲು ಶ್ರದ್ಧಾಸಕ್ತಿಗಳಿಂದ ಕೆಲಸ ಮಾಡುತ್ತಿರುವ ಚಳವಳಿಯ ದೀರ್ಘ ಅನುಭವ ಪಡೆದಿರುವ ಸಂಸ್ಥೆಯ ಬಂಧುಗಳನ್ನು ನಾನು ಅಭಿನಂದಿಸುತ್ತೇನೆ.

ಈ ಮಾರ್ಗದರ್ಶಿ ಕೃತಿಯ ಪ್ರಯೋಜನವನ್ನು ಚಳವಳಿಯ ಎಲ್ಲರೂ ಪಡೆಯುವಂತಾಗಲಿ ಎಂದು ಹಾರೈಸುತ್ತೇನೆ.

- ಗೊ.ರು. ಚನ್ನಬಸಪ್ಪ

ಶುಭ ನುಡಿ

ಸ್ಕೌಟಿಂಗ್ ಮತ್ತು ಗೈಡಿಂಗ್ ಒಂದು ಅಂತಾರಾಷ್ಟ್ರೀಯ ಚಳವಳಿಯಾಗಿದ್ದು, ಯುವ ಜನಾಂಗದ ಸರ್ವಾಂಗೀಣ ಬೆಳವಣಿಗೆಗೆ ಸಹಕಾರಿಯಾಗಿದೆ. ಲಾರ್ಡ್ ಬೆಡನ್ ಪಾವೆಲ್ಲರು ಸ್ಥಾಪಿಸಿದ ಈ ಸಂಸ್ಥೆಯು, ಇಂದಿಗೂ ತನ್ನಆದರ್ಶ ತತ್ವಗಳಿಂದ ಯುವಕ, ಯುವತಿಯರಿಗೆ ಮಾರ್ಗದರ್ಶಕವಾಗಿದೆ. ಬೆಳೆಯುತ್ತಿರುವ ಮಕ್ಕಳಿಗೆ, ಸ್ಕೌಟಿಂಗ್-ಗೈಡಿಂಗ್‌ನ ನಾನಾ ಚಟುವಟಿಕೆಗಳು, ನಾಯಕತ್ವವನ್ನು ರೂಪಿಸುವಲ್ಲಿ ದಾರಿದೀಪವಾಗಿ, ಯಶಸ್ವಿಯಾಗಿರುವುದು ಹೆಮ್ಮೆಯ ವಿಷಯವಾಗಿದೆ. ಇಂತಹ ಮಹಾನ್ ಸಂಸ್ಥೆಯ ಅಡಿಯಲ್ಲಿ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ ದೂರದರ್ಶಿತ್ವದ ದೃಷ್ಟಿಯೊಂದಿಗೆ ಯುವಪೀಳಿಗೆಗಾಗಿ ಶ್ರಮಿಸುತ್ತಿರುವುದು ಶ್ಲಾಘನೀಯ!

ಗೈಡಿಂಗ್‌ನಲ್ಲಿ ಅರಿಯಬೇಕಾದ ವಿಷಯಾಂಶಗಳಿಗೆ, **"ಗರ್ಲ್ ಗೈಡ್ ಮಾರ್ಗದರ್ಶಿಯು"** ಕಲಿಕೆಗೆ ಕೈಗನ್ನಡಿಯಂತಿದೆ. ನಮ್ಮ ಸಂಸ್ಥೆಯ ಹಿರಿಯ ನಾಯಕಿ, ದಿ॥ ಎಸ್.ಕೆ. ಪ್ರಭಾ, ಲೀಡರ್ ಟ್ರೈನರ್ (ಗೈಡ್)ರವರು, ಕನ್ನಡದಲ್ಲಿ **"ಗರ್ಲ್ ಗೈಡ್ ಮಾರ್ಗದರ್ಶಿ"**ಯನ್ನು ಪ್ರಥಮ ಬಾರಿಗೆ ಬರೆದವರಾಗಿದ್ದಾರೆ, ಅವರ ಸತತ ಪರಿಶ್ರಮದಿಂದ ಎಲ್ಲಾ ಪಠ್ಯಾಂಶಗಳಿಗೆ ವಿವರವಾಗಿ ಉದಾಹರಣೆಗಳೊಂದಿಗೆ, ಚಿತ್ರಗಳೊಂದಿಗೆ, ತುಂಬಾ ಪ್ರಭಾವ ಪೂರ್ಣವಾಗಿ, ಸುಲಭವಾಗಿ ಅರ್ಥ ಮಾಡಿಕೊಳ್ಳುವಂತೆ ಸ್ವತ: ಕಲಿತುಕೊಳ್ಳುವಂತೆ, ನಿರೂಪಿಸಿರುವುದು, ವಿಶೇಷವಾಗಿದೆ. ಈ ವರ್ಷ ಹೊಸದಾಗಿ ಪರಿಸ್ಕೃತ ಆವೃತ್ತಿಯಾಗಿದ್ದು, ಆರನೇ ಮುದ್ರಣದಲ್ಲಿ ಹೊರ ಬರುತ್ತಿರುವುದು, ನಮ್ಮೆಲ್ಲರಿಗೂ ಹರ್ಷತಂದಿದೆ.

ರೇಂಜರಿಂಗ್ ವಿಭಾಗಕ್ಕೂ **"ಗರ್ಲ್‌ಗೈಡ್ ಮಾರ್ಗದರ್ಶಿಯು"** ತನ್ನ ಬೆಳಕಿನ ಪ್ರಭೆಯನ್ನು ಮೂಡಿಸುವಲ್ಲಿ ಸಹಕಾರಿಯಾಗಿದೆ. ಗೈಡಿಂಗ್ ವಿಭಾಗಕ್ಕೆ, ಈ ಕೊಡುಗೆಯು ಅಪಾರವಾದುದು. ಅಮೂಲ್ಯವಾದುದು, ಚಿರಂತನವಾದುದು, ಈ ಹೊತ್ತಿಗೆಯು ಓದುವ ಮಕ್ಕಳಿಗೂ, ಕಲಿಸುವ ತರಬೇತುದಾರರಿಗೆ ಸರಳ ರೂಪದಲ್ಲಿರುವ, ಸುಲಭ ವಿವರಣೆಗಳನ್ನೊಳಗೊಂಡಿರುವ ಜ್ಞಾನಕೋಶವಾಗಿದೆ, ಎಂಬುವುದರಲ್ಲಿ ಸಂದೇಹವಿಲ್ಲ. ಗೈಡಿಂಗ್ ವಿಭಾಗವೂ ಈ **"ಗರ್ಲ್‌ಗೈಡ್ ಮಾರ್ಗದರ್ಶಿಯ"** ಸದುಪಯೋಗ ಪಡೆಯಲೆಂದು ನನ್ನ ಆಶಯ.

ಈ **"ಗರ್ಲ್‌ಗೈಡ್ ಮಾರ್ಗದರ್ಶಿಯ"** ನವಿಕೃತವಾಗಿ ಮುದ್ರಣಗೊಳ್ಳುತ್ತಿರುವ ನಿಟ್ಟಿನಲ್ಲಿ ಪ್ರಗತಿಪರ ಚಿಂತಕರು, ಪ್ರೋತ್ಸಾಹಕರು, ಪ್ರಧಾನ ಕಾರ್ಯದರ್ಶಿಗಳು, ಅಧ್ಯಕ್ಷರ ಪರಿಷತ್, ರಾಷ್ಟ್ರೀಯ ಸಂಸ್ಥೆ, ನವದೆಹಲಿ ಹಾಗೂ ಕರ್ನಾಟಕ ರಾಜ್ಯದ ಮುಖ್ಯ ಆಯುಕ್ತರಾದ ಶ್ರೀಯುತ ಪಿ.ಜಿ.ಆರ್. ಸಿಂಧ್ಯರವರು ಮುನ್ನುಡಿ ಬರೆದಿರುವುದಕ್ಕೆ ನನ್ನ ಕೃತಜ್ಞತೆಗಳು. ಸದಾ ಬೆಂಬಲಿಸುವ ಸ್ಫೂರ್ತಿ ನೀಡುವ, ರಾಜ್ಯ ಪ್ರಕಟಣಾ ಸಮಿತಿಯ ಅಧ್ಯಕ್ಷರಾದ ಶ್ರೀ ಗೊ.ರು. ಚೆನ್ನಬಸಪ್ಪನವರಿಗೆ ನನ್ನ ಹೃತ್ಪೂರ್ವಕ ವಂದನೆಗಳು, ಹೆಜ್ಜೆ, ಹೆಜ್ಜೆಗೂ ಮಾರ್ಗದರ್ಶನ ನೀಡುವ ರಾಜ್ಯ ಉಪಾಧ್ಯಕ್ಷರಾದ, ಶ್ರೀ ಕೊಂಡಜ್ಜಿ ಬ. ಷಣ್ಮುಖಪ್ಪನವರಿಗೆ ಅಭಿಮಾನದ ವಂದನೆಗಳು, ಹಾಗೆಯೇ ದಿ॥ ಎಸ್.ಕೆ. ಪ್ರಭಾರವರಿಗೆ ಇದನ್ನು ಬರೆಯಲು ಸಹಕರಿಸಿದ ರಾಜ್ಯ ಜಂಟಿ ಕಾರ್ಯದರ್ಶಿ(ಗೈ), ಶ್ರೀಮತಿ ಬಿ.ವಿ. ರಾಮಲತಾ, ಶ್ರೀಮತಿ ಬಿ.ಡಿ. ಶಾಂತಾ, ದಿ॥ ಶ್ರೀಮತಿ ಕಮಲಾಕ್ಷಿ ಹೆಗ್ಗಡೆ, ದಿ॥ ಎನ್.ಕೆ. ಛಾಯ, ಜೊತೆಗೆ ಈ ಪುಸ್ತಕದ ಅವಲೋಕನ ಮಾಡಿ, ಅವರ ಅಮೂಲ್ಯವಾದ ಅಭಿಪ್ರಾಯವನ್ನು ನೀಡಿದ ರಾಜ್ಯ ಸಂಸ್ಥೆಯ ಪ್ರಕಟನಾ ಸಮಿತಿಯ ಸದಸ್ಯರಾದ ಶ್ರೀಮತಿ ಕಮಲಾಕ್ಷಿ ಹೆಗಡೆರವರಿಗೂ, ಶ್ರೀಮತಿ ಸಿ. ಮಂಜಳಾ, ರಾಜ್ಯ ಸಂಘಟನಾ ಆಯುಕ್ತರು (ಗೈಡ್) ಶ್ರೀಮತಿ ಕೆ.ವಿ. ಶಾಮಲ, ರಾಜ್ಯ ತರಬೇತಿ ಆಯುಕ್ತರು(ಗೈ), ಹಾಗೂ ರಾಜ್ಯ ಸಂಸ್ಥೆಯ ಆಡಳಿತ ವರ್ಗದ ಸಿಬ್ಬಂದಿಗಳೆಲ್ಲರಿಗೂ ನನ್ನ ಮನದಾಳದ ವಂದನೆಗಳು.

– ಗೀತಾ ನಟರಾಜ್
ಲೀಡರ್ ಟ್ರೈನರ್ (ಗೈ)
ರಾಜ್ಯ ಆಯುಕ್ತರು (ಗೈ), ಕರ್ನಾಟಕ
ಉಪಾಧ್ಯಕ್ಷರು, ಭಾ.ಸ್ಕೌ.ಗೈ. ನವದೆಹಲಿ

ಒಳಪುಟಗಳಲ್ಲಿ

ಹೆಜ್ಜೆ 1	– ಗೈಡಿಂಗ್ ಚಳವಳಿಯ ಪರಿಚಯ	1
ಹೆಜ್ಜೆ 2	– ಪ್ರವೇಶ	5
ಹೆಜ್ಜೆ 3	– ಪ್ರಥಮ ಸೋಪಾನ	44
ಹೆಜ್ಜೆ 4	– ದ್ವಿತೀಯ ಸೋಪಾನ	78
	– ಪ್ರಾವೀಣ್ಯತಾ ಪದಕಗಳು	
ಹೆಜ್ಜೆ 5	– ತೃತೀಯ ಸೋಪಾನ	116
	– ಪ್ರಾವೀಣ್ಯತಾ ಪದಕಗಳ ಗಳಿಕೆ	
ಹೆಜ್ಜೆ 6	– ರಾಜ್ಯ ಪುರಸ್ಕಾರದ ಪರೀಕ್ಷೆಗಳು	165
ಹೆಜ್ಜೆ 7	– ರಾಷ್ಟ್ರಪತಿ ಗೈಡ್ ಪುರಸ್ಕಾರದ ಪರೀಕ್ಷೆಗಳು	169
ಹೆಜ್ಜೆ 8	– ಸ್ಕೌಟ್ – ಗೈಡ್ ವಿಶೇಷತೆಗಳು	172
	– ಜಾಂಬೂರಿ, ಶಿಬಿರಾಗ್ನಿ, ಚಿಂತನಾ ದಿನಾಚರಣೆ	
	– ವಿಶ್ವ ಗರ್ಲ್ ಸ್ಕೌಟ್–ಗರ್ಲ್ ಗೈಡ್ ಸಂಸ್ಥೆ	
	– ಸ್ಕೌಟಿಂಗ್–ಗೈಡಿಂಗ್ ತಯಾರು	
ಹೆಜ್ಜೆ 9	– ಕರ್ನಾಟಕದಲ್ಲಿ ಸ್ಕೌಟಿಂಗ್ – ಗೈಡಿಂಗ್	182
ಹೆಜ್ಜೆ 10	– ದಿನಾಚರಣೆಗಳು	186

ಹೆಜ್ಜೆ–1: ಗೈಡ್ ಚಳವಳಿಯ ಪರಿಚಯ

ಇಂಗ್ಲೆಂಡಿನ ಮಧ್ಯಮವರ್ಗದ ದಿಟ್ಟ ಬಾಲಕಿಯರು, ಬಾಲಕರು ಮಾಡುತ್ತಿದ್ದ ಸ್ಕೌಟಿಂಗ್ ಚಟುವಟಿಕೆಯಿಂದ ಪ್ರೇರಿತರಾಗಿ ತಾವೂ ಸ್ಕೌಟಿಂಗ್ ಚಟುವಟಿಕೆಯನ್ನು ಪ್ರಾರಂಭಿಸಿದರು. ನಂತರ 1909ರಲ್ಲಿ ಸ್ಕೌಟಿಂಗ್ ಸಂಸ್ಥಾಪಕರಾದ ಲಾರ್ಡ್ ಬೇಡನ್ ಪಾವೆಲ್‌ರವರು ಬಾಲಕಿಯರ ಸ್ಕೌಟಿಂಗನ್ನು ಅನುಮೋದಿಸಿ, ಈ ವಿಭಾಗವನ್ನು ಗರ್ಲ್‌ಗೈಡ್ ಎಂದು ನಾಮಕರಣ ಮಾಡಿದರು. ಈ ಚಳವಳಿಯು ಯಾವ ಭೇದವೂ ಇಲ್ಲದೆ ಬಾಲಕಿಯರಿಗೆ ಮತ್ತು ಮಹಿಳೆಯರಿಗೆ ಮೀಸಲಾದ ರಾಜಕೀಯಮುಕ್ತ, ಶೈಕ್ಷಣಿಕ, ಸ್ವಯಂಸೇವಕ, ಚಳವಳಿ. ಬಾಲಕಿಯರ ಸ್ಕೌಟ್ ಅಧಿಕೃತವಾಗಿ ಹುಟ್ಟಿದ್ದು 1909ರಲ್ಲಿ. ಇಂದಿಗೂ ಇದು ಬೆಳೆಯುತ್ತಲೇ ಇದೆ. ಲೇಡಿ ಬಿ.ಪಿ.ಯವರು ಇವರ ಅಸ್ತಿತ್ವದ ಬಗ್ಗೆ ಆತ್ಮವಿಶ್ವಾಸದಿಂದ ಹೀಗೆ ಹೇಳಿದ್ದಾರೆ. **"ಎಳೆಯರಿಗೆ ಬೇಕಾದುದನ್ನೆಲ್ಲಾ ಸ್ಕೌಟಿಂಗ್, ಗೈಡಿಂಗ್ ನೀಡುತ್ತದೆ. ಎಳೆಯರು ಜಗತ್ತಿನಲ್ಲಿರುವವರೆಗೂ ಈ ಚಳವಳಿಯು ಅಸ್ತಿತ್ವದಲ್ಲಿರುತ್ತದೆ."**

ಈ ಸಂಸ್ಥೆಯು ಬಾಲಕಿಯರಿಗೆ ಸಾಮಾಜಿಕ ಚಟುವಟಿಕೆಗಳಲ್ಲಿ ಮುಕ್ತ ಅವಕಾಶ ನೀಡುತ್ತಿದೆ. ನಿಜವಾದ ಅರ್ಥದಲ್ಲಿ ಮಹಿಳೆಯರನ್ನು ಸಬಲರನ್ನಾಗಿ ಮಾಡುತ್ತಾ ಸಮಾನತೆಯ ಪರಿಕಲ್ಪನೆಯನ್ನು ಸಾಕ್ಷಾತ್ಕಾರ ಮಾಡಲು ಶ್ರಮಿಸುತ್ತಿದೆ. ಈ ಮಹಿಳಾ ಚಳವಳಿ ವಿಶ್ವದ ಮಹಿಳಾ ಸಂಘಟನೆಗಳಲ್ಲಿ ಒಂದು ವಿಶೇಷವಾದ ಅಗ್ರ ಸ್ಥಾನವನ್ನು ಪಡೆದಿದೆ. ನಮ್ಮ ರಾಷ್ಟ್ರದಲ್ಲಿ 25 ಲಕ್ಷ ಗೈಡ್‌ಗಳು ಹಾಗೂ ರಾಜ್ಯದಲ್ಲಿ 3 ಲಕ್ಷ ಗೈಡ್‌ಗಳು ಇದ್ದಾರೆ. ಆದರೂ ಇದು ಸಾಮಾಜಿಕವಾಗಿ ಗುಣಾತ್ಮಕವಾಗಿ ಮತ್ತು ಗಣಾತ್ಮಕವಾಗಿ ಅಪೇಕ್ಷಿತ ಮಟ್ಟದಲ್ಲಿ ಬೆಳೆಯಬೇಕಾಗಿದೆ.

ಬಿ.ಪಿ.ಯವರು ಮೆಚ್ಚಿಗೆಯಿಂದ ಈ ಚಳವಳಿಯ ಹುಟ್ಟಿನ ಬಗ್ಗೆ ಹೀಗೆ ಹೇಳಿದ್ದಾರೆ: "ನಿಜ ಹೇಳಬೇಕೆಂದರೆ ನಾನು ಈ ಚಳವಳಿಯನ್ನು ಬಾಲಕಿಯರಿಗಾಗಿ ರೂಪಿಸಲಿಲ್ಲ..... ಬಾಲಕಿಯರು ಈ ಚಟುವಟಿಕೆಯಲ್ಲಿ ತೊಡಗುವರೆಂದು ಊಹಿಸಿಯೂ ಇರಲಿಲ್ಲ. ಆದರೆ, ಬಾಲಕಿಯರು ಈ ಚಳವಳಿಯನ್ನು ತಾವೇ ಪ್ರಾರಂಭಿಸಿಬಿಟ್ಟರು! .... ನಂತರ ನಾನು ಅವರ ಹಠಕ್ಕೆ ಮಣಿದು ಬಾಲಕಿಯರ ವಿಭಾಗವನ್ನು ಆರಂಭಿಸಬೇಕಾಯಿತು."

ಇಂತಹ ಚಳವಳಿಯನ್ನು 1909ರಲ್ಲಿ ಮಹಿಳಾ ಲೋಕಕ್ಕೆ ಉಡುಗೊರೆಯಾಗಿ ನೀಡಿರುವ ಇಂಗ್ಲೆಂಡಿನ ಬಾಲಕಿಯರಿಗೆ ನಮ್ಮ ಕೃತಜ್ಞತೆ ಅರ್ಪಿಸುತ್ತಾ, ಬನ್ನಿ ಇದನ್ನು ನಮಗಾಗಿ ಮತ್ತು ಮುಂದಿನ ಪೀಳಿಗೆಗಾಗಿ ಬೆಳೆಸಲು ಶ್ರಮಿಸೋಣ.

ಪ್ರವೇಶದ ಅರ್ಹತೆ : ಭಾರತೀಯ ಪೌರಳಾಗಿರುವ 10ವರ್ಷ ತುಂಬಿರುವ 17 ವರ್ಷ ತುಂಬದೇ ಇರುವ ಬಾಲಕಿಯು ನೂತನ ಪ್ರವೇಶಿಯಾಗಿ, (Recruit) ಪ್ರವೇಶದ ಹಂತದಲ್ಲಿ ಸಂಸ್ಥೆಯ ಪರಿಚಯ ಮಾಡಿಕೊಂಡು, ನಿಯಮ ಮತ್ತು ಪ್ರತಿಜ್ಞೆಯನ್ನು ಅರ್ಥಮಾಡಿಕೊಂಡು, ಸಮವಸ್ತ್ರ ಧರಿಸಿ, ಪ್ರತಿಜ್ಞೆ ಮಾಡಿ, ಹಿರಿಯ ನಾಯಕಿಯಿಂದ (Guide Captain) ದೀಕ್ಷೆ ಪಡೆದು, ಗೈಡ್ ಆಗುವ ಆರ್ಹತೆಯನ್ನು ಪಡೆಯುವಳು. ಗೈಡ್ ಆದವಳು ಪ್ರಗತಿಪರ ಬಾಲಕಿಯರ ಕಾರ್ಯಕ್ರಮವನ್ನು ಹಂತಹಂತವಾಗಿ ಪೂರ್ಣಗೊಳಿಸಿ, ಮಾನಸಿಕವಾಗಿ, ದೈಹಿಕವಾಗಿ, ನೈತಿಕವಾಗಿ, ಸಾಮಾಜಿಕವಾಗಿ ವಿಕಾಸ ಹೊಂದುತ್ತಾ ಆನಂದದಾಯಕ, ಆರೋಗ್ಯಕರ ಉಪಯುಕ್ತ ಪ್ರಜೆಯಾಗುವಳು. ಇದೇ ಗೈಡಿಂಗ್ ಚಳವಳಿಯ ಅಂತಿಮ ಹಾಗೂ ಮಹೋನ್ನತ ಉದ್ದೇಶವಾಗಿದೆ.

ಗೈಡಿಂಗ್ ಚಳವಳಿಯನ್ನು ಪ್ರವೇಶಿಸಿ ಮುಂದುವರೆಯುತ್ತಾ ಪ್ರಗತಿಯನ್ನು ಸಾಧಿಸುತ್ತಾ ಪ್ರಥಮ ಸೋಪಾನ, ದ್ವಿತೀಯ ಸೋಪಾನ, ತೃತೀಯ ಸೋಪಾನಗಳನ್ನು ಏರಿ, ರಾಜ್ಯ ಪುರಸ್ಕಾರ, ರಾಷ್ಟ್ರಪತಿ ಪುರಸ್ಕಾರಗಳನ್ನು ಪಡೆಯಬಹುದು. ಬಾಲಕಿಯು 10ನೇ ವರ್ಷಕ್ಕೆ ಗೈಡ್ ವಿಭಾಗವನ್ನು ಪ್ರವೇಶಿಸಿದರೆ 17 ತುಂಬುವವರೆಗೂ ಈ ವಿಭಾಗದಲ್ಲೇ ಮುಂದುವರೆಯಬಹುದು.

ಮೂಲ ಸಿದ್ಧಾಂತ

ಸಂಸ್ಥಾಪಕರಾದ ಬಿ.ಪಿ.ಯವರು ಈ ಚಳವಳಿಗಾಗಿ ಮೂಲಸಿದ್ಧಾಂತಗಳನ್ನು ರೂಪಿಸಿದ್ದಾರೆ. ಈ ಸಿದ್ಧಾಂತದ ಮಹತ್ವವೇ ಈ ಚಳವಳಿಯನ್ನು 100 ವರ್ಷ ತುಂಬಿಸಿ ಮುನ್ನಡೆಸುತ್ತಿದೆ. ಪ್ರತಿ ಚಟುವಟಿಕೆಯಲ್ಲೂ ಮೂಲಸಿದ್ಧಾಂತವನ್ನು ಅಳವಡಿಸಿಕೊಳ್ಳುವುದು ಅವಶ್ಯಕ.

1. **ನಿರೂಪಣೆ :** ಸಂಸ್ಥಾಪಕರಾದ ಲಾರ್ಡ್ ಬೇಡನ್ ಪಾವೆಲ್‌ರವರು ಯುವಜನಾಂಗಕ್ಕಾಗಿ ದೇಶ, ಜಾತಿ, ಮತಗಳ ಭೇದವಿಲ್ಲದೆ ಸ್ಥಾಪಿಸಿದ ಸ್ವಯಂಸೇವಕ ರಾಜಕೀಯಮುಕ್ತ, ಶಿಕ್ಷಣಪೂರಕವಾದ, ತನ್ನದೇ ಆದ ಧ್ಯೇಯೋದ್ದೇಶ, ಸಿದ್ಧಾಂತ ಮತ್ತು ವಿಧಾನಗಳನ್ನು ಹೊಂದಿರುವ ಚಳವಳಿ ಇದಾಗಿದೆ.

2. **ಉದ್ದೇಶ :** ಯುವಜನಾಂಗದ ಸಾಧನೆಗಾಗಿ, ಅವರಲ್ಲಿರುವ ದೈಹಿಕ, ಬೌದ್ಧಿಕ, ಸಾಮಾಜಿಕ, ಭಾವನಾತ್ಮಕ ಮತ್ತು ಆಧ್ಯಾತ್ಮಿಕ, ಅಂತಃಸತ್ವವನ್ನು ಪರಿಪೂರ್ಣವಾಗಿ ಅಭಿವೃದ್ಧಿಗೊಳಿಸಿ ಅವರನ್ನು ಸ್ಥಳೀಯ, ರಾಷ್ಟ್ರೀಯ ಹಾಗೂ ಜಾಗತಿಕ ಸಮುದಾಯಗಳ ಸದಸ್ಯರನ್ನಾಗಿ ಹಾಗೂ ಜವಾಬ್ದಾರಿಯುತ ಪ್ರಜೆಗಳನ್ನಾಗಿ ಮಾಡುವುದೇ ಈ ಚಳವಳಿಯ ಮಹೋನ್ನತ ಉದ್ದೇಶವಾಗಿದೆ.

3. **ಮೂಲತತ್ವ :** ದೇವರಲ್ಲಿ ನಂಬಿಕೆ, ಇತರರಿಗೆ ಸಹಾಯ, ತನಗೆ ತನ್ನ ಕರ್ತವ್ಯ.

4. **ವಿಧಾನ :** ಪ್ರತಿಜ್ಞೆ ಮತ್ತು ನಿಯಮ, ಮಾಡುತ್ತಾ ಕಲಿಯುವುದು, ಹೊರಾಂಗಣದಲ್ಲಿ ಕಲಿಯುವುದು, ಅಷ್ಟಕದಲ್ಲಿ ಕಲಿಯುವುದು, ಸೇವೆಯ ಮೂಲಕ ಕಲಿಯುವುದು.

ತರಬೇತಿಯ ಮಾರ್ಗೋಪಾಯಗಳು :

ಚಳವಳಿಯ ಉದ್ದೇಶವನ್ನು ಸಾಧಿಸಲು ನೈಜ ಮಾರ್ಗೋಪಾಯಗಳನ್ನು ಬಿ.ಪಿ.ಯವರು ನೀಡಿದ್ದಾರೆ:

ಚಾರಿತ್ರ್ಯಾಭಿವೃದ್ಧಿ : ನಮ್ಮ ತಾಯಿ ನಮ್ಮ ಮೊದಲ ಗುರು. ನಮ್ಮನ್ನು ಉತ್ತಮ ರೀತಿಯಲ್ಲಿ ಬೆಳೆಸುತ್ತಾರೆ. ಇವರ ಜೊತೆಗೆ ಗೈಡಿಂಗ್ ನಮ್ಮನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ಉತ್ತಮವಾಗಿ ಬೆಳೆಸುವ ಪ್ರಯತ್ನ ನಡೆಸುತ್ತದೆ. ಚಿಕ್ಕ ಗುಂಪಿನಲ್ಲಿ ಗೆಳತಿಯರೊಡನೆ ಒಟ್ಟಾಗಿ ಕಲಿಯುವ, ಕೆಲಸಮಾಡುವ ಅವಕಾಶ ನೀಡುತ್ತದೆ. **ಅಷ್ಟಕ ಪದ್ಧತಿಯ** ಮೂಲಕ ಚಾರಿತ್ರ್ಯವನ್ನು ನೈಜವಾಗಿ ಅಭಿವೃದ್ಧಿಗೊಳಿಸಲು ಹೆಚ್ಚಿನ ಅವಕಾಶ ನೀಡುತ್ತದೆ. ಇದರಿಂದ ಬಾಲಕಿಯರು ಭವಿಷ್ಯದ ಉತ್ತಮ ವ್ಯಕ್ತಿಗಳಾಗಿ, ಉತ್ತಮ ನಾಗರಿಕರಾಗಿ, ಉತ್ತಮ ತಾಯಂದಿರಾಗುವರು.

"ಸಚ್ಚಾರಿತ್ರ್ಯವೇ ವ್ಯಕ್ತಿಯ ನೈಜ ಆಭರಣ."

ಆರೋಗ್ಯಾಭಿವೃದ್ಧಿ : ಈ ಕಾಲದಲ್ಲಿ ಆರೋಗ್ಯ ಬಹಳ ದುಬಾರಿ. ಗೈಡಿಂಗ್ ಆರೋಗ್ಯವನ್ನು ಕಾಪಾಡಿಕೊಳ್ಳಲು ನಿಮಗೆ ನಿಯಮಗಳನ್ನು ನೀಡುತ್ತದೆ. ಅಭ್ಯಾಸಗಳನ್ನು ಮಾಡಿಸುತ್ತದೆ. ಬಯಲಿನಲ್ಲಿ ವ್ಯಾಯಮ ಮಾಡುವುದು ಮತ್ತು ಆಟವಾಡುವುದು, ಕಲಿಯುವುದು ಇದರಲ್ಲಿ ಕಡ್ಡಾಯ. ಪ್ರಕೃತಿಯ ಮಡಿಲಲ್ಲಿ ಪರ್ವತಾರೋಹಣ, ಸಾಹಸ ಚಟುವಟಿಕೆ, ಶಿಬಿರವಾಸ ಮಾಡುವುದು ಇದರ ಮುಖ್ಯ ಚಟುವಟಿಕೆ. ಹೊರ ಸಂಚಾರ, ಪ್ರಕೃತಿ ಸಂಚಾರ, ಚಾರಣ ಪರ್ವತಾರೋಹಣ ಸಾಹಸ ಚಟುವಟಿಕೆ, ಇವೆಲ್ಲವುಗಳಿಂದ ನಿಮ್ಮ ಆರೋಗ್ಯ ವೃದ್ಧಿಯಾಗುತ್ತದೆ.

“ಆರೋಗ್ಯವೇ ಭಾಗ್ಯ”

ಕರಕೌಶಲ : ಕೈಗಳು ಕೆಲಸದಲ್ಲಿ ತೊಡಗಿದ್ದರೆ, ಮನಸ್ಸು ಸಮಸ್ಥಿತಿಯಲ್ಲಿರುತ್ತದೆ. ಕಸೂತಿ, ಮಾದರಿ ತಯಾರಿಕೆ, ಚಿತ್ರಕಲೆ, ಕಾಗದದ ಕಲೆ, ಬಿದಿರಿನ ಕಲೆ, ತ್ಯಾಜ್ಯ ವಸ್ತುಗಳ ಬಳಕೆ ಮಾಡಿ ಕೈಕೆಲಸ ಮಾಡಲು ಗೈಡಿಂಗ್‌ನಲ್ಲಿ ಅವಕಾಶ ನೀಡಲಾಗುತ್ತದೆ. ನಮ್ಮ ಸಂಸ್ಕೃತಿ ಮತ್ತು ಪರಂಪರೆಯಲ್ಲಿ ಕರಕುಶಲತೆ ಹಾಸುಹೊಕ್ಕಾಗಿದೆ. ಭಾರತೀಯ ಕರಕುಶಲತೆಗೆ ದೇಶ ವಿದೇಶಗಳಲ್ಲಿ ಭಾರಿ ಬೇಡಿಕೆ ಇದೆ. ಈ ಹವ್ಯಾಸವನ್ನು ಬೆಳೆಸಿ ಕೊಂಡರೆ ನಿಮಗೆ ಭವಿಷ್ಯದಲ್ಲಿ ಇವು ಆದಾಯದಾಯಕವಾಗಬಹುದು. ಎಲ್ಲಕ್ಕೂ ಮಿಗಿಲಾಗಿ ಈ ಹವ್ಯಾಸದಿಂದ ಸೃಜನಶೀಲತೆ ಹೊರಹೊಮ್ಮಿ ಆತ್ಮತೃಪ್ತಿ ದೊರೆಯುತ್ತದೆ.

ಸೇವೆ : ಸೇವೆಯೇ ಮಾನವ ಜನ್ಮದ ಪರಮಧರ್ಮ. ಅಗತ್ಯವಿರುವವರಿಗೆ ಸಂಕಷ್ಟದಲ್ಲಿ ತಕ್ಷಣವೇ ಮಾಡುವ ಸಹಾಯವೇ ಸೇವೆ. ಪ್ರತಿಜ್ಞೆಯಲ್ಲಿ “ಇತರರಿಗೆ ಸೇವೆ ಮಾಡುತ್ತೇನೆ” ಎಂಬುದನ್ನು ಅಳವಡಿಸಲಾಗಿದೆ. ಬಿ.ಪಿ.ಯವರು ಸ್ಕೌಟಿಂಗ್ ಪ್ರಾರಂಭ ಮಾಡುವ ಮುನ್ನ ಬಾಲಕರು ನಾವೇನು ಮಾಡಬೇಕೆಂದು ಪ್ರಶ್ನಿಸಿದಾಗ ಸರಳವಾಗಿ **“ದಿನಕ್ಕೊಂದು ಒಳ್ಳೆ ಕೆಲಸ ಮಾಡಿ”** ಎಂದು ತಿಳಿಸಿದರು. ಒಳ್ಳೆ ಕೆಲಸ ಮಾಡುವುದೇ ಗೈಡಿಂಗ್. ಇದಕ್ಕಾಗಿ ಪ್ರಥಮ ಚಿಕಿತ್ಸೆ, ಸುರಕ್ಷತೆ ಮತ್ತು ರಕ್ಷಣಾ ವಿಧಾನಗಳ ಪ್ರತ್ಯಕ್ಷ ತರಬೇತಿ ನೀಡಲಾಗುವುದು. ಇವರನ್ನು ಹಂತಹಂತವಾಗಿ ಸಮುದಾಯ ಮತ್ತು ಸಮಾಜ ಸೇವೆಯಲ್ಲೂ ತೊಡಗಿಸಲಾಗುವುದು.

ಇದೆಲ್ಲದರ ಜೊತೆಗೆ ಬುದ್ಧಿಶಕ್ತಿಯನ್ನು ಬೆಳೆಸಲು ಗೈಡಿಂಗಿನಲ್ಲಿ ವಿಪುಲ ಅವಕಾಶವನ್ನು ನೀಡಲಾಗಿದೆ. ನಕ್ಷಾಕೌಶಲ, ಸಂಕೇತ ಭಾಷೆಗಳು, ಬುದ್ಧಿಗೆ ಸವಾಲು ನೀಡುವ ಚಟುವಟಿಕೆಗಳು ಹಾಗೆಯೆ, ಪ್ರಕೃತಿ ಸಂಚಾರ, ಅನ್ವೇಷಣೆ, ಸಾಹಸಕಾರ್ಯಗಳು ನಾನಾ ಸವಾಲುಗಳನ್ನು ಒಡ್ಡಿ ಅವುಗಳನ್ನು ಎದುರಿಸುವ ಸಾಮರ್ಥ್ಯ ಬೆಳೆಸುತ್ತದೆ. ಈ ವೇಗವಾಗಿ ಸಾಗುವ ವಿಶ್ವದಲ್ಲಿ, ಆಧುನಿಕ ಗಣಕೀಕೃತ ಯಂತ್ರ ಸವಾಲನ್ನು ಎದುರಿಸುವ ಸಾಮರ್ಥ್ಯ ಬೆಳೆಸುತ್ತದೆ. ಬುದ್ಧಿಶಕ್ತಿಯನ್ನು ಸಮರ್ಥವಾಗಿ ಬೆಳೆಸಿಕೊಳ್ಳದಿದ್ದರೆ ನಾವೂ ಕಳೆದುಹೋಗಿಬಿಡುತ್ತೇವೆ.

ಈ ನಾಲ್ಕು ಮಾರ್ಗಗಳನ್ನು ಅನುಸರಿಸುತ್ತಾ ಮಹಿಳೆಯರಿಗೆ ಮತ್ತು ಬಾಲಕಿಯರಿಗೆ ತರಬೇತಿಯನ್ನು ನೀಡಲಾಗುವುದು. ಈ 4 ಅಂಶಗಳ ಆಧಾರದ ಮೇಲೆ ಎಲ್ಲಾ ಚಟುವಟಿಕೆಗಳನ್ನು ರೂಪಿಸಲಾಗಿದೆ.

❑

ಹೆಜ್ಜೆ – 2 : ಪ್ರವೇಶ

ಪ್ರವೇಶದ ಅವಶ್ಯಕತೆಗಳು :

1. ಗೈಡ್ ಚಳವಳಿಯ ಬಗ್ಗೆ ಅಮೂಲ್ಯ ಜ್ಞಾನ ಹೊಂದಿರಬೇಕು.
2. ಗೈಡಿಂಗ್ ಮೂಲದ ಸಂಕ್ಷಿಪ್ತ ಮಾಹಿತಿ ಜೊತೆಗೆ ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಮೂಲ ಸಿದ್ಧಾಂತವಾದ, ನಿರೂಪಣೆ, ಉದ್ದೇಶ, ಮೂಲತತ್ವ ಮತ್ತು ವಿಧಾನದ ಬಗ್ಗೆ ವಿಷಯ ತಿಳಿದಿರಬೇಕು.
3. ಗೈಡ್ ಪ್ರತಿಜ್ಞೆ, ನಿಯಮ.
4. ಗೈಡ್–ಧ್ಯೇಯ, ಸಂಕೇತ, ವಂದನೆ, ಎಡಗೈ ಹಸ್ತಲಾಘವ.
5. ಒಂದು ತಿಂಗಳ ಸತ್ಕಾರ್ಯ ಮಾಡಿ ದಿನಚರಿಯಲ್ಲಿ ದಾಖಲಿಸುವುದು.
6. ಸಮವಸ್ತ್ರದ ಭಾಗಗಳು–ಧರಿಸುವ ಕ್ರಮ.
7. ಧ್ವಜಗಳ ರಚನೆ ಮತ್ತು ಮಹತ್ವ ತಿಳಿಯುವುದು :
   (i) ರಾಷ್ಟ್ರ ಧ್ವಜ.
   (ii) ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಧ್ವಜ.
   (iii) ವಿಶ್ವಗೈಡ್ ಧ್ವಜ.
8. ರಾಷ್ಟ್ರಗೀತೆಯನ್ನು ಸರಿಯಾಗಿ ಹಾಡುವುದು ಮತ್ತು ಅರ್ಥ ತಿಳಿಯುವುದು.
9. ಪ್ರಾರ್ಥನೆ ಮತ್ತು ಧ್ವಜಗೀತೆಯನ್ನು ಸರಿಯಾಗಿ ಹಾಡುವುದು ಮತ್ತು ಅವುಗಳ ಅರ್ಥ ತಿಳಿಯುವುದು.
10. ಕನಿಷ್ಠ 4 ದಳಸಭೆಗೆ ಹಾಜರಾಗುವುದು.
11. ಅವಳು ಪಟಾಲಂ ಜೊತೆ 4 ಘಂಟೆಗಳ ಕಾಲ ಹೊರ ಸಂಚಾರ ಕೈಗೊಳ್ಳಬೇಕು.

ಈ ಪರೀಕ್ಷೆಗಳನಂತರ ಪ್ರವೇಶಿಯು ಗೈಡ್ ಸಮವಸ್ತ್ರಧರಿಸಿ ಗೈಡ್ ನಾಯಕಿಗೆ ಧ್ವಜದ ಅಡಿಯಲ್ಲಿ ಭಾಷೆ ಕೊಡುವುದರ ಮೂಲಕ ದೀಕ್ಷೆಪಡೆಯುವಳು. ಅಧಿಕೃತವಾಗಿ ಸಮವಸ್ತ್ರ ಮತ್ತು ಸದಸ್ಯತ್ವ ಪದಕ ಧರಿಸಲು ಅರ್ಹಳಾಗುವಳು.

2.1 ಗೈಡಿಂಗ್ ಉದಯದ ಇತಿಹಾಸ

ವಿಶ್ವದಾದ್ಯಂತ ಎಲ್ಲಾ ಯುವತಿಯರಿಗೂ **1909 ಸೆಪ್ಟೆಂಬರ್ 4** ಒಂದು ಮಹತ್ವದ ದಿನ! ಇಂಗ್ಲೆಂಡಿನ ಮಧ್ಯಮ ವರ್ಗದ ಹೆಣ್ಣು ಮಕ್ಕಳು ಸ್ವಪ್ರೇರಣೆಯಿಂದ ಗರ್ಲ್ ಸ್ಕೌಟಿಂಗನ್ನು ವಿಶ್ವಕ್ಕೆ ಪರಿಚಯಿಸಿದ ದಿನ.

ರಾಬರ್ಟ್ ಸ್ಟೀಫನ್‌ಸನ್ ಸ್ಮಿತ್ ಬೇಡನ್ ಪಾವೆಲ್ ಎಂಬ ಬ್ರಿಟಿಷ್ ಸೈನ್ಯಾಧಿಕಾರಿಯು, 1908ರಲ್ಲಿ ಬರೆದು ಪ್ರಕಟಿಸಿದ ಪವಾಡಸದೃಶ್ಯವಾದ **"Scouting for boys"** ಎಂಬ ಪುಸ್ತಕವು, ಬಾಲಕರಿಗೆ ಪ್ರೇರಣೆ ನೀಡಿದ್ದೇ ಅಲ್ಲದೆ, ಬಾಲಕಿಯರನ್ನೂ ಪ್ರೇರೇಪಿಸಿ ಸ್ಕೌಟಿಂಗ್ ಚಟುವಟಿಕೆಯಲ್ಲಿ ತೊಡಗಿಸಿತು. ಅಲ್ಲಲ್ಲಿ ಬಾಲಕರ ಚಿಕ್ಕ ಗುಂಪುಗಳು ಮಳೆಗಾಲದಲ್ಲಿನ ಹಸಿರು ಸಸಿಗಳಂತೆ ಹುಟ್ಟಿಕೊಂಡವು. ಬಾಲಕರು ಆಸಕ್ತಿಯಿಂದ ಸ್ಕೌಟಿಂಗ್‌ನ ಚಟುವಟಿಕೆಯಲ್ಲಿ ತೊಡಗಿದರು.

ಬಾಲಕರನ್ನು ಅನುಸರಿಸಿ ಬಾಲಕಿಯರ ಗುಂಪು ಅಲ್ಲೊಂದು ಇಲ್ಲೊಂದು ಕಾಣಿಸಿಕೊಂಡಿತು. ಬಾಲಕಿಯರು ಪುಸ್ತಕವನ್ನು ಓದುತ್ತಾ, ಸೋದರರನ್ನು ಅನುಸರಿಸುತ್ತಾ ಸ್ಕೌಟಿಂಗ್ ಚಟುವಟಿಕೆಯಲ್ಲಿ ತೊಡಗಿದರು. ನಾಯಕರ ಮಾರ್ಗದರ್ಶನವಿಲ್ಲದೆ ಈ ಚಳವಳಿ ಎಲ್ಲರ ಮನೆ ಮಾತಾಯಿತು. ಎಲ್ಲರ ಗಮನ ಸೆಳೆಯಿತು. ಎಲ್ಲರ ಮನ ಗೆದ್ದಿತು. ಆದರೆ ಬಾಲಕಿಯರ ಸ್ಕೌಟಿಂಗ್ ಚಟುವಟಿಕೆಗಳಿಗೆ ಪ್ರೋತ್ಸಾಹ ಕಂಡುಬರಲಿಲ್ಲ. ಅಂದಿನ ಸಮಾಜವು ಹೆಣ್ಣು ಮಕ್ಕಳು ಗಂಡುಬೀರಿಯರಾಗುವುದನ್ನು (Tom Boy) ಸಮ್ಮತಿಸುತ್ತಿರಲಿಲ್ಲ. ಅವರು ಮನೆಯಲ್ಲಿ ಕಿರಿಯರನ್ನು ಲಾಲಿಸುತ್ತಾ, ಗೃಹಕೃತ್ಯದಲ್ಲಿ ಸಹಾಯಮಾಡುತ್ತಾ, ಅತಿಥಿಗಳನ್ನು ಸತ್ಕರಿಸುತ್ತಾ, ಬಿಡುವಿನ ವೇಳೆಯಲ್ಲಿ ಕಸೂತಿ ಹಾಕುತ್ತಾ, ಸಂಗೀತವನ್ನು ಕಲಿಯುತ್ತಾ, ಮದುವೆಯ ನಿರೀಕ್ಷೆಯಲ್ಲಿ ಮತ್ತು ಸಿದ್ಧತೆಯಲ್ಲಿ ಬೆಳೆಯುತ್ತಾ ಕಾಲಕಳೆಯುತ್ತಾ ಇರಬೇಕಿತ್ತು. ಅವರಿಗೆ ಬಾಲಕರಷ್ಟು ಸ್ವಾತಂತ್ರ್ಯವಿರಲಿಲ್ಲ. ಹಿರಿಯರ ದಿಗ್ಬಂಧನಕ್ಕೆ ಒಳಪಟ್ಟು ತಮ್ಮ ಬಾಲ್ಯವನ್ನು ಕಳೆಯಬೇಕಿತ್ತು. ಇಂತಹ ಸಾಮಾಜಿಕ ಸನ್ನಿವೇಶದಲ್ಲಿ ಕೆಲವು ಬಾಲಕಿಯರು ಮಾಡಿದ ಈ ಸಾಹಸ ಬಾಲಕಿಯರ ಆಸೆ–ಆಕಾಂಕ್ಷೆಗಳಿಗೆ ದಾರಿದೀಪವಾಗಿ ಸ್ವಾತಂತ್ರ್ಯದ ಕನಸನ್ನು ನನಸಾಗಿಸಲು ನಾಂದಿ ಹಾಡಿತು.

ಬಾಲಕಿಯರು ಸ್ಕೌಟ್ ಸಹೋದರರಂತೆ ಸಮವಸ್ತ್ರ ಧರಿಸಿ, ತೂಗು ಚೀಲ ಹಾಕಿಕೊಂಡು, ನೀರಿನ ಸೀಸೆ ಮತ್ತು ಶಿಳ್ಳೆಯನ್ನು ತೆಗೆದುಕೊಂಡು ರಸ್ತೆಯಲ್ಲಿ ನಡೆದಾಡಿದರು. ಅಶಕ್ತರಿಗೆ ಸಹಾಯಮಾಡುತ್ತಾ, ಅವಶ್ಯವಿದ್ದವರಿಗೆ ಪ್ರಥಮ ಚಿಕಿತ್ಸೆ ನೀಡುತ್ತಾ, ತಮ್ಮನ್ನು ತಾವೇ ಸೇವಾಕಾರ್ಯದಲ್ಲಿ ತೊಡಗಿಸಿಕೊಂಡರು. ಇಂತಹ ಗರ್ಲ್ ಸ್ಕೌಟ್ ದಳಗಳಲ್ಲಿ **ವಿಂಬಲ್ಡನ್** ಎಂಬಲ್ಲಿ **ಆಗ್ನೇಸ್ ಮೈನಾರ್ಡ್ (Agnes Maynard)** ನೇತೃತ್ವದ ದಳವನ್ನು ಮೊದಲನೆಯದೆಂದು ದಾಖಲಿಸಲಾಗಿದೆ.

1899ರಲ್ಲಿ ಬಿ.ಪಿಯವರ ನೇತೃತ್ವದಲ್ಲಿ ನಡೆದ **ಮೇಫ್‌ಕಿಂಗ್ ಯುದ್ಧವು** ಸ್ಕೌಟಿಂಗ್ ಇತಿಹಾಸದ ಪ್ರಮುಖ ಘಟನೆಯಾಗಿದೆ. ಈ ಯುದ್ಧದಲ್ಲಿ ಮೇಫ್‌ಕಿಂಗ್‌ನಲ್ಲಿ ಇದ್ದ ಇಂಗ್ಲೆಂಡಿನ ಕೆಲವು ಗಂಡು ಮಕ್ಕಳನ್ನು ಸೇರಿಸಿ **ಮೇಫ್**

ಕಿಂಗ್ ಕೆಡೆಟ್ ಕೋರ್ / ಬಾಯ್ಸ್ ಕೆಡೆಟ್ ಕಾರ್ಪ್‌ನ್ನು ರಚಿಸಲಾಯಿತು. ಇವರಿಗೆ ತರಬೇತಿ ನೀಡಿ, ಸೈಕಲ್ ಕೊಟ್ಟು, ದೂತ ಸೇವೆಯಲ್ಲಿ ತೊಡಗಿಸಲಾಯಿತು. ಇವರ ಕಾರ್ಯದಕ್ಷತೆಯನ್ನು ಬಿ.ಪಿ.ಯವರು ಮೆಚ್ಚಿ, ಸೈನಿಕರಿಗಾಗಿ ರೂಪಿಸಿದ್ದ ಸ್ಕೌಟಿಂಗ್‌ನ್ನು ಮಾರ್ಪಡಿಸಿ, ಬಾಲಕರಿಗಾಗಿ ಸ್ಕೌಟಿಂಗ್ ಚಟುವಟಿಕೆಗಳನ್ನು ರೂಪಿಸಿದರು.

ವಿವಿಧ ಸಾಮಾಜಿಕ ಹಿನ್ನೆಲೆಯಿಂದ 20 ಗಂಡು ಮಕ್ಕಳನ್ನು ಒಟ್ಟುಗೂಡಿಸಿ, 29–7–1907 ರಿಂದ 9–8–1907 ರವರೆಗೆ **ಬ್ರೌನ್‌ಸೀ** (Brown Sea) **ದ್ವೀಪದಲ್ಲಿ** ಸ್ಕೌಟಿಂಗ್‌ನ ಪ್ರಥಮ **ಪ್ರಾಯೋಗಿಕ ಶಿಬಿರ** ನಡೆಸಿದರು. ಈ ಸ್ಥಳದಲ್ಲಿ ಪ್ರಥಮ ಸ್ಕೌಟ್ ಶಿಬಿರದ ಸ್ಮಾರಕ ಶಿಲೆಯನ್ನು ಸ್ಥಾಪಿಸಲಾಗಿದೆ. ಆ ದ್ವೀಪಕ್ಕೆ ಹೋದವರು ಇದನ್ನು ಇಂದಿಗೂ ಕಾಣಬಹುದು. ಈ ಶಿಬಿರದ ಯಶಸ್ಸಿನ ಸ್ಫೂರ್ತಿ ಮತ್ತು ಅನುಭವಗಳ ಆಧಾರದ ಮೇಲೆ 1-1-1908 ರಿಂದ 1–3–1908 ರವರೆಗೆ 6 ಕಂತಿನಲ್ಲಿ ಎರಡು ವಾರಕ್ಕೊಮ್ಮೆ

"ಸ್ಕೌಟಿಂಗ್ ಫಾರ್ ಬಾಯ್ಸ್" ಎಂಬ ಶೀರ್ಷಿಕೆಯ ಅಡಿಯಲ್ಲಿ ಬಾಲಕರಿಗಾಗಿ ಕಾರ್ಯಕ್ರಮಗಳನ್ನು ಕುರಿತ ಲೇಖನಗಳನ್ನು ಪ್ರಕಟಿಸಿದರು. ಆನಂತರ ಪ್ರಕಟಣೆಗಳನ್ನು ಪರಿಷ್ಕರಿಸಿ, 1–5–1908ರಲ್ಲಿ **'ಸ್ಕೌಟಿಂಗ್ ಫಾರ್ ಬಾಯ್ಸ್'** ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಇದರ ಸ್ಫೂರ್ತಿಯ ಸೆಲೆಯು ಇಂದಿಗೂ ಬತ್ತಿಲ್ಲ. ಈ ಪುಸ್ತಕವು ಇಂದಿಗೂ ಪ್ರಕಟವಾಗುತ್ತಲೇ ಇದೆ. ಅಂದಿನ ದಿನಗಳಲ್ಲಿ ಇದು ಅತಿ ಹೆಚ್ಚು ಮಾರಾಟವಾದ 3ನೇ ಪುಸ್ತಕವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸುಮಾರು 50 ಕೋಟಿಗೂ ಹೆಚ್ಚು ಪುಸ್ತಕಗಳು ಮಾರಾಟವಾಗಿವೆ. ಇನ್ನೂ ಆಗುತ್ತಲೇ ಇವೆ. ಈ ಪುಸ್ತಕವು ವಿಶ್ವದ ಅನೇಕ ಭಾಷೆಗಳಲ್ಲಿ ಭಾಷಾಂತರ ಗೊಂಡಿದೆ. ಈ ಪುಸ್ತಕವನ್ನು ಕನ್ನಡದಲ್ಲಿ **'ಬಾಲಕರಿಗಾಗಿ ಸ್ಕೌಟಿಂಗ್'** ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ.



ಈ ಪುಸ್ತಕವನ್ನು ಸರಳ, ನೇರ ಭಾಷೆಯಲ್ಲಿ ಸಂಸ್ಥಾಪಕರಾದ ಬಿ.ಪಿ.ಯವರು ಬರೆದಿದ್ದಾರೆ. ಬಾಲಕರು ಎಲ್ಲ ಚಟುವಟಿಕೆಗಳನ್ನು ತಾವೇ ಆಸಕ್ತಿಯಿಂದ ಮಾಡಲು

ಅನುಕೂಲವಾಗಿದೆ. ಬಿ.ಪಿ.ಯರು ಕಥೆಗಳನ್ನು, ಘಟನೆಗಳನ್ನು ಕುತೂಹಲಕರವಾಗಿ ನಿರೂಪಿಸಿದ್ದಾರೆ. ಅಲ್ಲಲ್ಲಿ ಬಿ.ಪಿ.ಯವರು ರೇಖಾಚಿತ್ರಗಳನ್ನು ತಾವೇ ಚಿತ್ರಿಸಿ ಅಳವಡಿಸಿದ್ದಾರೆ. ಪ್ರತಿ ಅಧ್ಯಾಯವನ್ನು 'ಕ್ಯಾಂಪ್ ಫೈರ್ ಯಾರ್ನ್' ಎಂದು ಹೆಸರಿಸಿದರು. ಈ ಶೀರ್ಷಿಕೆಯ ಮೂಲಕ ಕಾರ್ಯಕ್ರಮಗಳ ಎಳೆಯನ್ನು ಸುಂದರವಾಗಿ ಹೆಣೆಯಲಾಗಿದೆ. ಇದು ಸ್ಕೌಟಿಂಗ್ ಮತ್ತು ಗೈಡಿಂಗ್ ಚಳವಳಿಯ ಮೂಲ ಪ್ರೇರಕಶಕ್ತಿಯಾಗಿ ಹೊರಹೊಮ್ಮಿದೆ. ಈ ಪುಸ್ತಕವನ್ನು ಚಳವಳಿಯ "ಮೂಲಗ್ರಂಥವೆಂದು" ಪರಿಗಣಿಸಲಾಗಿದೆ. ಪ್ರತಿಯೊಬ್ಬ ಗೈಡ್‌ಳೂ ಈ ಪುಸ್ತಕವನ್ನು ಒಮ್ಮೆಯಾದರೂ ಓದಲೇಬೇಕು.

ಈ ಚಳವಳಿಯು ಇಂಗ್ಲೆಂಡ್‌ನಲ್ಲಿ ಮಾತ್ರವಲ್ಲದೆ, ಇತರ ದೇಶಗಳಲ್ಲೂ ಆರಂಭವಾಯಿತು. ಅನೇಕರ ಮನೆ-ಮನ ಮುಟ್ಟಿತು. ಬಾಲಕರು/ಬಾಲಕಿಯರು, ಯುವಕರು/ಯುವತಿಯರು ಹಾಗು ಹಿರಿಯರಿಂದ ಬಿ.ಪಿ.ಯವರಿಗೆ ಸ್ಕೌಟಿಂಗ್ ಕುರಿತು ಪ್ರಶಂಸೆಯ ಪತ್ರಗಳು, ಮಾರ್ಗದರ್ಶನಕ್ಕಾಗಿ ಪತ್ರಗಳು ಬರಲಾರಂಭಿಸಿದವು. ಕೆಲವೇ ದಿನಗಳಲ್ಲಿ ಉತ್ತರಿಸಲಾರದಷ್ಟು ರಾಶಿರಾಶಿ ಪತ್ರಗಳು ಬಂದವು. ಆಗ

ಬಿ.ಪಿಯವರು, ಸ್ಕೌಟ್ಸ್‌ಗಳ ಬಲಾಬಲವನ್ನು ತಿಳಿಯಲು ಪ್ರಥಮ ಸ್ಕೌಟ್ ಮೇಳವನ್ನು ಲಂಡನ್ನಿನ **ಕ್ರಿಸ್ಟಲ್ ಪ್ಯಾಲೇಸ್**‌ನಲ್ಲಿ 4-9-1909ರಲ್ಲಿ ಸಂಘಟಿಸಿದರು. 11,000 ಬಾಲಕರು, ಮತ್ತು 7 ಬಾಲಕಿಯರು ಭಾಗವಹಿಸಿದರು. ಬಾಲಕರ ಪಥಸಂಚಲನ ಘನವಂದನೆ ಮಾಡುತ್ತಾ ಮುಂದಕ್ಕೆ ಸಾಗಿದಂತೆ ಬಾಲಕಿಯರ ಚಿಕ್ಕ ಗುಂಪು ಪ್ರವೇಶಿಸಿತು. ಇವರು ಬಾಲಕರಂತೆ ಖಾಕಿ ಬಣ್ಣದ ಅಂಗಿ, ನೀಲಿಲಂಗ ಸಮವಸ್ತ್ರ ಧರಿಸಿ, ಕೈಯಲ್ಲಿ ದಂಡ ಹಿಡಿದು, ದೊಡ್ಡ ಟೋಪಿ ಧರಿಸಿ, ಭುಜದಲ್ಲಿ ತೂಗು ಚೀಲ ಹಾಕಿಕೊಂಡು ಕಾಲಿಗೆ ಕರಿಯ ಬಣ್ಣದ ಕಾಲುಚೀಲ, ಮತ್ತು ಬೂಟುಗಳನ್ನು ಧರಿಸಿದ್ದರು. ಇವರು ಪಥಸಂಚಲನ ಮಾಡುತ್ತಾ ಬಿ.ಪಿ.ಯವರಿಗೆ ಎದುರಾದರು, ಗೌರವ ವಂದನೆ ಸಲ್ಲಿಸಿದರು. ಬಿ.ಪಿ.ಯವರು ಹೆಣ್ಣು ಮಕ್ಕಳನ್ನು ನೋಡಿ ಆಶ್ಚರ್ಯಚಕಿತರಾದರು. ನೀವು ಯಾರೆಂದು, ನಾಯಕಿಯನ್ನು ಕೇಳಿದರು. **'ನಾವು ವುಲ್ಫ್ ಪೆಟ್ರೋಲಿನ ಗರ್ಲ್‌ಸ್ಕೌಟ್ಸ್'** ಎಂದರು. ಹೀಗೆ ಆ ಬಾಲಕಿಯರೇ ಗರ್ಲ್ಸ್‌ಸ್ಕೌಟ್‌ನ ಪ್ರಾರಂಭಕ್ಕೆ ನಾಂದಿಯಾದರು. ನಂತರ ಬಿ.ಪಿ.ಯವರು, ಈ

ಕಿಂಗ್ ಕೆಡೆಟ್ ಕೋರ್ / ಬಾಯ್ಸ್ ಕೆಡೆಟ್ ಕಾರ್ಪ್‌ನ್ನು ರಚಿಸಲಾಯಿತು. ಇವರಿಗೆ ತರಬೇತಿ ನೀಡಿ, ಸೈಕಲ್ ಕೊಟ್ಟು, ದೂತ ಸೇವೆಯಲ್ಲಿ ತೊಡಗಿಸಲಾಯಿತು. ಇವರ ಕಾರ್ಯದಕ್ಷತೆಯನ್ನು ಬಿ.ಪಿ.ಯವರು ಮೆಚ್ಚಿ, ಸೈನಿಕರಿಗಾಗಿ ರೂಪಿಸಿದ್ದ ಸ್ಕೌಟಿಂಗ್‌ನ್ನು ಮಾರ್ಪಡಿಸಿ, ಬಾಲಕರಿಗಾಗಿ ಸ್ಕೌಟಿಂಗ್ ಚಟುವಟಿಕೆಗಳನ್ನು ರೂಪಿಸಿದರು.

ವಿವಿಧ ಸಾಮಾಜಿಕ ಹಿನ್ನೆಲೆಯಿಂದ 20 ಗಂಡು ಮಕ್ಕಳನ್ನು ಒಟ್ಟುಗೂಡಿಸಿ, 29–7–1907 ರಿಂದ 9–8–1907 ರವರೆಗೆ **ಬ್ರೌನ್‌ಸೀ (Brown Sea) ದ್ವೀಪದಲ್ಲಿ** ಸ್ಕೌಟಿಂಗ್‌ನ ಪ್ರಥಮ **ಪ್ರಾಯೋಗಿಕ ಶಿಬಿರ** ನಡೆಸಿದರು. ಈ ಸ್ಥಳದಲ್ಲಿ ಪ್ರಥಮ ಸ್ಕೌಟ್ ಶಿಬಿರದ ಸ್ಮಾರಕ ಶಿಲೆಯನ್ನು ಸ್ಥಾಪಿಸಲಾಗಿದೆ. ಆ ದ್ವೀಪಕ್ಕೆ ಹೋದವರು ಇದನ್ನು ಇಂದಿಗೂ ಕಾಣಬಹುದು. ಈ ಶಿಬಿರದ ಯಶಸ್ಸಿನ ಸ್ಫೂರ್ತಿ ಮತ್ತು ಅನುಭವಗಳ ಆಧಾರದ ಮೇಲೆ 1–1–1908 ರಿಂದ 1–3–1908 ರವರೆಗೆ 6 ಕಂತಿನಲ್ಲಿ ಎರಡು ವಾರಕ್ಕೊಮ್ಮೆ **"ಸ್ಕೌಟಿಂಗ್ ಫಾರ್ ಬಾಯ್ಸ್"** ಎಂಬ ಶೀರ್ಷಿಕೆಯ ಅಡಿಯಲ್ಲಿ ಬಾಲಕರಿಗಾಗಿ ಕಾರ್ಯಕ್ರಮಗಳನ್ನು ಕುರಿತ ಲೇಖನಗಳನ್ನು ಪ್ರಕಟಿಸಿದರು. ಆನಂತರ ಪ್ರಕಟಣೆಗಳನ್ನು ಪರಿಷ್ಕರಿಸಿ, 1–5–1908ರಲ್ಲಿ **'ಸ್ಕೌಟಿಂಗ್ ಫಾರ್ ಬಾಯ್ಸ್'** ಪುಸ್ತಕ ರೂಪದಲ್ಲಿ ಪ್ರಕಟಿಸಿದರು. ಇದರ ಸ್ಫೂರ್ತಿಯ ಸೆಲೆಯು ಇಂದಿಗೂ ಬತ್ತಿಲ್ಲ. ಈ ಪುಸ್ತಕವು ಇಂದಿಗೂ ಪ್ರಕಟವಾಗುತ್ತಲೇ ಇದೆ. ಅಂದಿನ ದಿನಗಳಲ್ಲಿ ಇದು ಅತಿ ಹೆಚ್ಚು ಮಾರಾಟವಾದ 3ನೇ ಪುಸ್ತಕವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಸುಮಾರು 50 ಕೋಟಿಗೂ ಹೆಚ್ಚು ಪುಸ್ತಕಗಳು ಮಾರಾಟವಾಗಿವೆ. ಇನ್ನೂ ಆಗುತ್ತಲೇ ಇವೆ. ಈ ಪುಸ್ತಕವು ವಿಶ್ವದ ಅನೇಕ ಭಾಷೆಗಳಲ್ಲಿ ಭಾಷಾಂತರ ಗೊಂಡಿದೆ. ಈ ಪುಸ್ತಕವನ್ನು ಕನ್ನಡದಲ್ಲಿ **'ಬಾಲಕರಿಗಾಗಿ ಸ್ಕೌಟಿಂಗ್'** ಎಂಬ ಹೆಸರಿನಲ್ಲಿ ಪ್ರಕಟಿಸಲಾಗಿದೆ.



ಈ ಪುಸ್ತಕವನ್ನು ಸರಳ, ನೇರ ಭಾಷೆಯಲ್ಲಿ ಸಂಸ್ಥಾಪಕರಾದ ಬಿ.ಪಿ.ಯವರು ಬರೆದಿದ್ದಾರೆ. ಬಾಲಕರು ಎಲ್ಲ ಚಟುವಟಿಕೆಗಳನ್ನು ತಾವೇ ಆಸಕ್ತಿಯಿಂದ ಮಾಡಲು

ಅನುಕೂಲವಾಗಿದೆ. ಬಿ.ಪಿ.ಯರು ಕಥೆಗಳನ್ನು, ಘಟನೆಗಳನ್ನು ಕುತೂಹಲಕರವಾಗಿ ನಿರೂಪಿಸಿದ್ದಾರೆ. ಅಲ್ಲಲ್ಲಿ ಬಿ.ಪಿ.ಯವರು ರೇಖಾಚಿತ್ರಗಳನ್ನು ತಾವೇ ಚಿತ್ರಿಸಿ ಅಳವಡಿಸಿದ್ದಾರೆ. ಪ್ರತಿ ಅಧ್ಯಾಯವನ್ನು 'ಕ್ಯಾಂಪ್ ಫೈರ್ ಯಾರ್ನ್' ಎಂದು ಹೆಸರಿಸಿದರು. ಈ ಶೀರ್ಷಿಕೆಯ ಮೂಲಕ ಕಾರ್ಯಕ್ರಮಗಳ ಎಳೆಯನ್ನು ಸುಂದರವಾಗಿ ಹೆಣೆಯಲಾಗಿದೆ. ಇದು ಸ್ಕೌಟಿಂಗ್ ಮತ್ತು ಗೈಡಿಂಗ್ ಚಳವಳಿಯ ಮೂಲ ಪ್ರೇರಕಶಕ್ತಿಯಾಗಿ ಹೊರಹೊಮ್ಮಿದೆ. ಈ ಪುಸ್ತಕವನ್ನು ಚಳವಳಿಯ "ಮೂಲಗ್ರಂಥವೆಂದು" ಪರಿಗಣಿಸಲಾಗಿದೆ. ಪ್ರತಿಯೊಬ್ಬ ಗೈಡ್‌ಳೂ ಈ ಪುಸ್ತಕವನ್ನು ಒಮ್ಮೆಯಾದರೂ ಓದಲೇಬೇಕು.

ಈ ಚಳವಳಿಯು ಇಂಗ್ಲೆಂಡ್‌ನಲ್ಲಿ ಮಾತ್ರವಲ್ಲದೆ, ಇತರ ದೇಶಗಳಲ್ಲೂ ಆರಂಭವಾಯಿತು. ಅನೇಕರ ಮನೆ-ಮನ ಮುಟ್ಟಿತು. ಬಾಲಕರು/ಬಾಲಕಿಯರು, ಯುವಕರು/ಯುವತಿಯರು ಹಾಗು ಹಿರಿಯರಿಂದ ಬಿ.ಪಿ.ಯವರಿಗೆ ಸ್ಕೌಟಿಂಗ್ ಕುರಿತು ಪ್ರಶಂಸೆಯ ಪತ್ರಗಳು, ಮಾರ್ಗದರ್ಶನಕ್ಕಾಗಿ ಪತ್ರಗಳು ಬರಲಾರಂಭಿಸಿದವು. ಕೆಲವೇ ದಿನಗಳಲ್ಲಿ ಉತ್ತರಿಸಲಾರದಷ್ಟು ರಾಶಿರಾಶಿ ಪತ್ರಗಳು ಬಂದವು. ಆಗ ಬಿ.ಪಿಯವರು, ಸ್ಕೌಟ್ಸ್‌ಗಳ ಬಲಾಬಲವನ್ನು ತಿಳಿಯಲು ಪ್ರಥಮ ಸ್ಕೌಟ್ ಮೇಳವನ್ನು ಲಂಡನ್ನಿನ **ಕ್ರಿಸ್ಟಲ್ ಪ್ಯಾಲೇಸ್‌**ನಲ್ಲಿ 4-9-1909ರಲ್ಲಿ ಸಂಘಟಿಸಿದರು. 11,000 ಬಾಲಕರು, ಮತ್ತು 7 ಬಾಲಕಿಯರು ಭಾಗವಹಿಸಿದರು. ಬಾಲಕರ ಪಥಸಂಚಲನ ಘನವಂದನೆ ಮಾಡುತ್ತಾ ಮುಂದಕ್ಕೆ ಸಾಗಿದಂತೆ ಬಾಲಕಿಯರ ಚಿಕ್ಕ ಗುಂಪು ಪ್ರವೇಶಿಸಿತು. ಇವರು ಬಾಲಕರಂತೆ ಖಾಕಿ ಬಣ್ಣದ ಅಂಗಿ, ನೀಲಿಲಂಗ ಸಮವಸ್ತ್ರ ಧರಿಸಿ, ಕೈಯಲ್ಲಿ ದಂಡ ಹಿಡಿದು, ದೊಡ್ಡ ಟೋಪಿ ಧರಿಸಿ, ಭುಜದಲ್ಲಿ ತೂಗು ಚೀಲ ಹಾಕಿಕೊಂಡು ಕಾಲಿಗೆ ಕರಿಯ ಬಣ್ಣದ ಕಾಲುಚೀಲ, ಮತ್ತು ಬೂಟುಗಳನ್ನು ಧರಿಸಿದ್ದರು. ಇವರು ಪಥಸಂಚಲನ ಮಾಡುತ್ತಾ ಬಿ.ಪಿ.ಯವರಿಗೆ ಎದುರಾದರು, ಗೌರವ ವಂದನೆ ಸಲ್ಲಿಸಿದರು. ಬಿ.ಪಿ.ಯವರು ಹೆಣ್ಣು ಮಕ್ಕಳನ್ನು ನೋಡಿ ಆಶ್ಚರ್ಯಚಕಿತರಾದರು. ನೀವು ಯಾರೆಂದು, ನಾಯಕಿಯನ್ನು ಕೇಳಿದರು. **'ನಾವು ವುಲ್ಫ್ ಪೆಟ್ರೋಲಿನ ಗರ್ಲ್‌ಸ್ಕೌಟ್ಸ್'** ಎಂದರು. ಹೀಗೆ ಆ ಬಾಲಕಿಯರೇ ಗರ್ಲ್ಸ್‌ಸ್ಕೌಟ್‌ನ ಪ್ರಾರಂಭಕ್ಕೆ ನಾಂದಿಯಾದರು. ನಂತರ ಬಿ.ಪಿ.ಯವರು, ಈ

ಹೆಣ್ಣುಮಕ್ಕಳೊಂದಿಗೆ ಹಲವು ಬಾರಿ ಚರ್ಚಿಸಿ, "ಈ ಚಟುವಟಿಕೆಗಳು ನಿಮಗೆ ತಕ್ಕುದಲ್ಲ, ಇದನ್ನು ಗಂಡುಮಕ್ಕಳಿಗಾಗಿ ರೂಪಿಸಿದ್ದು," ಎಂದು ತಿಳಿಯ ಹೇಳಿದರೂ ತಮ್ಮ ಪಟ್ಟನ್ನು ಬಿಡದೆ, ತಮಗೂ ಈ ಚಟುವಟಿಕೆಗಳನ್ನು ಮಾಡಲು ಸಾಧ್ಯ ಎಂದು ಬಾಲಕಿಯರು ವಾದಿಸಿದರು. ಬಿ.ಪಿ.ಯವರು ಬಾಲಕಿಯರ ಆಸಕ್ತಿಗೆ ಮಣಿದು, ಅವರ ಮೇಲಿನ ಪ್ರೀತಿ, ಅನುಕಂಪಗಳಿಂದ ಅವರಿಗೆ ಅನುಮತಿ ನೀಡಿದರು. ಹೀಗೆ **ಗರ್ಲ್ಸ್‌ಸ್ಕೌಟ್ಸ್** ವಿಭಾಗ ಪ್ರಾರಂಭವಾಯಿತು. ಇದರ ಜವಾಬ್ದಾರಿಯನ್ನು ತಮ್ಮ ಸೋದರಿ ಯವರಾದ **ಅಗ್ನೇಸ್ ಬೇಡನ್ ಪಾವೆಲ್**ರಿಗೆ ವಹಿಸಿದರು. ಇವರು ಬಾಲಕಿಯರ ವಿಭಾಗದ ಮೊದಲ ಅಧ್ಯಕ್ಷರಾದರು.

ಗರ್ಲ್ಸ್‌ಸ್ಕೌಟ್ ಆರಂಭವಾದ ನಂತರ ಒಮ್ಮೆ ಬಿ.ಪಿ.ಯವರು, ಅದರ ಹುಟ್ಟಿನ ಬಗ್ಗೆ ಈ ರೀತಿ ಹೇಳಿದರು: "ನಿಜ ಹೇಳಬೇಕೆಂದರೆ, ನಾನು ಗರ್ಲ್ಸ್ ಸ್ಕೌಟ್ಸ್‌ನ ಬಗ್ಗೆ ವಿಚಾರ ಮಾಡಿರಲಿಲ್ಲ. ನಾನು ಈ ಚಳವಳಿಯನ್ನು ಬಾಲಕಿಯರಿಗಾಗಿ ರೂಪಿಸಲಿಲ್ಲ. ಬಾಲಕಿಯರು ಸ್ಕೌಟಿಂಗ್ ಬಗ್ಗೆ ವಿಚಾರ ಮಾಡುವರೆಂದು, ಈ ಚಟುವಟಿಕೆಗಳಲ್ಲಿ ತೊಡಗುವರೆಂದು ಊಹಿಸಿಯೂ ಇರಲಿಲ್ಲ. ಆದರೆ ಹೆಣ್ಣು ಮಕ್ಕಳು ಇದನ್ನು ತಾವೇ ಪ್ರಾರಂಭಿಸಿ ಬಿಟ್ಟರು! 1909ರಲ್ಲಿ ಕ್ರಿಸ್ಟಲ್ ಪ್ಯಾಲೇಸ್‌ನಲ್ಲಿ ನಡೆದ ಪ್ರಥಮ ಸ್ಕೌಟ್ಸ್ ರ್‍ಯಾಲಿಯಲ್ಲಿ ಆಹ್ವಾನವಿಲ್ಲದೆ, ಅವರು ಭಾಗವಹಿಸಿದರು. ಅಂಗಿಯ ತೋಳನ್ನು ಮೇಲಕ್ಕೆ ಮಡಿಚಿ, ಕಾಲುಚೀಲ ಕೆಳಕ್ಕೆ ಸುರುಳಿಸುತ್ತಿ, ತೂಗು ಚೀಲವನ್ನು ಹೊತ್ತು ನಡೆದರು. ಸ್ಕೌಟ್ ಚಳವಳಿಯು ಅಷ್ಟು ಹೊತ್ತಿಗಾಗಲೇ ಬಹಳ ವೇಗವಾಗಿ ವಿಶ್ವವ್ಯಾಪಿಯಾಗಿ ಬೆಳೆಯಲಾರಂಭಿಸಿತ್ತು. ಸ್ಕೌಟಿಂಗ್ ಆಟವು ಒರಟಾದ ಆಟ. ಇದು ನಿಮಗಲ್ಲ, ನಿಮ್ಮದೇ ಆಟವನ್ನು ಆಡಿ ಎಂದು ಹೇಳಿದೆ. ಆದರೆ ಅವರು ಆಗಲೇ ಈ ಆಟವನ್ನು ಪ್ರಾರಂಭಿಸಿದ್ದರು ಮತ್ತು ಆಡಲು ನಿರ್ಧರಿಸಿದ್ದರು. ನಾನು ಸಹ ಇದು ಅವರಿಗಲ್ಲ ಎಂದು ನಿರ್ಧರಿಸಿದ್ದೆ. ಅವರಿಗೆ ಅವರದೇ ಆದ ಭಿನ್ನ ರೀತಿಯ, ಚಳವಳಿ ಇರಬೇಕೆಂದು ಬಯಸಿದ್ದೆ. ನಂತರದಲ್ಲಿ ಬಾಲಕಿಯರ ಹಠಕ್ಕೆ ಮಣಿದು ಅನಿವಾರ್ಯವಾಗಿ ಗರ್ಲ್ಸ್ ಸ್ಕೌಟಿಂಗ್ ವಿಭಾಗವನ್ನು ಆರಂಭಿಸಲೇಬೇಕಾಯಿತು".

ಬಿ.ಪಿ. ಯವರು ಬಾಲಕಿಯರ ಸಂಸ್ಥೆಯನ್ನು ತಂಗಿಯಾದ ಅಗ್ನೇಸ್ ಬಿ.ಪಿ.ಯವರಿಗೆ ವಹಿಸಿದರು. ಅವರು ಆಸಕ್ತಿಯಿಂದ ಬಿ.ಪಿಯವರ

ಮಾರ್ಗದರ್ಶನದಲ್ಲಿ ಬಾಲಕಿಯರ ವಿಭಾಗವನ್ನು ಶಿಶುವಿನಂತೆ ಪೋಷಿಸಿದರು. ಇದಕ್ಕೆ ಅವಶ್ಯಕವಾದ ಕಾರ್ಯಕ್ರಮವನ್ನು ರೂಪಿಸಿ **How Girls can help to build the Empire** ಎಂಬ ಪುಸ್ತಕವನ್ನೂ ಪ್ರಕಟಿಸಿದರು.

ಬೇಡನ್ ಪಾವೆಲ್‌ರ ಮಾರ್ಗದರ್ಶನದಲ್ಲಿ ಗೈಡಿಂಗ್ ಸಾಹಿತ್ಯ, ಗುರಿ, ನೀತಿ, ನಿಯಮಗಳನ್ನು ರಚಿಸಲಾಯಿತು. ಗೈಡಿಂಗ್ ಹೊರರಾಷ್ಟ್ರಗಳಲ್ಲಿ ಬೆಳೆಯಲಾರಂಬಿಸಿತು. ಯುವರಾಣಿ ಮೇರಿಯುವರು ಅಧ್ಯಕ್ಷರಾದರು. ಆಗ್ನೇಸ್ ಬಿ.ಪಿ.ಯವರು ಉಪಾಧ್ಯಕ್ಷರಾಗಿ ಕೊನೆಯವರೆಗೂ ಸೇವೆ ಸಲ್ಲಿಸಿದರು. ಬಿ.ಪಿ.ಯವರ ವಿವಾಹದನಂತರ ಅವರ ಪತ್ನಿಯಾದ **ಅಲೇವ್ ಸೇಂಟ್ ಕ್ಲೇರ್ ಸೋಮ್ಸ್** ಅವರು ಗೈಡಿಂಗ್‌ನ ಪ್ರಸಾರ ಮತ್ತು ಅಭಿವೃದ್ಧಿಗೆ ಅಮೋಘ ಸೇವೆ ಸಲ್ಲಿಸಿದರು. 1928ರಲ್ಲಿ ಅಂತಾರಾಷ್ಟ್ರೀಯ ಸಂಸ್ಥೆಯಾದ **ವಿಶ್ವ ಗರ್ಲ್‌ಗೈಡ್** ಮತ್ತು **ಗರ್ಲ್‌ಸ್ಕೌಟ್** ಸಂಸ್ಥೆಯನ್ನು **(WAGGGS)** ಸ್ಥಾಪಿಸಿದರು. ಈ ವಿಶ್ವಗೈಡ್ ಸಂಸ್ಥೆಗೆ ಈಗಾಗಲೇ 93 ವರ್ಷ ತುಂಬಿದೆ.

ಈ ಸಂಸ್ಥೆಯು 1911ರಲ್ಲಿ ಭಾರತಕ್ಕೆ ಪಾದಾರ್ಪಣೆ ಮಾಡಿತು. (ತೃತೀಯ ಸೋಪಾನದಲ್ಲಿ ಭಾರತದಲ್ಲಿನ ಗೈಡಿಂಗ್ ಇತಿಹಾಸವನ್ನು ಕೊಡಲಾಗಿದೆ).

ಗರ್ಲ್ ಸ್ಕೌಟ್, ಗರ್ಲ್ ಗೈಡ್ ಆದದ್ದು ಹೇಗೆ ?

ಗರ್ಲ್ ಸ್ಕೌಟ್‌ಗಳು, ಗಂಡು ಮಕ್ಕಳಂತೆ ಕಾಡು ಬೆಕ್ಕು, ತೋಳ, ಸಿಂಹ ಮುಂತಾದ ಹೆಸರುಗಳನ್ನು ತಮ್ಮ ಪಟಾಲಂ (Patrol) ಇಟ್ಟುಕೊಂಡಿರುವುದು ಬಿ.ಪಿ.ಯವರಿಗೆ ಸಮಾಧಾನಕರವಾಗಲಿಲ್ಲ. ಬಾಲಕಿಯರ ವಿಭಾಗಕ್ಕೊಂದು ಒಳ್ಳೆಯ ಹೆಸರಿಗಾಗಿ ಹುಡುಕಾಟ ನಡೆಸಿದರು. ಇದ್ದಕ್ಕಿದ್ದಂತೆ ಅವರಿಗೆ 1887ರಲ್ಲಿ ತಮ್ಮೊಡನೆ ಕೆಲಸಮಾಡಿದ, ಭಾರತದ ಉತ್ತರ – ಪಶ್ಚಿಮ ಗಡಿ ಕಾವಲು ಸೈನ್ಯದ ಗೈಡ್ಸ್ ಎಂಬ ಹೆಸರಿನ ತುಕಡಿಯ ಕಾವಲುಗಾರರು ನೆನಪಿಗೆ ಬಂದರು. ಅವರ ಧೈರ್ಯ, ಸಾಹಸ, ಮನೋಬಲ, ಯುದ್ಧ ಕುಶಲತೆಯ ಉತ್ತಮ ಸಾಮರ್ಥ್ಯಗಳು ಹಾಗೂ ಪ್ರಾಮಾಣಿಕತೆ, ದೇಶಭಕ್ತಿ, ದೇವರಲ್ಲಿ ನಂಬಿಕೆ ಮುಂತಾದ ಗುಣಗಳನ್ನು ಬಹಳವಾಗಿ ಮೆಚ್ಚಿದ್ದರು. ಜೊತೆಗೆ ಸ್ವಿಡ್ಜರ್‌ಲೆಂಡಿನ ಬೆಟ್ಟದಲ್ಲಿ ಪರ್ವತ ಸಂಚಾರಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದ ಸಾಹಸಿ, ಪ್ರಾಮಾಣಿಕ ಮಾರ್ಗದರ್ಶಕರಾದ ಗೈಡ್‌ಗಳು ನೆನಪಿಗೆ ಬಂದರು. ನಮ್ಮ ಹೆಣ್ಣುಮಕ್ಕಳೂ ಇವರಂತೆ ಮುಂದೆ ಬೆಳೆದು ಕುಟುಂಬಗಳನ್ನು, ಮುನ್ನಡೆಸುವ, ರಕ್ಷಿಸುವ, ಸಮರ್ಥ ಮಾತೆಯರಾಗುವವರು ಹೆಣ್ಣು ಮಕ್ಕಳೇ ಅಲ್ಲವೇ, ಎಂದು ಯೋಚಿಸಿ, ಬಾಲಕಿಯರ ವಿಭಾಗಕ್ಕೆ **ಗರ್ಲ್ ಗೈಡ್** ಎಂದು ಹೆಸರಿಸಿದರು. ಆದರೆ ಇಂದಿಗೂ ಕೆಲವು ರಾಷ್ಟ್ರಗಳು ಗರ್ಲ್ ಸ್ಕೌಟ್ಸ್

ಹೆಣ್ಣುಮಕ್ಕಳೊಂದಿಗೆ ಹಲವು ಬಾರಿ ಚರ್ಚಿಸಿ, "ಈ ಚಟುವಟಿಕೆಗಳು ನಿಮಗೆ ತಕ್ಕುದಲ್ಲ, ಇದನ್ನು ಗಂಡುಮಕ್ಕಳಿಗಾಗಿ ರೂಪಿಸಿದ್ದು," ಎಂದು ತಿಳಿಯ ಹೇಳಿದರೂ ತಮ್ಮ ಪಟ್ಟನ್ನು ಬಿಡದೆ, ತಮಗೂ ಈ ಚಟುವಟಿಕೆಗಳನ್ನು ಮಾಡಲು ಸಾಧ್ಯ ಎಂದು ಬಾಲಕಿಯರು ವಾದಿಸಿದರು. ಬಿ.ಪಿ.ಯವರು ಬಾಲಕಿಯರ ಆಸಕ್ತಿಗೆ ಮಣಿದು, ಅವರ ಮೇಲಿನ ಪ್ರೀತಿ, ಅನುಕಂಪಗಳಿಂದ ಅವರಿಗೆ ಅನುಮತಿ ನೀಡಿದರು. ಹೀಗೆ **ಗರ್ಲ್‌ಸ್ಕೌಟ್ಸ್** ವಿಭಾಗ ಪ್ರಾರಂಭವಾಯಿತು. ಇದರ ಜವಾಬ್ದಾರಿಯನ್ನು ತಮ್ಮ ಸೋದರಿ ಯವರಾದ **ಅಗ್ನೇಸ್ ಬೇಡನ್ ಪಾವೆಲ್**‌ರಿಗೆ ವಹಿಸಿದರು. ಇವರು ಬಾಲಕಿಯರ ವಿಭಾಗದ ಮೊದಲ ಅಧ್ಯಕ್ಷರಾದರು.

ಗರ್ಲ್‌ಸ್ಕೌಟ್ ಆರಂಭವಾದ ನಂತರ ಒಮ್ಮೆ ಬಿ.ಪಿ.ಯವರು, ಅದರ ಹುಟ್ಟಿನ ಬಗ್ಗೆ ಈ ರೀತಿ ಹೇಳಿದರು: "ನಿಜ ಹೇಳಬೇಕೆಂದರೆ, ನಾನು ಗರ್ಲ್‌ಸ್ಕೌಟ್ಸ್‌ನ ಬಗ್ಗೆ ವಿಚಾರ ಮಾಡಿರಲಿಲ್ಲ. ನಾನು ಈ ಚಳವಳಿಯನ್ನು ಬಾಲಕಿಯರಿಗಾಗಿ ರೂಪಿಸಲಿಲ್ಲ. ಬಾಲಕಿಯರು ಸ್ಕೌಟಿಂಗ್ ಬಗ್ಗೆ ವಿಚಾರ ಮಾಡುವರೆಂದು, ಈ ಚಟುವಟಿಕೆಗಳಲ್ಲಿ ತೊಡಗುವರೆಂದು ಊಹಿಸಿಯೂ ಇರಲಿಲ್ಲ. ಆದರೆ ಹೆಣ್ಣು ಮಕ್ಕಳು ಇದನ್ನು ತಾವೇ ಪ್ರಾರಂಭಿಸಿ ಬಿಟ್ಟರು! 1909ರಲ್ಲಿ ಕ್ರಿಸ್ಟಲ್ ಪ್ಯಾಲೇಸ್‌ನಲ್ಲಿ ನಡೆದ ಪ್ರಥಮ ಸ್ಕೌಟ್ಸ್ ರ್‍ಯಾಲಿಯಲ್ಲಿ ಆಹ್ವಾನವಿಲ್ಲದೆ, ಅವರು ಭಾಗವಹಿಸಿದರು. ಅಂಗಿಯ ತೋಳನ್ನು ಮೇಲಕ್ಕೆ ಮಡಿಚಿ, ಕಾಲುಚೀಲ ಕೆಳಕ್ಕೆ ಸುರುಳಿಸುತ್ತಿ, ತೂಗು ಚೀಲವನ್ನು ಹೊತ್ತು ನಡೆದರು. ಸ್ಕೌಟ್ ಚಳವಳಿಯು ಅಷ್ಟು ಹೊತ್ತಿಗಾಗಲೇ ಬಹಳ ವೇಗವಾಗಿ ವಿಶ್ವವ್ಯಾಪಿಯಾಗಿ ಬೆಳೆಯಲಾರಂಭಿಸಿತ್ತು. ಸ್ಕೌಟಿಂಗ್ ಆಟವು ಒರಟಾದ ಆಟ. ಇದು ನಿಮಗಲ್ಲ, ನಿಮ್ಮದೇ ಆಟವನ್ನು ಆಡಿ ಎಂದು ಹೇಳಿದೆ. ಆದರೆ ಅವರು ಆಗಲೇ ಈ ಆಟವನ್ನು ಪ್ರಾರಂಭಿಸಿದ್ದರು ಮತ್ತು ಆಡಲು ನಿರ್ಧರಿಸಿದ್ದರು. ನಾನು ಸಹ ಇದು ಅವರಿಗಲ್ಲ ಎಂದು ನಿರ್ಧರಿಸಿದ್ದೆ. ಅವರಿಗೆ ಅವರದೇ ಆದ ಭಿನ್ನ ರೀತಿಯ, ಚಳವಳಿ ಇರಬೇಕೆಂದು ಬಯಸಿದ್ದೆ. ನಂತರದಲ್ಲಿ ಬಾಲಕಿಯರ ಹಠಕ್ಕೆ ಮಣಿದು ಅನಿವಾರ್ಯವಾಗಿ ಗರ್ಲ್‌ಸ್ಕೌಟಿಂಗ್ ವಿಭಾಗವನ್ನು ಆರಂಭಿಸಲೇಬೇಕಾಯಿತು".

ಬಿ.ಪಿ. ಯವರು ಬಾಲಕಿಯರ ಸಂಸ್ಥೆಯನ್ನು ತಂಗಿಯಾದ ಅಗ್ನೇಸ್ ಬಿ.ಪಿ.ಯವರಿಗೆ ವಹಿಸಿದರು. ಅವರು ಆಸಕ್ತಿಯಿಂದ ಬಿ.ಪಿಯವರ

ಮಾರ್ಗದರ್ಶನದಲ್ಲಿ ಬಾಲಕಿಯರ ವಿಭಾಗವನ್ನು ಶಿಶುವಿನಂತೆ ಪೋಷಿಸಿದರು. ಇದಕ್ಕೆ ಅವಶ್ಯಕವಾದ ಕಾರ್ಯಕ್ರಮವನ್ನು ರೂಪಿಸಿ **How Girls can help to build the Empire** ಎಂಬ ಪುಸ್ತಕವನ್ನೂ ಪ್ರಕಟಿಸಿದರು.

ಬೇಡನ್ ಪಾವೆಲ್‌ರ ಮಾರ್ಗದರ್ಶನದಲ್ಲಿ ಗೈಡಿಂಗ್ ಸಾಹಿತ್ಯ, ಗುರಿ, ನೀತಿ, ನಿಯಮಗಳನ್ನು ರಚಿಸಲಾಯಿತು. ಗೈಡಿಂಗ್ ಹೊರರಾಷ್ಟ್ರಗಳಲ್ಲಿ ಬೆಳೆಯಲಾರಂಭಿಸಿತು. ಯುವರಾಣಿ ಮೇರಿಯವರು ಅಧ್ಯಕ್ಷರಾದರು. ಆಗ್ನೇಸ್ ಬಿ.ಪಿ.ಯವರು ಉಪಾಧ್ಯಕ್ಷರಾಗಿ ಕೊನೆಯವರೆಗೂ ಸೇವೆ ಸಲ್ಲಿಸಿದರು. ಬಿ.ಪಿ.ಯವರ ವಿವಾಹದನಂತರ ಅವರ ಪತ್ನಿಯಾದ **ಅಲೇವ್ ಸೇಂಟ್ ಕ್ಲೇರ್ ಸೋಮ್ಸ್** ಅವರು ಗೈಡಿಂಗ್‌ನ ಪ್ರಸಾರ ಮತ್ತು ಅಭಿವೃದ್ಧಿಗೆ ಅಮೋಘ ಸೇವೆ ಸಲ್ಲಿಸಿದರು. 1928ರಲ್ಲಿ ಅಂತಾರಾಷ್ಟ್ರೀಯ ಸಂಸ್ಥೆಯಾದ **ವಿಶ್ವ ಗರ್ಲ್‌ಗೈಡ್** ಮತ್ತು **ಗರ್ಲ್‌ಸ್ಕೌಟ್** ಸಂಸ್ಥೆಯನ್ನು **(WAGGGS)** ಸ್ಥಾಪಿಸಿದರು. ಈ ವಿಶ್ವಗೈಡ್ ಸಂಸ್ಥೆಗೆ ಈಗಾಗಲೇ 93 ವರ್ಷ ತುಂಬಿದೆ.

ಈ ಸಂಸ್ಥೆಯು 1911ರಲ್ಲಿ ಭಾರತಕ್ಕೆ ಪಾದಾರ್ಪಣೆ ಮಾಡಿತು. (ತೃತೀಯ ಸೋಪಾನದಲ್ಲಿ ಭಾರತದಲ್ಲಿನ ಗೈಡಿಂಗ್ ಇತಿಹಾಸವನ್ನು ಕೊಡಲಾಗಿದೆ).

ಗರ್ಲ್ ಸ್ಕೌಟ್, ಗರ್ಲ್ ಗೈಡ್ ಆದದ್ದು ಹೇಗೆ ?

ಗರ್ಲ್ ಸ್ಕೌಟ್‌ಗಳು, ಗಂಡು ಮಕ್ಕಳಂತೆ ಕಾಡು ಬೆಕ್ಕು, ತೋಳ, ಸಿಂಹ ಮುಂತಾದ ಹೆಸರುಗಳನ್ನು ತಮ್ಮ ಪಟಾಲಂ (Patrol) ಇಟ್ಟುಕೊಂಡಿರುವುದು ಬಿ.ಪಿ.ಯವರಿಗೆ ಸಮಾಧಾನಕರವಾಗಲಿಲ್ಲ. ಬಾಲಕಿಯರ ವಿಭಾಗಕ್ಕೊಂದು ಒಳ್ಳೆಯ ಹೆಸರಿಗಾಗಿ ಹುಡುಕಾಟ ನಡೆಸಿದರು. ಇದ್ದಕ್ಕಿದ್ದಂತೆ ಅವರಿಗೆ 1887ರಲ್ಲಿ ತಮ್ಮೊಡನೆ ಕೆಲಸಮಾಡಿದ, ಭಾರತದ ಉತ್ತರ – ಪಶ್ಚಿಮ ಗಡಿ ಕಾವಲು ಸೈನ್ಯದ ಗೈಡ್ಸ್ ಎಂಬ ಹೆಸರಿನ ತುಕಡಿಯ ಕಾವಲುಗಾರರು ನೆನಪಿಗೆ ಬಂದರು. ಅವರ ಧೈರ್ಯ, ಸಾಹಸ, ಮನೋಬಲ, ಯುದ್ಧ ಕುಶಲತೆಯ ಉತ್ತಮ ಸಾಮರ್ಥ್ಯಗಳು ಹಾಗೂ ಪ್ರಾಮಾಣಿಕತೆ, ದೇಶಭಕ್ತಿ, ದೇವರಲ್ಲಿ ನಂಬಿಕೆ ಮುಂತಾದ ಗುಣಗಳನ್ನು ಬಹಳವಾಗಿ ಮೆಚ್ಚಿದ್ದರು. ಜೊತೆಗೆ ಸ್ವಿಜ್ಜರ್‌ಲೆಂಡಿನ ಬೆಟ್ಟದಲ್ಲಿ ಪರ್ವತ ಸಂಚಾರಿಗಳಿಗೆ ಮಾರ್ಗದರ್ಶನ ನೀಡುತ್ತಿದ್ದ ಸಾಹಸಿ, ಪ್ರಾಮಾಣಿಕ ಮಾರ್ಗದರ್ಶಕರಾದ ಗೈಡ್‌ಗಳು ನೆನಪಿಗೆ ಬಂದರು. ನಮ್ಮ ಹೆಣ್ಣುಮಕ್ಕಳೂ ಇವರಂತೆ ಮುಂದೆ ಬೆಳೆದು ಕುಟುಂಬಗಳನ್ನು, ಮುನ್ನಡೆಸುವ, ರಕ್ಷಿಸುವ, ಸಮರ್ಥ ಮಾತೆಯರಾಗುವವರು ಹೆಣ್ಣು ಮಕ್ಕಳೇ ಅಲ್ಲವೇ, ಎಂದು ಯೋಚಿಸಿ, ಬಾಲಕಿಯರ ವಿಭಾಗಕ್ಕೆ **ಗರ್ಲ್ ಗೈಡ್** ಎಂದು ಹೆಸರಿಸಿದರು. ಆದರೆ ಇಂದಿಗೂ ಕೆಲವು ರಾಷ್ಟ್ರಗಳು ಗರ್ಲ್ ಸ್ಕೌಟ್ಸ್

ಎಂಬ ಹೆಸರನ್ನೇ ಮುಂದುವರಿಸುತ್ತಾ ಬಂದಿವೆ. ಭಾರತದಲ್ಲಿ ಬಾಲಕಿಯರ ವಿಭಾಗವನ್ನು **ಗರ್ಲ್‌ಗೈಡ್ಸ್** ಎಂದು ಕರೆಯಲಾಗಿದೆ.

ಸ್ಕೌಟಿಂಗ್ – ಗೈಡಿಂಗ್ ಚಿರಾಯುವಾಗಲಿ

1909ರಲ್ಲಿ ಗರ್ಲ್ ಸ್ಕೌಟ್ ಪ್ರಾರಂಭವಾಯಿತು. 1910ರಲ್ಲಿ ಗರ್ಲ್ ಸ್ಕೌಟನ್ನು ಗರ್ಲ್‌ಗೈಡ್ ಎಂದು ಪುನರ್ ನಾಮಕರಣಿಸಿ 10–4–1910 ರಂದು ಬಿ.ಪಿ.ಯವರು ಇಂಪೀರಿಯಲ್ ಹೆಡ್ ಕ್ವಾರ್ಟ್‌ರ್ಸ್ ನಲ್ಲಿ ಒಂದು ಕೊಠಡಿಯನ್ನು ನೀಡಿ ಗರ್ಲ್‌ಗೈಡಿಂಗ್ ಅನ್ನು ಅಧಿಕೃತವಾಗಿ ಪ್ರಾರಂಭಿಸಿದರು. ಇದನ್ನು ಮೊದಲ ದಿನವಾಗಿ ಪರಿಗಣಿಸಿ 10–4–2010 ರಿಂದ 10–4–2012 ರ ವರೆಗೆ ಶತಮಾನೋತ್ಸವವನ್ನು ಅದ್ಧೂರಿಯಾಗಿ ವಿಶ್ವದಾದ್ಯಂತ ನಡೆಸಲಾಯಿತು. ಇದರ ಉದ್ದೇಶ ಗೈಡಿಂಗ್ ಅನ್ನು ಸಮುದಾಯದಲ್ಲಿ ಬಿತ್ತಿ (ಹೆಚ್ಚು ಹೆಚ್ಚು ದಳಗಳನ್ನು ತೆರೆಯಿರಿ) ಇದರ ಜೊತೆ ವಿಶ್ವ ಗರ್ಲ್ ಸ್ಕೌಟ್ ಮತ್ತು ಗರ್ಲ್ ಗೈಡ್ ಸಂಸ್ಥೆ ಕೊಟ್ಟಿರುವ ಹೊಸ ಶತಮಾನದ ವಾಕ್ಯ "ವಿಶ್ವದಾದ್ಯಂತ ಹೆಣ್ಣು ಮಕ್ಕಳು ಹೇಳುತ್ತಾರೆ ನಾವು ಬದಲಾವಣೆಯನ್ನು ತರಬಲ್ಲೆವು" ಖಂಡಿತಾ ಹೆಣ್ಣುಮಕ್ಕಳು ಉನ್ನತ ಮಟ್ಟದ ಜೀವನವನ್ನು ನಡೆಸುವಂತಾಗಬೇಕು. ಗೈಡ್‌ಗಳಾಗಿ ನೀವು ಸಬಲರಾಗಿ ಇತರ ಹೆಣ್ಣು ಮಕ್ಕಳನ್ನು ಸಬಲರನ್ನಾಗಿ ಮಾಡಿ. 216 ರಾಷ್ಟ್ರಗಳು ಈ ಚಳವಳಿಯನ್ನು ಮುನ್ನಡೆಸುತ್ತಿವೆ. ಸುಮಾರು 1 ಕೋಟಿ ಗೈಡ್ಸ್‌ಗಳಿದ್ದಾರೆ. ಕೆಲವು ರಾಷ್ಟ್ರಗಳು ಸದಸ್ಯತ್ವಕ್ಕಾಗಿ ಮನವಿ ಸಲ್ಲಿಸಿವೆ. ಈ ಚಳವಳಿಯು ಅಂತಾರಾಷ್ಟ್ರೀಯ ಮಟ್ಟದ ಬಾಲಕಿಯರ ಏಕಮಾತ್ರ ಬೃಹತ್ ಸ್ವಯಂಸೇವಕ ಚಳವಳಿಯಾಗಿದೆ. ಈ ಚಳವಳಿಯು ಯಾವ ಭೇದವೂ ಇಲ್ಲದೆ, ಇಚ್ಛೆಯುಳ್ಳ ಎಲ್ಲಾ ಬಾಲಕಿಯರನ್ನು, ಮಹಿಳೆಯರನ್ನು ಸ್ವಾಗತಿಸುತ್ತದೆ.

2.2 [ಹೆಚ್ಚು–1 : ಗೈಡ್ ಚಳವಳಿಯ ಪರಿಚಯದಲ್ಲಿ ಮೂಲ ಸಿದ್ಧಾಂತದ ವಿವರಣೆಯನ್ನು ನೀಡಲಾಗಿದೆ, ಗಮನಿಸಿ.]

2.3 ಪ್ರತಿಜ್ಞೆ ಮತ್ತು ನಿಯಮ

ಗೈಡ್ ಪ್ರತಿಜ್ಞೆ :

ನಾನು ನನ್ನ ಗೌರವ ಸಾಕ್ಷಿಯಾಗಿ ನನ್ನ ಕೈಲಾದಮಟ್ಟಿಗೆ ದೇವರಿಗೂ ಮತ್ತು ನನ್ನ ದೇಶಕ್ಕೂ ಕರ್ತವ್ಯವನ್ನು ಸಲ್ಲಿಸುತ್ತೇನೆಂದೂ ಇತರರಿಗೆ ಸಹಾಯ ಮಾಡುತ್ತೇನೆಂದೂ ಮತ್ತು ಗೈಡ್ ನಿಯಮವನ್ನು ಪಾಲಿಸುತ್ತೇನೆಂದೂ ಪ್ರತಿಜ್ಞೆ ಮಾಡುತ್ತೇನೆ.

ಈ ಚಳವಳಿಯ ಸದಸ್ಯರಾಗಲು ವಿಶ್ವದಾದ್ಯಂತ ಎಲ್ಲ ಗೈಡ್‌ಗಳು ಈ ಪ್ರತಿಜ್ಞೆ ಮಾಡುವರು. ಇದು ವಿಶ್ವದ ಎಲ್ಲಾ ಗೈಡ್‌ಗಳನ್ನು ಬಂಧಿಸುವ ಗೈಡ್ ಸರಪಳಿಯ ಪ್ರಥಮ ಹಾಗೂ ಪ್ರಧಾನ ಸಾಮಾನ್ಯ ಬಂಧಕವಾಗಿದೆ (Common Bond). ಈ ಪ್ರತಿಜ್ಞೆಯಲ್ಲಿ ಮೂರು ಅಂಶಗಳಿವೆ: 1) ದೇವರಿಗೆ, ದೇಶಕ್ಕೆ ಕರ್ತವ್ಯ; 2) ಇತರರಿಗೆ ಸಹಾಯ 3) ಗೈಡ್ ನಿಯಮಕ್ಕೆ ವಿಧೇಯತೆ. ಪ್ರತಿಜ್ಞೆಯು ಸರಳವಾಗಿ ಕಂಡುಬಂದರೂ, ಅರ್ಥಪೂರ್ಣವಾಗಿ ಪಾಲಿಸಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಬೇಕಾಗುತ್ತದೆ. ಪ್ರತಿಜ್ಞೆಯನ್ನು ಪಾಲಿಸುವ ಮೊದಲು ಪ್ರತಿಯೊಂದು ಅಂಶದ ಅರ್ಥವನ್ನು ಚೆನ್ನಾಗಿ ಮನವರಿಕೆ ಮಾಡಿಕೊಳ್ಳಬೇಕು.

1. ದೇವರಿಗೆ ಕರ್ತವ್ಯ = Duty to God :

ದೇವರಲ್ಲಿ ನಂಬಿಕೆಯನ್ನು ಉಳ್ಳವರು ಮಾತ್ರ ಈ ಸಂಸ್ಥೆಯ ಸದಸ್ಯತ್ವವನ್ನು ಪಡೆಯಬಹುದು. ಪ್ರತಿಯೊಂದು ದಿನದ ಆರಂಭದಲ್ಲಿ ದೇವರನ್ನು ಪ್ರಾರ್ಥಿಸುವುದು ಮತ್ತು ರಾತ್ರಿಯಲ್ಲಿ ವಂದಿಸುವುದು ಕಡ್ಡಾಯವಾಗಿದೆ. ನಾವು ಮಾಡುವ ಎಲ್ಲಾ ಕೆಲಸವೂ ದೇವರಿಗೆ ಮಾಡುವ ಕರ್ತವ್ಯವೆಂದು ಭಾವಿಸಲಾಗುತ್ತದೆ. ನಮ್ಮ ದೇಶದಲ್ಲಿ ವಿವಿಧ ಧರ್ಮದವರು ಒಟ್ಟಾಗಿ ಬಾಳುತ್ತಿದ್ದೇವೆ. ನಮ್ಮ ಗೈಡ್ ದಳದಲ್ಲೂ ಎಲ್ಲ ಧರ್ಮದ ಅನುಯಾಯಿಗಳು ಇರುತ್ತಾರೆ. ಆದ್ದರಿಂದ, ಪರಸ್ಪರ ಧರ್ಮವನ್ನು ಅರಿಯುತ್ತಾ, ಗೌರವಿಸುತ್ತಾ, ಸರ್ವಧರ್ಮ ಪ್ರಾರ್ಥನೆಯ ಮೂಲಕ "ದೇವರು ಒಬ್ಬನೇ, ಆದರೆ ನಾಮ ಹಲವು" ಎಂದು ತಿಳಿದು ಸೌಹಾರ್ದತೆಯಿಂದ ಬದುಕಲು ಪ್ರೇರಣೆ ನೀಡಲಾಗುವುದು. ಬಿ.ಪಿ.ಯವರು ಗೈಡ್‌ಗಳಿಗೆ "ನಾವೆಲ್ಲರೂ ಆನಂದದಿಂದ ಬದುಕಬೇಕೆಂಬುದೇ ದೇವರ ಇಚ್ಛೆಯಾಗಿದೆ. ನಾವು ಎರಡು ಉದ್ದೇಶಕ್ಕಾಗಿ ದೇವರ ಸೇವಕರಾಗಿ ಆರಿಸಲ್ಪಟ್ಟಿದ್ದೇವೆ. ಮೊದಲನೆಯದು-ಸಂತತಿ ಮುಂದುವರಿಸುವುದು, ಎರಡನೆಯದು-ಆನಂದದಾಯಕ ಮನೆಗಳನ್ನು ನಿರ್ಮಿಸುವುದು. ಈ ಕಾರ್ಯವನ್ನು ಮಾಡುವುದರಿಂದ, ನೀನು ದೇವರಿಗೆ ಬೇಕಾದುದನ್ನು ಮಾಡಿದಂತೆ ಆಗುತ್ತದೆ," ಎಂದು ತಮ್ಮ ಅಂತಿಮ ಸಂದೇಶದಲ್ಲಿ ತಿಳಿಸಿದ್ದಾರೆ.

ಅನುಸರಿಸಿ : **ಜನ ಸೇವೆಯೇ ಜನಾರ್ದನ ಸೇವೆ !**

ದೇಶಕ್ಕೆ ಕರ್ತವ್ಯ :

ಜ್ಞಾನಾರ್ಜನೆ ಮಾಡಿಕೊಳ್ಳುತ್ತಾ, ಚಾರಿತ್ರ್ಯವನ್ನು ಉತ್ತಮಗೊಳಿಸುತ್ತಾ, ಆರೋಗ್ಯವರ್ಧನೆ ಮಾಡಿಕೊಳ್ಳುತ್ತಾ, ಕೈಗಳಿಗೆ ಕೆಲಸಕೊಡುತ್ತಾ ಹಸನ್ಮುಖಿಗಳಾಗಿ ಸತ್ಕಾರ್ಯಗಳನ್ನು (ಇತರರಿಗೆ ಸಹಾಯ, ಪರಿಸರ ಸಂರಕ್ಷಣೆ) ಮಾಡುತ್ತಾ ಬೆಳೆಯುವುದೇ ನೀವು ದೇಶಕ್ಕೆ, ಗೈಡ್‌ಗಳಾಗಿ ಮಾಡುವ ಕರ್ತವ್ಯ. ಬೆಳೆದು

ಎಂಬ ಹೆಸರನ್ನೇ ಮುಂದುವರಿಸುತ್ತಾ ಬಂದಿವೆ. ಭಾರತದಲ್ಲಿ ಬಾಲಕಿಯರ ವಿಭಾಗವನ್ನು **ಗರ್ಲ್‌ಗೈಡ್ಸ್** ಎಂದು ಕರೆಯಲಾಗಿದೆ.

ಸ್ಕೌಟಿಂಗ್ – ಗೈಡಿಂಗ್ ಚಿರಾಯುವಾಗಲಿ

1909ರಲ್ಲಿ ಗರ್ಲ್ ಸ್ಕೌಟ್ ಪ್ರಾರಂಭವಾಯಿತು. 1910ರಲ್ಲಿ ಗರ್ಲ್ ಸ್ಕೌಟನ್ನು ಗರ್ಲ್‌ಗೈಡ್ ಎಂದು ಪುನರ್ ನಾಮಕರಣಿಸಿ 10–4–1910 ರಂದು ಬಿ.ಪಿ.ಯವರು ಇಂಪೀರಿಯಲ್ ಹೆಡ್ ಕ್ವಾರ್ಟ್‌ರ್ಸ್ ನಲ್ಲಿ ಒಂದು ಕೊಠಡಿಯನ್ನು ನೀಡಿ ಗರ್ಲ್‌ಗೈಡಿಂಗ್ ಅನ್ನು ಅಧಿಕೃತವಾಗಿ ಪ್ರಾರಂಭಿಸಿದರು. ಇದನ್ನು ಮೊದಲ ದಿನವಾಗಿ ಪರಿಗಣಿಸಿ 10–4–2010 ರಿಂದ 10–4–2012 ರ ವರೆಗೆ ಶತಮಾನೋತ್ಸವವನ್ನು ಅದ್ದೂರಿಯಾಗಿ ವಿಶ್ವದಾದ್ಯಂತ ನಡೆಸಲಾಯಿತು. ಇದರ ಉದ್ದೇಶ ಗೈಡಿಂಗ್ ಅನ್ನು ಸಮುದಾಯದಲ್ಲಿ ಬಿತ್ತಿ (ಹೆಚ್ಚು ಹೆಚ್ಚು ದಳಗಳನ್ನು ತೆರೆಯಿರಿ) ಇದರ ಜೊತೆ ವಿಶ್ವ ಗರ್ಲ್ ಸ್ಕೌಟ್ ಮತ್ತು ಗರ್ಲ್ ಗೈಡ್ ಸಂಸ್ಥೆ ಕೊಟ್ಟಿರುವ ಹೊಸ ಶತಮಾನದ ವಾಕ್ಯ "ವಿಶ್ವದಾದ್ಯಂತ ಹೆಣ್ಣು ಮಕ್ಕಳು ಹೇಳುತ್ತಾರೆ ನಾವು ಬದಲಾವಣೆಯನ್ನು ತರಬಲ್ಲೆವು" ಖಂಡಿತಾ ಹೆಣ್ಣುಮಕ್ಕಳು ಉನ್ನತ ಮಟ್ಟದ ಜೀವನವನ್ನು ನಡೆಸುವಂತಾಗಬೇಕು. ಗೈಡ್‌ಗಳಾಗಿ ನೀವು ಸಬಲರಾಗಿ ಇತರ ಹೆಣ್ಣು ಮಕ್ಕಳನ್ನು ಸಬಲರನ್ನಾಗಿ ಮಾಡಿ. 216 ರಾಷ್ಟ್ರಗಳು ಈ ಚಳವಳಿಯನ್ನು ಮುನ್ನಡೆಸುತ್ತಿವೆ. ಸುಮಾರು 1 ಕೋಟಿ ಗೈಡ್ಸ್‌ಗಳಿದ್ದಾರೆ. ಕೆಲವು ರಾಷ್ಟ್ರಗಳು ಸದಸ್ಯತ್ವಕ್ಕಾಗಿ ಮನವಿ ಸಲ್ಲಿಸಿವೆ. ಈ ಚಳವಳಿಯು ಅಂತಾರಾಷ್ಟ್ರೀಯ ಮಟ್ಟದ ಬಾಲಕಿಯರ ಏಕಮಾತ್ರ ಬೃಹತ್ ಸ್ವಯಂಸೇವಕ ಚಳವಳಿಯಾಗಿದೆ. ಈ ಚಳವಳಿಯು ಯಾವ ಭೇದವೂ ಇಲ್ಲದೆ, ಇಚ್ಛೆಯುಳ್ಳ ಎಲ್ಲಾ ಬಾಲಕಿಯರನ್ನು, ಮಹಿಳೆಯರನ್ನು ಸ್ವಾಗತಿಸುತ್ತದೆ.

2.2 [ಹೆಚ್ಚು–1 : ಗೈಡ್ ಚಳವಳಿಯ ಪರಿಚಯದಲ್ಲಿ ಮೂಲ ಸಿದ್ಧಾಂತದ ವಿವರಣೆಯನ್ನು ನೀಡಲಾಗಿದೆ, ಗಮನಿಸಿ.]

2.3 ಪ್ರತಿಜ್ಞೆ ಮತ್ತು ನಿಯಮ

ಗೈಡ್ ಪ್ರತಿಜ್ಞೆ :

ನಾನು ನನ್ನ ಗೌರವ ಸಾಕ್ಷಿಯಾಗಿ ನನ್ನ ಕೈಲಾದಮಟ್ಟಿಗೆ ದೇವರಿಗೂ ಮತ್ತು ನನ್ನ ದೇಶಕ್ಕೂ ಕರ್ತವ್ಯವನ್ನು ಸಲ್ಲಿಸುತ್ತೇನೆಂದೂ ಇತರರಿಗೆ ಸಹಾಯ ಮಾಡುತ್ತೇನೆಂದೂ ಮತ್ತು ಗೈಡ್ ನಿಯಮವನ್ನು ಪಾಲಿಸುತ್ತೇನೆಂದೂ ಪ್ರತಿಜ್ಞೆ ಮಾಡುತ್ತೇನೆ.

ಈ ಚಳವಳಿಯ ಸದಸ್ಯರಾಗಲು ವಿಶ್ವದಾದ್ಯಂತ ಎಲ್ಲ ಗೈಡ್‌ಗಳು ಈ ಪ್ರತಿಜ್ಞೆ ಮಾಡುವರು. ಇದು ವಿಶ್ವದ ಎಲ್ಲಾ ಗೈಡ್‌ಗಳನ್ನು ಬಂಧಿಸುವ ಗೈಡ್ ಸರಪಳಿಯ ಪ್ರಥಮ ಹಾಗೂ ಪ್ರಧಾನ ಸಾಮಾನ್ಯ ಬಂಧಕವಾಗಿದೆ (Common Bond). ಈ ಪ್ರತಿಜ್ಞೆಯಲ್ಲಿ ಮೂರು ಅಂಶಗಳಿವೆ: 1) ದೇವರಿಗೆ, ದೇಶಕ್ಕೆ ಕರ್ತವ್ಯ; 2) ಇತರರಿಗೆ ಸಹಾಯ 3) ಗೈಡ್ ನಿಯಮಕ್ಕೆ ವಿಧೇಯತೆ. ಪ್ರತಿಜ್ಞೆಯು ಸರಳವಾಗಿ ಕಂಡುಬಂದರೂ, ಅರ್ಥಪೂರ್ಣವಾಗಿ ಪಾಲಿಸಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಬೇಕಾಗುತ್ತದೆ. ಪ್ರತಿಜ್ಞೆಯನ್ನು ಪಾಲಿಸುವ ಮೊದಲು ಪ್ರತಿಯೊಂದು ಅಂಶದ ಅರ್ಥವನ್ನು ಚೆನ್ನಾಗಿ ಮನವರಿಕೆ ಮಾಡಿಕೊಳ್ಳಬೇಕು.

1. ದೇವರಿಗೆ ಕರ್ತವ್ಯ = Duty to God :

ದೇವರಲ್ಲಿ ನಂಬಿಕೆಯನ್ನು ಉಳ್ಳವರು ಮಾತ್ರ ಈ ಸಂಸ್ಥೆಯ ಸದಸ್ಯತ್ವವನ್ನು ಪಡೆಯಬಹುದು. ಪ್ರತಿಯೊಂದು ದಿನದ ಆರಂಭದಲ್ಲಿ ದೇವರನ್ನು ಪ್ರಾರ್ಥಿಸುವುದು ಮತ್ತು ರಾತ್ರಿಯಲ್ಲಿ ವಂದಿಸುವುದು ಕಡ್ಡಾಯವಾಗಿದೆ. ನಾವು ಮಾಡುವ ಎಲ್ಲಾ ಕೆಲಸವೂ ದೇವರಿಗೆ ಮಾಡುವ ಕರ್ತವ್ಯವೆಂದು ಭಾವಿಸಲಾಗುತ್ತದೆ. ನಮ್ಮ ದೇಶದಲ್ಲಿ ವಿವಿಧ ಧರ್ಮದವರು ಒಟ್ಟಾಗಿ ಬಾಳುತ್ತಿದ್ದೇವೆ. ನಮ್ಮ ಗೈಡ್ ದಳದಲ್ಲೂ ಎಲ್ಲ ಧರ್ಮದ ಅನುಯಾಯಿಗಳು ಇರುತ್ತಾರೆ. ಆದ್ದರಿಂದ, ಪರಸ್ಪರ ಧರ್ಮವನ್ನು ಅರಿಯುತ್ತಾ, ಗೌರವಿಸುತ್ತಾ, ಸರ್ವಧರ್ಮ ಪ್ರಾರ್ಥನೆಯ ಮೂಲಕ "ದೇವರು ಒಬ್ಬನೇ, ಆದರೆ ನಾಮ ಹಲವು" ಎಂದು ತಿಳಿದು ಸೌಹಾರ್ದತೆಯಿಂದ ಬದುಕಲು ಪ್ರೇರಣೆ ನೀಡಲಾಗುವುದು. ಬಿ.ಪಿ.ಯವರು ಗೈಡ್‌ಗಳಿಗೆ "ನಾವೆಲ್ಲರೂ ಆನಂದದಿಂದ ಬದುಕಬೇಕೆಂಬುದೇ ದೇವರ ಇಚ್ಛೆಯಾಗಿದೆ. ನಾವು ಎರಡು ಉದ್ದೇಶಕ್ಕಾಗಿ ದೇವರ ಸೇವಕರಾಗಿ ಆರಿಸಲ್ಪಟ್ಟಿದ್ದೇವೆ. ಮೊದಲನೆಯದು–ಸಂತತಿ ಮುಂದುವರಿಸುವುದು, ಎರಡನೆಯದು–ಆನಂದದಾಯಕ ಮನೆಗಳನ್ನು ನಿರ್ಮಿಸುವುದು. ಈ ಕಾರ್ಯವನ್ನು ಮಾಡುವುದರಿಂದ, ನೀನು ದೇವರಿಗೆ ಬೇಕಾದುದನ್ನು ಮಾಡಿದಂತೆ ಆಗುತ್ತದೆ," ಎಂದು ತಮ್ಮ ಅಂತಿಮ ಸಂದೇಶದಲ್ಲಿ ತಿಳಿಸಿದ್ದಾರೆ.

ಅನುಸರಿಸಿ : **ಜನ ಸೇವೆಯೇ ಜನಾರ್ದನ ಸೇವೆ !**

ದೇಶಕ್ಕೆ ಕರ್ತವ್ಯ :

ಜ್ಞಾನಾರ್ಜನೆ ಮಾಡಿಕೊಳ್ಳುತ್ತಾ, ಚಾರಿತ್ರ್ಯವನ್ನು ಉತ್ತಮಗೊಳಿಸುತ್ತಾ, ಆರೋಗ್ಯವರ್ಧನೆ ಮಾಡಿಕೊಳ್ಳುತ್ತಾ, ಕೈಗಳಿಗೆ ಕೆಲಸಕೊಡುತ್ತಾ ಹಸನ್ಮುಖಿಗಳಾಗಿ ಸತ್ಕಾರ್ಯಗಳನ್ನು (ಇತರರಿಗೆ ಸಹಾಯ, ಪರಿಸರ ಸಂರಕ್ಷಣೆ) ಮಾಡುತ್ತಾ ಬೆಳೆಯುವುದೇ ನೀವು ದೇಶಕ್ಕೆ, ಗೈಡ್‌ಗಳಾಗಿ ಮಾಡುವ ಕರ್ತವ್ಯ. ಬೆಳೆದು

ವಯಸ್ಕರಾದಮೇಲೆ ನಿಮ್ಮ ವೃತ್ತಿ ಧರ್ಮವನ್ನು ನಿಷ್ಠೆಯಿಂದ ಪಾಲಿಸುತ್ತಾ ಕುಟುಂಬ, ಸಮುದಾಯ ಹಾಗೂ ಸಮಾಜದ ಏಳಿಗೆಗಾಗಿ ಶ್ರಮಿಸಿ, ನಿಮ್ಮ ಸಹಚರರಲ್ಲಿ ಪ್ರೀತಿ, ಸ್ನೇಹ, ನಂಬಿಕೆಗಳನ್ನು ಬೆಳೆಸಿಕೊಳ್ಳಿ. ರಾಷ್ಟ್ರರಕ್ಷಣೆಗೆ ಕರೆ ಬಂದಾಗ, ಕೈಲಾದುದನ್ನು ಮಾಡಲು ಸಿದ್ಧವಾಗಿರಿ. ರಾಷ್ಟ್ರ ಮಟ್ಟದಲ್ಲಾಗಲಿ, ವಿಶ್ವದ ಮಟ್ಟದಲ್ಲಾಗಲಿ ಕಂಡು ಬರುವ ಮಾನವೀಯ ಸಮಸ್ಯೆಗಳಿಗೆ ಸ್ಪಂದಿಸಿ, ಕೈಲಾದುದನ್ನು ಅಲ್ಲಿಗೆ ಹೋಗಿ ಮಾಡಲಾಗದಿದ್ದರೆ ಇದ್ದಲ್ಲಿಂದಲೇ ಮಾಡಲು ಪ್ರಯತ್ನಿಸಿ. ವಿಶ್ವ ಸಂಸ್ಥೆಯ **Act locally, think locally globally - ಸ್ಥಳೀಯವಾಗಿ ಕ್ರಿಯಾಶೀಲರಾಗಿ, ಜಾಗತಿಕವಾಗಿ ಚಿಂತನೆಮಾಡಿ** ಎಂಬ ಕರೆಗೆ ಓಗೊಡಿ.

ನಮ್ಮ ದೇಶದ ಸಂಸ್ಕೃತಿ ಮತ್ತು ಪರಂಪರೆಯನ್ನು ಅನುಸರಿಸಿ, ಇದರ ಮಹತ್ವಗಳ ಬಗ್ಗೆ ಹೆಮ್ಮೆ ಬೆಳೆಸಿಕೊಳ್ಳಿ ಹಾಗೂ ಇತರ ದೇಶಗಳ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸಿ, ಅದರಲ್ಲಿ ಕಂಡು ಬರುವ ಒಳ್ಳೆಯ ಅಂಶಗಳನ್ನು ನಮ್ಮ ಸಂಸ್ಕೃತಿಗೆ ಧಕ್ಕೆ ಬಾರದಂತೆ ಅಳವಡಿಸಿ. ಸಾಹಿತ್ಯ ಸಂಪತ್ತನ್ನು ಬೆಳೆಸಿ. ಇದರ ಮೂಲಕ ಬಿ.ಪಿ.ಯವರ ವಿಶ್ವ ಭ್ರಾತೃತ್ವ ಪರಿಕಲ್ಪನೆಯನ್ನು ಸಾಕ್ಷಾತ್ಕಾರಗೊಳಿಸಿ. ನೀವು ಹೀಗೆ ಮಾಡುತ್ತಾ ಬೆಳೆದಿದ್ದೇ ಆದರೆ, ಉತ್ತಮ ನಾಗರಿಕರಾಗಿ ನಮ್ಮ ರಾಷ್ಟ್ರದ ಅಮೂಲ್ಯ ಆಸ್ತಿಯಾಗುವಿರಿ.

ಅನುಸರಿಸಿ : **ದೇಶ ಸೇವೆಯೇ ಈಶ ಸೇವೆ!**

2. ಇತರರಿಗೆ ಸಹಾಯ :

ಇತರರಿಗೆ ಸಹಾಯ ಮಾಡುವ ಮನೋಭಾವ ಮತ್ತು ಸಾಮರ್ಥ್ಯಗಳನ್ನು ಬೆಳೆಸಿಕೊಂಡು ಅವಶ್ಯಕತೆ ಇದ್ದವರಿಗೆ ತಕ್ಷಣವೇ ಸೂಕ್ತವಾದ ರೀತಿಯಲ್ಲಿ ಸಹಾಯಮಾಡಿ. ಸಹಾಯ ಪದವು ಸರಳವಾಗಿದ್ದರೂ ಈ ಕಾರ್ಯದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಲು ಇಚ್ಛೆ ಮತ್ತು ಪ್ರಾಮಾಣಿಕ ಪ್ರಯತ್ನಬೇಕು. ಸಹಾಯ ಮಾಡಲು ಬೇಕಾದ ಜ್ಞಾನ, ಕುಶಲತೆ ಮತ್ತು ಚಾತುರ್ಯವನ್ನು ಬೆಳೆಸಿಕೊಳ್ಳಬೇಕು.

ಅನುಸರಿಸಿ : **ಸೇವೆಯೇ ಮಾನವನ ಪರಮೋಚ್ಚ ಧರ್ಮ!**

3. ಗೈಡ್ ನಿಯಮ ಪಾಲನೆ :

ಗೈಡ್ ನಿಯಮದಲ್ಲಿ 9 ಅಂಶಗಳಿವೆ. ಇವನ್ನು ಪ್ರಯತ್ನಪೂರ್ವಕವಾಗಿ ತಪ್ಪದೇ ನಿತ್ಯ ಜೀವನದಲ್ಲಿ ಪಾಲಿಸುವ ಅಭ್ಯಾಸ ಮಾಡಿಕೊಂಡರೆ ಪ್ರತಿಜ್ಞೆಯನ್ನು ಪಾಲಿಸಿದಂತಾಗುತ್ತದೆ. ಪ್ರತಿಜ್ಞೆಯ ಮೂರು ಅಂಶಗಳಿಗೆ ನಿಮ್ಮ ಗೌರವವನ್ನು ಸಾಕ್ಷಿಯಾಗಿ ಮಾಡಿಕೊಂಡಿದ್ದೀರಿ. ಈ ಗೌರವದಲ್ಲಿ ನಿಮ್ಮ ಮರ್ಯಾದೆ ಅಡಕವಾಗಿದೆ.

ಎಂತಹ ಸರಳ ಅಥವಾ ನೀಚ ವ್ಯಕ್ತಿಯಾದರೂ ತನ್ನ ಆತ್ಮ ಗೌರವಕ್ಕೆ ಧಕ್ಕೆ ಬರುವುದನ್ನು ಸಹಿಸುವುದಿಲ್ಲ. ಅಂದ ಮೇಲೆ ಉತ್ತಮರಾಗಿ ಬೆಳೆಯಲು ಬಯಸುವ ನೀವು ನಿಮ್ಮ ಗೌರವವನ್ನು ಕಾಪಾಡಿಕೊಳ್ಳಬೇಕಾದರೆ ಕೊಟ್ಟ ಭಾಷೆಯನ್ನು ಪಾಲಿಸುತ್ತಾ ನಿಯಮವನ್ನು ಅನುಸರಿಸುತ್ತಾ ಉತ್ತಮ ವ್ಯಕ್ತಿಗಳಾಗಿ ಬೆಳೆಯಬೇಕು ಮತ್ತು ಬದುಕಬೇಕು.

ಗೈಡ್ ನಿಯಮ :

ನಿಯಮದಲ್ಲಿ ಅಳವಡಿಸಿರುವ 9 ಅಂಶಗಳು ಎಲ್ಲಾ ಧರ್ಮಗಳೂ ಒಪ್ಪಿರುವ ಎಲ್ಲಾ ಮಾನವರೂ ಬೆಳೆಸಿಕೊಳ್ಳಬೇಕಾದ ಮೌಲ್ಯ ಮತ್ತು ಚಾರಿತ್ರ್ಯದ ಸಾಮಾನ್ಯ ಅಂಶಗಳನ್ನು ಹೊಂದಿವೆ. ಇವುಗಳು ಸಾರ್ವಕಾಲಿಕ ಮಾನವನ ಅವಶ್ಯಕತೆಗಳಾಗಿವೆ.

ನಿಯಮದ 9 ಅಂಶಗಳು :

1. ಗೈಡ್ ವಿಶ್ವಾಸಾರ್ಹಳು.
2. ಗೈಡ್ ನಿಷ್ಠಾವಂತಳು.
3. ಗೈಡ್ ಎಲ್ಲರ ಸ್ನೇಹಿತಳು ಮತ್ತು ಇತರ ಗೈಡ್ಸ್‌ಗಳಿಗೆ ಸೋದರಿಯಾಗಿರುವಳು.
4. ಗೈಡ್ ವಿನಯಶೀಲಳು.
5. ಗೈಡ್ ಪ್ರಾಣಿಮಿತ್ರಳು ಮತ್ತು ಪ್ರಕೃತಿಪ್ರೇಮಿಯಾಗಿರುವಳು.
6. ಗೈಡ್ ಶಿಸ್ತುಳ್ಳವಳು ಮತ್ತು ಸಾರ್ವಜನಿಕ ಆಸ್ತಿ ರಕ್ಷಿಸಲು ಸಹಾಯಮಾಡುವಳು.
7. ಗೈಡ್ ಧೈರ್ಯವಂತಳು.
8. ಗೈಡ್ ಮಿತವ್ಯಯಿಯಾಗಿರುವಳು.
9. ಗೈಡ್ ಕಾಯಾ ವಾಚಾ ಮನಸಾ ಪರಿಶುದ್ಧಳು.
(ಸುಲಭವಾಗಿ ನೆನಪಿಡಲು ವಿ.ನಿ.ಸ್ನೇ, ವಿ.ಪ್ರಾ.ಶಿ, ಧೈ.ಮಿ.ಕಾ, ಎಂದು ಮನನಮಾಡಿ)

ವಯಸ್ಕರಾದಮೇಲೆ ನಿಮ್ಮ ವೃತ್ತಿ ಧರ್ಮವನ್ನು ನಿಷ್ಠೆಯಿಂದ ಪಾಲಿಸುತ್ತಾ ಕುಟುಂಬ, ಸಮುದಾಯ ಹಾಗೂ ಸಮಾಜದ ಏಳಿಗೆಗಾಗಿ ಶ್ರಮಿಸಿ, ನಿಮ್ಮ ಸಹಚರರಲ್ಲಿ ಪ್ರೀತಿ, ಸ್ನೇಹ, ನಂಬಿಕೆಗಳನ್ನು ಬೆಳೆಸಿಕೊಳ್ಳಿ. ರಾಷ್ಟ್ರರಕ್ಷಣೆಗೆ ಕರೆ ಬಂದಾಗ, ಕೈಲಾದುದನ್ನು ಮಾಡಲು ಸಿದ್ಧವಾಗಿರಿ. ರಾಷ್ಟ್ರ ಮಟ್ಟದಲ್ಲಾಗಲಿ, ವಿಶ್ವದ ಮಟ್ಟದಲ್ಲಾಗಲಿ ಕಂಡು ಬರುವ ಮಾನವೀಯ ಸಮಸ್ಯೆಗಳಿಗೆ ಸ್ಪಂದಿಸಿ, ಕೈಲಾದುದನ್ನು ಅಲ್ಲಿಗೆ ಹೋಗಿ ಮಾಡಲಾಗದಿದ್ದರೆ ಇದ್ದಲ್ಲಿಂದಲೇ ಮಾಡಲು ಪ್ರಯತ್ನಿಸಿ. ವಿಶ್ವ ಸಂಸ್ಥೆಯ **Act locally, think locally globally - ಸ್ಥಳೀಯವಾಗಿ ಕ್ರಿಯಾಶೀಲರಾಗಿ, ಜಾಗತಿಕವಾಗಿ ಚಿಂತನೆಮಾಡಿ** ಎಂಬ ಕರೆಗೆ ಓಗೊಡಿ.

ನಮ್ಮ ದೇಶದ ಸಂಸ್ಕೃತಿ ಮತ್ತು ಪರಂಪರೆಯನ್ನು ಅನುಸರಿಸಿ, ಇದರ ಮಹತ್ವಗಳ ಬಗ್ಗೆ ಹೆಮ್ಮೆ ಬೆಳೆಸಿಕೊಳ್ಳಿ ಹಾಗೂ ಇತರ ದೇಶಗಳ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸಿ, ಅದರಲ್ಲಿ ಕಂಡು ಬರುವ ಒಳ್ಳೆಯ ಅಂಶಗಳನ್ನು ನಮ್ಮ ಸಂಸ್ಕೃತಿಗೆ ಧಕ್ಕೆ ಬಾರದಂತೆ ಅಳವಡಿಸಿ. ಸಾಹಿತ್ಯ ಸಂಪತ್ತನ್ನು ಬೆಳೆಸಿ. ಇದರ ಮೂಲಕ ಬಿ.ಪಿ.ಯವರ ವಿಶ್ವ ಭ್ರಾತೃತ್ವ ಪರಿಕಲ್ಪನೆಯನ್ನು ಸಾಕ್ಷಾತ್ಕಾರಗೊಳಿಸಿ. ನೀವು ಹೀಗೆ ಮಾಡುತ್ತಾ ಬೆಳೆದಿದ್ದೇ ಆದರೆ, ಉತ್ತಮ ನಾಗರಿಕರಾಗಿ ನಮ್ಮ ರಾಷ್ಟ್ರದ ಅಮೂಲ್ಯ ಆಸ್ತಿಯಾಗುವಿರಿ.

ಅನುಸರಿಸಿ : **ದೇಶ ಸೇವೆಯೇ ಈಶ ಸೇವೆ!**

2. ಇತರರಿಗೆ ಸಹಾಯ :

ಇತರರಿಗೆ ಸಹಾಯ ಮಾಡುವ ಮನೋಭಾವ ಮತ್ತು ಸಾಮರ್ಥ್ಯಗಳನ್ನು ಬೆಳೆಸಿಕೊಂಡು ಅವಶ್ಯಕತೆ ಇದ್ದವರಿಗೆ ತಕ್ಷಣವೇ ಸೂಕ್ತವಾದ ರೀತಿಯಲ್ಲಿ ಸಹಾಯಮಾಡಿ. ಸಹಾಯ ಪದವು ಸರಳವಾಗಿದ್ದರೂ ಈ ಕಾರ್ಯದಲ್ಲಿ ನಿಮ್ಮನ್ನು ತೊಡಗಿಸಿಕೊಳ್ಳಲು ಇಚ್ಛೆ ಮತ್ತು ಪ್ರಾಮಾಣಿಕ ಪ್ರಯತ್ನಬೇಕು. ಸಹಾಯ ಮಾಡಲು ಬೇಕಾದ ಜ್ಞಾನ, ಕುಶಲತೆ ಮತ್ತು ಚಾತುರ್ಯವನ್ನು ಬೆಳೆಸಿಕೊಳ್ಳಬೇಕು.

ಅನುಸರಿಸಿ : **ಸೇವೆಯೇ ಮಾನವನ ಪರಮೋಚ್ಚ ಧರ್ಮ!**

3. ಗೈಡ್ ನಿಯಮ ಪಾಲನೆ :

ಗೈಡ್ ನಿಯಮದಲ್ಲಿ 9 ಅಂಶಗಳಿವೆ. ಇವನ್ನು ಪ್ರಯತ್ನಪೂರ್ವಕವಾಗಿ ತಪ್ಪದೇ ನಿತ್ಯ ಜೀವನದಲ್ಲಿ ಪಾಲಿಸುವ ಅಭ್ಯಾಸ ಮಾಡಿಕೊಂಡರೆ ಪ್ರತಿಜ್ಞೆಯನ್ನು ಪಾಲಿಸಿದಂತಾಗುತ್ತದೆ. ಪ್ರತಿಜ್ಞೆಯ ಮೂರು ಅಂಶಗಳಿಗೆ ನಿಮ್ಮ ಗೌರವವನ್ನು ಸಾಕ್ಷಿಯಾಗಿ ಮಾಡಿಕೊಂಡಿದ್ದೀರಿ. ಈ ಗೌರವದಲ್ಲಿ ನಿಮ್ಮ ಮರ್ಯಾದೆ ಅಡಕವಾಗಿದೆ.

ಎಂತಹ ಸರಳ ಅಥವಾ ನೀಚ ವ್ಯಕ್ತಿಯಾದರೂ ತನ್ನ ಆತ್ಮ ಗೌರವಕ್ಕೆ ಧಕ್ಕೆ ಬರುವುದನ್ನು ಸಹಿಸುವುದಿಲ್ಲ. ಅಂದ ಮೇಲೆ ಉತ್ತಮರಾಗಿ ಬೆಳೆಯಲು ಬಯಸುವ ನೀವು ನಿಮ್ಮ ಗೌರವವನ್ನು ಕಾಪಾಡಿಕೊಳ್ಳಬೇಕಾದರೆ ಕೊಟ್ಟ ಭಾಷೆಯನ್ನು ಪಾಲಿಸುತ್ತಾ ನಿಯಮವನ್ನು ಅನುಸರಿಸುತ್ತಾ ಉತ್ತಮ ವ್ಯಕ್ತಿಗಳಾಗಿ ಬೆಳೆಯಬೇಕು ಮತ್ತು ಬದುಕಬೇಕು.

ಗೈಡ್ ನಿಯಮ :

ನಿಯಮದಲ್ಲಿ ಅಳವಡಿಸಿರುವ 9 ಅಂಶಗಳು ಎಲ್ಲಾ ಧರ್ಮಗಳೂ ಒಪ್ಪಿರುವ ಎಲ್ಲಾ ಮಾನವರೂ ಬೆಳೆಸಿಕೊಳ್ಳಬೇಕಾದ ಮೌಲ್ಯ ಮತ್ತು ಚಾರಿತ್ರ್ಯದ ಸಾಮಾನ್ಯ ಅಂಶಗಳನ್ನು ಹೊಂದಿವೆ. ಇವುಗಳು ಸಾರ್ವಕಾಲಿಕ ಮಾನವನ ಅವಶ್ಯಕತೆಗಳಾಗಿವೆ.

ನಿಯಮದ 9 ಅಂಶಗಳು :

1. ಗೈಡ್ ವಿಶ್ವಾಸಾರ್ಹಳು.
2. ಗೈಡ್ ನಿಷ್ಠಾವಂತಳು.
3. ಗೈಡ್ ಎಲ್ಲರ ಸ್ನೇಹಿತಳು ಮತ್ತು ಇತರ ಗೈಡ್ಸ್‌ಗಳಿಗೆ ಸೋದರಿಯಾಗಿರುವಳು.
4. ಗೈಡ್ ವಿನಯಶೀಲಳು.
5. ಗೈಡ್ ಪ್ರಾಣಿಮಿತ್ರಳು ಮತ್ತು ಪ್ರಕೃತಿಪ್ರೇಮಿಯಾಗಿರುವಳು.
6. ಗೈಡ್ ಶಿಸ್ತುಳ್ಳವಳು ಮತ್ತು ಸಾರ್ವಜನಿಕ ಆಸ್ತಿ ರಕ್ಷಿಸಲು ಸಹಾಯಮಾಡುವಳು.
7. ಗೈಡ್ ಧೈರ್ಯವಂತಳು.
8. ಗೈಡ್ ಮಿತವ್ಯಯಿಯಾಗಿರುವಳು.
9. ಗೈಡ್ ಕಾಯಾ ವಾಚಾ ಮನಸಾ ಪರಿಶುದ್ಧಳು.
   (ಸುಲಭವಾಗಿ ನೆನಪಿಡಲು ವಿ.ನಿ.ಸ್ನೇ, ವಿ.ಪ್ರಾ.ಶಿ, ಧೈ.ಮಿ.ಕಾ, ಎಂದು ಮನನಮಾಡಿ)

1. ಗೈಡ್ ವಿಶ್ವಾಸಾರ್ಹಳು – A guide is trustworthy :

ಗೈಡಳು ಕರ್ತವ್ಯದಲ್ಲಿ, ಮಾತಿನಲ್ಲಿ, ಪ್ರೀತಿಯಲ್ಲಿ, ಸ್ನೇಹದಲ್ಲಿ ಸಹಾಯ ಮಾಡುವುದರಲ್ಲಿ ವಿಶ್ವಾಸವನ್ನು ಉಳಿಸಿಕೊಳ್ಳಬೇಕು. ತನ್ನಲ್ಲಿ ನಂಬಿಕೆ ಮತ್ತು ತನ್ನ ಆದರ್ಶದಲ್ಲಿ, ತನ್ನ ಕೆಲಸಕಾರ್ಯಗಳಲ್ಲಿ ವಿಶ್ವಾಸವನ್ನು ಹೊಂದಿರಬೇಕು. ಆಗ ಗೈಡಳು ವಿಶ್ವಾಸಾರ್ಹಳಾಗಲು ಸಮರ್ಥಳಾಗುವಳು. ಎಲ್ಲರ ವಿಶ್ವಾಸಕ್ಕೆ ಪಾತ್ರಳಾಗುವಳು. ಇತಿಹಾಸದಲ್ಲಿ, ನೀತಿಕಥೆಗಳಲ್ಲಿ ವಿಶ್ವಾಸಾರ್ಹರಾದ ಅನೇಕ ವ್ಯಕ್ತಿಗಳನ್ನು ಕಾಣಬಹುದು. ನಿಮ್ಮ ಸುತ್ತಲೇ ಗಮನಿಸಿ, ವಿಶ್ವಾಸಾರ್ಹ ವ್ಯಕ್ತಿಗಳನ್ನು ಕಾಣುವಿರಿ. ಜವಾಬ್ದಾರಿಯುತ ಪ್ರಜೆಯಾಗಲು ವಿಶ್ವಾಸಾರ್ಹತೆಯನ್ನು ಬೆಳೆಸಿಕೊಳ್ಳುವುದು ಅವಶ್ಯಕ. ಈ ಅಂಶಕ್ಕೆ ಸಂಬಂಧಿಸಿದ ಕಥೆಗಳನ್ನು ಸಂಗ್ರಹಿಸಿ ನಿಮ್ಮ ದಳದಲ್ಲಿ ಹೇಳಿ.

ವಿಶ್ವಾಸಾರ್ಹತೆಯಿಂದ ವೈಯಕ್ತಿಕ ಕೌಟುಂಬಿಕ ಸಾಮಾಜಿಕ ಪ್ರಗತಿ ಸಾಧ್ಯವಾಗುತ್ತದೆ.

2. ಗೈಡ್ ನಿಷ್ಠಾವಂತಳು - A guide is loyal :

ಗೈಡಳು ದೇವರಿಗೂ, ದೇಶಕ್ಕೂ, ತಂದೆತಾಯಿಗಳಿಗೂ, ಗುರುಹಿರಿಯರಿಗೂ, ಸ್ನೇಹಿತರಿಗೂ, ಸಹಾಯ ಮಾಡಿದವರಿಗೂ, ನಿಷ್ಠಾವಂತಳಾಗಿರುತ್ತಾಳೆ. ಎಂತಹ ಕಠಿಣ ಸಂದರ್ಭಗಳಲ್ಲೂ ತನ್ನ ನಿಷ್ಠೆಯನ್ನು ಅಂದರೆ ಪ್ರಾಮಾಣಿಕತೆಯನ್ನು ಕೈಬಿಡುವುದಿಲ್ಲ. ನಿಷ್ಠೆಗೆ ಅನೇಕ ಸ್ತ್ರೀಪುರುಷರ ಜೀವನ ದೃಷ್ಟಾಂತಗಳಿವೆ.

ಅಜ್ಮೇರಿನ ಪೃಥ್ವೀರಾಜನ ಯೋಧನಾದ **ಮಹೋಬ,** ತನ್ನ ಮಾಂಸಖಂಡ ಗಳನ್ನು ಕತ್ತರಿಸಿ ರಣ ಹದ್ದುಗಳಿಗೆ ಹಾಕಿ, ಯುದ್ಧ ಭೂಮಿಯಲ್ಲಿ ಪ್ರಜ್ಞಾಹೀನನಾಗಿ ಮಲಗಿದ್ದ ಪೃಥ್ವೀರಾಜನನ್ನು ಹದ್ದುಗಳಿಂದ ರಕ್ಷಿಸಿದ ಘಟನೆ ಸ್ವಾಮಿನಿಷ್ಠೆಗೆ, ದೇಶನಿಷ್ಠೆಗೆ ಒಂದು ಮಹಾನ್ ದೃಷ್ಟಾಂತವಾಗಿದೆ.

ಪನ್ನಾದಾದಿಯ ರಾಜನಿಷ್ಠೆಯ ಇತಿಹಾಸ ಪ್ರಸಿದ್ಧವಾದುದು. ತನ್ನ ಮಗುವನ್ನೇ, ಬಲಿಕೊಟ್ಟು ರಾಜಕುಮಾರ ಉದಯಸಿಂಹನನ್ನು ಅರಮನೆಯಿಂದ ಸುರಕ್ಷಿತವಾದ ಸ್ಥಳಕ್ಕೆ ಸಾಗಿಸಿ ಬೆಳೆಸಿದಳು. ಮುಂದೆ ಉದಯಸಿಂಹನನ್ನು ರಾಜನನ್ನಾಗಿ ಮಾಡಿದಳು. ತ್ಯಾಗ, ಸ್ವಾಮಿನಿಷ್ಠೆಗೆ, ದೇಶಭಕ್ತಿಗೆ ಇವಳೊಂದು ಉತ್ತಮ ದೃಷ್ಟಾಂತವಾಗಿದ್ದಾಳೆ.

ಮಹೋಬ, ಪನ್ನಾಳಂತಹ ನಿಷ್ಠೆ ವ್ಯಕ್ತಪಡಿಸಲು ಅವಕಾಶ ದೊರೆಯ ದಿರಬಹುದು. ಆದರೆ ನಿಷ್ಠೆಯನ್ನು ಬೆಳೆಸಿಕೊಂಡು ಅವಕಾಶ ದೊರೆತಾಗ ಕರ್ತವ್ಯವನ್ನು ಮಾಡಿದ ಈ ಕೆಲವು ಮಹಿಳೆಯರನ್ನು ನೀವು ಅನುಸರಿಸಬಹುದು. ಪಂಡಿತ ರಮಾಬಾಯಿ, ಫ್ಲಾರೆನ್ಸ್ ನೈಟಿಂಗೇಲ್ ಸೋದರಿ ನಿವೇದಿತರಂತಹ ಸಂಪ್ರದಾಯ

ಯುಗದಲ್ಲಿ ಹುಟ್ಟಿಬೆಳೆದ ಸಂಪ್ರದಾಯಸ್ಥ ಹೆಣ್ಣುಮಕ್ಕಳು, ಒಳ್ಳೆಯ ಉದ್ದೇಶಕ್ಕಾಗಿ ಸಂಪ್ರದಾಯದ ಕಟ್ಟುಪಾಡುಗಳಿಂದ ಹೊರಬಂದು ಹೊಸಗುರಿಯನ್ನು ಕಂಡುಕೊಂಡು, ಅದಕ್ಕಾಗಿ ನಿಷ್ಠೆಯಿಂದ ಶ್ರಮಿಸಿದರು. ತಮ್ಮ ಗುರಿಯನ್ನು ಮುಟ್ಟಿದರು.

ಪಂಡಿತ ರಮಾಬಾಯಿ ಜೈಲುವಾಸಿಯಾದ ಹೆಣ್ಣುಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ಹಾಗೂ ಅವರ ಜೀವನದ ಸುಧಾರಣೆಗಾಗಿ ಹೋರಾಡಿದವರಲ್ಲಿ ಮೊದಲಿಗರು. ಇದರ ಜೊತೆ ಜೊತೆಗೆ ಬಾಲ್ಯವಿವಾಹ ನಿಷೇಧಕ್ಕಾಗಿಯೂ ಹೋರಾಡಿ ಮಹಿಳೆಯರಿಗೆ ಧೈರ್ಯವಾಗಿ ಹೋರಾಡುವ ಸ್ಫೂರ್ತಿಯನ್ನು ತುಂಬಿದರು.

ಫ್ಲಾರೆನ್ಸ್ ನೈಟಿಂಗೇಲ್ ಯುದ್ಧಭೂಮಿಯಲ್ಲಿ ಗಾಯಾಳು ಯೋಧರನ್ನು ನಿಷ್ಠೆಯಿಂದ ಉಪಚರಿಸುತ್ತಾ **ದಾದಿ** (ನರ್ಸಿಂಗ್) ರೋಗಿಗಳಿಗೆ ಉಪಚರಿಸುವ ಒಂದು ಹೊಸ ಸೇವಾ ಉದ್ಯೋಗದ ಆವಿಷ್ಕಾರಕ್ಕೆ ಕಾರಣರಾದರು.

ನಿಷ್ಠೆ ಅನಿಷ್ಟಗಳನ್ನು ತೊಲಗಿಸುತ್ತದೆ.

3. ಗೈಡ್ ಎಲ್ಲರ ಸ್ನೇಹಿತಳು ಮತ್ತು ಇತರ ಗೈಡ್‌ಗಳಿಗೆ ಸೋದರಿಯಾಗಿರುವಳು – A guide is friend to all and sister to every other guide :

ಈ ಚಳವಳಿಯು ಒಂದು ವಿಶ್ವ ಕುಟುಂಬ. ಬಿ.ಪಿ.ಯವರು ಪದೇ ಪದೇ ತಮ್ಮ ಮಾತುಗಳಲ್ಲಿ ವಿಶ್ವಭ್ರಾತೃತ್ವ ಸಾರಿದ್ದಾರೆ. ಈ ಕುಟುಂಬದ ವ್ಯಾಪ್ತಿಗೆ ಒಳಪಡದಿರುವ ಎಲ್ಲರೂ ಗೈಡ್‌ಗಳ ಸ್ನೇಹಿತರು. ಈ ಕುಟುಂಬದಲ್ಲಿರುವವರು ಸೋದರ–ಸೋದರಿಯರು.

ಅಲೇವ್ ಲೇಡಿ ಬೇಡನ್ ಪಾವೆಲ್ಲರು **"ನಾನು ನಿಮ್ಮವಳು. ನೀವು ನನ್ನವರು. ನಾವೆಲ್ಲ ಈ ವಿಶ್ವಕುಟುಂಬದ ಎಲ್ಲರವರು"** ಎಂದು, ಭ್ರಾತೃತ್ವದ / ಭಗಿನಿತ್ವದ ಮಹತ್ವವನ್ನು ಸಾರಿದ್ದಾರೆ.

ಇವರ ಮತ್ತೊಂದು ಸ್ನೇಹ ಮನೋಭಾವದ ಉದಾಹರಣೆ ಗಮನಾರ್ಹ ವಾದುದು. ಅರಮನೆಯ ಬುಲ್‌ಬುಲ್ಸ್‌ಗಳನ್ನು ಮತ್ತು ಕೊಳಚೆ ಪ್ರದೇಶದ ಬುಲ್‌ಬುಲ್‌ಗಳನ್ನು ಭೇಟಿಯಾದಾಗ ಸಮಾನ ಆಸಕ್ತಿ, ಆನಂದ, ಪ್ರೀತಿ ಮತ್ತು ಸ್ನೇಹದಿಂದ ಕಾಣುತ್ತಿದ್ದರು. ಅವರೊಡನೆ ಮನಬಿಚ್ಚಿ ಮಾತನಾಡುತ್ತಿದ್ದರು. ಇಂದಿನ ಅಶಾಂತಿ ಮತ್ತು ಆತಂಕಭರಿತ ವಿಶ್ವದ ಜಾಡ್ಯಕ್ಕೆ ಭ್ರಾತೃತ್ವ, ಸ್ನೇಹ ಮತ್ತು ಪ್ರೀತಿಯು ದಿವ್ಯ ಔಷಧವಾಗಬಲ್ಲದು. ನೀವು ಈ ಚಿಕಿತ್ಸೆಯನ್ನು ನೀಡಲು ಸಮರ್ಥರಾಗಿರಿ.

ನೀವು ಸ್ನೇಹಪರತೆಯನ್ನು ಬೆಳೆಸಿಕೊಳ್ಳಿ, ಎಲ್ಲರೊಡನೆ ಸ್ನೇಹದಿಂದಿರಿ. ನಿಮ್ಮ ಸ್ನೇಹ ಪ್ರಾಮಾಣಿಕವಾಗಿದ್ದರೆ ಪ್ರೀತಿಯಿಂದ ಶತ್ರುಗಳನ್ನು, ಕ್ರೌರ್ಯವನ್ನು ಗೆಲ್ಲಲು

1. ಗೈಡ್ ವಿಶ್ವಾಸಾರ್ಹಳು – A guide is trustworthy :

ಗೈಡಳು ಕರ್ತವ್ಯದಲ್ಲಿ, ಮಾತಿನಲ್ಲಿ, ಪ್ರೀತಿಯಲ್ಲಿ, ಸ್ನೇಹದಲ್ಲಿ ಸಹಾಯ ಮಾಡುವುದರಲ್ಲಿ ವಿಶ್ವಾಸವನ್ನು ಉಳಿಸಿಕೊಳ್ಳಬೇಕು. ತನ್ನಲ್ಲಿ ನಂಬಿಕೆ ಮತ್ತು ತನ್ನ ಆದರ್ಶದಲ್ಲಿ, ತನ್ನ ಕೆಲಸಕಾರ್ಯಗಳಲ್ಲಿ ವಿಶ್ವಾಸವನ್ನು ಹೊಂದಿರಬೇಕು. ಆಗ ಗೈಡಳು ವಿಶ್ವಾಸಾರ್ಹಳಾಗಲು ಸಮರ್ಥಳಾಗುವಳು. ಎಲ್ಲರ ವಿಶ್ವಾಸಕ್ಕೆ ಪಾತ್ರಳಾಗುವಳು. ಇತಿಹಾಸದಲ್ಲಿ, ನೀತಿಕಥೆಗಳಲ್ಲಿ ವಿಶ್ವಾಸಾರ್ಹರಾದ ಅನೇಕ ವ್ಯಕ್ತಿಗಳನ್ನು ಕಾಣಬಹುದು. ನಿಮ್ಮ ಸುತ್ತಲೇ ಗಮನಿಸಿ, ವಿಶ್ವಾಸಾರ್ಹ ವ್ಯಕ್ತಿಗಳನ್ನು ಕಾಣುವಿರಿ. ಜವಾಬ್ದಾರಿಯುತ ಪ್ರಜೆಯಾಗಲು ವಿಶ್ವಾಸಾರ್ಹತೆಯನ್ನು ಬೆಳೆಸಿಕೊಳ್ಳುವುದು ಅವಶ್ಯಕ. ಈ ಅಂಶಕ್ಕೆ ಸಂಬಂಧಿಸಿದ ಕಥೆಗಳನ್ನು ಸಂಗ್ರಹಿಸಿ ನಿಮ್ಮ ದಳದಲ್ಲಿ ಹೇಳಿ.

ವಿಶ್ವಾಸಾರ್ಹತೆಯಿಂದ ವೈಯಕ್ತಿಕ ಕೌಟುಂಬಿಕ ಸಾಮಾಜಿಕ ಪ್ರಗತಿ ಸಾಧ್ಯವಾಗುತ್ತದೆ.

2. ಗೈಡ್ ನಿಷ್ಠಾವಂತಳು - A guide is loyal :

ಗೈಡಳು ದೇವರಿಗೂ, ದೇಶಕ್ಕೂ, ತಂದೆತಾಯಿಗಳಿಗೂ, ಗುರುಹಿರಿಯರಿಗೂ, ಸ್ನೇಹಿತರಿಗೂ, ಸಹಾಯ ಮಾಡಿದವರಿಗೂ, ನಿಷ್ಠಾವಂತಳಾಗಿರುತ್ತಾಳೆ. ಎಂತಹ ಕಠಿಣ ಸಂದರ್ಭಗಳಲ್ಲೂ ತನ್ನ ನಿಷ್ಠೆಯನ್ನು ಅಂದರೆ ಪ್ರಾಮಾಣಿಕತೆಯನ್ನು ಕೈಬಿಡುವುದಿಲ್ಲ. ನಿಷ್ಠೆಗೆ ಅನೇಕ ಸ್ತ್ರೀಪುರುಷರ ಜೀವನ ದೃಷ್ಟಾಂತಗಳಿವೆ.

ಅಜ್ಮೀರಿನ ಪೃಥ್ವೀರಾಜನ ಯೋಧನಾದ **ಮಹೋಬ,** ತನ್ನ ಮಾಂಸಖಂಡ ಗಳನ್ನು ಕತ್ತರಿಸಿ ರಣ ಹದ್ದುಗಳಿಗೆ ಹಾಕಿ, ಯುದ್ಧ ಭೂಮಿಯಲ್ಲಿ ಪ್ರಜ್ಞಾಹೀನನಾಗಿ ಮಲಗಿದ್ದ ಪೃಥ್ವೀರಾಜನನ್ನು ಹದ್ದುಗಳಿಂದ ರಕ್ಷಿಸಿದ ಘಟನೆ ಸ್ವಾಮಿನಿಷ್ಠೆಗೆ, ದೇಶನಿಷ್ಠೆಗೆ ಒಂದು ಮಹಾನ್ ದೃಷ್ಟಾಂತವಾಗಿದೆ.

ಪನ್ನಾದಾದಿಯ ರಾಜನಿಷ್ಠೆಯ ಇತಿಹಾಸ ಪ್ರಸಿದ್ಧವಾದುದು. ತನ್ನ ಮಗುವನ್ನೇ, ಬಲಿಕೊಟ್ಟು ರಾಜಕುಮಾರ ಉದಯಸಿಂಹನನ್ನು ಅರಮನೆಯಿಂದ ಸುರಕ್ಷಿತವಾದ ಸ್ಥಳಕ್ಕೆ ಸಾಗಿಸಿ ಬೆಳೆಸಿದಳು. ಮುಂದೆ ಉದಯಸಿಂಹನನ್ನು ರಾಜನನ್ನಾಗಿ ಮಾಡಿದಳು. ತ್ಯಾಗ, ಸ್ವಾಮಿನಿಷ್ಠೆಗೆ, ದೇಶಭಕ್ತಿಗೆ ಇವಳೊಂದು ಉತ್ತಮ ದೃಷ್ಟಾಂತವಾಗಿದ್ದಾಳೆ.

ಮಹೋಬ, ಪನ್ನಾಳಂತಹ ನಿಷ್ಠೆ ವ್ಯಕ್ತಪಡಿಸಲು ಅವಕಾಶ ದೊರೆಯ ದಿರಬಹುದು. ಆದರೆ ನಿಷ್ಠೆಯನ್ನು ಬೆಳೆಸಿಕೊಂಡು ಅವಕಾಶ ದೊರೆತಾಗ ಕರ್ತವ್ಯವನ್ನು ಮಾಡಿದ ಈ ಕೆಲವು ಮಹಿಳೆಯರನ್ನು ನೀವು ಅನುಸರಿಸಬಹುದು. ಪಂಡಿತ ರಮಾಬಾಯಿ, ಫ್ಲಾರೆನ್ಸ್ ನೈಟಿಂಗೇಲ್ ಸೋದರಿ ನಿವೇದಿತರಂತಹ ಸಂಪ್ರದಾಯ

ಯುಗದಲ್ಲಿ ಹುಟ್ಟಿಬೆಳೆದ ಸಂಪ್ರದಾಯಸ್ಥ ಹೆಣ್ಣುಮಕ್ಕಳು, ಒಳ್ಳೆಯ ಉದ್ದೇಶಕ್ಕಾಗಿ ಸಂಪ್ರದಾಯದ ಕಟ್ಟುಪಾಡುಗಳಿಂದ ಹೊರಬಂದು ಹೊಸಗುರಿಯನ್ನು ಕಂಡುಕೊಂಡು, ಅದಕ್ಕಾಗಿ ನಿಷ್ಠೆಯಿಂದ ಶ್ರಮಿಸಿದರು. ತಮ್ಮ ಗುರಿಯನ್ನು ಮುಟ್ಟಿದರು.

ಪಂಡಿತ ರಮಾಬಾಯಿ ಜೈಲುವಾಸಿಯಾದ ಹೆಣ್ಣುಮಕ್ಕಳಲ್ಲಿ ಆತ್ಮವಿಶ್ವಾಸ ಹೆಚ್ಚಿಸಲು ಹಾಗೂ ಅವರ ಜೀವನದ ಸುಧಾರಣೆಗಾಗಿ ಹೋರಾಡಿದವರಲ್ಲಿ ಮೊದಲಿಗರು. ಇದರ ಜೊತೆ ಜೊತೆಗೆ ಬಾಲ್ಯವಿವಾಹ ನಿಷೇಧಕ್ಕಾಗಿಯೂ ಹೋರಾಡಿ ಮಹಿಳೆಯರಿಗೆ ಧೈರ್ಯವಾಗಿ ಹೋರಾಡುವ ಸ್ಫೂರ್ತಿಯನ್ನು ತುಂಬಿದರು.

ಫ್ಲಾರೆನ್ಸ್ ನೈಟಿಂಗೇಲ್ ಯುದ್ಧಭೂಮಿಯಲ್ಲಿ ಗಾಯಾಳು ಯೋಧರನ್ನು ನಿಷ್ಠೆಯಿಂದ ಉಪಚರಿಸುತ್ತಾ **ದಾದಿ** (ನರ್ಸಿಂಗ್) ರೋಗಿಗಳಿಗೆ ಉಪಚರಿಸುವ ಒಂದು ಹೊಸ ಸೇವಾ ಉದ್ಯೋಗದ ಆವಿಷ್ಕಾರಕ್ಕೆ ಕಾರಣರಾದರು.

ನಿಷ್ಠೆ ಅನಿಷ್ಠಗಳನ್ನು ತೊಲಗಿಸುತ್ತದೆ.

3. **ಗೈಡ್ ಎಲ್ಲರ ಸ್ನೇಹಿತಳು ಮತ್ತು ಇತರ ಗೈಡ್‌ಗಳಿಗೆ ಸೋದರಿಯಾಗಿರುವಳು – A guide is friend to all and sister to every other guide :**

ಈ ಚಳವಳಿಯು ಒಂದು ವಿಶ್ವ ಕುಟುಂಬ. ಬಿ.ಪಿ.ಯವರು ಪದೇ ಪದೇ ತಮ್ಮ ಮಾತುಗಳಲ್ಲಿ ವಿಶ್ವಭ್ರಾತೃತ್ವ ಸಾರಿದ್ದಾರೆ. ಈ ಕುಟುಂಬದ ವ್ಯಾಪ್ತಿಗೆ ಒಳಪಡದಿರುವ ಎಲ್ಲರೂ ಗೈಡ್‌ಗಳ ಸ್ನೇಹಿತರು. ಈ ಕುಟುಂಬದಲ್ಲಿರುವವರು ಸೋದರ–ಸೋದರಿಯರು.

ಅಲೇವ್ ಲೇಡಿ ಬೇಡನ್ ಪಾವೆಲ್ಲರು **"ನಾನು ನಿಮ್ಮವಳು. ನೀವು ನನ್ನವರು. ನಾವೆಲ್ಲ ಈ ವಿಶ್ವಕುಟುಂಬದ ಎಲ್ಲರವರು"** ಎಂದು, ಭ್ರಾತೃತ್ವದ / ಭಗಿನಿತ್ವದ ಮಹತ್ವವನ್ನು ಸಾರಿದ್ದಾರೆ.

ಇವರ ಮತ್ತೊಂದು ಸ್ನೇಹ ಮನೋಭಾವದ ಉದಾಹರಣೆ ಗಮನಾರ್ಹವಾದುದು. ಅರಮನೆಯ ಬುಲ್‌ಬುಲ್ಸ್‌ಗಳನ್ನು ಮತ್ತು ಕೊಳಚೆ ಪ್ರದೇಶದ ಬುಲ್‌ಬುಲ್‌ಗಳನ್ನು ಭೇಟಿಯಾದಾಗ ಸಮಾನ ಆಸಕ್ತಿ, ಆನಂದ, ಪ್ರೀತಿ ಮತ್ತು ಸ್ನೇಹದಿಂದ ಕಾಣುತ್ತಿದ್ದರು. ಅವರೊಡನೆ ಮನಬಿಚ್ಚಿ ಮಾತನಾಡುತ್ತಿದ್ದರು. ಇಂದಿನ ಅಶಾಂತಿ ಮತ್ತು ಆತಂಕಭರಿತ ವಿಶ್ವದ ಜಾಡ್ಯಕ್ಕೆ ಭ್ರಾತೃತ್ವ, ಸ್ನೇಹ ಮತ್ತು ಪ್ರೀತಿಯು ದಿವ್ಯ ಔಷಧವಾಗಬಲ್ಲದು. ನೀವು ಈ ಚಿಕಿತ್ಸೆಯನ್ನು ನೀಡಲು ಸಮರ್ಥರಾಗಿರಿ.

ನೀವು ಸ್ನೇಹಪರತೆಯನ್ನು ಬೆಳೆಸಿಕೊಳ್ಳಿ. ಎಲ್ಲರೊಡನೆ ಸ್ನೇಹದಿಂದಿರಿ. ನಿಮ್ಮ ಸ್ನೇಹ ಪ್ರಾಮಾಣಿಕವಾಗಿದ್ದರೆ ಪ್ರೀತಿಯಿಂದ ಶತ್ರುಗಳನ್ನು, ಕ್ರೌರ್ಯವನ್ನು ಗೆಲ್ಲಲು

ಸಾಧ್ಯವಾಗುತ್ತದೆ. ಗಾಂಧೀಜಿ, ಮದರ್ ತೆರೆಸಾ, ಕಿರಣ್ ಬೇಡಿ, ಇವರೆಲ್ಲರೂ ಸ್ನೇಹಪರತೆಗೆ ಉದಾಹರಣೆಯಾಗಿದ್ದಾರೆ. ಕಿರಣ್ ಬೇಡಿಯವರು ಖೈದಿಗಳನ್ನು ಮಾರ್ಪಡಿಸಿದ್ದು ಒಂದು ಜೀವಂತ ಪವಾಡ. ಇದಕ್ಕಾಗಿ ಅವರು ವಿಶ್ವಮಾನ್ಯತೆಯನ್ನು ಪಡೆದರು.

ಅತೃಪ್ತಿ ದ್ವೇಷಗಳಿಗೆ, ದಿವ್ಯ ಔಷಧಿಯು ವಿನಯಶೀಲತೆ

4. ಗೈಡ್ ವಿನಯಶೀಲಳು -A guide is courteous :

ವಿನಯವಂತಿಕೆಯು ಸಜ್ಜನರ ಲಕ್ಷಣ. ಇದಕ್ಕೆ ಸ್ಥಾನಬೇಧವಿಲ್ಲ, ವರ್ಗ ಬೇಧವಿಲ್ಲ, ವಯಸ್ಸಿನ ಹಿರಿಮೆ ಇಲ್ಲ. ವಿನಯವಂತಿಕೆಯಿಂದ ಕೂಡಿದ ಮಾತು ಮಂದಿಯನ್ನು ಗೆಲ್ಲುತ್ತದೆ. ಕೆಲವರನ್ನು ಕಂಡರೆ ಅವರೊಡನೆ ಮಾತನಾಡುವ ಇಚ್ಛೆಯಾಗುತ್ತದೆ ಏಕೆ? ಯೋಚಿಸಿ.

ನಿತ್ಯಜೀವನದಲ್ಲಿ ಆಹ್ವಾನ ಸ್ವೀಕರಿಸಿದ್ದಕ್ಕಾಗಿ, ಆರೋಗ್ಯಕ್ಕಾಗಿ, ಯಶಸ್ಸಿಗಾಗಿ ಹಬ್ಬಗಳಿಗಾಗಿ, ಹುಟ್ಟುಹಬ್ಬಗಳಿಗಾಗಿ, ಶುಭಕೋರುವುದಕ್ಕಾಗಿ, ದುರಾದೃಷ್ಟ ಅಥವಾ ಸೋಲಿಗೆ ವಿಷಾದ ವ್ಯಕ್ತಪಡಿಸುವುದಕ್ಕಾಗಿ ವಂದನೆ, ಅಭಿವಂದನೆ, ಕ್ಷಮಾಯಾಚನೆ, ವಿಷಾದ ಸೂಚನೆಗಳನ್ನು ಪತ್ರದ ಮೂಲಕ, ಕಾರ್ಡ್‌ಗಳ ಮೂಲಕ, ದೂರವಾಣಿ, ಮೊಬೈಲ್ ಮೂಲಕ ಸಂಪರ್ಕಿಸುವ ವಿನಯುವಂತಿಕೆಯಿಂದ ಕೂಡಿದ ಅಭ್ಯಾಸಗಳನ್ನು ಬೆಳೆಸಿಕೊಳ್ಳಬೇಕು.

ಅತೃಪ್ತಿ ದ್ವೇಷಗಳಿಗೆ, ದಿವ್ಯ ಔಷಧಿಯು ವಿನಯಶೀಲತೆ

5. ಗೈಡ್ ಪ್ರಾಣಿಮಿತ್ರಳು ಮತ್ತು ಪ್ರಕೃತಿಪ್ರೇಮಿಯಾಗಿರುವಳು - A guide is a friend to animal and loves nature :

ಪ್ರಾಣಿಗಳೆಂದರೆ ಇಷ್ಟ ಅವುಗಳನ್ನು ಪ್ರಕೃತಿಯಲ್ಲಿ ನೋಡುವುದು ಇಷ್ಟ ಪ್ರಾಣಿ ಸಂಗ್ರಹಾಲಯದಲ್ಲಿ ಅವುಗಳನ್ನು ನೋಡಿ ಆನಂದಿಸುತ್ತೇವೆ. ನಿಮ್ಮ ಮನೆಯಲ್ಲಿ ಪ್ರಾಣಿಗಳನ್ನು ಸಾಕುತ್ತೀರಿ. ಪ್ರಾಣಿಗಳನ್ನು ಸಾಕುವುದೆಂದರೆ ನಿಮಗೆ ಇಷ್ಟ ಅವುಗಳಿಗೂ ನಮ್ಮ ಹಾಗೆ ಆಟವಾಡಲು, ವಿಶ್ರಾಂತಿ ತೆಗೆದುಕೊಳ್ಳಲು ಸ್ಥಳಬೇಕು. ಅವುಗಳ ಶುಚಿತ್ವ, ಅವುಗಳಿಗೂ ನಮ್ಮ ಹಾಗೆ ಮುಖ್ಯ. ನಿಮಗೂ ಬಹುಮುಖ್ಯ. ಅವುಗಳಿಗೂ ಪ್ರೀತಿ ಸ್ನೇಹಬೇಕು. ಆದ್ದರಿಂದ ನೀವು ಅವುಗಳೊಡನೆ ಸ್ವಲ್ಪ ಸಮಯವಾದರೂ ಕಳೆಯಬೇಕು. ರೋಗ ಬಂದರೆ ಅವುಗಳಿಗೂ ನಮ್ಮಂತೆ ಔಷಧೋಪಚಾರ ಮಾಡಿಸಬೇಕು.

ಸಾಕದೆ ಇರುವ ಅನೇಕ ಪ್ರಾಣಿಗಳು ನಮ್ಮ ಸುತ್ತಲೂ ಇವೆ. ಇವುಗಳ ಸ್ವಾತಂತ್ರ್ಯಕ್ಕೆ ಮತ್ತು ವಿಶ್ರಾಂತಿಗೆ ಭಂಗತರಬಾರದು. ಅವುಗಳಿಗೆ ಆಹಾರ ನೀಡುವ

ಗಿಡಮರಗಳನ್ನು, ಹುಲ್ಲುಗಾವಲನ್ನು ನಾಶಮಾಡಬಾರದು. ಅವುಗಳ ವಸತಿ, ಗುಹೆ, ಹುತ್ತ, ಗೂಡುಗಳನ್ನು ನಾಶಮಾಡಬಾರದು. ಅನವಶ್ಯಕವಾಗಿ ಅವುಗಳನ್ನು ಹಿಡಿದು ಹಿಂಸಿಸಬಾರದು, ಕೊಲ್ಲಬಾರದು. ಹೀಗೆ ಮಾಡುವವರನ್ನು ಕಂಡರೆ ತಡೆಯಿರಿ. ಪ್ರಾಣಿಗಳು ನಿಸರ್ಗದ ಸಂಪತ್ತು. ಅವುಗಳಿಂದ ನಿಮಗೆ ಆಗುವ ಉಪಯೋಗಗಳನ್ನು ಪಟ್ಟಿಮಾಡಿ. ತಕ್ಷಣವೇ ನೀವು ಅವುಗಳ ಮಿತ್ರರಾಗಿಬಿಡುತ್ತೀರಿ.

ಪ್ರಾಣಿಗಳ ಚಲನೆಗೆ ಅಡ್ಡಿಬಂದಾಗ, ಶಾಂತಿಭಂಗ ಮಾಡಿದಾಗ ತಮ್ಮ ರಕ್ಷಣೆಗಾಗಿ ಹಾನಿ ಉಂಟುಮಾಡುತ್ತವೆ. ಕೆಲವು ಪ್ರಾಣಿಗಳು ತಮ್ಮ ರಕ್ಷಣೆಗಾಗಿ ಅಂಗಗಳನ್ನು ಹೊಂದಿರುತ್ತವೆ. ಪ್ರಾಣಿಗಳಿಂದ ಉಂಟಾಗಬಹುದಾದ ಹಾನಿಯನ್ನು ತಡೆಗಟ್ಟುವ ಕ್ರಮಗಳನ್ನು ತಿಳಿದು ಅನುಸರಿಸಿ. ಇವುಗಳನ್ನು ಅನಿವಾರ್ಯವಾದಾಗ ಮಾತ್ರ ಕೊಲ್ಲಬಹುದು. ಇವುಗಳಿಗೂ ನಿಸರ್ಗದ ಸಮತೋಲನದಲ್ಲಿ ಪಾತ್ರವಿದೆ ಎಂಬುದನ್ನು ಮರೆಯಬೇಡಿ.

ವಿಶ್ವ ಪ್ರಧಾನಸ್ಕೌಟ್, ಪ್ರಾಣಿ ಸಂರಕ್ಷಣೆಯ ಬಗ್ಗೆ ಹೀಗೆ ಹೇಳಿದ್ದಾರೆ : "ಪ್ರಾಣಿಗಳನ್ನು ಬಂದೂಕಿನಿಂದ ಗುರಿ ಇಟ್ಟು ಕೊಲ್ಲುವಬದಲಿಗೆ ಕ್ಯಾಮರಾದ ಮೂಲಕ ಗುರಿಯಿಟ್ಟು ಸೆರೆಹಿಡಿಯಿರಿ. ಪ್ರಾಣಿಗಳನ್ನು ಕಾಪಾಡುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ."

ಪ್ರಕೃತಿಯನ್ನು ವೀಕ್ಷಿಸುವ, ಪರಿಚಯ ಮಾಡಿಕೊಳ್ಳುವ, ಆನಂದಿಸುವ ಅಭ್ಯಾಸ ಮಾಡಿಕೊಳ್ಳಿ, ಪ್ರಕೃತಿ ನಮ್ಮ ಜೀವನಕ್ಕೆ ಬೇಕಾದುದನ್ನೆಲ್ಲಾ ನೀಡುವ ತಾಯಿ. ಗಿಡಮರಗಳು, ಪ್ರಾಣಿಪಕ್ಷಿಗಳು ಇಲ್ಲದೆ ನಾವು ಬದುಕಲು ಸಾಧ್ಯವಿಲ್ಲ. ಸೌರಶಕ್ತಿ, ಗಾಳಿ, ನೀರು, ಮಣ್ಣು, ಪ್ರಕೃತಿ ನಮಗೆ ನೀಡಿರುವ ವರ. ಈ ವರದ ದುರುಪಯೋಗ ಮಾಡಿದರೆ ನಮ್ಮ ಬದುಕೇ ದುರ್ಭರವಾಗುತ್ತದೆ, ಇಲ್ಲವಾಗುತ್ತದೆ.

"ಪ್ರಕೃತಿ ಮಾತೆ ನಮ್ಮ ಆಸೆಯನ್ನು ಪೂರೈಸಬಲ್ಲಳೇ ಹೊರತು ದುರಾಸೆಯನ್ನಲ್ಲ" ಎಂದು ಗಾಂಧೀಜಿಯವರು 50ರ ದಶಕದಲ್ಲೇ ನಮ್ಮನ್ನು ಎಚ್ಚರಿಸಿದ್ದಾರೆ. ಇದನ್ನು ನೆನಪಿನಲ್ಲಿಟ್ಟುಕೊಳ್ಳೋಣ.

ಪ್ರಕೃತಿಯನ್ನು ಸಂರಕ್ಷಿಸಿ. ಪ್ರಕೃತಿ ನಮ್ಮನ್ನು ಸಂರಕ್ಷಿಸುತ್ತದೆ.

6. ಗೈಡ್ ಶಿಸ್ತುಳ್ಳವಳು ಮತ್ತು ಸಾರ್ವಜನಿಕ ಆಸ್ತಿ ರಕ್ಷಿಸಲು ಸಹಾಯ ಮಾಡುವಳು - A guide is Disciplined and protects public property :

ಶಿಸ್ತು ಬದುಕಿನಲ್ಲಿ ಬಹು ಮುಖ್ಯವಾದ ಅಂಶ. ಇದನ್ನು ಅಭ್ಯಾಸ ಮಾಡಿ ಮೈಗೂಡಿಸಿಕೊಂಡರೆ ನಿಯಮಗಳನ್ನು ಪಾಲಿಸುವುದು ಕಷ್ಟಕರವಲ್ಲ. ಕೆಲಸದಲ್ಲಿ

ಸಾಧ್ಯವಾಗುತ್ತದೆ. ಗಾಂಧೀಜಿ, ಮದರ್ ತೆರೆಸಾ, ಕಿರಣ್ ಬೇಡಿ, ಇವರೆಲ್ಲರೂ ಸ್ನೇಹಪರತೆಗೆ ಉದಾಹರಣೆಯಾಗಿದ್ದಾರೆ. ಕಿರಣ್ ಬೇಡಿಯವರು ಖೈದಿಗಳನ್ನು ಮಾರ್ಪಡಿಸಿದ್ದು ಒಂದು ಜೀವಂತ ಪವಾಡ. ಇದಕ್ಕಾಗಿ ಅವರು ವಿಶ್ವಮಾನ್ಯತೆಯನ್ನು ಪಡೆದರು.

ಅತೃಪ್ತಿ ದ್ವೇಷಗಳಿಗೆ, ದಿವ್ಯ ಔಷಧಿಯು ವಿನಯಶೀಲತೆ

4. ಗೈಡ್ ವಿನಯಶೀಲಳು -A guide is courteous :

ವಿನಯವಂತಿಕೆಯು ಸಜ್ಜನರ ಲಕ್ಷಣ. ಇದಕ್ಕೆ ಸ್ಥಾನಬೇಧವಿಲ್ಲ, ವರ್ಗ ಬೇಧವಿಲ್ಲ, ವಯಸ್ಸಿನ ಹಿರಿಮೆ ಇಲ್ಲ. ವಿನಯವಂತಿಕೆಯಿಂದ ಕೂಡಿದ ಮಾತು ಮಂದಿಯನ್ನು ಗೆಲ್ಲುತ್ತದೆ. ಕೆಲವರನ್ನು ಕಂಡರೆ ಅವರೊಡನೆ ಮಾತನಾಡುವ ಇಚ್ಛೆಯಾಗುತ್ತದೆ ಏಕೆ? ಯೋಚಿಸಿ.

ನಿತ್ಯಜೀವನದಲ್ಲಿ ಆಹ್ವಾನ ಸ್ವೀಕರಿಸಿದ್ದಕ್ಕಾಗಿ, ಆರೋಗ್ಯಕ್ಕಾಗಿ, ಯಶಸ್ಸಿಗಾಗಿ ಹಬ್ಬಗಳಿಗಾಗಿ, ಹುಟ್ಟುಹಬ್ಬಗಳಿಗಾಗಿ, ಶುಭಕೋರುವುದಕ್ಕಾಗಿ, ದುರಾದೃಷ್ಟ ಅಥವಾ ಸೋಲಿಗೆ ವಿಷಾದ ವ್ಯಕ್ತಪಡಿಸುವುದಕ್ಕಾಗಿ ವಂದನೆ, ಅಭಿವಂದನೆ, ಕ್ಷಮಾಯಾಚನೆ, ವಿಷಾದ ಸೂಚನೆಗಳನ್ನು ಪತ್ರದ ಮೂಲಕ, ಕಾರ್ಡ್‌ಗಳ ಮೂಲಕ, ದೂರವಾಣಿ, ಮೊಬೈಲ್ ಮೂಲಕ ಸಂಪರ್ಕಿಸುವ ವಿನಯುವಂತಿಕೆಯಿಂದ ಕೂಡಿದ ಅಭ್ಯಾಸಗಳನ್ನು ಬೆಳೆಸಿಕೊಳ್ಳಬೇಕು.

ಅತೃಪ್ತಿ ದ್ವೇಷಗಳಿಗೆ, ದಿವ್ಯ ಔಷಧಿಯು ವಿನಯಶೀಲತೆ

5. ಗೈಡ್ ಪ್ರಾಣಿಮಿತ್ರಳು ಮತ್ತು ಪ್ರಕೃತಿಪ್ರೇಮಿಯಾಗಿರುವಳು - A guide is a friend to animal and loves nature :

ಪ್ರಾಣಿಗಳೆಂದರೆ ಇಷ್ಟ ಅವುಗಳನ್ನು ಪ್ರಕೃತಿಯಲ್ಲಿ ನೋಡುವುದು ಇಷ್ಟ ಪ್ರಾಣಿ ಸಂಗ್ರಹಾಲಯದಲ್ಲಿ ಅವುಗಳನ್ನು ನೋಡಿ ಆನಂದಿಸುತ್ತೇವೆ. ನಿಮ್ಮ ಮನೆಯಲ್ಲಿ ಪ್ರಾಣಿಗಳನ್ನು ಸಾಕುತ್ತೀರಿ. ಪ್ರಾಣಿಗಳನ್ನು ಸಾಕುವುದೆಂದರೆ ನಿಮಗೆ ಇಷ್ಟ ಅವುಗಳಿಗೂ ನಮ್ಮ ಹಾಗೆ ಆಟವಾಡಲು, ವಿಶ್ರಾಂತಿ ತೆಗೆದುಕೊಳ್ಳಲು ಸ್ಥಳಬೇಕು. ಅವುಗಳ ಶುಚಿತ್ವ, ಅವುಗಳಿಗೂ ನಮ್ಮ ಹಾಗೆ ಮುಖ್ಯ. ನಿಮಗೂ ಬಹುಮುಖ್ಯ. ಅವುಗಳಿಗೂ ಪ್ರೀತಿ ಸ್ನೇಹಬೇಕು. ಆದ್ದರಿಂದ ನೀವು ಅವುಗಳೊಡನೆ ಸ್ವಲ್ಪ ಸಮಯವಾದರೂ ಕಳೆಯಬೇಕು. ರೋಗ ಬಂದರೆ ಅವುಗಳಿಗೂ ನಮ್ಮಂತೆ ಔಷಧೋಪಚಾರ ಮಾಡಿಸಬೇಕು.

ಸಾಕದೆ ಇರುವ ಅನೇಕ ಪ್ರಾಣಿಗಳು ನಮ್ಮ ಸುತ್ತಲೂ ಇವೆ. ಇವುಗಳ ಸ್ವಾತಂತ್ರ್ಯಕ್ಕೆ ಮತ್ತು ವಿಶ್ರಾಂತಿಗೆ ಭಂಗತರಬಾರದು. ಅವುಗಳಿಗೆ ಆಹಾರ ನೀಡುವ

ಗಿಡಮರಗಳನ್ನು, ಹುಲ್ಲುಗಾವಲನ್ನು ನಾಶಮಾಡಬಾರದು. ಅವುಗಳ ವಸತಿ, ಗುಹೆ, ಹುತ್ತ, ಗೂಡುಗಳನ್ನು ನಾಶಮಾಡಬಾರದು. ಅನವಶ್ಯಕವಾಗಿ ಅವುಗಳನ್ನು ಹಿಡಿದು ಹಿಂಸಿಸಬಾರದು, ಕೊಲ್ಲಬಾರದು. ಹೀಗೆ ಮಾಡುವವರನ್ನು ಕಂಡರೆ ತಡೆಯಿರಿ. ಪ್ರಾಣಿಗಳು ನಿಸರ್ಗದ ಸಂಪತ್ತು. ಅವುಗಳಿಂದ ನಿಮಗೆ ಆಗುವ ಉಪಯೋಗಗಳನ್ನು ಪಟ್ಟಿಮಾಡಿ. ತಕ್ಷಣವೇ ನೀವು ಅವುಗಳ ಮಿತ್ರರಾಗಿಬಿಡುತ್ತೀರಿ.

ಪ್ರಾಣಿಗಳ ಚಲನೆಗೆ ಅಡ್ಡಿಬಂದಾಗ, ಶಾಂತಿಭಂಗ ಮಾಡಿದಾಗ ತಮ್ಮ ರಕ್ಷಣೆಗಾಗಿ ಹಾನಿ ಉಂಟುಮಾಡುತ್ತವೆ. ಕೆಲವು ಪ್ರಾಣಿಗಳು ತಮ್ಮ ರಕ್ಷಣೆಗಾಗಿ ಅಂಗಗಳನ್ನು ಹೊಂದಿರುತ್ತವೆ. ಪ್ರಾಣಿಗಳಿಂದ ಉಂಟಾಗಬಹುದಾದ ಹಾನಿಯನ್ನು ತಡೆಗಟ್ಟುವ ಕ್ರಮಗಳನ್ನು ತಿಳಿದು ಅನುಸರಿಸಿ. ಇವುಗಳನ್ನು ಅನಿವಾರ್ಯವಾದಾಗ ಮಾತ್ರ ಕೊಲ್ಲಬಹುದು. ಇವುಗಳಿಗೂ ನಿಸರ್ಗದ ಸಮತೋಲನದಲ್ಲಿ ಪಾತ್ರವಿದೆ ಎಂಬುದನ್ನು ಮರೆಯಬೇಡಿ.

ವಿಶ್ವ ಪ್ರಧಾನಸ್ಕೌಟ್, ಪ್ರಾಣಿ ಸಂರಕ್ಷಣೆಯ ಬಗ್ಗೆ ಹೀಗೆ ಹೇಳಿದ್ದಾರೆ : "ಪ್ರಾಣಿಗಳನ್ನು ಬಂದೂಕಿನಿಂದ ಗುರಿ ಇಟ್ಟು ಕೊಲ್ಲುವಬದಲಿಗೆ ಕ್ಯಾಮರಾದ ಮೂಲಕ ಗುರಿಯಿಟ್ಟು ಸೆರೆಹಿಡಿಯಿರಿ. ಪ್ರಾಣಿಗಳನ್ನು ಕಾಪಾಡುವುದು ನಮ್ಮ ನಿಮ್ಮೆಲ್ಲರ ಕರ್ತವ್ಯ ಮತ್ತು ಜವಾಬ್ದಾರಿಯಾಗಿದೆ."

ಪ್ರಕೃತಿಯನ್ನು ವೀಕ್ಷಿಸುವ, ಪರಿಚಯ ಮಾಡಿಕೊಳ್ಳುವ, ಆನಂದಿಸುವ ಅಭ್ಯಾಸ ಮಾಡಿಕೊಳ್ಳಿ. ಪ್ರಕೃತಿ ನಮ್ಮ ಜೀವನಕ್ಕೆ ಬೇಕಾದುದನ್ನೆಲ್ಲಾ ನೀಡುವ ತಾಯಿ. ಗಿಡಮರಗಳು, ಪ್ರಾಣಿಪಕ್ಷಿಗಳು ಇಲ್ಲದೆ ನಾವು ಬದುಕಲು ಸಾಧ್ಯವಿಲ್ಲ. ಸೌರಶಕ್ತಿ, ಗಾಳಿ, ನೀರು, ಮಣ್ಣು, ಪ್ರಕೃತಿ ನಮಗೆ ನೀಡಿರುವ ವರ. ಈ ವರದ ದುರುಪಯೋಗ ಮಾಡಿದರೆ ನಮ್ಮ ಬದುಕೇ ದುರ್ಭರವಾಗುತ್ತದೆ, ಇಲ್ಲವಾಗುತ್ತದೆ.

"ಪ್ರಕೃತಿ ಮಾತೆ ನಮ್ಮ ಆಸೆಯನ್ನು ಪೂರೈಸಬಲ್ಲಳೇ ಹೊರತು ದುರಾಸೆಯನ್ನಲ್ಲ" ಎಂದು ಗಾಂಧೀಜಿಯವರು 50ರ ದಶಕದಲ್ಲೇ ನಮ್ಮನ್ನು ಎಚ್ಚರಿಸಿದ್ದಾರೆ. ಇದನ್ನು ನೆನಪಿನಲ್ಲಿಟ್ಟುಕೊಳ್ಳೋಣ.

ಪ್ರಕೃತಿಯನ್ನು ಸಂರಕ್ಷಿಸಿ. ಪ್ರಕೃತಿ ನಮ್ಮನ್ನು ಸಂರಕ್ಷಿಸುತ್ತದೆ.

6. ಗೈಡ್ ಶಿಸ್ತುಳ್ಳವಳು ಮತ್ತು ಸಾರ್ವಜನಿಕ ಆಸ್ತಿ ರಕ್ಷಿಸಲು ಸಹಾಯ ಮಾಡುವಳು - A guide is Disciplined and protects public property :

ಶಿಸ್ತು ಬದುಕಿನಲ್ಲಿ ಬಹು ಮುಖ್ಯವಾದ ಅಂಶ. ಇದನ್ನು ಅಭ್ಯಾಸ ಮಾಡಿ ಮೈಗೂಡಿಸಿಕೊಂಡರೆ ನಿಯಮಗಳನ್ನು ಪಾಲಿಸುವುದು ಕಷ್ಟಕರವಲ್ಲ. ಕೆಲಸದಲ್ಲಿ

ಕ್ರಮಬದ್ಧತೆ, ಸಮಯಪ್ರಜ್ಞೆ, ಉಡುಪಿನಲ್ಲಿ ಅಚ್ಚುಕಟ್ಟುತನ, ದೇಹದ ಚಲನೆಯಲ್ಲಿ ಸರಿಯಾದ ಭಾವಭಂಗಿ, ವಿಧೇಯತೆ, ಆಜ್ಞಾಪಾಲನೆ, ಸಚ್ಚಾರಿತ್ರ್ಯ, ಸನ್ನಡತೆ, ಸಮವಸ್ತ್ರ ಧಾರಣೆ ಮುಂತಾದವುಗಳು ಶಿಸ್ತಿಗೆ ಒಳಪಟ್ಟ ಅಂಶಗಳು.

ಗಾಂಧೀಜಿಯವರಿಗೆ ಒಮ್ಮೆ ಸಭೆಗೆ ಹೋಗುವುದು ತಡವಾಗುತ್ತಿತ್ತು. ಏನುಮಾಡುವುದು ಎಂದು ಯೋಚಿಸಿದರು. ಶಿಷ್ಯನಿಗೆ ಸೈಕಲ್ ತರಲು ಹೇಳಿದರು. ಅದನ್ನು ಹಿಡಿದುಕೊಳ್ಳುವಂತೆ ಹೇಳಿದರು. ಇವರಿಗೆ ಸೈಕಲ್ ಸವಾರಿ ಬರುತ್ತಿರಲಿಲ್ಲ ಹತ್ತಿ ಕುಳಿತೇಬಿಟ್ಟರು. ಶಿಷ್ಯನಿಗೆ ತಳ್ಳಲು ಹೇಳಿದರು. ಸವಾರಿ ಹೊರಟೇ ಬಿಟ್ಟರು! ಇದರಿಂದ ಸಮಯ ಪ್ರಜ್ಞೆಯ ಮಹತ್ವ ತಿಳಿಯುತ್ತದೆ. ವಿಶ್ವದ ಎಲ್ಲಾ ಮಹಾನ್ ವ್ಯಕ್ತಿಗಳು ಸಮಯಪಾಲಕರು. "ಸಮಯಪಾಲನೆ ಸಾಧನೆಯ ಒಂದು ಸಾಧನ". ಇದನ್ನು ತಪ್ಪದೇ ಪಾಲಿಸಿ.

ಸಾರ್ವಜನಿಕ ಆಸ್ತಿ ನಮ್ಮ ಆಸ್ತಿ! ನಾವು ವಿವಿಧ ರೀತಿಯ ತೆರಿಗೆ ಮತ್ತು ಕಂದಾಯಗಳನ್ನು (Tax) ಕೊಡುತ್ತೇವೆ. ಅವಶ್ಯವಿದ್ದಲ್ಲಿ ಭಾರಿ ಪ್ರಮಾಣದಲ್ಲಿ ಸರಕಾರ ಹಣವನ್ನು ಸ್ಥಳೀಯ ಆರ್ಥಿಕ ಸಂಸ್ಥೆಗಳಿಂದ, ವಿಶ್ವ ಬ್ಯಾಂಕಿನಿಂದ ಸಾಲ ಪಡೆದು ಸಾರ್ವಜನಿಕರ ಅವಶ್ಯಕತೆಗಳಾದ ನೀರು ಸರಬರಾಜು, ಆಸ್ಪತ್ರೆ, ರಸ್ತೆ, ಶಾಲೆ, ಸಾರಿಗೆ, ಉದ್ಯಾನ, ವಿದ್ಯುತ್ ಮುಂತಾದ ವ್ಯವಸ್ಥೆಯನ್ನು ಮಾಡುತ್ತದೆ. ಈಗ ಯೋಚಿಸಿ! ಸಾರ್ವಜನಿಕ ಆಸ್ತಿ, ಯಾರ ಆಸ್ತಿ? ಅಂದ ಮೇಲೆ ನಾವು ಇದನ್ನು ಸರಿಯಾದ ರೀತಿಯಲ್ಲಿ ಬಳಸಬೇಕು, ಉಳಿಸಬೇಕು, ಬೆಳೆಸಬೇಕು. ಅಂದರೆ ಸಾರ್ವಜನಿಕ ಆಸ್ತಿಯನ್ನು ಸಂರಕ್ಷಿಸಲು ಸಹಾಯ ಮಾಡಬೇಕು. ಮೊದಲು ನೀವು ಸಾರ್ವಜನಿಕ ಆಸ್ತಿಯನ್ನು ಸರಿಯಾದ ರೀತಿಯಲ್ಲಿ ಬಳಸಿ. ಬಳಸದೇ ಇರುವವರಿಗೆ ತಿಳಿಯಹೇಳಿ. ದುರುಪಯೋಗ ಮಾಡುತ್ತಿದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರುನೀಡಿ. ಈ ಆಸ್ತಿ ಸಂರಕ್ಷಣೆ ಬಗ್ಗೆ ಇಲಾಖೆಗಳಿಗೆ ಸಲಹೆ ನೀಡಿ. ಸಾರ್ವಜನಿಕ ಸ್ಥಳಗಳನ್ನು ದತ್ತು ತೆಗೆದುಕೊಂಡು ಸಂರಕ್ಷಿಸಿ ಅಭಿವೃದ್ಧಿಗೊಳಿಸಿ.

ರಕ್ಷಣಾ ಇಲಾಖೆ, ಆರಕ್ಷಕ ಇಲಾಖೆ, ಸ್ಕೌಟ್-ಗೈಡ್, ಎನ್.ಸಿ.ಸಿ. ಮತ್ತು ಸೇವಾದಳ ಎನ್.ಎಸ್.ಎಸ್. ಮುಂತಾದ ಸಂಸ್ಥೆಗಳು ಶಿಸ್ತನ್ನು ಕಡ್ಡಾಯವಾಗಿ ಪಾಲಿಸಬೇಕು. ಗೈಡ್‌ಗಳಾಗಿ ನೀವು ಶಿಸ್ತಿನ ಸಿಪಾಯಿಗಳಾಗಬೇಕು.

ಶಿಸ್ತು ಯಶಸ್ಸಿನ ಗುಟ್ಟು

7. **ಗೈಡ್ ಧೈರ್ಯವಂತಳು - A guide is Courageous :**

ಕಷ್ಟಗಳನ್ನು, ಸಮಸ್ಯೆಗಳನ್ನು, ಸವಾಲುಗಳನ್ನು ಧೈರ್ಯವಾಗಿ ಎದುರಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಯಾವುದೇ ಸಂದರ್ಭದಲ್ಲೂ "ನಿರಾಶೆಯ

ಆಳಕ್ಕೆ ಇಳಿಯಬಾರದು; ದುರಾಸೆಯ ಎತ್ತರಕ್ಕೆ ಏರಬಾರದು" ಆದರೆ ನಿಮ್ಮ ಗುರಿಯನ್ನು ಸಾಧಿಸುವ ಧೈರ್ಯವನ್ನು ಬೆಳೆಸಿಕೊಳ್ಳಬೇಕು. ನಿಮ್ಮ ಕರ್ತವ್ಯಗಳನ್ನು ಧೈರ್ಯ ಮತ್ತು ನಿಷ್ಠೆಯಿಂದ ಮಾಡಬೇಕು.

ಕಿತ್ತೂರು ರಾಣಿ ಚೆನ್ನಮ್ಮ, ಝೂನ್ಸಿರಾಣಿ ಲಕ್ಷ್ಮೀಬಾಯಿ, ಚಾಂದ್ ಬೀಬಿ, ಓಬವ್ವ ಇವರುಗಳು ತೋರಿದ ಶೌರ್ಯ, ಇತಿಹಾಸದ ಪುಟಗಳಲ್ಲಿ ದೇಶವನ್ನು ರಕ್ಷಿಸಿದ ಜೀವಂತ ಕಥೆಯಾಗಿ ಅಮರವಾಗಿದೆ. ಕಿರಣ್ ಬೇಡಿ ಧೈರ್ಯ ಸಾಹಸಗಳಿಗೆ ಜೀವಂತ ನಿದರ್ಶನವಾಗಿದ್ದಾರೆ. ಮದರ್ ಥೆರೇಸಾ ಪರದೇಶದಿಂದ ಬಂದು ಭಾರತದಲ್ಲಿ ನೆಲಸಿ ಸೇವೆಯ ಉತ್ತುಂಗಕ್ಕೆ ಏರಲು ಅವರಲ್ಲಿದ್ದ ಮನೋಸ್ಥೈರ್ಯವೇ ಕಾರಣ.

ಧೈರ್ಯಂ ಸರ್ವತ್ರ ಸಾಧನಂ

8. ಗೈಡ್ ಮಿತವ್ಯಯಿಯಾಗಿರುವಳು – A guide is Thrifty :

ಗೈಡ್ ಆದವಳು ಮಾತು, ಸಮಯ, ಹಣ, ಆಹಾರ, ವಿದ್ಯುತ್, ನೀರು, ನೈಸರ್ಗಿಕ ಮತ್ತು ಮಾನವ ನಿರ್ಮಿತ ಸಂಪನ್ಮೂಲಗಳನ್ನೂ ತನ್ನ ಶರೀರ ಹಾಗೂ ಬುದ್ಧಿಶಕ್ತಿಯನ್ನೂ ಮಿತವಾಗಿ ಬಳಸಬೇಕು. ಅಂದರೆ ಅವಶ್ಯಕತೆ ಇದ್ದಷ್ಟು ಮಾತ್ರ ಬಳಸಬೇಕು. ಇದರ ಅರ್ಥ ಜಿಪುಣತನವಲ್ಲ. ವಸ್ತುಗಳ ಮಿತ ಬಳಕೆಯಿಂದ ಹಣ ಉಳಿತಾಯವಾಗುವುದಲ್ಲದೆ ಮಾಲಿನ್ಯತೆಯನ್ನು ನಿಯಂತ್ರಿಸಬಹುದು. ನಮ್ಮ ಹಿರಿಯರಾದ ಗಾಂಧೀಜಿ, ಮದರ್ ಥೆರೇಸಾ, ಲಾಲ್ ಬಹದ್ದೂರ್ ಶಾಸ್ತ್ರಿ, ಡಾ॥ ರಾಧಾಕೃಷ್ಣನ್, ಡಾ ಅಬ್ದುಲ್ ಕಲಾಂ ಇವರೆಲ್ಲರೂ ಮಿತವ್ಯಯಕ್ಕೆ ನೇರ ಹಾಗೂ ಪ್ರತ್ಯಕ್ಷ ಉದಾಹರಣೆಯಾಗಿದ್ದಾರೆ.

ಮಿತ ಯಾವಾಗಲೂ ಹಿತ

9. ಗೈಡ್ ಕಾಯಾ ವಾಚಾ ಮನಸಾ ಪರಿಶುದ್ಧಳು - A guide is Pure in thought, word and deed :

ನಿಯಮದ ಈ ಅಂಶವು ಗೈಡ್‌ಗಳ ಜೀವನದ ಬುನಾದಿಯಾಗಿದೆ. ಈ ಅಂಶವು ನಿಮ್ಮನ್ನು ಉತ್ತಮರನ್ನಾಗಿ ಮಾಡುವುದಲ್ಲದೆ ಸಂಸ್ಥೆಯ ಘನತೆ ಗೌರವವನ್ನು ನಿಮ್ಮ ಮೂಲಕ ಉತ್ತುಂಗಕ್ಕೆ ಒಯ್ಯುತ್ತದೆ. ಕೆಲಸ, ಮಾತು ಮತ್ತು ಮನಸ್ಸನ್ನು ಸಮನ್ವಯಗೊಳಿಸುವುದು, ಶುದ್ಧವಾಗಿಟ್ಟುಕೊಳ್ಳವುದೇ ತ್ರಿಕರಣ ಶುದ್ಧಿ. ಯಾವುದೇ ಕೆಲಸವಾಗಲಿ ಪರಿಶುದ್ಧ ಮನಸ್ಸಿನಿಂದ ಮಾಡಿ ಒಳ್ಳೆಯ ಮಾತನಾಡಿ.

ಕ್ರಮಬದ್ಧತೆ, ಸಮಯಪ್ರಜ್ಞೆ, ಉಡುಪಿನಲ್ಲಿ ಅಚ್ಚುಕಟ್ಟುತನ, ದೇಹದ ಚಲನೆಯಲ್ಲಿ ಸರಿಯಾದ ಭಾವಭಂಗಿ, ವಿಧೇಯತೆ, ಆಜ್ಞಾಪಾಲನೆ, ಸಚ್ಚಾರಿತ್ರ್ಯ, ಸನ್ನಡತೆ, ಸಮವಸ್ತ್ರ ಧಾರಣೆ ಮುಂತಾದವುಗಳು ಶಿಸ್ತಿಗೆ ಒಳಪಟ್ಟ ಅಂಶಗಳು.

ಗಾಂಧೀಜಿಯವರಿಗೆ ಒಮ್ಮೆ ಸಭೆಗೆ ಹೋಗುವುದು ತಡವಾಗುತ್ತಿತ್ತು. ಏನುಮಾಡುವುದು ಎಂದು ಯೋಚಿಸಿದರು. ಶಿಷ್ಯನಿಗೆ ಸೈಕಲ್ ತರಲು ಹೇಳಿದರು. ಅದನ್ನು ಹಿಡಿದುಕೊಳ್ಳುವಂತೆ ಹೇಳಿದರು. ಇವರಿಗೆ ಸೈಕಲ್ ಸವಾರಿ ಬರುತ್ತಿರಲಿಲ್ಲ ಹತ್ತಿ ಕುಳಿತೇಬಿಟ್ಟರು. ಶಿಷ್ಯನಿಗೆ ತಳ್ಳಲು ಹೇಳಿದರು. ಸವಾರಿ ಹೊರಟೇ ಬಿಟ್ಟರು! ಇದರಿಂದ ಸಮಯ ಪ್ರಜ್ಞೆಯ ಮಹತ್ವ ತಿಳಿಯುತ್ತದೆ. ವಿಶ್ವದ ಎಲ್ಲಾ ಮಹಾನ್ ವ್ಯಕ್ತಿಗಳು ಸಮಯಪಾಲಕರು. "ಸಮಯಪಾಲನೆ ಸಾಧನೆಯ ಒಂದು ಸಾಧನ". ಇದನ್ನು ತಪ್ಪದೇ ಪಾಲಿಸಿ.

ಸಾರ್ವಜನಿಕ ಆಸ್ತಿ ನಮ್ಮ ಆಸ್ತಿ! ನಾವು ವಿವಿಧ ರೀತಿಯ ತೆರಿಗೆ ಮತ್ತು ಕಂದಾಯಗಳನ್ನು (Tax) ಕೊಡುತ್ತೇವೆ. ಅವಶ್ಯವಿದ್ದಲ್ಲಿ ಭಾರಿ ಪ್ರಮಾಣದಲ್ಲಿ ಸರಕಾರ ಹಣವನ್ನು ಸ್ಥಳೀಯ ಆರ್ಥಿಕ ಸಂಸ್ಥೆಗಳಿಂದ, ವಿಶ್ವ ಬ್ಯಾಂಕಿನಿಂದ ಸಾಲ ಪಡೆದು ಸಾರ್ವಜನಿಕರ ಅವಶ್ಯಕತೆಗಳಾದ ನೀರು ಸರಬರಾಜು, ಆಸ್ಪತ್ರೆ, ರಸ್ತೆ, ಶಾಲೆ, ಸಾರಿಗೆ, ಉದ್ಯಾನ, ವಿದ್ಯುತ್ ಮುಂತಾದ ವ್ಯವಸ್ಥೆಯನ್ನು ಮಾಡುತ್ತದೆ. ಈಗ ಯೋಚಿಸಿ! ಸಾರ್ವಜನಿಕ ಆಸ್ತಿ, ಯಾರ ಆಸ್ತಿ? ಅಂದ ಮೇಲೆ ನಾವು ಇದನ್ನು ಸರಿಯಾದ ರೀತಿಯಲ್ಲಿ ಬಳಸಬೇಕು, ಉಳಿಸಬೇಕು, ಬೆಳೆಸಬೇಕು. ಅಂದರೆ ಸಾರ್ವಜನಿಕ ಆಸ್ತಿಯನ್ನು ಸಂರಕ್ಷಿಸಲು ಸಹಾಯ ಮಾಡಬೇಕು. ಮೊದಲು ನೀವು ಸಾರ್ವಜನಿಕ ಆಸ್ತಿಯನ್ನು ಸರಿಯಾದ ರೀತಿಯಲ್ಲಿ ಬಳಸಿ. ಬಳಸದೇ ಇರುವವರಿಗೆ ತಿಳಿಯಹೇಳಿ. ದುರುಪಯೋಗ ಮಾಡುತ್ತಿದ್ದರೆ ಸಂಬಂಧಪಟ್ಟ ಅಧಿಕಾರಿಗಳಿಗೆ ದೂರುನೀಡಿ. ಈ ಆಸ್ತಿ ಸಂರಕ್ಷಣೆ ಬಗ್ಗೆ ಇಲಾಖೆಗಳಿಗೆ ಸಲಹೆ ನೀಡಿ. ಸಾರ್ವಜನಿಕ ಸ್ಥಳಗಳನ್ನು ದತ್ತು ತೆಗೆದುಕೊಂಡು ಸಂರಕ್ಷಿಸಿ ಅಭಿವೃದ್ಧಿಗೊಳಿಸಿ.

ರಕ್ಷಣಾ ಇಲಾಖೆ, ಆರಕ್ಷಕ ಇಲಾಖೆ, ಸ್ಕೌಟ್-ಗೈಡ್, ಎನ್.ಸಿ.ಸಿ. ಮತ್ತು ಸೇವಾದಳ ಎನ್.ಎಸ್.ಎಸ್. ಮುಂತಾದ ಸಂಸ್ಥೆಗಳು ಶಿಸ್ತನ್ನು ಕಡ್ಡಾಯವಾಗಿ ಪಾಲಿಸಬೇಕು. ಗೈಡ್‌ಗಳಾಗಿ ನೀವು ಶಿಸ್ತಿನ ಸಿಪಾಯಿಗಳಾಗಬೇಕು.

ಶಿಸ್ತು ಯಶಸ್ಸಿನ ಗುಟ್ಟು

7. ಗೈಡ್ ಧೈರ್ಯವಂತಳು - A guide is Courageous :

ಕಷ್ಟಗಳನ್ನು, ಸಮಸ್ಯೆಗಳನ್ನು, ಸವಾಲುಗಳನ್ನು ಧೈರ್ಯವಾಗಿ ಎದುರಿಸುವ ಸಾಮರ್ಥ್ಯವನ್ನು ಬೆಳೆಸಿಕೊಳ್ಳಬೇಕು. ಯಾವುದೇ ಸಂದರ್ಭದಲ್ಲೂ "ನಿರಾಶೆಯ

ಆಳಕ್ಕೆ ಇಳಿಯಬಾರದು; ದುರಾಸೆಯ ಎತ್ತರಕ್ಕೆ ಏರಬಾರದು" ಆದರೆ ನಿಮ್ಮ ಗುರಿಯನ್ನು ಸಾಧಿಸುವ ಧೈರ್ಯವನ್ನು ಬೆಳೆಸಿಕೊಳ್ಳಬೇಕು. ನಿಮ್ಮ ಕರ್ತವ್ಯಗಳನ್ನು ಧೈರ್ಯ ಮತ್ತು ನಿಷ್ಠೆಯಿಂದ ಮಾಡಬೇಕು.

ಕಿತ್ತೂರು ರಾಣಿ ಚೆನ್ನಮ್ಮ, ಝಾನ್ಸೀರಾಣಿ ಲಕ್ಷ್ಮೀಬಾಯಿ, ಚಾಂದ್ ಬೀಬಿ, ಓಬವ್ವ ಇವರುಗಳು ತೋರಿದ ಶೌರ್ಯ, ಇತಿಹಾಸದ ಪುಟಗಳಲ್ಲಿ ದೇಶವನ್ನು ರಕ್ಷಿಸಿದ ಜೀವಂತ ಕಥೆಯಾಗಿ ಅಮರವಾಗಿದೆ. ಕಿರಣ್ ಬೇಡಿ ಧೈರ್ಯ ಸಾಹಸಗಳಿಗೆ ಜೀವಂತ ನಿದರ್ಶನವಾಗಿದ್ದಾರೆ. ಮದರ್ ಥೆರೇಸಾ ಪರದೇಶದಿಂದ ಬಂದು ಭಾರತದಲ್ಲಿ ನೆಲಸಿ ಸೇವೆಯ ಉತ್ತುಂಗಕ್ಕೆ ಏರಲು ಅವರಲ್ಲಿದ್ದ ಮನೋಸ್ಥೈರ್ಯವೇ ಕಾರಣ.

ಧೈರ್ಯಂ ಸರ್ವತ್ರ ಸಾಧನಂ

8. ಗೈಡ್ ಮಿತವ್ಯಯಿಯಾಗಿರುವಳು – A guide is Thrifty :

ಗೈಡ್ ಆದವಳು ಮಾತು, ಸಮಯ, ಹಣ, ಆಹಾರ, ವಿದ್ಯುತ್, ನೀರು, ನೈಸರ್ಗಿಕ ಮತ್ತು ಮಾನವ ನಿರ್ಮಿತ ಸಂಪನ್ಮೂಲಗಳನ್ನೂ ತನ್ನ ಶರೀರ ಹಾಗೂ ಬುದ್ಧಿಶಕ್ತಿಯನ್ನೂ ಮಿತವಾಗಿ ಬಳಸಬೇಕು. ಅಂದರೆ ಅವಶ್ಯಕತೆ ಇದ್ದಷ್ಟು ಮಾತ್ರ ಬಳಸಬೇಕು. ಇದರ ಅರ್ಥ ಜಿಪುಣತನವಲ್ಲ. ವಸ್ತುಗಳ ಮಿತ ಬಳಕೆಯಿಂದ ಹಣ ಉಳಿತಾಯವಾಗುವುದಲ್ಲದೆ ಮಾಲಿನ್ಯತೆಯನ್ನು ನಿಯಂತ್ರಿಸಬಹುದು. ನಮ್ಮ ಹಿರಿಯರಾದ ಗಾಂಧೀಜಿ, ಮದರ್ ಥೆರೇಸಾ, ಲಾಲ್ ಬಹದ್ದೂರ್ ಶಾಸ್ತ್ರಿ, ಡಾ॥ ರಾಧಾಕೃಷ್ಣನ್, ಡಾ ಅಬ್ದುಲ್ ಕಲಾಂ ಇವರೆಲ್ಲರೂ ಮಿತವ್ಯಯಕ್ಕೆ ನೇರ ಹಾಗೂ ಪ್ರತ್ಯಕ್ಷ ಉದಾಹರಣೆಯಾಗಿದ್ದಾರೆ.

ಮಿತ ಯಾವಾಗಲೂ ಹಿತ

9. ಗೈಡ್ ಕಾಯಾ ವಾಚಾ ಮನಸಾ ಪರಿಶುದ್ಧಳು - A guide is Pure in thought, word and deed :

ನಿಯಮದ ಈ ಅಂಶವು ಗೈಡ್‌ಗಳ ಜೀವನದ ಬುನಾದಿಯಾಗಿದೆ. ಈ ಅಂಶವು ನಿಮ್ಮನ್ನು ಉತ್ತಮರನ್ನಾಗಿ ಮಾಡುವುದಲ್ಲದೆ ಸಂಸ್ಥೆಯ ಘನತೆ ಗೌರವವನ್ನು ನಿಮ್ಮ ಮೂಲಕ ಉತ್ತುಂಗಕ್ಕೆ ಒಯ್ಯುತ್ತದೆ. ಕೆಲಸ, ಮಾತು ಮತ್ತು ಮನಸ್ಸನ್ನು ಸಮನ್ವಯಗೊಳಿಸುವುದು, ಶುದ್ಧವಾಗಿಟ್ಟುಕೊಳ್ಳುವುದೇ ತ್ರಿಕರಣ ಶುದ್ಧಿ. ಯಾವುದೇ ಕೆಲಸವಾಗಲಿ ಪರಿಶುದ್ಧ ಮನಸ್ಸಿನಿಂದ ಮಾಡಿ ಒಳ್ಳೆಯ ಮಾತನಾಡಿ.

ತ್ರಿಕರಣ ಶುದ್ಧಿಯೇ ಮಾನವೀಯತೆ

ನಂಬಿಕೆ, ನಿಷ್ಠೆ, ಸತ್ಕಾರ್ಯ, ಸೋದರೀ ಭಾವ, ವಿನಯ, ದಯಾರ್ದ್ರತೆ ವಿಧೇಯತೆ, ಮಂದಹಾಸ, ಮಿತವ್ಯಯತೆ, ಮನೋವಾಕ್‌ಕಾಯ ಪರಿಶುದ್ಧತೆಯು ಗೈಡಗಳಿಗೆ ಶೋಭಿಸುವ ಸುಸಂಪನ್ನ ನಿಯಮ.

2.4 ಗೈಡ್ : ಧ್ಯೇಯ–ಸಂಕೇತ– ವಂದನೆ– ಎಡಗೈ ಹಸ್ತಲಾಘವ

ಧ್ಯೇಯ (Aim) : ಗೈಡ್‌ಗಳ ಧ್ಯೇಯ "ಸದಾ ಸಿದ್ಧವಾಗಿರು". ಇದು ಗೈಡ್‌ಗಳನ್ನು ಮುನ್ನಡೆಸುವ ಆದರ್ಶಸೂತ್ರವಾಗಿದೆ. ಗೈಡ್ ಆದವಳು ಮನೋವಾಕ್ ಕಾಯ ಕರ್ತವ್ಯ ನಿರ್ವಹಿಸಲು, ಸೇವೆ ಮಾಡಲು ಸದಾ ಸಿದ್ಧಳಾಗಿರಬೇಕು.

ಕಾಯ ಸಿದ್ಧತೆ : ಚಲನವಲನದಲ್ಲಿ ಚುರುಕುತನ, ಆರೋಗ್ಯಕರ ಆಹಾರ ಸೇವನೆ, ಸ್ವಚ್ಛತೆ, ಶೌಚಗಳ ಸರಿಯಾದ ಅಭ್ಯಾಸಗಳಿಂದ ದೇಹವನ್ನು ಸದೃಢಗೊಳಿಸಿಕೊಳ್ಳುವುದು ಅಗತ್ಯ. ಶಿಸ್ತಿನ ಜೀವನದಿಂದ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು.

ವಾಚಾ ಸಿದ್ಧತೆ : ಎಂದರೆ ಸಮಯೋಚಿತವಾಗಿ ಸೂಕ್ತವಾದ ಕಲ್ಮಶರಹಿತವಾದ ಮಾತನ್ನಾಡುವುದು. ಅಪಾಯ ಉಂಟುಮಾಡುವ ಮಾತುಗಳನ್ನು ಆಡದಿರುವುದು. ಒಳ್ಳೆಯ ಮಾತಿನಿಂದ ಇತರರ ಆತಂಕ ದೂರ ಮಾಡುವುದು. ಈ ರೀತಿ ವಿನಯದಿಂದ ಕೂಡಿದ ಮನಮುಟ್ಟುವಂತೆ ಮಾತನಾಡುವ ಅಭ್ಯಾಸವೇ ವಾಚಾಸಿದ್ಧತೆ.

ಮನಸಾ ಸಿದ್ಧತೆ : ಜ್ಞಾನ ಸಂಪಾದನೆ, ಶಿಸ್ತುಸಂಯಮದಿಂದ ಕೂಡಿದ ವರ್ತನೆ, ಸೂಕ್ತ ಸಮಯೋಚಿತ ಚಿಂತನೆ, ನೈತಿಕ ಮೌಲ್ಯಗಳ ಪಾಲನೆಯ ಜೊತೆಗೆ ಧೈರ್ಯ ಮತ್ತು ನಾಯಕತ್ವ ವನ್ನು ಬೆಳೆಸಿಕೊಳ್ಳಬೇಕು.

ಸಂಕೇತ (Sign) : ಈ ಸಂಕೇತವು ಗೈಡ್‌ಗಳು ವಿಶ್ವದಾದ್ಯಂತ ವಂದಿಸುವ ಗೌರವ ಸೂಚಿಸುವ ಕ್ರಮವಾಗಿದೆ. ಇದರಿಂದ ಗೈಡ್‌ಗಳನ್ನು ಗುರುತಿಸಬಹುದು. ಗೈಡ್ ಸಂಕೇತ ಮಾಡಲು

ಬಲಗೈ ಹಸ್ತದ ಮಧ್ಯದ ಮೂರು ಬೆರಳನ್ನು ನೇರವಾಗಿ ಚಾಚಿ, ಕಿರುಬೆರಳಿನ ಮೇಲೆ ಹೆಬ್ಬೆರಳನ್ನಿಟ್ಟು ವೃತ್ತ ಮಾಡಿ ಬಲಗೈಯನ್ನು ಭುಜ ಮಟ್ಟಕ್ಕೆ ಚಿತ್ರದಲ್ಲಿರುವಂತೆ ಎತ್ತಬೇಕು. ನೇರ ಚಾಚಿದ ಮೂರು ಬೆರಳು ಪ್ರತಿಜ್ಞೆಯ ಮೂರು ಅಂಶಗಳನ್ನು ಪ್ರತಿನಿಧಿಸುತ್ತದೆ. ಬೆರಳಿನಿಂದ ಮಾಡಿದ ವೃತ್ತವು ಚಳವಳಿಯ ವಿಶ್ವವ್ಯಾಪ್ತಿಯನ್ನು, ನಾವೆಲ್ಲ ಸೋದರಿಯರು ಎಂದೂ ಮತ್ತು ವಿಶ್ವಕುಟುಂಬಕ್ಕೆ ಸೇರಿದವರು ಎಂದೂ ಸೂಚಿಸುತ್ತದೆ.

ಈ ಸಂಕೇತವನ್ನು ಪ್ರತಿಜ್ಞೆ ಮಾಡುವಾಗ ಬಳಸುತ್ತೇವೆ. ಸಮವಸ್ತ್ರ ಧರಿಸದೇ ಸಾಮಾನ್ಯ ಉಡುಪಿನಲ್ಲಿದ್ದಾಗ ಒಬ್ಬರನ್ನೊಬ್ಬರು ವಂದಿಸಲು ಬಳಸುತ್ತೇವೆ.

ವಂದನೆ (Salute) : ಸಂಕೇತದ ಹಸ್ತ ಮುದ್ರೆಯನ್ನು ಹಣೆಯವರೆಗೂ ಎತ್ತಿ ಬಲ ಹುಬ್ಬಿನ ಮೇಲ್ಭಾಗಕ್ಕೆ ಮಧ್ಯ ಬೆರಳನ್ನು ತಾಗಿಸಿದರೆ ವಂದನೆಯಾಗುತ್ತದೆ. ನಮ್ಮ ಸಂಸ್ಥೆಯ ಹಾಗೂ ಸ್ಕೌಟ್ ಮತ್ತು ಗೈಡ್ ವಿಶ್ವ ಸಂಸ್ಥೆಯ ಧ್ವಜಗಳಿಗೆ ಈ ರೀತಿ ವಂದಿಸುತ್ತೇವೆ. ಸಂಸ್ಥೆಯ ಸದಸ್ಯರನ್ನು ಭೇಟಿಯಾದಾಗ ಗೌರವ ಪೂರ್ವಕವಾಗಿ ಸ್ನೇಹ ಸೂಚಕವಾಗಿಯೂ ಹೀಗೆ ವಂದಿಸಲಾಗುವದು. ಇದು ಚಳವಳಿಯ ಒಂದು ವಿಶ್ವದ ಸಾಮಾನ್ಯ ಮುಖ್ಯ ಬಂಧಕ.

ಎಡಗೈ ಹಸ್ತಲಾಘವ : ಈ ಸಂಸ್ಥೆಯ ಎಲ್ಲಾ ಸದಸ್ಯರು ವಿಶ್ವದಾದ್ಯಂತ ಒಬ್ಬರನ್ನೊಬ್ಬರು ಭೇಟಿಯಾದಾಗ ಸ್ನೇಹಪೂರ್ವಕವಾಗಿ ಮಂದಸ್ಮಿತರಾಗಿ ವಂದಿಸುತ್ತಾ ಎಡಗೈ ಚಾಚಿ ಹಸ್ತಲಾಘವ ಮಾಡುತ್ತೇವೆ. ಇದೊಂದು ಅಪೂರ್ವ ವಿಶ್ವ–ಸ್ಕೌಟ್–ಗೈಡ್‌ಗಳ ಸಾಮಾನ್ಯ ಬಂಧಕ.

1985ರಲ್ಲಿ ಬಿ.ಪಿ.ಯವರು ದಕ್ಷಿಣ ಆಫ್ರಿಕಾದ **"ಗುಡ್ಡಗಾಡಿನ ಅಶಾಂತಿ"** ಜನಾಂಗದೊಂದಿಗೆ ಯುದ್ಧ ಮಾಡಬೇಕಾದ ಸಂದರ್ಭ ಒದಗಿಬಂದಿತ್ತು. ಯುದ್ಧ ಚತುರರಾದ ಬಿ.ಪಿ.ಯವರು ಮೊದಲಿಗೆ ಶತ್ರುಗಳ ಬಲಾಬಲಗಳನ್ನು ಅಂದಾಜು ಮಾಡಿದರು. ಗುಡ್ಡಗಾಡಿನ ಯುದ್ಧ ಕೌಶಲಗಳನ್ನು ಎದುರಿಸುವುದು ಸುಲಭ ಸಾಧ್ಯವಲ್ಲವೆಂದು ಮನವರಿಕೆಯಾಯಿತು. ಬಿ.ಪಿ.ಯವರು ಚಾತುರ್ಯದಿಂದಲೇ ಅವರನ್ನು ವಶಪಡಿಸಿಕೊಂಡರು. ಅವರ ನಾಯಕನಾದ **ಪ್ರೆಂಫೆ** (Premphe)

ತ್ರಿಕರಣ ಶುದ್ಧಿಯೇ ಮಾನವೀಯತೆ

ನಂಬಿಕೆ, ನಿಷ್ಠೆ, ಸತ್ಕಾರ್ಯ, ಸೋದರೀ ಭಾವ, ವಿನಯ, ದಯಾರ್ದ್ರತೆ ವಿಧೇಯತೆ, ಮಂದಹಾಸ, ಮಿತವ್ಯಯತೆ, ಮನೋವಾಕ್ಕಾಯ ಪರಿಶುದ್ಧತೆಯು ಗೈಡಗಳಿಗೆ ಶೋಭಿಸುವ ಸುಸಂಪನ್ನ ನಿಯಮ.

2.4 ಗೈಡ್ : ಧ್ಯೇಯ–ಸಂಕೇತ– ವಂದನೆ– ಎಡಗೈ ಹಸ್ತಲಾಘವ

ಧ್ಯೇಯ (Aim) : ಗೈಡ್‌ಗಳ ಧ್ಯೇಯ "ಸದಾ ಸಿದ್ಧವಾಗಿರು". ಇದು ಗೈಡ್‌ಗಳನ್ನು ಮುನ್ನಡೆಸುವ ಆದರ್ಶಸೂತ್ರವಾಗಿದೆ. ಗೈಡ್ ಆದವಳು ಮನೋವಾಕ್ ಕಾಯ ಕರ್ತವ್ಯ ನಿರ್ವಹಿಸಲು, ಸೇವೆ ಮಾಡಲು ಸದಾ ಸಿದ್ಧಳಾಗಿರಬೇಕು.

ಕಾಯ ಸಿದ್ಧತೆ : ಚಲನವಲನದಲ್ಲಿ ಚುರುಕುತನ, ಆರೋಗ್ಯಕರ ಆಹಾರ ಸೇವನೆ, ಸ್ವಚ್ಛತೆ, ಶೌಚಗಳ ಸರಿಯಾದ ಅಭ್ಯಾಸಗಳಿಂದ ದೇಹವನ್ನು ಸದೃಢಗೊಳಿಸಿಕೊಳ್ಳುವುದು ಅಗತ್ಯ. ಶಿಸ್ತಿನ ಜೀವನದಿಂದ ದೈಹಿಕ ಸಾಮರ್ಥ್ಯವನ್ನು ಹೆಚ್ಚಿಸಿಕೊಳ್ಳಬೇಕು.

ವಾಚಾ ಸಿದ್ಧತೆ : ಎಂದರೆ ಸಮಯೋಚಿತವಾಗಿ ಸೂಕ್ತವಾದ ಕಲ್ಮಶರಹಿತವಾದ ಮಾತನ್ನಾಡುವುದು. ಅಪಾಯ ಉಂಟುಮಾಡುವ ಮಾತುಗಳನ್ನು ಆಡದಿರುವುದು. ಒಳ್ಳೆಯ ಮಾತಿನಿಂದ ಇತರರ ಆತಂಕ ದೂರ ಮಾಡುವುದು. ಈ ರೀತಿ ವಿನಯದಿಂದ ಕೂಡಿದ ಮನಮುಟ್ಟುವಂತೆ ಮಾತನಾಡುವ ಅಭ್ಯಾಸವೇ ವಾಚಾಸಿದ್ಧತೆ.

ಮನಸಾ ಸಿದ್ಧತೆ : ಜ್ಞಾನ ಸಂಪಾದನೆ, ಶಿಸ್ತುಸಂಯಮದಿಂದ ಕೂಡಿದ ವರ್ತನೆ, ಸೂಕ್ತ ಸಮಯೋಚಿತ ಚಿಂತನೆ, ನೈತಿಕ ಮೌಲ್ಯಗಳ ಪಾಲನೆಯ ಜೊತೆಗೆ ಧೈರ್ಯ ಮತ್ತು ನಾಯಕತ್ವ ವನ್ನು ಬೆಳೆಸಿಕೊಳ್ಳಬೇಕು.

ಸಂಕೇತ (Sign) : ಈ ಸಂಕೇತವು ಗೈಡ್‌ಗಳು ವಿಶ್ವದಾದ್ಯಂತ ವಂದಿಸುವ ಗೌರವ ಸೂಚಿಸುವ ಕ್ರಮವಾಗಿದೆ. ಇದರಿಂದ ಗೈಡ್‌ಗಳನ್ನು ಗುರುತಿಸಬಹುದು. ಗೈಡ್ ಸಂಕೇತ ಮಾಡಲು

ಬಲಗೈ ಹಸ್ತದ ಮಧ್ಯದ ಮೂರು ಬೆರಳನ್ನು ನೇರವಾಗಿ ಚಾಚಿ, ಕಿರುಬೆರಳಿನ ಮೇಲೆ ಹೆಬ್ಬೆರಳನ್ನಿಟ್ಟು ವೃತ್ತ ಮಾಡಿ ಬಲಗೈಯನ್ನು ಭುಜ ಮಟ್ಟಕ್ಕೆ ಚಿತ್ರದಲ್ಲಿರುವಂತೆ ಎತ್ತಬೇಕು. ನೇರ ಚಾಚಿದ ಮೂರು ಬೆರಳು ಪ್ರತಿಜ್ಞೆಯ ಮೂರು ಅಂಶಗಳನ್ನು ಪ್ರತಿನಿಧಿಸುತ್ತದೆ. ಬೆರಳಿನಿಂದ ಮಾಡಿದ ವೃತ್ತವು ಚಳವಳಿಯು ವಿಶ್ವವ್ಯಾಪ್ತಿಯನ್ನು, ನಾವೆಲ್ಲ ಸೋದರಿಯರು ಎಂದೂ ಮತ್ತು ವಿಶ್ವಕುಟುಂಬಕ್ಕೆ ಸೇರಿದವರು ಎಂದೂ ಸೂಚಿಸುತ್ತದೆ.

ಈ ಸಂಕೇತವನ್ನು ಪ್ರತಿಜ್ಞೆ ಮಾಡುವಾಗ ಬಳಸುತ್ತೇವೆ. ಸಮವಸ್ತ್ರ ಧರಿಸದೇ ಸಾಮಾನ್ಯ ಉಡುಪಿನಲ್ಲಿದ್ದಾಗ ಒಬ್ಬರನ್ನೊಬ್ಬರು ವಂದಿಸಲು ಬಳಸುತ್ತೇವೆ.

ವಂದನೆ (Salute) : ಸಂಕೇತದ ಹಸ್ತ ಮುದ್ರೆಯನ್ನು ಹಣೆಯವರೆಗೂ ಎತ್ತಿ ಬಲ ಹುಬ್ಬಿನ ಮೇಲ್ಭಾಗಕ್ಕೆ ಮಧ್ಯ ಬೆರಳನ್ನು ತಾಗಿಸಿದರೆ ವಂದನೆಯಾಗುತ್ತದೆ. ನಮ್ಮ ಸಂಸ್ಥೆಯ ಹಾಗೂ ಸ್ಕೌಟ್ ಮತ್ತು ಗೈಡ್ ವಿಶ್ವ ಸಂಸ್ಥೆಯ ಧ್ವಜಗಳಿಗೆ ಈ ರೀತಿ ವಂದಿಸುತ್ತೇವೆ. ಸಂಸ್ಥೆಯ ಸದಸ್ಯರನ್ನು ಭೇಟಿಯಾದಾಗ ಗೌರವ ಪೂರ್ವಕವಾಗಿ ಸ್ನೇಹ ಸೂಚಕವಾಗಿಯೂ ಹೀಗೆ ವಂದಿಸಲಾಗುವದು. ಇದು ಚಳವಳಿಯ ಒಂದು ವಿಶ್ವದ ಸಾಮಾನ್ಯ ಮುಖ್ಯ ಬಂಧಕ.

ಎಡಗೈ ಹಸ್ತಲಾಘವ : ಈ ಸಂಸ್ಥೆಯ ಎಲ್ಲಾ ಸದಸ್ಯರು ವಿಶ್ವದಾದ್ಯಂತ ಒಬ್ಬರನ್ನೊಬ್ಬರು ಭೇಟಿಯಾದಾಗ ಸ್ನೇಹಪೂರ್ವಕವಾಗಿ ಮಂದಸ್ಮಿತರಾಗಿ ವಂದಿಸುತ್ತಾ ಎಡಗೈ ಚಾಚಿ ಹಸ್ತಲಾಘವ ಮಾಡುತ್ತೇವೆ. ಇದೊಂದು ಅಪೂರ್ವ ವಿಶ್ವ-ಸ್ಕೌಟ್-ಗೈಡ್‌ಗಳ ಸಾಮಾನ್ಯ ಬಂಧಕ.

1985ರಲ್ಲಿ ಬಿ.ಪಿ.ಯವರು ದಕ್ಷಿಣ ಆಫ್ರಿಕಾದ **"ಗುಡ್ಡಗಾಡಿನ ಅಶಾಂತಿ"** ಜನಾಂಗದೊಂದಿಗೆ ಯುದ್ಧ ಮಾಡಬೇಕಾದ ಸಂದರ್ಭ ಒದಗಿಬಂದಿತ್ತು. ಯುದ್ಧ ಚತುರರಾದ ಬಿ.ಪಿ.ಯವರು ಮೊದಲಿಗೆ ಶತ್ರುಗಳ ಬಲಾಬಲಗಳನ್ನು ಅಂದಾಜು ಮಾಡಿದರು. ಗುಡ್ಡಗಾಡಿನ ಯುದ್ಧ ಕೌಶಲಗಳನ್ನು ಎದುರಿಸುವುದು ಸುಲಭ ಸಾಧ್ಯವಲ್ಲವೆಂದು ಮನವರಿಕೆಯಾಯಿತು. ಬಿ.ಪಿ.ಯವರು ಚಾತುರ್ಯದಿಂದಲೇ ಅವರನ್ನು ವಶಪಡಿಸಿಕೊಂಡರು. ಅವರ ನಾಯಕನಾದ **ಪ್ರೆಂಫೆ** (Premphe)

ಬಿ.ಪಿ.ಯವರಿಗೆ ಸಂತಸದಿಂದ ಎಡಗೈ ನೀಡಿ ಹಸ್ತಲಾಘವ ಮಾಡಿದನು. ಇದು **"ವೀರರಲ್ಲಿ ವೀರರಿಗೆ ನೀಡುವ ಸನ್ಮಾನ"**ವೆಂದು ಹಾಗೂ ಶಸ್ತ್ರಾಸ್ತ್ರಮುಕ್ತ ಎಡಗೈ, **"ಸ್ನೇಹಸೂಚಕ ನಂಬಿಕೆಯ ಹಸ್ತವೆಂದು"** ನಾಯಕನು ಬಿ.ಪಿ.ಯವರಿಗೆ ತಿಳಿಸಿದನು. ಈ ರೀತಿಯ ಹಸ್ತಲಾಘವ ಬಿ.ಪಿ.ಯವರಿಗೆ ಮೆಚ್ಚಿಗೆಯಾಯಿತು. ಮುಂದೆ ಸ್ಕೌಟಿಂಗ್ ಚಳವಳಿಯನ್ನು ಬಾಲಕರಿಗಾಗಿ ರೂಪಿಸಿದಾಗ ಬಾಲಕರನ್ನು / ಬಾಲಕಿಯರನ್ನು 'ವೀರರಲ್ಲಿವೀರ'ರೆಂದು ಪರಿಗಣಿಸಿ ಎಡಗೈ ಹಸ್ತಲಾಘವವನ್ನು ವಿಶಿಷ್ಠತೆಯಾಗಿ ಈ ಚಳವಳಿಯಲ್ಲಿ ಅಳವಡಿಸಿದರು.

2.5 ಸತ್ಕಾರ್ಯ - Good Turn

ಸತ್ಕಾರ್ಯ ಎಂದರೆ ಒಳ್ಳೆಯ ಕೆಲಸ. ಪ್ರತಿಯೊಬ್ಬ ಗೈಡ್ ದಿನಕ್ಕೊಂದು ಒಳ್ಳೆಯ ಕೆಲಸವನ್ನು ಮಾಡಬೇಕು. ಒಳ್ಳೆಯ ಕೆಲಸವೆಂದರೆ ಇತರರಿಗೆ ಸಹಾಯ ಮಾಡುತ್ತೇನೆ ಎಂದು ಪ್ರತಿಯೊಬ್ಬರೂ ಪ್ರತಿಜ್ಞೆ ಮಾಡುತ್ತೇವೆ. ಪ್ರತಿಜ್ಞೆ ಮಾಡಿದ ನಂತರ ನಾಯಕಿಯು ನಿಮಗೆ, "ನೀನು ಪ್ರತಿದಿನ ಒಂದು ಸತ್ಕಾರ್ಯ ಮಾಡುತ್ತೀಯ", ಎಂದು ನಂಬುತ್ತೇನೆ ಎಂದು ಹೇಳಿ ಅಭಿನಂದಿಸುತ್ತಾ ಪದಕ ಪ್ರದಾನ ಮಾಡುತ್ತಾರೆ. ಸತ್ಕಾರ್ಯವನ್ನು ನಿಸ್ವಾರ್ಥವಾಗಿ ಪ್ರತಿಫಲಾಪೇಕ್ಷೆ ಇಲ್ಲದೆ ಮಾಡಬೇಕು. ಗೈಡ್ ಆದವಳು ಈ ಅವಕಾಶಕ್ಕಾಗಿ ಕಾಯುತ್ತಿರಬೇಕು. ಅವಕಾಶ ಸಿಕ್ಕಾಗ ಮಾಡಲು ಸದಾ ಸಿದ್ಧಳಾಗಿರಬೇಕು. ಸತ್ಕಾರ್ಯವು ಮನೆಯಲ್ಲಿ ಮಾಡುವ ಸಹಾಯ, ಅಶಕ್ತರಿಗೆ ರಸ್ತೆ ದಾಟಿಸುವ ಸಹಾಯ, ಅಪರಿಚಿತರಿಗೆ ಮಾರ್ಗ ತೋರಿಸುವ ಸರಳ ಸಹಾಯವಾಗಿರ –ಬಹುದು ಅಥವಾ ದೊಡ್ಡ ಪ್ರಮಾಣದಲ್ಲಿ ಅಪಘಾತವಾದಾಗ ಮಾಡುವ ಪ್ರಥಮ ಚಿಕಿತ್ಸೆಯಾಗಿರಬಹುದು, ಸಂತ್ರಸ್ತರಿಗೆ ಸಹಾಯವಾಗಿರಬಹುದು. ಸತ್ಕಾರ್ಯವನ್ನು ದಿನವೂ ಮಾಡಲು ಪ್ರಯತ್ನಿಸಿ ದಿನಚರಿಯನ್ನು ಬರೆಯಬೇಕು. ದಿನಚರಿಯಲ್ಲಿ ದಿನಾಂಕ, ಸ್ಥಳದ ಹೆಸರು ಮಾಡಿದ ಕಾರ್ಯದ ಸಂಕ್ಷಿಪ್ತ ಮಾಹಿತಿಯನ್ನು ಬರೆಯಬೇಕು. ಈ ಸೇವೆಯನ್ನು ಮುಂದುವರಿಸುತ್ತಾ ಸಮಾಜಸೇವೆ, ಸಮುದಾಯ ಸೇವೆ, ಸಮುದಾಯ ಅಭಿವೃದ್ಧಿ ಸೇವೆಗಳಲ್ಲಿ ಗೈಡ್‌ಗಳನ್ನು ತೊಡಗಿಸಲಾಗುವುದು.

2.6 ಗೈಡ್ ಸಮವಸ್ತ್ರ

ನಮ್ಮ ಸಂಸ್ಥೆಯು ವಿಶ್ವದಲ್ಲಿ ಸಮವಸ್ತ್ರವನ್ನು ಧರಿಸುವ ಅತಿದೊಡ್ಡ ಸ್ವಯಂಸೇವಕ ಯುವಸಂಸ್ಥೆಯಾಗಿದೆ. ಗೈಡ್‌ಗಳು ಗು.ನೀ.ನಿ.ಸಂ ಭಾಗ–III (APRO-III)ರಲ್ಲಿ ಕಾಣಿಸಿರುವಂತೆ ಸಮವಸ್ತ್ರವನ್ನು ಧರಿಸಬೇಕು. ನಮ್ಮ ಸಂಘಟನೆಯನ್ನು ನಮ್ಮದೇ ಆದ ಮಾದರಿಯ ಸಮವಸ್ತ್ರದಿಂದ ಗುರುತಿಸಿಕೊಳ್ಳುತ್ತೇವೆ.

ಸಮವಸ್ತ್ರದಿಂದ ಕೆಲವು ಅನುಕೂಲತೆಗಳಿವೆ. ಸಮವಸ್ತ್ರವು ಗುಂಪನ್ನು ಪ್ರಕಟಿಸುತ್ತದೆ ನಾವೆಲ್ಲಾ ಒಂದೇ ಎಂಬ ಭಾವನೆ ಮೂಡಿಸುತ್ತದೆ. ಕೆಲಸ ಮಾಡಲು ಅನುಕೂಲಕರವಾಗಿರುತ್ತದೆ. ವಿನ್ಯಾಸವು (Pattern) ಆರೋಗ್ಯಕರವಾಗಿರುತ್ತದೆ. ಅಚ್ಚುಕಟ್ಟಾಗಿ ಸಮವಸ್ತ್ರವನ್ನು ಧರಿಸಿದರೆ ನೋಡಲು ಬಲು ಅಂದವಾಗಿ ಕಾಣುವೆವು.

ಕಡ್ಡಾಯ ಸಮವಸ್ತ್ರ

ಸಮವಸ್ತ್ರದಲ್ಲಿ ಮೂರು ವಿಧದ ಉಡುಪಿನ ವಿನ್ಯಾಸಗಳಿವೆ. ಇದರಲ್ಲಿ ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು. ಆದರೆ ಈ ಆಯ್ಕೆ ನಿಮ್ಮ ದಳದ ಆಯ್ಕೆಯಾಗಿರಬೇಕು.



ಚಿತ್ರ 1. – ಗಿಡ್ಡಲಂಗ (Frock, Overall) – ಕಡು ಆಕಾಶನೀಲಿ ಬಣ್ಣ.

ಚಿತ್ರ 2. – ಅ) ಸೆಲ್ವಾರ್ – ಕಡು ಆಕಾಶನೀಲಿ ಬಣ್ಣ.

ಆ) ಕಮೀಜ್ – ತಿಳಿ ಆಕಾಶನೀಲಿ ಬಣ್ಣ.

ಇ) ದುಪ್ಪಟ್ಟ – ಕಡು ಆಕಾಶನೀಲಿ ಬಣ್ಣ.

ಚಿತ್ರ 3. – ಅ) ಮಿಡಿ – ಕಡು ಆಕಾಶನೀಲಿ ಬಣ್ಣ.

ಆ) ಬ್ಲೌಸ್ – ಬಿಳಿ ಬಣ್ಣ.

ಇವೆಲ್ಲವನ್ನು ಅಪಾರದರ್ಶಕವಲ್ಲದ ಬಟ್ಟೆಯಲ್ಲಿ ಹೊಲಿಸಬೇಕು ಕಮೀಜ್ ಮೊಣಕಾಲಿಗಿಂತ 4 ಸೆಂ.ಮಿ. ಕೆಳಗಿರಬೇಕು. ಮಿಡಿ ಮೊಣಕಾಲು ಮತ್ತು ಪಾದಗಳ ಮಧ್ಯದವರೆಗೆ ಇರಬೇಕು.

ಉಡುಪಿನ ಮೇಲ್ಭಾಗದ ಸಾಮಾನ್ಯ ಮಾದರಿ ಕುಪ್ಪಸ, ಕಮೀಜ್, ಒವರ್ಆಲ್, (ಫ್ರಾಕ್)

ತೋಳು : ಎಲ್ಲಾ ಉಡುಪಿನ ತೋಳುಗಳು ಮೊಳಕೈಯಿಂದ 8 ಸೆಂ.ಮೀ. ಮೇಲಕ್ಕೆ ಇರಬೇಕು. ಅಂಚನ್ನು 4 ಸೆಂ.ಮೀ ಮೇಲಕ್ಕೆ ಮಡಚಿ ಹೊಲಿದಿರಬೇಕು

ಕತ್ತುಪಟ್ಟಿ : ತೆರೆದ ಕ್ರೀಡಾ ಕೊರಳುಪಟ್ಟಿಯಾಗಿರಬೇಕು. (Open sports collar)

ಭುಜಪಟ್ಟಿ : ಎರಡು ಭುಜಪಟ್ಟಿ ಇರಬೇಕು.

ಜೇಬುಗಳು : ಮುಚ್ಚಿಕೆಯುಳ್ಳ ಎರಡು ಮೇಲು ಜೇಬು ಇರಬೇಕು ಗಿಡ್ಡಲಂಗ – ಕಮೀಜ್‌ನ ಕೆಳಭಾಗದಲ್ಲಿ ಮತ್ತು ಮಿಡಿಯ ಪಕ್ಕಗಳಲ್ಲಿ ಎರಡು ಪಾರ್ಶ್ವ ಜೇಬುಗಳು (Side Pockets) ಇರಬೇಕು.

ಕಂಠವಸ್ತ್ರ (Scarf) : ದಳವು ಗೊತ್ತುಪಡಿಸಿದ ಸ್ಥಳೀಯ ಸಂಸ್ಥೆ ಅನುಮೋದಿಸಿದ ಬಣ್ಣವನ್ನೇ ಧರಿಸಬೇಕು. ಇದು ತ್ರಿಕೋನ ಆಕಾರದಲ್ಲಿ ಇರಬೇಕು. ಇದರ ಎರಡೂ ಪಾರ್ಶ್ವಗಳು 70 ರಿಂದ 80 ಸೆಂ.ಮೀ, ತಳಭಾಗ 120 ಸೆಂ.ಮೀ. ಇರಬೇಕು.

ಕಂಠವಸ್ತ್ರವನ್ನು ಸುತ್ತಿ, ಕೊರಳ ಪಟ್ಟಿಯ ಸುತ್ತಲೂ ತಂದು ಎರಡು ಸುರಳಿಗಳನ್ನು ಕವುಂಗರದ (Woggle-ಕಂಠವಸ್ತ್ರದ ಉಂಗುರ) ಮೂಲಕ ಹಾಯಿಸಿ ಅಂದಗೊಳಿಸಬೆಕು.

ಸೊಂಟಪಟ್ಟಿ : ಸಂಸ್ಥೆಯ ಲಾಂಛನವಿರುವ ಜೋಡಕವನ್ನು (Buckle) ಹೊಂದಿರುವ ಕಂದುಬಣ್ಣದ ನೈಲಾನ್ ಪಟ್ಟಿಯನ್ನು ಸೊಂಟದ ಪಟ್ಟಿಯಾಗಿ ಧರಿಸಬೇಕು.

ಕೇಶಾಲಂಕಾರ : ಕಪ್ಪು ಬಣ್ಣದ ರಿಬ್ಬನ್ ಅಥವಾ ಕೇಶ ಬಂಧಕ (Hair Band) ಉಪಯೋಗಿಸಿ ಕೂದಲನ್ನು ಅಚ್ಚುಕಟ್ಟಾಗಿ ಬಂಧಿಸಬೇಕು.

ಕಾಲುಚೀಲ : ಬಿಳಿಯ ಬಣ್ಣದ ಕಾಲು ಚೀಲವನ್ನು ಧರಿಸಬೇಕು.

ಪಾದರಕ್ಷೆ : ಕರಿಯ ಬಣ್ಣದ ಚರ್ಮದ ಮುಚ್ಚಿದ ಬೂಟನ್ನು ಧರಿಸಬೇಕು.

ಸದಸ್ಯತ್ವ ಪದಕ : ಹಸಿರು ವಸ್ತ್ರಪಟ್ಟಿಯ ಮೇಲೆ ಭಾರತ ಸ್ಕೌಟ್ ಮತ್ತು ಗೈಡ್ ಲಾಂಛನವನ್ನು ಹಳದಿ ಬಣ್ಣದಲ್ಲಿ ಮೂಡಿಸಲಾಗಿರುತ್ತದೆ. ಇದನ್ನು ಸಮವಸ್ತ್ರದ

ಎಡತೋಳಿನ ಮಧ್ಯಭಾಗದಲ್ಲಿ ಧರಿಸಬೇಕು. ಈ ಸಂಸ್ಥೆಯ ಎಲ್ಲಾ ಸದಸ್ಯರು ಸದಸ್ಯತ್ವ ಪದಕವನ್ನು ಕಡ್ಡಾಯವಾಗಿ ಧರಿಸಬೆಕು.

ಭುಜ ಪದಕ : 6 ರಿಂದ 8 ಸೆಂ. ಮೀ. ಉದ್ದ ಹಾಗೂ 1½ ಸೆಂಮೀ. ಅಗಲದ ಬಿಳೀಪಟ್ಟಿಯ ಮೇಲೆ ಕೆಂಪುಬಣ್ಣದಲ್ಲಿ ಗುಂಪಿನ ಹೆಸರು ಮತ್ತು ಸಂಖ್ಯೆಯನ್ನು ಹೊಂದಿರಬೇಕು. ಭುಜಪಟ್ಟಿಯ ಕೆಳಗೆ ಇದನ್ನು ಧರಿಸಬೇಕು.

ಪಟಾಲಂ ಲಾಂಛನ : ಕಪ್ಪುಬಟ್ಟೆಯ 4 ಸೆಂ. ಮೀ ವ್ಯಾಸದ ವೃತ್ತದ ಅಂಚನ್ನು ಹಸಿರುಬಣ್ಣದ ದಾರದಲ್ಲಿ ಕಸೂತಿ ಮಾಡಬೇಕು. ಮಧ್ಯೆ ನೀವು ಆಯ್ಕೆ ಮಾಡಿದ ಹೂವನ್ನು ಕಸೂತಿ ಮಾಡಿ ಇದನ್ನು ಎಡಭಾಗದ ಮೇಲು ಜೇಬಿನ ಮುಚ್ಚಿಕೆಯ ಮೇಲೆ ಧರಿಸಬೇಕು.

ಉಣ್ಣೆ ಮೇಲಂಗಿ (Cardigan): ಸಾದಾ ಕಪ್ಪುಬಣ್ಣದ ಸ್ವೆಟರ್ ಧರಿಸುವುದು. ಕಾಲಕ್ಕೆ ಅನುಗುಣವಾಗಿ ಅರೆತೋಳಿನ ಉಣ್ಣೆ ಅಂಗಿಯನ್ನೂ ಧರಿಸಬಹುದು.

ಡವಾಲಿ (Sash) : ಕಡುನೀಲಿ ಬಣ್ಣದ ದುಪ್ಪಟ ಮಾದರಿಯ ಒಂದು ಪದರದ 10 ಸೆಂ.ಮೀ. ಅಗಲದ ಪಟ್ಟಿಯನ್ನು ಎಡದಿಂದ ಬಲಕ್ಕೆ ಧರಿಸಬೇಕು. ಇದರ ಮೇಲೆ ಪ್ರಾವೀಣ್ಯತಾ ಪದಕಗಳನ್ನು ಗಳಿಸುತ್ತಾ ಹೋದಂತೆ ಏರುಕ್ರಮದಲ್ಲಿ ಅಂದವಾಗಿ ಹೊಲೆದುಕೊಳ್ಳಬೇಕು.

ಐಚ್ಛಿಕ ಸಮವಸ್ತ್ರ :

1. **ಶಿಬಿರ ಸಮವಸ್ತ್ರ** : ಸೆಲ್ವಾರ್ ಕಮೀಜ್ ಮತ್ತು ದುಪ್ಪಟ್ಟ ಎಲ್ಲವನ್ನು ಕಡು ನೀಲಿ ಬಣ್ಣದ ಅಪಾರದರ್ಶಕವಲ್ಲದ ವಸ್ತ್ರದಿಂದ ಹೊಲಿಸಬಹುದು. ಇದನ್ನು ಶಿಬಿರದಲ್ಲಿ ಕೆಲಸ ಮಾಡುವಾಗ ಧರಿಸಬಹುದು. ಆದರೆ ಸಮಾರಂಭಗಳಲ್ಲಿ ಧರಿಸಬಾರದು.

2. **ಹೊರ ಸಂಚಾರದ ಸಮವಸ್ತ್ರ** : ಕಡುನೀಲಿ ಜೀನ್ಸ್‌ಪ್ಯಾಂಟ್, ರಾಷ್ಟ್ರ ಪ್ರಧಾನ ಕಚೇರಿ ಸರಬರಾಜು ಮಾಡಿದ ಟಿ' ಷರ್ಟ್ ಹಾಗೂ ಪಿ' ಟೋಪಿಯನ್ನು ಧರಿಸಬಹುದು.

ಕಪ್ಪುಸಂಚಿ – Black Pouch : ಇದನ್ನು ವಿಧಿಬದ್ಧ ಸಮಾರಂಭಗಳನ್ನು (Ceremonials) ಹೊರತುಪಡಿಸಿ ಉಳಿದಂತೆ ಸೊಂಟದ ಪಟ್ಟಿಗೆ ಕಟ್ಟಿಕೊಳ್ಳಬಹುದು.

ಲೋಹದ ಪದಕ : ಸಮವಸ್ತ್ರ ಧರಿಸದೆ ಇದ್ದಾಗ ಭಾರತ್ ಸ್ಕೌಟ್-ಗೈಡ್ ಲಾಂಛನವನ್ನು ಹೊಂದಿರುವ ಲೋಹದ ಪದಕವನ್ನು ದಿನನಿತ್ಯದ ಉಡುಪಿನ ಮೇಲೆ ಧರಿಸಬಹುದು.

ಸೀಟಿ ಮತ್ತು ಅದರ ಸೂತ್ರ – Lanyard : ಬಿಳಿಯಬಣ್ಣದ ಸೂತ್ರಕ್ಕೆ ಸೀಟಿ ಬಂಧಿಸಿ ಕತ್ತಿನ ಸುತ್ತಲೂ ಧರಿಸಬೇಕು.

2.7 ಧ್ವಜಗಳು

ಸಾಮಾನ್ಯವಾಗಿ ಪ್ರತಿಯೊಂದು ರಾಷ್ಟ್ರ, ಸಂಘಸಂಸ್ಥೆಗಳು ಮತ್ತು ಚಳವಳಿಗಳು ತಮ್ಮ ಆಶೋತ್ತರವನ್ನು ಪ್ರತಿಬಿಂಬಿಸುವಂತಹ ಧ್ವಜವನ್ನು ಹೊಂದಿರುತ್ತದೆ. ಆಯಾ ಧ್ವಜದ ಅಡಿಯಲ್ಲಿ ಅದರ ಸದಸ್ಯರು ಸೇರುತ್ತಾರೆ ಮತ್ತು ಅದನ್ನು ಗೌರವಿಸುತ್ತಾರೆ. ಧ್ವಜವು ಒಗ್ಗಟ್ಟಿನ ಸಂಕೇತವಾಗಿರುತ್ತದೆ. ಈ ಕೆಳಗೆ ನೀವು ಬಳಸಬೇಕಾದ ಧ್ವಜಗಳ ಬಗ್ಗೆ ತಿಳಿದುಕೊಳ್ಳುವಿರಿ.



ರಾಷ್ಟ್ರ ಧ್ವಜ

ರಾಷ್ಟ್ರ ಲಾಂಛನ

(i) ರಾಷ್ಟ್ರ ಧ್ವಜ : ನಮ್ಮ ರಾಷ್ಟ್ರಧ್ವಜವು ಅನುಕ್ರಮವಾಗಿ ಕೇಸರಿ, ಬಿಳಿ ಮತ್ತು ಹಸಿರು ಬಣ್ಣಗಳ ಸಮಾನ ಅಗಲದ 3 ಆಯತ ಪಟ್ಟಿಯನ್ನು ಹೊಂದಿರುವ ತ್ರಿವರ್ಣ ಧ್ವಜವಾಗಿದೆ. ಧ್ವಜದ ಉದ್ದ, ಅಗಲ 2:3 ಪ್ರಮಾಣದಲ್ಲಿರುತ್ತದೆ.

ಕೇಸರಿಬಣ್ಣ : ತ್ಯಾಗ, ಶೌರ್ಯ, ಧೈರ್ಯ, ಸಹನೆ ಮತ್ತು ಶಿಸ್ತನ್ನು ಸೂಚಿಸುತ್ತದೆ.

ಬಿಳಿಬಣ್ಣ : ಶಾಂತಿ ಮತ್ತು ಸತ್ಯಶೀಲತೆಯನ್ನು ಸೂಚಿಸುತ್ತದೆ.

ಹಸಿರುಬಣ್ಣ : ಪ್ರಗತಿ, ನೈಸರ್ಗಿಕ ಸಂಪತ್ತು, ಪ್ರಧಾನ ಕಸುಬು ಕೃಷಿಯನ್ನು ಸೂಚಿಸುತ್ತದೆ.

ರಾಷ್ಟ್ರಲಾಂಛನ

ನಮ್ಮ ದೇಶದ ರಾಷ್ಟ್ರೀಯ ಲಾಂಛನವು ವೃತ್ತಾಕಾರದಲ್ಲಿದ್ದು ನಾಲ್ಕು ಸಿಂಹಗಳು, ನೆಗೆಯುತ್ತಿರುವ ಕುದುರೆ, ಗೂಳಿ, ಆನೆ, ಸಿಂಹಗಳಿವೆ. ಮಧ್ಯದಲ್ಲಿ

ಚಕ್ರವಿದೆ. ಕೆಳಗಡೆ "ಸತ್ಯಮೇವ ಜಯತೇ" ಎಂಬ ವಾಕ್ಯವನ್ನು ದೇವನಾಗರಿ ಲಿಪಿಯಲ್ಲಿ ಬರೆಯಲಾಗಿದೆ. ಈ ಚಿಹ್ನೆಯನ್ನು ಸಾರನಾಥದಲ್ಲಿರುವ ಅಶೋಕನ ಸ್ತೂಪದಿಂದ ತೆಗೆದುಕೊಳ್ಳಲಾಗಿದೆ. ನಮ್ಮ ರಾಷ್ಟ್ರವು ಜನವರಿ 26, 1950ರಲ್ಲಿ ರಾಷ್ಟ್ರೀಯ ಲಾಂಛನವನ್ನಾಗಿ ಒಪ್ಪಿಕೊಂಡಿದೆ.

1. **ಚಕ್ರ :** ಇದನ್ನು ಅಶೋಕ ಸ್ತಂಭದಿಂದ ತೆಗೆದುಕೊಳ್ಳಲಾಗಿದೆ. ಇದು ಬಿಳಿಯ ಪಟ್ಟಿಯ ಮಧ್ಯೆ ನೀಲಿಬಣ್ಣದಲ್ಲಿದೆ. ಚಕ್ರವು ಪ್ರಗತಿಯನ್ನು ಸೂಚಿಸುತ್ತದೆ.
2. **24 ಕಡ್ಡಿಗಳು :** ಇವುಗಳು 24 ಗಂಟೆಯನ್ನು ಪ್ರತಿನಿಧಿಸುತ್ತವೆ. ಪ್ರತಿಯೊಬ್ಬರು ಸದಾ ತಮ್ಮ ಧರ್ಮವನ್ನು ಪಾಲಿಸಬೇಕೆಂದು ಸಾರುತ್ತದೆ.

(ii) ಭಾರತ ಸ್ಕೌಟ್ ಮತ್ತು ಗೈಡ್ ಧ್ವಜ

ಈ ಸಂಸ್ಥೆ ತನ್ನದೇ ಆದ ಧ್ವಜ ಮತ್ತು ಲಾಂಛನವನ್ನು ಹೊಂದಿದೆ. ಇದು ಉದ್ದ : ಅಗಲ = 3:2 ಪ್ರಮಾಣದಲ್ಲಿ ಇರುತ್ತದೆ. ಸಂಸ್ಥೆಯ ಧ್ವಜವು 120 ಸೆಂ.ಮೀ. 80 ಸೆಂ.ಮೀ. ಸ್ಥಿರ ಅಳತೆಯನ್ನು ಹೊಂದಿರುತ್ತದೆ. ಧ್ವಜವು ಕಡು ಆಕಾಶನೀಲಿ ಬಣ್ಣದ ಹಿನ್ನೆಲೆಯ ಮಧ್ಯದಲ್ಲಿ ಹಳದಿ ಬಣ್ಣದ ಲಾಂಛನವನ್ನು ಹೊಂದಿರುತ್ತದೆ.



ಭಾರತ್ ಸ್ಕೌಟ್ ಮತ್ತು ಗೈಡ್ ಧ್ವಜ



ಲಾಂಛನ

ಲಾಂಛನ : ಇದರ ಉದ್ದ : ಅಗಲ = 1.5 : 1 ಪ್ರಮಾಣದಲ್ಲಿ ಇರುತ್ತದೆ.

1. **ಫ್ಲೂರಡೆಲಿಸ್** : ಇದನ್ನು "ಸ್ಕೌಟ್ ಚಳವಳಿಯ ವಿಶ್ವ ಸಂಘಟನೆ" (WOSM) ಲಾಂಛನದಿಂದ ತೆಗೆದುಕೊಳ್ಳಲಾಗಿದೆ. ಇದು ಪ್ರತಿಜ್ಞೆಯಮೂರು ಅಂಶಗಳನ್ನು ಪ್ರತಿನಿಧಿಸುತ್ತದೆ.
2. **ತ್ರಿದಳ** : (Trefoil) ಇದನ್ನು "ವಿಶ್ವ ಗರ್ಲ್‌ಗೈಡ್ ಮತು ಗರ್ಲ್‌ಸ್ಕೌಟ್ ಸಂಸ್ಥೆಯ (WAGGGS) ಲಾಂಛನದಿಂದ ತೆಗೆದುಕೊಳ್ಳಲಾಗಿದೆ." ಇದು ಪ್ರತಿಜ್ಞೆಯ ಮೂರು ಅಂಶಗಳನ್ನು ಪ್ರತಿನಿಧಿಸುತ್ತದೆ.

3. **ಚಕ್ರ** : ಇದನ್ನು ರಾಷ್ಟ್ರಲಾಂಛನದಿಂದ ತೆಗೆದುಕೊಂಡಿದೆ. ಈ ಚಕ್ರವು ಪ್ರಗತಿಯ ಪ್ರತೀಕವಾಗಿದೆ. ಇದು ಭಾರತೀಯ ಸ್ಕೌಟ್–ಗೈಡ್‌ಗಳನ್ನು ಪ್ರತಿನಿಧಿಸುತ್ತದೆ.
4. **ಬಂಧಕ** : ಇದು ಫ್ಲೂರಡೆಲಿಸ್ ಮತ್ತು ತ್ರಿದಳವನ್ನು ಬಂಧಿಸುತ್ತದೆ. ಈ ಬಂಧಕವು ಭಾರತದ ದ್ವಿಸದಸ್ಯತ್ವದ (ವಿಶ್ವ ಸ್ಕೌಟ್ ಮತ್ತು ವಿಶ್ವ ಗೈಡ್ ಸಂಸ್ಥೆಗಳ ಸದಸ್ಯತ್ವ) ಪ್ರತೀಕವಾಗಿದೆ. ಈ ಬಂಧಕವು ಎರಡೂ ಸಂಸ್ಥೆಗಳ ವಿಲೀನದ ಪ್ರತೀಕವಾಗಿದೆ.

ಆಕಾಶ ನೀಲಿಬಣ್ಣ : ನೀಲಿ ಬಣ್ಣವು ಆಕಾಶವನ್ನು ವ್ಯಾಪಿಸಿರುವಂತೆ, ವಿಶ್ವದ ಎಲ್ಲೆಡೆಯೂ ಯಾವ ಭೇದವೂ ಇಲ್ಲದಂತೆ ಭ್ರಾತೃಭಾವ/ಸೋದರಿ ಭಾವವ್ಯಾಪಿಸಲಿ ಎಂದು ಸೂಚಿಸುತ್ತದೆ.

ಹಳದಿ ಬಣ್ಣ : ಪ್ರತಿಜ್ಞೆಯನ್ನು, ಸಂಸ್ಥೆಯ ಆಶೋತ್ತರಗಳನ್ನು ಮತ್ತು ಆದರ್ಶಗಳನ್ನು ಕಾರ್ಯದ ಮೂಲಕ ಪ್ರಕಾಶಿಸಲಿ ಸುತ್ತಲಿನವರಿಗೆ ನಾವು ಸೂರ್ಯನಂತೆ ಬೆಳಕು ನೀಡುವಂತಾಗಲಿ ಎಂದು ಸೂಚಿಸುತ್ತದೆ.

ಗುಂಪಿನ ಧ್ವಜ/ದಳದ ಧ್ವಜ – Group Flag / Company Flag :

ಇದೂ ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಧ್ವಜದಂತೆ ಇರಬೇಕು. ಗುಂಪಿನ ಧ್ವಜ / ದಳದ ಧ್ವಜವು 120 ಸೆಂ.ಮೀ. : 80 ಸೆಂ.ಮೀ. ಪ್ರಮಾಣದಲ್ಲೇ ಇರಬೆಕು. ಈ ಧ್ವಜದ ಲಾಂಛನದ ಕೆಳಗೆ ಸರಳ ರೇಖೆಯಲ್ಲಿ ಹಳದಿ ಬಣ್ಣದಲ್ಲಿ ದಳ/ಗುಂಪಿನ ಹೆಸರನ್ನು ಮೂಡಿಸಿರಬೇಕು. ಇದನ್ನು ದಳ/ಗುಂಪಿನ ಕಾರ್ಯಕ್ರಮದಲ್ಲಿ ಮಾತ್ರ ಹಾರಿಸಬೇಕು. ಇದು ದಳ/ಗುಂಪನ್ನು ಮಾತ್ರ ಪ್ರತಿನಿಧಿಸುತ್ತದೆ.

(iii) ವಿಶ್ವ ಗೈಡ್ ಧ್ವಜ : ಈ ಧ್ವಜವು ವಿಶ್ವದ ಎಲ್ಲಾ ಗರ್ಲ್ ಗೈಡ್ಸ್ ಮತ್ತು ಗರ್ಲ್ ಸ್ಕೌಟ್ಸ್‌ಗಳ ಐಕ್ಯತೆ ಮತ್ತು ಶಾಂತಿಯ ಸಂಕೇತವಾಗಿದೆ. ವಿಶ್ವ ಸಂಸ್ಥೆಯು ಲಾಂಛನವನ್ನು ರೂಪಿಸಬೇಕೆಂದು ಎಲ್ಲ ಸದಸ್ಯ ರಾಷ್ಟ್ರಗಳಿಗೂ ಕರೆ ನೀಡಿತು.

1930ರಲ್ಲಿ ಫಾಕ್ಸ್‌ಲಿಯಲ್ಲಿ ನಡೆದ 6ನೇ ಅಂತಾರಾಷ್ಟ್ರೀಯ ಗೈಡ್ ಸಮ್ಮೇಳನದಲ್ಲಿ ನಾರ್ವೆ ದೇಶದ ಪ್ರಧಾನ ಆಯುಕ್ತರಾದ ಕುಮಾರಿ **ಕಾರಿ ಆಸ್**. ಎಂಬುವವರು ರಚಿಸಿದ ಲಾಂಛನವನ್ನು ವಿಶ್ವಗೈಡ್ ಲಾಂಛನವೆಂದು ಸ್ವೀಕರಿಸಲಾಯಿತು. 3:2 ಪ್ರಮಾಣದ ಆಕಾಶ ನೀಲಿಬಣ್ಣದ ವಸ್ತ್ರದ ಮಧ್ಯದಲ್ಲಿ ಹಳದಿ ಬಣ್ಣದ ಲಾಂಛನವನ್ನು ಮೂಡಿಸಿ ಧ್ವಜವನ್ನು ರಚಿಸಲಾಯಿತು.

ನವೀಕರಿಸಿದ ಧ್ವಜ ಮತ್ತು ಲಾಂಛನ :

1. **ತ್ರಿದಳ** : ಈ ದಳಗಳು ಪ್ರತಿಜ್ಞೆಯ ಮೂರು ಅಂಶಗಳನ್ನು ಪ್ರತಿನಿಧಿಸುತ್ತದೆ.
2. **ನಕ್ಷತ್ರ** : ಒಂದು ಪ್ರತಿಜ್ಞೆಯನ್ನು ಮತ್ತೊಂದು ನಿಯಮವನ್ನು ಪ್ರತಿನಿಧಿಸುತ್ತದೆ.
3. **ದರ್ಶಿನಿ** : ದಿಕ್ಸೂಚಿಯ ಈ ದರ್ಶಿನಿಯ ಸನ್ಮಾರ್ಗದಲ್ಲಿ ನೇರವಾಗಿ ಗುರಿಯನ್ನು ತಲುಪು ಎಂದು ಸೂಚಿಸುತ್ತದೆ.

ವಿಶ್ವಗೈಡ್ ಧ್ವಜ

ಲಾಂಛನ

4. **ತೆರೆದ ವೃತ್ತ** : ಸ್ನೇಹವು ವೇಗವಾಗಿ ವಿಶ್ವದಾದ್ಯಂತ ಜ್ವಾಲೆಯಂತೆ ಪ್ರಸಾರವಾಗಲಿ ಎಂದು ಸೂಚಿಸುತ್ತದೆ. ತೆರೆದ ವೃತ್ತ ಯಾವ ಭೇದವೂ ಇಲ್ಲದೆ ಇಚ್ಛೆಯುಳ್ಳ ಎಲ್ಲಾ ಹೆಣ್ಣುಮಕ್ಕಳನ್ನು ಸ್ವಾಗತಿಸುತ್ತದೆ.

1991ರಲ್ಲಿ ವಿಶ್ವಗೈಡ್ ಸಮ್ಮೇಳನದಲ್ಲಿ ಈ ಲಾಂಛನವನ್ನು ಮತ್ತು ಧ್ವಜವನ್ನು ನವೀಕರಿಸಲಾಯಿತು. ಲಾಂಛನದ ಜ್ವಾಲೆಯನ್ನು ತ್ರಿದಳದ ಸುತ್ತಲೂ ವೃತ್ತವಾಗಿ ವಿಸ್ತರಿಸಿ ವೃತ್ತವನ್ನು ತೆರೆದು ಬಿಡಲಾಗಿದೆ. ಇದು ಜಾಗತಿಕ ಪರಿಕಲ್ಪನೆ ಪ್ರತೀಕ. ತೆರೆದ ವೃತ್ತ ಈ ಸಂಸ್ಥೆಯು ಯಾವ ಭೇದವೂ ಇಲ್ಲದೆ ವಿಶ್ವದ ಎಲ್ಲಾ ಬಾಲಕಿಯರನ್ನೂ ಮತ್ತು ಮಹಿಳೆಯರನ್ನೂ ಸ್ವಾಗತಿಸುತ್ತದೆ ಎಂದು ಸೂಚಿಸುತ್ತದೆ. ಈ ಲಾಂಛನವನ್ನು ಧ್ವಜದ ಎಡಭಾಗದ ಮೇಲಿನ ಮೂಲೆಯಲ್ಲಿ ಮೂಡಿಸಲಾಗಿದೆ. ಕೆಳಭಾಗದಲ್ಲಿ ಎಡ ಮೂಲೆಯಲ್ಲಿ 6 ಸಮನಾದ ಚೌಕಗಳಿವೆ. ಮೇಲಿನ ಮೂರು ಹಳದಿ ಚೌಕುಳಿಗಳು ಪ್ರತಿಜ್ಞೆಯ ಮೂರು ಅಂಶಗಳನ್ನು ಪ್ರತಿನಿಧಿಸುತ್ತವೆ. ಅದರ ಕೆಳಗಿನ ಆಕೃತಿಯ ಮೂರು ಬಿಳಿಯ ಚೌಕುಳಿಗಳು ವಿಶ್ವಶಾಂತಿಯ ಸಂದೇಶವನ್ನು ಗೈಡ್ ಚಳವಳಿ ಪ್ರಸಾರ ಮಾಡುತ್ತದೆ ಎಂದು ಅರ್ಥೈಸುತ್ತದೆ.

ಧ್ವಜ ಸ್ತಂಭದ ಭಾಗಗಳು – ನಿರೂಪಣೆ

ಧ್ವಜಸ್ತಂಭ (Flag Mast) : ಧ್ವಜವನ್ನು ಮೇಲೆ ಹಾರಿಸಲು ಸಿದ್ಧಗೊಳಿಸಿದ ಸ್ತಂಭ.

ಗುರುತು ಕಡ್ಡಿ (Toggle) : ಧ್ವಜದ ಮೇಲ್ತುದಿಯ ಗುರುತಿಗಾಗಿ ಧ್ವಜದ ಮೇಲಿನ ಕುಣಿಕೆಗೆ ಬಂಧಿಸಿರುವ ಕಡ್ಡಿ.

ಹಾರಿಸುವ ಪಾರ್ಶ್ವಅಂಚು (Hoisting end) : ಧ್ವಜದಲ್ಲಿ ಹಾಯಿಸಿರುವ ಸ್ಥಿರ ಹಗ್ಗವನ್ನು ಹೊಂದಿರುವ ಪಾರ್ಶ್ವದ ಅಂಚನ್ನು ಹಾರಿಸುವ ಪಾರ್ಶ್ವ ಅಂಚು ಎನ್ನಲಾಗಿದೆ. ಧ್ವಜವನ್ನು ಹಾರಿಸುವಾಗ ಈ ಅಂಚನ್ನು ಧ್ವಜಸೂತ್ರದಿಂದ ಬಂಧಿಸಲಾಗುವುದು. ಇದು ಸ್ಥಿರವಾದ ಪಾರ್ಶ್ವ ಅಂಚು.

ಧ್ವಜ ಸೂತ್ರ (Halyard) : ಧ್ವಜದ ತುದಿಗಳನ್ನು ಬಂಧಿಸಿ ಹಾರಿಸಲು ಉಪಯೋಗಿಸುವ ಹಗ್ಗ.



1. ಗುರುತಿನ ಕಡ್ಡಿ, 2. ನೀಲಿ ಹಿನ್ನೆಲೆ, 3. ಲಾಂಛನ, 4. ಹಾರಾಡುವ ಪಾರ್ಶ್ವ, 5. ಕೆಳಕುಣಿಕೆ, 6. ಹಾರಿಸುವ ಪಾರ್ಶ್ವ, 7. ಧ್ವಜಸ್ತಂಭ, 8. ಧ್ವಜಸೂತ್ರ, 9. ಅಡ್ಡಕಡ್ಡಿ, 10. ಬಂಧಕ, 11. ಬಾಗು ಮೊಳೆ.

ಹಾರಾಡುವ ಪಾರ್ಶ್ವ (Flying End) : ಧ್ವಜದ ಈ ಭಾಗವು ಸ್ವತಂತ್ರವಾಗಿ ಹಾರಾಡುತ್ತಿರುತ್ತದೆ.

ಅಡ್ಡಕಡ್ಡಿ (Cleat) : ಸುಧಾರಿತ ಧ್ವಜ ಸ್ತಂಭದ (Improvised flag pole) ಕೆಳಭಾಗದಲ್ಲಿ ಬರುವ ಎರಡು ಸಮಾನಾಂತರ ಕಟ್ಟುಗಳ ಮಧ್ಯೆ ಧ್ವಜ ಸೂತ್ರವನ್ನು ಬಂಧಿಸಲು ಅಡ್ಡಕಡ್ಡಿಯನ್ನು ಚೌಕ ಕಟ್ಟಿನಿಂದ ಕಟ್ಟಲಾಗುವುದು.

ಧ್ವಜ ಸಮಾರಂಭ: ಈ ಸಮಾರಂಭವನ್ನು ಸಂಸ್ಥೆಯಲ್ಲಿ ಸಾಂಪ್ರದಾಯಿಕವಾಗಿ, ಅರ್ಥಪೂರ್ಣವಾಗಿ ಹಾಗೂ ಮಹತ್ವಪೂರ್ಣವಾಗಿ ಆಚರಿಸಲಾಗುವುದು. ಇದು ಧ್ವಜಾರೋಹಣ ಮತ್ತು ಧ್ವಜಾವರೋಹಣ ಎಂಬ ಎರಡು ವಿಧಿಗಳನ್ನು ಒಳಗೊಂಡಿದೆ. ಧ್ವಜಾರೋಹಣದಲ್ಲಿ ಎರಡು ವಿಧಿಗಳಿವೆ. 2. ಧ್ವಜಾರೋಹಣ ಸಮಾರಂಭ, ಲಾಳಾಕೃತಿ ರಚನೆ, ಆಜ್ಞಾಬದ್ಧ ಸಮಾರಂಭ (Ceremonials), ವಿಧ್ಯುಕ್ತ ಸಮಾರಂಭ (Ceremonious).

1. ಲಾಳಾಕೃತಿ ರಚನೆ (Horse Shoe Formation) : ಒಬ್ಬ ನಾಯಕಿಯು (L) ಧ್ವಜಸ್ತಂಭದ (F.P) ಎಡಭಾಗಕ್ಕೆ ಒಂದು ಪಾರ್ಶ್ವ ಹೆಜ್ಜೆ ತೆಗೆದುಕೊಂಡು, ಮೂರು ಹೆಜ್ಜೆ ಹಿಂದಕ್ಕೆ ನಿಲ್ಲುವರು. ಒಂದು ಹೆಜ್ಜೆ ಎಡ ಪಾರ್ಶ್ವದಲ್ಲಿ ಖಾಲಿಬಿಟ್ಟು ಉಳಿದ, ಹಿರಿಯ ಹಾಗೂ ಆಹ್ವಾನಿತ ಸದಸ್ಯರು ಸಾಲಾಗಿ ನಿಲ್ಲುವರು. ಖಾಲಿ ಬಿಟ್ಟ ಜಾಗದಲ್ಲಿ ಮುಂದೆ ಸಹನಾಯಕಿ ಬಂದು ನಿಲ್ಲುವರು.

ಸಹನಾಯಕಿ (ಸ.ನಾ/ A.L) ಬಂದು ನಾಯಕಿಗೆ ಅಭಿಮುಖವಾಗಿ ನಿಂತು ವಂದಿಸುವ ಮೂಲಕ ಲಾಳಾಕೃತಿ ರಚನೆಗೆ ಅನುಮತಿ ಪಡೆದು ಪುನಃ ಹಿಂದಿರುಗಿ ಆಗಿ ಮೂರು ಹೆಜ್ಜೆ ಚಲಿಸಿ ಒಂದು ಹೆಜ್ಜೆ ಬಲಕ್ಕೆ ತೆಗೆದುಕೊಂಡು ಸ್ತಂಭದ ಎದುರಿಗೆ ಬಂದು ಧ್ವಜ ಸ್ತಂಭದಿಂದ ಎರಡು ಹೆಜ್ಜೆ ಅಡ್ಡ ಕಡ್ಡಿಗೆ ನೇರವಾಗಿ ತೆಗೆದುಕೊಂಡು ದಳಕ್ಕೆ ಎದುರಾಗಿ ನಿಲ್ಲುವರು.

ಸ.ನಾ. ಗೈಡ್‌ಗಳ ಸಂಖ್ಯೆಯನ್ನು ಎಣಿಸಿಕೊಂಡು ಎರಡರಿಂದ ಭಾಗಿಸಿ ಭಾಗಲಬ್ಧದಲ್ಲಿ ಎರಡನ್ನು ಕಳೆಯುವರು. ಇದರಿಂದ ಲಾಳಾಕೃತಿಯ ಅಳತೆಯನ್ನು ನಿಗದಿಪಡಿಸಿಕೊಳ್ಳುವರು.

$$\text{ಲೆಕ್ಕಾಚಾರ} = \frac{\text{ಗೈಡ್‌ಗಳ ಸಂಖ್ಯೆ}}{2} = \frac{32}{2} = 16-2=14$$

ಸ.ನಾ. ಲೆಕ್ಕಾಚಾರ ಮಾಡಿದಷ್ಟು ಹೆಜ್ಜೆಗಳನ್ನು ನಡೆದು ಚದುರಿದ ದಳಕ್ಕೆ ಅಭಿಮುಖ ನೇರದಲ್ಲಿ ಬಂದು ಸಾವಧಾನ್‌ನಲ್ಲಿ ನಿಲ್ಲುವರು.

(ಲಾಳ ರಚನೆ ಪ್ರಾರಂಭಿಸುವಾಗ ಗೈಡ್ಸ್‌ಗಳು ಚದುರಿ ನಿಂತಿರುವರು)

ಸ.ನಾ : ದಲ್ – ಸಾವ್‌ಧಾನ್ / Company - Attention

ಸ.ನಾ : ದಲ್ – ವಿಶ್ರಾಮ್ / Company - Stand at ease

ಸ.ನಾ : ಧ್ವಜ ದಲ್ – ಸಜ್ / Colour Party - fall in

ಸ.ನಾ : ದಲ್ – ದಲ್ ಧ್ವಜ್ ರಕ್ಷಕ್ ಕೆ ಪೀಛೆ ದೋ ಕತಾರ್ ಬನ್ / (Company behind the escorts (E) fall in) ಧ್ವಜನಾಯಕಿ (Colour Bearer-CB) ಹಿಂದೆ ಸಾಲು ಮಾಡಬಾರದು.

ಸ.ನಾ : ಕದಂ ತಾಲ್ / Mark time mark (Left. right......)

(ಧ್ವಜ ದಳವು ಯಾವ ಆಜ್ಞೆಯನ್ನು ಪಾಲಿಸದೆ ಸಾವಧಾನದಲ್ಲೇ ನಿಂತಿರಬೇಕು. ಸ.ನಾ ಕದಂ ತಾಲ್/ Mark time Mark ಹೇಳಿದ ತಕ್ಷಣ about turn ಆಗಿ, ಮೊದಲ ಸ್ಥಾನಕ್ಕೆ ಬಂದು ಪುನಃ About turn ಆಗಿ ಸಾವಧಾನದಲ್ಲಿ ನಿಲ್ಲುವರು)

ಸ.ನಾ. ದಲ್ – ನಲಾಕಾರ್ ಕೆಲಿಯೆ ಚಲ್‌ದೊ / Company - into the Horse shoe formation Quick March.

(ಸ.ನಾ ಲಾಳದ ಆಕಾರವನ್ನು ಹಸ್ತ ಸಂಕೇತದ ಮೂಲಕ ಸರಿಪಡಿಸುವರು.)

ಸ.ನಾ : ದಲ್ – ಥಂ / Company - Halt

ಸ.ನಾ : ದಲ್ – ವಿಶ್ರಾಮ್ / Company - Stand at ease

ಸ.ನಾ : ದಲ್ – ಸಾವ್‌ಧಾನ್ / Company - Attention



ಚಿತ್ರ : ಲಾಳಾಕೃತಿಯ ರಚನೆಯ ನೋಟ

1. ಧ್ವಜಸ್ತಂಭದಿಂದ 2 ಹೆಜ್ಜೆ ಮುಂದಕ್ಕೆ 1ನೇ ಸ್ಥಾನ
2. 1ನೇ ಸ್ಥಾನದಿಂದ 6 ಹೆಜ್ಜೆ ಮುಂದಕ್ಕೆ 2ನೇ ಸ್ಥಾನ
3. 3 ಹೆಜ್ಜೆ ಅಂತರದಲ್ಲಿ ಧ್ವಜದಳ
4. ದಳವು ಧ್ವಜರಕ್ಷಕರ ಹಿಂದೆ ಸಾಲಿನಲ್ಲಿ ನಿಂತಿರುವುದು
5. ಕದಂ ತಾಲ್ ಕೊಟ್ಟ ತಕ್ಷಣ ಸ.ನಾ. 1ನೇ ಸ್ಥಾನಕ್ಕೆ
6. ಲಾಳಾಕೃತಿ ರಚನೆ
7. ಸ.ನಾ. ಸಮಾರಂಭದ ಜವಾಬ್ದಾರಿಯನ್ನು ನಾಯಕಿಗೆ ವಹಿಸುತ್ತಿರುವುದು.

○ ನಾ,	⊙ ಸ.ನಾ,	•• ಹೆಜ್ಜೆ,	○ ಗೈಡ್ಸ್,	○ ದಳ

(ಸ.ನಾ ಎಡಪಾರ್ಶ್ವಕ್ಕೆ ಒಂದು ಹೆಜ್ಜೆ ಸರಿದು, ಹಿಂದಿರುಗಿ, ಮೂರು ಹೆಜ್ಜೆ ನಡೆದು ನಾ. ಟಗೆ ಅಭಿಮುಖವಾಗಿ ಎರಡು ಹೆಜ್ಜೆ ಅಂತರದಲ್ಲಿ ನಿಂತು ಪುನಃ ಎಬೌಟ್ ಟರ್ನ್ ಆಗಿ ಲಾಳದ ಆಕಾರವನ್ನು ಗಮನಿಸುವರು. ಸರಿಯಾಗಿದೆ ಎಂದು ಖಚಿತಪಡಿಸಿಕೊಳ್ಳುವರು ನಂತರ ಎಬೌಟ್ ಟರ್ನ್ ಆಗಿ ನಾಯಕಿಗೆ ವಂದಿಸುವುದರ ಮೂಲಕ ಲಾಳಾಕೃತಿಯ ಜವಾಬ್ದಾರಿಯನ್ನು ವಹಿಸಿಕೊಟ್ಟು ಒಂದು ಹೆಜ್ಜೆ ಬಲಕ್ಕೆ ಸರಿದು ಎರಡು ಹೆಜ್ಜೆ ಮುಂದಕ್ಕೆ ಹೋಗಿ ಕಾದಿರಿಸಿದ ಸ್ಥಳದಲ್ಲಿ ನಿಲ್ಲುವರು. ಇದೇ ಸಮಯದಲ್ಲಿ ನಾಯಕಿ ಎರಡು ಹೆಜ್ಜೆ ಮುಂದೆ ಬಂದು ಸಾವಧಾನ್‌ನಲ್ಲಿ ನಿಲ್ಲುವರು.)

ನಾ : ದಲ್ – ವಿಶ್ರಾಮ್ / Company-Stand at ease

ನಾ : ದಲ್ – ಸಾವಧಾನ್ / Company-Attention

ನಾ : ಪ್ರಾರ್ಥನ ಶುರು / Prayer Begin

ನಾ : ದಲ್ – ವಿಶ್ರಾಮ್ / Company - Stand at ease

ನಾ : ಆಜ್ ಕ ಸುವಿಚಾರ್ / Thought for the day

(ಇದನ್ನು ಹೇಳುವವರು ಒಂದು ಹೆಜ್ಜೆ ಮುಂದೆ ಬಂದು ಸಾವಧಾನದಲ್ಲಿ ನಿಂತು ಹೇಳಿ ಹಿಂದೆ ಸರಿದು ಲಾಳಸೇರಿ ವಿಶ್ರಾಮ್‌ನಲ್ಲಿ ನಿಲ್ಲಬೇಕು)

ನಾ : ಸಾವಧಾನ್ / Attention

ನಾ : ಧ್ವಜ್ ದಲ್ ಚಲ್ ದೊ / Colour party to the Flag

(CB ಮಧ್ಯದಲ್ಲಿರುವವರು ಪಿಸುಧ್ವನಿಯಲ್ಲಿ ತನ್ನ ತಂಡಕ್ಕೆ ಆಜ್ಞೆ ನೀಡುವಳು)

ಧ್ವಆ : ಕದಂ ತಾಲ್ / Mark time mark

ಧ್ವಆ : ತೇಜ ಚಲ್ / Quick March

ಧ್ವಆ : ಥಂ / Halt

(ಧ್ವಜದಳವು ಧ್ವಜಸ್ತಂಭಕ್ಕೆ ಅಭಿಮುಖವಾಗಿ ಎರಡು ಹೆಜ್ಜೆ ಅಂತರದಲ್ಲಿ ನಿಲ್ಲುವರು ಧ್ವಜ ಮಧ್ಯದಲ್ಲಿರುವವರು ಒಂದು ಹೆಜ್ಜೆ ಮುಂದೆ ಬಂದು ಕೈ ನಿಲುಕುವವರೆಗೂ ಎತ್ತಿ ಧ್ವಜ ಸೂತ್ರವನ್ನು (Halyard) ಹಿಡಿಯುವಳು ತಕ್ಷಣವೇ ಹಗ್ಗ ಜಗ್ಗಿ ಧ್ವಜ ಬಿಚ್ಚುವಳು. ಧ್ವಜದ ಹಗ್ಗ ಹಿಡಿದು ಜಗ್ಗಲು ಪ್ರಾರಂಭಿಸಿದ ತಕ್ಷಣ ನಾ. ಆಜ್ಞೆ ನೀಡುವರು)

ನಾ : ದಲ್ ಸೆಲ್ಯೂಟ್ / Salute

(ಈ ಆಜ್ಞೆಗೆ ಧ್ವಜ ದಳವು ಸೆಲ್ಯೂಟ್ ಮಾಡಬಾರದು)

(ಧ್ವಜಾರೋಹಕಿ ಒಂದು ಹೆಜ್ಜೆ ಹಿಂದೆ ಸರಿದು ಧ್ವಜ ತಂಡ ಸೇರಿ, ತಂಡವು ಒಟ್ಟಾಗಿ ಒಂದು ಹೆಜ್ಜೆ ಹಿಂದೆ ಸರಿದು ಧ್ವಜಕ್ಕೆ ಸೆಲ್ಯೂಟ್ ಮಾಡುವರು. ನಂತರ ಎಲ್ಲರಿಗೂ ಒಟ್ಟಾಗಿ ನಾಯಕಿ ಆಜ್ಞೆ ಮಾಡುವರು.)

ನಾ : ಜೈಸೆತೆ/ Order

ನಾ : ಝುಂಡಾಗೀತ್ ಶುರು / Flag Song Begin

ಧ್ವಜಾರೋಹಕಿ : ಆಗೆ ಚಲ್, ಥಂ, ಪೀಛೆ ಮುಢ್ / Forward March, Halt, About Turn

ಧ್ವಜಾರೋಹಣ ವ್ಯೂಹ



1. ನಾಯಕಿ ಧ್ವಜಾರೋಹಣದ ವಿಧಿಯನ್ನು ವಹಿಸಿಕೊಳ್ಳುವರು.
2. ಧ್ವಜದಳವು ಬಂದು ಧ್ವಜಸ್ತಂಭಕ್ಕೆ 2 ಹೆಜ್ಜೆ ಅಂತರದಲ್ಲಿ ನಿಲ್ಲುವರು
3. ಧ್ವಜಾರೋಹಕಿ 1ಹೆಜ್ಜೆ ಮುಂದೆ ಹೋಗಿ ಧ್ವಜವನ್ನು ಹಾರಿಸುವಳು
4. ಧ್ವಜಾರೋಹಕಿ ಧ್ವಜ ದಳವನ್ನು ಸೇರುವಳು. ಧ್ವಜ ದಳವು ಒಂದು ಹೆಜ್ಜೆ ಹಿಂದೆ ಬಂದು ಒಟ್ಟಿಗೆ ಧ್ವಜಕ್ಕೆ ವಂದನೆ (Salute) ಮಾಡುವರು.
5. ಧ್ವಜದಳವು ಧ್ವಜಗೀತೆಯ ನಂತರ ಲಾಳವನ್ನು ಸೇರುವುದು.

ನಾ : ದಲ್ – ವಿಶ್ರಾಮ್ / Company Stand at ease

(ಇದರ ನಂತರ ಸೂಚನೆ ಕೊಡಬಹುದು. ಸಾಧನೆಗೆ ಅಭಿನಂದಿಸಬಹುದು. ದಿನದ ಕಾರ್ಯಕ್ರಮ ಹೇಳಬಹುದು. ವಿಶೇಷ ಸಂದರ್ಭಗಳಲ್ಲಿ ಧ್ವಜಾರೋಹಣದ ನಂತರ ದೀಕ್ಷಾ ಸಮಾರಂಭ ಅಥವಾ ಪದಕ ಪ್ರದಾನ ಕಾರ್ಯವನ್ನು ಹಮ್ಮಿಕೊಳ್ಳಬಹುದು.)

ನಾ : ದಲ್ – ಸ್ವಸ್ಥಾನ್ / Fall out

ಸಾಮಾನ್ಯ ಧ್ವಜ ಸಮಾರಂಭ – Common Flag Procedure

ಸ್ಕೌಟ್ಸ್–ಗೈಡ್ಸ್ ಒಟ್ಟಾಗಿ ಸಮಾರಂಭವನ್ನು ಏರ್ಪಡಿಸಿದಾಗ ಧ್ವಜಾರೋಹಣದ ಸಾಮಾನ್ಯವಿಧಿಯನ್ನು ಅನುಸರಿಸಲಾಗುವುದು.

– ಧ್ವಜಾರೋಹಣವನ್ನು ಸ್ಕೌಟ್‌ನ ಕರ್ತವ್ಯ ನಾಯಕರೊಬ್ಬರೆ (Duty Leader) ಧ್ವಜಸ್ತಂಭಕ್ಕೆ ಬಂದು ಧ್ವಜವನ್ನು ಹಾರಿಸುವರು. ಇಲ್ಲಿ ಗೈಡ್‌ನ ಧ್ವಜಾರೋಹಕ ತಂಡದ ವಿಧಾನವನ್ನು ಆಚರಿಸಲಾಗುವುದಿಲ್ಲ.

ಧ್ವಜಾವರೋಹಣ – Lowering of Flag

ಇದನ್ನು ಎರಡು ವಿಧದಲ್ಲಿ ಸಂದರ್ಭಕ್ಕೆ ತಕ್ಕಂತೆ ಆಚರಿಸಲಾಗುವುದು. ಧ್ವಜವನ್ನು ಸೂರ್ಯಾಸ್ತದ ಸಮಯಕ್ಕೆ ಸರಿಯಾಗಿ ಇಳಿಸಲಾಗುವುದು.

1. ಶಿಬಿರಾರ್ಥಿಗಳು ಕಾರ್ಯನಿರತರಾಗಿದ್ದಾಗ ಧ್ವಜಾವರೋಹಕಿ ಧ್ವಜಸ್ತಂಭದ ಬಳಿಗೆ ಬಂದು ಧ್ವಜಸೂತ್ರವನ್ನು ಬಿಚ್ಚಿ ಇಳಿಸಲು ಸಿದ್ಧವಾಗಿ ದೀರ್ಘ ಸೀಟಿ ಸಂಕೇತವನ್ನು ನೀಡುವರು. ಶಿಬಿರಾರ್ಥಿಗಳು ಇದ್ದಲ್ಲೇ ಸಾವಧಾನ ಸ್ಥಿತಿಗೆ ಬರುವರು. ನಿಧಾನವಾಗಿ ಧ್ವಜವನ್ನು ಇಳಿಸಿ ಅಡ್ಡಕಡ್ಡಿ (Cleat) ಮೇಲೆ ಹಾಕಿ ಸೀಟಿ ಊದುವರು. ಶಿಬಿರಾರ್ಥಿಗಳು ಪುನಃ ಕಾರ್ಯನಿರತರಾಗುವರು. ಅವರೋಹಕರು ಧ್ವಜ ಬಿಚ್ಚಿ, ಮಡಿಚಿ, ಶಿಬಿರ ನಾಯಕರಿಗೆ ಒಪ್ಪಿಸುವರು.

2. ಲಾಳಾಕೃತಿ ರಚಿಸಿ ಸಾವಧಾನ್‌ನಲ್ಲಿ ನಿಲ್ಲಿಸುವರು. ಧ್ವಜತಂಡ ಧ್ವಜಸ್ತಂಭಕ್ಕೆ ಬಂದು ಸಾವಧಾನ್‌ನಲ್ಲಿ ನಿಂತು ಧ್ವಜವನ್ನು ಇಳಿಸಲಾರಂಭಿಸವರು. ಧ್ವಜವು ಅಡ್ಡಕಡ್ಡಿಯನ್ನು ತಾಕಿದಾಗ ತಕ್ಷಣ ಧ್ವಜವನ್ನು ಅಡ್ಡಕಡ್ಡಿಯ ಮೇಲೆ ಹಾಕುವರು. ಒಂದ ಹೆಜ್ಜೆ ಹಿಂದಕ್ಕೆ ಹೋಗಿ ತಮ್ಮ ಸ್ಥಳಕ್ಕೆ ನಡೆಯುವರು. ಅವರೋಹಕರು ಶಿಬಿರವನ್ನು ವಿಸರ್ಜಿಸುವ ಮುಂಚೆ ಧ್ವಜವನ್ನು ಇಳಿಸಿದ ಮೇಲೆ ರಾಷ್ಟ್ರಗೀತೆ ಹಾಡುವರು "ಶಿಬಿರದ ಮುಕ್ತಾಯ"ವನ್ನು ನಾಯಕಿಯವರು ಘೋಷಿಸುವರು. ನಂತರ ಸಮಾರಂಭವು ಮುಕ್ತಾಯಗೊಳ್ಳುವುದು.

ಧ್ವಜ ಗೌರವ :

1. ಸ್ಥಳೀಯ, ಜಿಲ್ಲೆ, ರಾಜ್ಯಮಟ್ಟದ, ರಾಷ್ಟ್ರಮಟ್ಟದ, ಸಮಾರಂಭಗಳಲ್ಲಿ ಭಾ.ಸ್ಕೌ.ಗೈ. ಧ್ವಜವನ್ನು ಹಾರಿಸಲಾಗುವುದು. ರಾಷ್ಟ್ರಧ್ವಜವನ್ನು ಮೊದಲ ಸ್ಥಾನದಲ್ಲಿ ಹಾರಿಸಿ ಅದರ ಎಡಕ್ಕೆ ಭಾ.ಸ್ಕೌ.ಗೈ. ವಿ. ಸ್ಕೌಟ್ ಧ್ವಜ. ವಿಶ್ವ ಗೈಡ್ ಧ್ವಜವನ್ನು ಸಮಾನ ಎತ್ತರದಲ್ಲಿ ಧ್ವಜವನ್ನು ಹಾರಿಸಬೇಕು. ರಾಷ್ಟ್ರಧ್ವಜ ಸ್ತಂಭವು ಉಳಿದ ಸ್ತಂಭಗಳಿಗಿಂತ 1 ಅಡಿ ಎತ್ತರವಿರಬೇಕು.

2. ಯಾವುದೇ ಧ್ವಜವು ಹರಿದುಹೋದಾಗ ಬಣ್ಣಕೆಟ್ಟಾಗ ಬಳಸಬಾರದು. ಅದನ್ನು ಸನ್ಮಾನಪೂರ್ವಕವಾಗಿ ವಿಧಿಬದ್ಧವಾಗಿ ಹೂಳಬೇಕು, ಇಲ್ಲವೆ ಸುಟ್ಟು ಸಂಸ್ಕಾರಮಾಡಬೇಕು.

3. ರಾಷ್ಟ್ರ ವ್ಯಕ್ತಿಗಳು ವಿಧಿವಶರಾದಾಗ ರಾಷ್ಟ್ರಧ್ವಜವನ್ನು ಅರೆಮಟ್ಟಕ್ಕೆ ಹಾರಿಸಲಾಗುವುದು.

ಕಡ್ಡಾಯ ಗೀತೆಗಳು

2.8 ರಾಷ್ಟ್ರಗೀತೆ

ಪ್ರತಿ ರಾಷ್ಟ್ರವು ತನ್ನದೇ ಆದ ರಾಷ್ಟ್ರಗೀತೆಯನ್ನು ಹೊಂದಿರುತ್ತದೆ. ಪ್ರತಿಯೊಬ್ಬರೂ ಇದರ ಸಾಹಿತ್ಯ, ಅರ್ಥ ಮತ್ತು ರಾಗವನ್ನು ಕಲಿತಿರಬೇಕು. ಪ್ರತಿಯೊಬ್ಬ ಪ್ರಜೆಯೂ ಇದನ್ನು ಭಕ್ತಿ ಮತ್ತು ಗೌರವದಿಂದ ಹಾಡಬೇಕು. ರಾಷ್ಟ್ರಗೀತೆಯು ನಮ್ಮ ರಾಷ್ಟ್ರದ ಭೌಗೋಳಿಕ ಲಕ್ಷಣಗಳನ್ನು ವರ್ಣಿಸುತ್ತದೆ. ಜನರಿಗೆ ಮತ್ತು ವಿಧಾತನಿಗೂ ಜೈಕಾರವನ್ನು ಸಾರುತ್ತದೆ.

ಜನಗಣಮನ ಅಧಿನಾಯಕ ಜಯಹೇ, ಭಾರತ ಭಾಗ್ಯವಿಧಾತಾ,
ಪಂಜಾಬ ಸಿಂಧು ಗುಜರಾತ ಮರಾಠ, ದ್ರಾವಿಡ ಉತ್ಕಲ ವಂಗ,
ವಿಂಧ್ಯ ಹಿಮಾಚಲ ಯಮುನಾ ಗಂಗಾ, ಉಚ್ಛಲ ಜಲಧಿತರಂಗ
ತವ ಶುಭ ನಾಮೆ ಜಾಗೆ, ತವ ಶುಭ ಆಶಿಶ ಮಾಗೆ
ಗಾಹೆ ತವ ಜಯ ಗಾಥಾ,
ಜನಗಣ ಮಂಗಳದಾಯಕ ಜಯಹೇ, ಭಾರತ ಭಾಗ್ಯವಿಧಾತಾ
ಜಯ ಹೇ, ಜಯ ಹೇ, ಜಯ ಹೇ,
ಜಯ, ಜಯ, ಜಯ ಹೇ ।

ಕನ್ನಡ ಅರ್ಥ

ಜನಗಣಮನದ ಅಧಿನಾಯಕನಿಗೆ
ಭಾರತ ಭಾಗ್ಯವಿಧಾತನಾದ ನಿನಗೆ ಜಯವಾಗಲಿ
ಪಂಜಾಬ, ಸಿಂಧು, ಗುಜರಾತ, ಮರಾಠ.
ದ್ರಾವಿಡ, ಒರಿಸ್ಸಾ, ಬಂಗಾಲ ರಾಜ್ಯದ ಪ್ರಜೆಗಳು
ವಿಂಧ್ಯ ಹಿಮಾಚಲ ಪರ್ವತಗಳು, ಯಮುನಾ ಗಂಗಾ ನದಿಗಳು
ಇವುಗಳಲ್ಲಿ ಏಳುವ ತರಂಗಗಳು ನಿನ್ನ ಶುಭನಾಮವನ್ನು ಹಾಡುತ್ತವೆ
ನಿನ್ನ ಆಶೀರ್ವಾದ ಬೇಡುತ್ತವೆ, ನಿನ್ನ ಜಯಗೀತೆಯನ್ನು ಹಾಡುತ್ತವೆ

ಜನಗಳಿಗೆ ಮಂಗಳ ಉಂಟುಮಾಡುವ ನಿನಗೆ ಜಯವಾಗಲಿ
ಹೇ ಭಾರತ ಭಾಗ್ಯವಿಧಾತನೆ ನಿನಗೆ
ಜಯವಾಗಲಿ ಜಯವಾಗಲಿ ಜಯವಾಗಲಿ
ಜಯ ಜಯ ಜಯವಾಗಲಿ

ನಮ್ಮ ರಾಷ್ಟ್ರಗೀತೆಯನ್ನು ರಚಿಸಿದವರು **ನೋಬಲ್ ಪ್ರಶಸ್ತಿ** ವಿಜೇತರಾದ, ಬಂಗಾಳದ ವಿಶ್ವಕವಿ **ರವೀಂದ್ರನಾಥ ಟಾಗೂರ್**. ಇದನ್ನು 24 ಜನವರಿ 1950ರಲ್ಲಿ ರಚಿಸಲಾಯಿತು. ಇದನ್ನು ಸಾವಧಾನದಲ್ಲಿ ನಿಂತು 52 ಸೆಕೆಂಡುಗಳಲ್ಲಿ ಹಾಡಬೇಕು.

2.9 (i) ಪ್ರಾರ್ಥನಾಗೀತೆ

ನಮ್ಮ ಚಳವಳಿಯು ತನ್ನದೇ ಆದ ಪ್ರಾರ್ಥನಾಗೀತೆಯನ್ನು ಹೊಂದಿದೆ. ಇದನ್ನು ರಚಿಸಿದವರು ಪಂಜಾಬಿನ ಸಹಾಯಕ ಸಂಘಟನಾಧಿಕಾರಿಯಾದ **ಶ್ರೀ ವೀರ್ ದೇವ್ ವೀರ್**. ನಮ್ಮ ಎಲ್ಲಾ ಕಾರ್ಯಕ್ರಮಗಳನ್ನು ಪ್ರಾರ್ಥನೆಯೊಡನೆ ಪ್ರಾರಂಭಿಸುತ್ತೇವೆ. ಸಾಮೂಹಿಕವಾಗಿ ಹಾಡುತ್ತೇವೆ. ಪ್ರಾರ್ಥನೆಯು ಮನಸ್ಸನ್ನು ಶಾಂತಗೊಳಿಸುತ್ತದೆ, ಶುಚಿಗೊಳಿಸುತ್ತದೆ ಮತ್ತು ಕೆಲಸಕ್ಕೆ ಸಿದ್ಧಗೊಳಿಸುತ್ತದೆ.

ಪ್ರಾರ್ಥನೆಯ ಸಾಹಿತ್ಯ ಮತ್ತು ರಾಗವನ್ನು ಸರಿಯಾಗಿ ಅಭ್ಯಾಸಮಾಡಿ ಸರಿಯಾಗಿ ಉಚ್ಚರಿಸಿ ಮತ್ತು ಅರ್ಥವನ್ನು ತಿಳಿದುಕೊಳ್ಳಿ, ಭಕ್ತಿ ಮತ್ತು ಗೌರವ ಪೂರ್ವಕವಾಗಿ ಹಾಡಿ. ಇದನ್ನು ಸಾವಧಾನದಲ್ಲಿ ನಿಂತು ಹಾಡಬೇಕು. ಇದನ್ನು 90 ಸೆಕೆಂಡಿನಲ್ಲಿ ಹಾಡಬೇಕು.

"ಪ್ರಾರ್ಥನೆ ಆರೋಹಿಸುತ್ತದೆ ಆಶೀರ್ವಾದ ಅವರೋಹಿಸುತ್ತದೆ".

ಹಿಂದಿ ಗೀತೆ	**ಕನ್ನಡ ಅರ್ಥ**
ದಯಾಕರ ದಾನ ಭಕ್ತೀಕಾ	ದಯಮಾಡಿ ನಮ್ಮಲ್ಲಿ
ಹಮೆ ಪರಮಾತ್ಮ ದೇನಾ	ಭಕ್ತಿ ಮೂಡುವಂತೆ
ದಯಾಕರನಾ ಹಮಾರಿ	ದಯೆ ತೋರು
ಆತ್ಮಮಾ ಮೆ ಶುದ್ಧತಾ ದೇನಾ॥	ಆತ್ಮದಲ್ಲಿ ಶುದ್ಧತೆಯ ನೀಡು॥
ಹಮಾರೆ ಧ್ಯಾನಮೆ ಆವೊ	ನಮ್ಮಯ ಧ್ಯಾನದಿ ಬಾರೋ,
ಪ್ರಭು, ಆಂಖೋಮೆ ಬಸಜಾವೊ	ಪ್ರಭು ! ನಮ್ಮಯ ನೇತ್ರದಿ ನೆಲೆಸು,
ಅಂಧೇರೆ ದಿಲ್‌ಮೆ ಆಕರಕೆ	ಕತ್ತಲೆ ಕವಿದ ಎಮ್ಮಯ ಮನದಿ
ಪರಂಜ್ಯೋತಿ ಜಗಾದೇನಾ–(1)	ಪ್ರಭು ! ಪರಂಜ್ಯೋತಿಯ ಬೆಳಗಿಸು–(1)
ಬಹಾದೊ ಪ್ರೇಮಕಿ ಗಂಗಾ	ಪ್ರೇಮದ ಗಂಗೆಯ ಹರಿಸು

ದಿಲೋಮೆ ಪ್ರೇಮ ಕಾ ಸಾಗರ್	ಮನದಲಿ ಪ್ರೇಮದ ಸಾಗರವನ್ನು ಇರಿಸು
ಹಮೇ ಆಪಸ್ ಮೆ ಮಿಲ್‌ಜುಲ್‌ಕರ್	ಪ್ರಭು ನಮಗೆ ಎಲ್ಲರೂ ಜೊತೆಗೂಡಿ
ಪ್ರಭು, ರಹಾನ ಸಿಖಾದೇನಾ–(2)	ಬಾಳುವುದನ್ನು ಕಲಿಸು–(2)
ಹಮಾರಾ ಕರ್ಮ ಹೋ ಸೇವಾ	ನಮ್ಮಯ ಕರ್ಮವು ಸೇವೆಯಾಗಲಿ
ಹಮಾರಾ ಧರ್ಮ ಹೋ ಸೇವಾ	ನಮ್ಮಯ ಧರ್ಮವು ಸೇವೆಯಾಗಲಿ
ಸದಾ ಈಮಾನ ಹೋ ಸೇವಾ	ಸದಾ ಸೇವೆಯು ಪ್ರಾಮಾಣಿಕವಾಗಿರಲಿ
ವೊ ಸೇವಕ ಚರ್ ಬನಾ ದೇನಾ–(3)	ಈ ಸೇವಕನನ್ನು ನಿನ್ನ ದಾಸನಾಗಿಸು–(3)
ವತನ ಕೆ ವಾಸತೆ ಜೀನಾ	ರಾಷ್ಟ್ರಕ್ಕಾಗಿ ಜೀವಿಸುವಾ
ವತನ ಕೆ ವಾಸತೆ ಮರನಾ	ರಾಷ್ಟ್ರಕ್ಕಾಗಿ ಬಲಿಯಾಗುವಾ
ವತನ ಪರ್ ಜಾನ್ ಫಿದಾ ಕರನಾ	ರಾಷ್ಟ್ರಕ್ಕಾಗಿ ಪ್ರಾಣ ತ್ಯಾಗಮಾಡುವುದನ್ನು
ಪ್ರಭು ಹಮ್‌ಕೊ, ಸಿಖಾದೇನಾ–(4)	ಪ್ರಭು! ಕಲಿಸು ನಮ್ಮೆಲ್ಲರಿಗೂ–(4)

ಇಂಗ್ಲೀಷ್ ಅರ್ಥ

Bless us with devotion. Gives us the purity of soul. Be present in our prayer	Our duty is service Our Dharma is service Let always service be honest
Oh Lord! Settle down in our eyes Enter our dark mind	Let he/she be made your earnest servant (3)
Oh Lord! Light the divine light (1)	Let us live for the Nation
Flood the river of affection the ocean of love into our hearts.	Let us die for the Nation Oh Lord! Teach us to
Oh Lord! teach us to live to-gether in harmony (2)	Sacrifice everything for the sake of our Nation (4)

2.9 (ii) ಧ್ವಜ ಗೀತೆ :

ನಮ್ಮ ಚಳವಳಿಗೆ ತನ್ನದೇ ಆದ ಧ್ವಜವಿದೆ. ಅದನ್ನು ಕುರಿತು ರಚಿಸಿದ ಧ್ವಜಗೀತೆ ಇದು. ಇದನ್ನು ಧ್ವಜಾರೋಹಣ ಸಮಯದಲ್ಲಿ ಮಾತ್ರ ಹಾಡುತ್ತೇವೆ. ಸಾವಧಾನದಲ್ಲಿ ನಿಂತು ಹಾಡುತ್ತೇವೆ. ಇದು ನಮ್ಮ ಸಂಸ್ಥೆಯ ಧ್ಯೇಯ ಮತ್ತು ಆಶೋತ್ತರಗಳನ್ನು ಸಾರುತ್ತವೆ ಮತ್ತು ನೆನಪಿಸುತ್ತದೆ. ಇದನ್ನು ರಚಿಸಿದವರು **ಶ್ರೀ ದಯಾಶಂಕರ್‌ಭಟ್**. ಇದನ್ನು 45 ಸೆಕೆಂಡುಗಳಲ್ಲಿ ಹಾಡಬೇಕು.

ಹಿಂದಿ ಗೀತೆ	ಕನ್ನಡ ಅರ್ಥ
ಭಾರತ್ ಸ್ಕೌಟ್ ಗೈಡ್ ಝುಂಡಾ	ಭಾರತ್ ಸ್ಕೌಟ್ ಗೈಡ್ ಧ್ವಜವು
ಊಂಚಾ ಸದಾ ರಹೇಗಾ	ಎತ್ತರದಲಿ ಸದಾ ಹಾರುತಿರಲಿ
ಸದಾ ರಹೇಗಾ ಝುಂಡಾ, ಊಂಚಾ ಸದಾ ರಹೇಗಾ	ಧ್ವಜವು ಸದಾ ಎತ್ತರದಲಿ ಹಾರುತಿರಲಿ
ನೀಲಾ ರಂಗ ಗಗನ ಸಾ ವಿಸ್ತೃತ	ನೀಲಿಬಣ್ಣದ ಬಾನು ಎಲ್ಲೆಡೆ ಪಸರಿಸಿದಂತೆ
ಭ್ರಾತೃಭಾವ ಫೈಲಾತಾ	ಭ್ರಾತೃಭಾವವು ಎಲ್ಲೆಡೆ ಪಸರಿಸಲಿ
ತ್ರಿದಲ ಕಮಲ ನಿತ ತೀನ	ತ್ರಿದಳ ಕಮಲವು ಮೂರು
ಪ್ರತಿಜ್ಞಾವೋಂಕೀ ಯಾದ ದಿಲಾತಾ	ಪ್ರತಿಜ್ಞೆಯ ನೆನಪಿಸುತಿಹುದು
ಔರ್ ಚಕ್ರ ಕಹತಾ ಹೈ ಪ್ರತಿಫಲ್	ಮತ್ತು ಚಕ್ರವು ಸಾರುತಿಹುದು ಪ್ರತಿಕ್ಷಣವು
ಆಗೆ ಕದಂ ಬಢೇಗಾ..॥	ಸಾಗಿ ಮುಂದೆ ಮುಂದಕೆ
ಊಂಚಾ ಸದಾ ರಹೆಗಾ ಝುಂಡಾ, ಊಂಚಾ ಸದಾ ರಹೇಗ ಭಾರತ್ ಸ್ಕೌಟ್ ಗೈಡ್ ಝುಂಡಾ ಊಂಚಾ ಸದಾ ರಹೆಗಾ	

ಇಂಗ್ಲೀಷ್ ಅರ್ಥ

BS&G Flag will be always flying High, Flag will be always flying high, Like the blue sky that spreads everywhere, Let brotherhood spread every where in this world, the three petals of Lotus reminds three fold promise and the wheel says we, March ahead every moment.

2.9 (iii) ವಿಶ್ವ ಧ್ವಜಗೀತೆ

World Flag Song	ಕನ್ನಡ ಅರ್ಥ
Our way is clear as we march on	ನಾವು ನಡೆದಂತೆ ನಮ್ಮದಾರಿ ಸುಗಮವಾಗುವುದು
And see; Our Flag on high	ಧ್ವಜವು ಎತ್ತರದಲಿ ಹಾರುತಿಹುದು ಕಾಣುತಿರುವುದು
It never furled throughout the world	ವಿಶ್ವದಾದ್ಯಂತ ಮುದುಡದಿರಲಿ ಇದು ಎಂದಿಗೂ
For hope shall never die;	ಎಂದೆಂದಿಗೂ ವಿಶ್ವದಲ್ಲಿ

We must untie for What is right	ನಾವೆಲ್ಲರೂ ಸರಿಯಾದುದಕ್ಕಾಗಿ ಸ್ನೇಹ, ಸತ್ಯ
In Friendship, true and strong	ಮತ್ತು ಶಕ್ತಿಯಿಂದ ಒಟ್ಟುಗೂಡೋಣ
Until the Earth in its rebirth	ಭೂಮಿಯು ಮತ್ತೆ ಹುಟ್ಟಿಬರುವವರೆಗೂ
Shall sing our song (2)	ಈ ನಮ್ಮ ಹಾಡನ್ನು ಹಾಡುತ್ತಲೇ ಇರೋಣ

ದೀಕ್ಷಾ ಸಮಾರಂಭ :

ನೀವು ಗೈಡ್ ಪ್ರವೇಶಿಯಾಗಿ ಪ್ರವೇಶದ ಪರೀಕ್ಷೆಗಳನ್ನು ಮುಗಿಸಿದನಂತರ ನಾಯಕಿಯವರಿಗೆ ತೃಪ್ತಿಯಾದರೆ ದೀಕ್ಷಾ ಸಮಾರಂಭವನ್ನು ಏರ್ಪಡಿಸುವರು.

ದೀಕ್ಷೆ ಪಡೆಯಲು ನೀವು ಶುಚಿಯಾಗಿ, ಮನಃಪೂರ್ವಕವಾಗಿ ಸಿದ್ಧರಾಗಬೇಕು "ನಾನು ಇಂದು ಮಾಡಿದ ಪ್ರತಿಜ್ಞೆಯನ್ನು ಜೀವನಪರ್ಯಂತ ಪಾಲಿಸುತ್ತೇನೆ"- ಎಂದು ನಿರ್ಧರಿಸಬೇಕು. ನಾಯಕಿಯವರಿಗೆ ಪ್ರಾಮಾಣಿಕವಾಗಿ ವಚನ ನೀಡಬೇಕು.

ಈ ಸಮಾರಂಭವು ಗೈಡ್ ನಾಯಕಿಯ ನೇತೃತ್ವದಲ್ಲಿ ಧ್ವಜಾರೋಹಣದ ನಂತರ ಆರಂಭವಾಗುವುದು. ಶಾಲೆಯ ಅಧ್ಯಾಪಕವರ್ಗ, ಸಿಬ್ಬಂದಿವರ್ಗ, ಪೋಷಕರು, ಮತ್ತು ಹಿತೈಷಿಗಳು ಆಗಮಿಸುವರು. ಗೈಡ್ಸ್‌ಗಳು ಸಮವಸ್ತ್ರ ಧರಿಸಿ ಸಂತಸದಿಂದ ಪಟಾಲಂ ಪ್ರಕಾರ ಲಾಳಾಕೃತಿಯಲ್ಲಿ ನಿಲ್ಲಬೇಕು.

ಗೈಡ್ ನಾಯಕಿ ಮತ್ತು ಸಹನಾಯಕಿ ಧ್ವಜ ಸ್ತಂಭದ ಎಡಕ್ಕೆ ನಿಲ್ಲಬೇಕು. ಸದಸ್ಯತ್ವದ ಪದಕಗಳನ್ನು, ಕಂಠವಸ್ತ್ರಗಳನ್ನು ಸುರುಳಿಸುತ್ತಿ ಕವುಂಗರವನ್ನು ಹಾಕಿ ಸಿದ್ಧವಾಗಿಡಬೇಕು. ಈ ಸಮಾರಂಭ ಸಂತಸದ ಸಮಾರಂಭವಾದ್ದರಿಂದ ಸಿಹಿಯನ್ನು ಹಂಚಬಹುದು. ಪ್ರತಿಗೈಡಿಗೂ ಪ್ರತ್ಯೇಕವಾಗಿ ದೀಕ್ಷೆ ನೀಡಬೇಕು.

ಹಿರಿಯ ನಾಯಕಿ ಸಮಾರಂಭವನ್ನು ಪ್ರಾರ್ಥನೆಯೊಡನೆ ಪ್ರಾರಂಭಿಸಿ ಸ್ವಾಗತಮಾಡಿ, ಸಂಸ್ಥೆಗೆ ಅಪರಿಚಿತರು ಆಗಮಿಸಿದ್ದರೆ ಸಂಸ್ಥೆಯ ಸಂಕ್ಷಿಪ್ತ ಪರಿಚಯ ಮಾಡಿಸಿ, ಸಭೆಯ ಮಹತ್ವ ಹೇಳಿ, ದೀಕ್ಷೆ ಪಡೆಯುವವರಿಗೆ ಶುಭಕೋರುವರು. ಗೈಡ್ ನಾಯಕಿ ಪಟಾಲಂ ನಾಯಕಿಯನ್ನು ದೀಕ್ಷೆಗಾಗಿ ಪ್ರವೇಶಿಯನ್ನು ಕರೆತರಲು ಆದೇಶಿಸುವರು. ಪಟಾಲಂ ನಾಯಕಿ ಪ್ರವೇಶಿಯೊಡನೆ ಪಥಸಂಚಲನ ಮಾಡುತ್ತಾ ಬಂದು ಗೈಡ್ ನಾಯಕಿಗೆ ಎದುರಾಗಿ ಒಂದು ಹೆಜ್ಜೆ ಅಂತರದಲ್ಲಿ ನಿಂತು ವಂದಿಸುವಳು ನಂತರ ಈ ರೀತಿ ಪರಿಚಯಿಸುವಳು.

ದೀಕ್ಷಾ ವಿಧಿ ಪಟಾಲಂ ನಾಯಕಿ – ಕುಮಾರಿ .... ಪ್ರವೇಶ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಾಳೆ. ಗೈಡ್ ಸದಸ್ಯತ್ವ ಪಡೆಯಲು ಆಸಕ್ತಳಾಗಿದ್ದಾಳೆ.

(ನಂತರ ಪಟಾಲಂ ನಾಯಕಿ ಒಂದು ಹೆಜ್ಜೆ ಬಲಕ್ಕೆ ಸರಿದು ದೀಕ್ಷೆ ಕೊಟ್ಟು ಮುಗಿಯುವವರೆಗೂ ಅಲ್ಲಿಯೇ ನಿಲ್ಲುವಳು.)

ಹಿ.ನಾ. (ಪ್ರವೇಶಿಯನ್ನು ಕುರಿತು) ನಿನ್ನ ಗೌರವ ಎಂದರೇನು ಬಲ್ಲೆಯಾ?

ಪ್ರವೇಶಿ : ಬಲ್ಲೆ, ನನ್ನ ಗೌರವ ಎಂದರೆ ನನ್ನ ವಿಶ್ವಾಸಾರ್ಹತೆ, ನಿಷ್ಠೆ ಮತ್ತು ಸತ್ಯತೆ.

ಹಿ.ನಾ. : ನಿನಗೆ ಗೈಡ್ ನಿಯಮದ ಅರ್ಥ ತಿಳಿದಿದೆಯೆ?

ಪ್ರವೇಶಿ : ತಿಳಿದಿದೆ.

ಹಿ.ನಾ. : ಹಾಗಾದರೆ ನೀನು ಗೌರವ ಸಾಕ್ಷಿಯಾಗಿ ದೇವರಿಗೂ, ದೇಶಕ್ಕೂ, ನಿನ್ನ ಕರ್ತವ್ಯವನ್ನು ಮಾಡುತ್ತೀಯಾ ಇತರರಿಗೆ ಸದಾ ಸಹಾಯ ಮಾಡುತ್ತೀಯಾ ಹಾಗೂ ಗೈಡ್ ನಿಯಮವನ್ನು ಪಾಲಿಸುತ್ತೀಯಾ ಎಂದು ನಾನು ನಂಬಬಹುದೆ?

ಪ್ರವೇಶಿ : ನಂಬಬಹುದು.

ನಾ. : ಹೀಗೆಂದು ಪ್ರತಿಜ್ಞೆ ಮಾಡುವೆಯಾ? (ಸದಸ್ಯತ್ವವನ್ನು ಪಡೆದವರೆಲ್ಲಾ ಗೈಡ್ ಸಂಕೇತ ಮಾಡುತ್ತಾ ಸಾವಧಾನ್‌ನಲ್ಲಿ ನಿಲ್ಲುವರು. ಪ್ರವೇಶಿಯು ಹೇಳಿಕೊಟ್ಟ ಪ್ರತಿಜ್ಞೆಯನ್ನು ಪುನರುಚ್ಚರಿಸುವಳು.)

ನಾ. : ನಿನ್ನ ಗೌರವ ಸಾಕ್ಷಿಯಾಗಿ ಪ್ರತಿಜ್ಞೆಯನ್ನು ನೀನು ಪಾಲಿಸುವೆ, ಪ್ರತಿ ದಿನವೂ ತಪ್ಪದೆ ಒಂದು ಸತ್ಕಾರ್ಯವನ್ನು ಮಾಡುವೆ ಎಂದು ನಂಬುತ್ತೇನೆ. ಇಂದು ನೀನು ಈ ವಿಶ್ವವ್ಯಾಪಿ ಸಂಸ್ಥೆಯ ಸೋದರಿ ಬಳಗಕ್ಕೆ ಅಧಿಕೃತ ಸದಸ್ಯಳಾಗಿರುವೆ. ನಿನಗೆ ಅಭಿನಂದನೆಗಳು.

(ತರಬೇತಿ ನೀಡಿದ ಗೈಡ್ ನಾಯಕಿಯೆ ಪ್ರತಿಜ್ಞೆಯನ್ನು ಸ್ವೀಕರಿಸಬೇಕು ಪದಕವನ್ನು ನೀಡಬೇಕು. ಕಂಠವಸ್ತ್ರವನ್ನು ಉಪನಾಯಕಿ/ಸದಸ್ಯರು, ಸಂಸ್ಥೆಯ ಸದಸ್ಯರಲ್ಲದ ಮುಖ್ಯ ಅತಿಥಿಗಳು, ಇಲ್ಲವೆ ಹಿತೈಷಿಗಳು ಹಾಕಬಹುದು)

ನಾ. : One step backward Salute

(ಸದಸ್ಯತ್ವ ಪಡೆದ ನಂತರ ಪ್ರಥಮವಾಗಿ ಸದಸ್ಯಳು ಧ್ವಜಕ್ಕೆ ವಂದನೆ ಸಲ್ಲಿಸುವಳು.)

ಈ ನೂತನ ಸದಸ್ಯರನ್ನು ಅಭಿನಂದಿಸಿ ನಮ್ಮ ಚಳವಳಿಗೆ ಸ್ವಾಗತಿಸೋಣ.

ನಾ. : About turn

ನಾ. : Attention

ನಾ. : Salute

ನಾ. : Order

(ದಳದ ಎಲ್ಲಾ ಸದಸ್ಯರೂ ವಂದಿಸುವುದರ ಮೂಲಕ ನೂತನ ಸದಸ್ಯಳನ್ನು ಸ್ವಾಗತಿಸುವರು.)

ನಾ. : Patrol to the Horse Shoe Quick March

(ಪಟಾಲಂ ನಾಯಕಿ ಹಾಗೂ ನೂತನ ಗೈಡ್ಸ್ ಲಾಳಾಕೃತಿಯನ್ನು ಸೇರುವರು.)

ಹಿ.ನಾ. : ವಿಶ್ರಾಮ್, ಆರಾಂ ಸೆ / stand at ease, stand ease

ಹೀಗೆಯೆ ಅಂದು ನಿಗದಿಪಡಿಸಿದಷ್ಟು ಬಾಲಕಿಯರಿಗೆ ಗೈಡ್ ದೀಕ್ಷೆ ನೀಡುವುದು ಸಾಮಾನ್ಯವಾಗಿ ಒಂದು ಪಟಾಲಂ ಒಂದು ದಿನ ದೀಕ್ಷೆ ನೀಡಬಹುದು ಹೆಚ್ಚು ಬಾಲಕಿಯರಿಗೆ ಒಟ್ಟಿಗೆ ಈ ದೀಕ್ಷೆ ನೀಡಿದರೆ ಬೇಸರವಾಗಿ, ಸಮಾರಂಭವು ಮಹತ್ವವನ್ನು ಕಳೆದುಕೊಳ್ಳುತ್ತದೆ. ನಂತರ ಹಿತವಚನವನ್ನು ಹೇಳಿಸಿ, ಅಭಿನಂದಿಸಿ, ಸಿಹಿ ಹಂಚಿ ಸಮಾರಂಭವನ್ನು ಮುಕ್ತಾಯ ಮಾಡಬಹುದು. (ಈ ಸಮಾರಂಭವನ್ನು ಈ ಚೌಕಟ್ಟಿನಲ್ಲಿ ವೈವಿಧ್ಯಮಯವಾಗಿ ಅರ್ಥಪೂರ್ಣವಾಗಿ ಮಾಡಬಹುದು.)

ಈ ಸಮಾರಂಭದ ನಂತರ ಪ್ರತಿಜ್ಞೆ ಕುರಿತು ಹಾಡಿ. ಹಿರಿಯರು ಹಿತವಚನವನ್ನು ನೀಡಲಿ, ಸಿಹಿಹಂಚಿ, ಸಮಾರಂಭವನ್ನು ಮುಕ್ತಾಯಗೊಳಿಸಿ

ನೆನಪಿನಲ್ಲಿಡಿ :– **Once a guide is always a guide!**

ಒಮ್ಮೆ ಗೈಡ್ ಆದವಳು ಆಜೀವಪರ್ಯಂತ ಗೈಡ್ ಆಗಿ ಉಳಿಯುವಳು!

ದೀಕ್ಷೆ ನೀಡಿದ ನಂತರ ಈ ಹಾಡುಗಳನ್ನು ಹಾಡಬಹುದು:–

1) When ever you make a promise
engrave it upon your hearts
and when once made
engrave it upon your hearts

2) ಭಾಷೆ ನೀಡಿದಿರಿ, ನೀವು ಭಾಷೆ ನೀಡಿದಿರಿ,
ಭಾಷೆಯಾ ನೀಡಿದ ಮೇಲೆ ಪಾಲಿಸುವಂತವರಾಗಿ,
ನೀವು ಭಾಷೆ ನೀಡಿದಿರಿ.
ದೀನರ ಸೇವೆಯ ಮಾಡುವರಾಗಿ,
ದೇಶಕ್ಕೆ ಕರ್ತವ್ಯ ಸಲ್ಲಿಪರಾಗಿ,
ಸಮಸ್ತ ಸೃಷ್ಟಿಯ ರಕ್ಷಿಪರಾಗಿ,
ಅನುದಿನ ದೇವಗೆ ವಂದಿಪರಾಗಿ ಭಾಷೆ....
(ರಾಗ : ರಾಗಿ ತಂದೀರಾ)

3) Keep (4) your Promise through out the life
Merrily (4) serve all yourlife

ರಾಗ: Row Row a boat

ಹೆಜ್ಜೆ–3. ಪ್ರಥಮ ಸೋಪಾನ

I. ಪ್ರಥಮ ಸೋಪಾನದ ಅವಶ್ಯಕತೆಗಳು

1. ನಿಮ್ಮನ್ನು ನೀವು ನೋಡಿಕೊಳ್ಳುವುದು.
2. ನೀವು ಮನೆಯಲ್ಲಿ ಮಾಡುವ ಕೆಲಸಗಳನ್ನು ಹೇಳಿ.
3. ನಿಮ್ಮ ಹಾಸಿಗೆಯನ್ನು ನೀವೇ ಹಾಸಿಕೊಳ್ಳುವ ಸಾಮರ್ಥ್ಯವನ್ನು ಪಡೆಯುವುದು.
4. ವೈಯಕ್ತಿಕ ಸ್ವಚ್ಛತೆ ಮತ್ತು ಆರೋಗ್ಯದ ನಿಯಮಗಳ ಬಗ್ಗೆ ತಿಳಿಯುವುದು.
5. ಬಿ.ಪಿ. ಷಟ್ಕವ್ಯಾಯಾಮ ಮತ್ತು ಯೋಗಾಸನ / ಸೂರ್ಯ ನಮಸ್ಕಾರ ಕಲಿಯಿರಿ.
6. ಗುಂಡಿ ಹೊಲಿದು ಕಾಜ ಮಾಡಿ.
7. ಕ್ಯಾನ್ವಾಸ್ / ಚರ್ಮದ ಬೂಟನ್ನು ಸ್ವಚ್ಛ ಮಾಡಿ, ಪಾಲಿಷ್ ಮಾಡಿ.
8. ಪ್ರಥಮ ಚಿಕಿತ್ಸೆ ಸಂಚಿ ವೈಯಕ್ತಿಕವಾಗಿ ತಯಾರಿಸಿಕೊಳ್ಳಿ. ಇದರಲ್ಲಿಡುವ ಸಾಮಾನುಗಳ ಪಟ್ಟಿಮಾಡಿ.

ಪ್ರಥಮ ಚಿಕಿತ್ಸೆಯ ನಿರೂಪಣೆ ಮತ್ತು ಸುವರ್ಣ ನಿಯಮಗಳನ್ನು ತಿಳಿಸುವುದು. ಸರಳ ಕತ್ತರಿಸಿದ ಗಾಯ, ಸುಟ್ಟಗಾಯ, ಮೂಗಿನಿಂದಾಗುವ ರಕ್ತಸ್ರಾವಕ್ಕೆ ಚಿಕಿತ್ಸೆ ನೀಡುವುದು. (ಇದನ್ನು ಗು.ನೀ.ನಿ.ಸಂ. ಆಂಗ್ಲ ಪುಸ್ತಕದಲ್ಲಿದ್ದ ಸೇವಾಕಾರ್ಯದಿಂದ ತೆಗೆದು ಇಲ್ಲಿ ತರಲಾಗಿದೆ.)

II. ಶಿಸ್ತು

1. **ಪಟಾಲಂ ಪದ್ಧತಿ:** ನಿಮ್ಮ ಅಷ್ಟಕ ಸಂಕೇತ, ಧ್ವಜ, ಹರ್ಷನಾದ. ಗೀತೆಗಳನ್ನು ರಚಿಸಿ. ಅಷ್ಟಕಕ್ಕೆ ಗೊತ್ತುಪಡಿಸಿದ ನಿಮ್ಮ ಸ್ಥಳವನ್ನು ಅಷ್ಟಕ ಚಟುವಟಿಕೆಗಳಿಗೆ ಸಜ್ಜುಗೊಳಿಸಿ.

2. ಹಸ್ತ ಮತ್ತು ಶಿಲ್ಪಿ ಸಂಕೇತವನ್ನು ಅಭ್ಯಸಿಸಿ ಬಳಸಿ.

3. ಸರಳ ವ್ಯಾಯಾಮಗಳು ಮತ್ತು ಕ್ರಮಬದ್ಧ ಚಲನೆ.

4. ಪಟಾಲಂ ಮತ್ತು ದಳದ ಆಟಗಳಲ್ಲಿ ಭಾಗವಹಿಸಿ.

5. ನಿಮ್ಮ ನಡತೆ ಮನೆಯಲ್ಲಿ ಮತ್ತು ಶಾಲೆಯಲ್ಲಿ ತೃಪ್ತಿಕರವಾಗಿದೆ ಎಂದು ನಿಮ್ಮ ಗೈಡ್ ಶಿಕ್ಷಕಿಗೆ ಮನವರಿಕೆ ಮಾಡಿ.

III. ಹಗ್ಗ ಕೌಶಲ

1. ಹಗ್ಗದ ತುದಿಗಳಿಗೆ ಕಟ್ಟನ್ನು (ವಿಪಿಂಗ್) ಕಟ್ಟುವುದು.

2. ಕೆಳಗಿನ ಗಂಟುಗಳನ್ನು ಹಾಕುವುದನ್ನು ಮತ್ತು ಬಳಸುವುದನ್ನು ಕಲಿಯಿರಿ.

1) ಸಮಗಂಟು (ರೀಫ್ ನಾಟ್) 2) ಮೂಲೆಗಂಟು (ಶೀಟ್ ಬೆಂಡ್) 3) ಕೊಟ್ಟಿಗೆ ಗಂಟು (ಕ್ಲೋವ್ ಹಿಚ್ ನಾಟ್) 4) ಜೀವ ರಕ್ಷಕ ಗಂಟು (ಬೋ ಲೈನ್ ನಾಟ್) 5) ಕಣಕಾಲು ಗಂಟು (ಷೀಪ್ ಷಾಂಕ್) 6) ಬೆಸ್ತರ ಗಂಟು (ಫಿಷರ್‌ಮನ್ ನಾಟ್) 7) ಒಂದು ಸುತ್ತು ಎರಡು ಅರೆಗಂಟು (ರೌಂಡ್ ಟರ್ನ್ ಟೂ ಹಾಫ್ ಹಿಚ್‌ಗಳು)

3. ಸಮಾನಾಂತರ ಕಟ್ಟು 1 ಮತ್ತು 2 / ಷಿಯರ್ ಲ್ಯಾಷಿಂಗ್ ಕಟ್ಟು ಕಟ್ಟುವುದನ್ನು ಪ್ರದರ್ಶಿಸಿ.

4. ಮನೆಗೆ ಉಪಯುಕ್ತವಾದ ಪೀಠೋಪಕರಣ / ಕರಕುಶಲ ವಸ್ತುವನ್ನು ತಯಾರಿಸಿ.

IV. ಸೇವಾ ಚಟುವಟಿಕೆಗಳು

1. ನಿಮ್ಮ ಶಾಲೆ / ಸ್ಥಳೀಯ / ಜಿಲ್ಲಾ ಕೇಂದ್ರ ಕಛೇರಿಯಲ್ಲಿ ಸೇವಾ ಕಾರ್ಯವನ್ನು ಗೈಡ್ ಶಿಕ್ಷಕಿಯ ಮಾರ್ಗದಲ್ಲಿ ಮಾಡುವುದು. ಪ್ರಥಮ ಚಿಕಿತ್ಸೆ ವಿಷಯವನ್ನು 1ನೇ ಅಧ್ಯಾಯಕ್ಕೆ ವರ್ಗಾಯಿಸಿದೆ.

2. ಅಡಿಗೆ, ನೀರು ಸಂಗ್ರಹ ಆತಿಥ್ಯ, ಸ್ವಚ್ಛತೆ ಮುಂತಾದ ಮನೆ ಜವಾಬ್ದಾರಿಯನ್ನು ಪೋಷಕರ ಸಹಾಯದಿಂದ ನಿರ್ವಹಿಸುವುದು.

3. ಪ್ರತಿದಿನ ಕನಿಷ್ಠ ಒಂದು ಸತ್ಕಾರ್ಯವನ್ನು ಒಂದು ತಿಂಗಳು ಕಾಲ ಮಾಡಿ ದಿನಚರಿ ಬರೆಯಿರಿ.

4. ಕೆಳಗಿನ ಚಟುವಟಿಕೆಗಳಲ್ಲಿ ಭಾಗವಹಿಸಿ:

ಅ) ನಿಯಮದ ಯಾವುದಾದರೂ ಒಂದು ಅಂಶಗಳನ್ನು ಒಳಗೊಂಡಂತೆ ಗೈಡ್ ಶಿಕ್ಷಕಿಯೊಡನೆ ವಿಚಾರ ಮಾಡಿ ಒಂದು ವಾರದಲ್ಲಿ ವರದಿ ಸಲ್ಲಿಸುವುದು.

ಆ) ಪಟಾಲಂ ನಾಯಕಿಯೊಡನೆ ಸಮಾಲೋಚಿಸಿ ಪ್ರಕೃತಿ ಅಧ್ಯಯನ ಯೋಜನೆಯನ್ನು ಮಾಡಿ 10 ದಿನಗಳಲ್ಲಿ ವರದಿ ನೀಡುವುದು.

ಅಥವಾ

ಗ್ರಾಮ ಪಂಚಾಯಿತಿ / ಕ್ಷೇತ್ರಾಭಿವೃದ್ಧಿ ಸಮಿತಿ ಪುರಸಭೆ, ನಗರಪಾಲಿಕೆ, ಕಾರ್ಪೊರೇಷನ್ ಕಛೇರಿಗೆ ಭೇಟಿ ನೀಡಿ ಅವರು ಕೈಗೊಂಡ ಸಾರ್ವಜನಿಕ ಸೇವಾ ಯೋಜನೆಯ ವರದಿಯನ್ನು ಸಂಗ್ರಹಿಸಿ ಗೈಡ್ ಶಿಕ್ಷಕಿಯವರಿಗೆ 10 ದಿನಗಳಲ್ಲಿ ಸಲ್ಲಿಸುವುದು.

V. ಹೊರಾಂಗಣ

ನಿಮಗೆ ದೊರೆತಿರುವ ಮತ್ತು ಪರಿಚಯವಾಗಿರುವ ಸಾರ್ವಜನಿಕ ಕಛೇರಿ ಮತ್ತು ಚಲಿಸುವ ದೂರವಾಣಿಯ ಉಪಯೋಗ ತಿಳಿಯುವುದು.

1. ವನವಿದ್ಯಾ ಸಂಕೇತವನ್ನು ತಿಳಿದು ಪಟಾಲಂದೊಡನೆ ½ ಕಿ.ಮೀ.ಗೆ ಕಡಿಮೆ ಇಲ್ಲದಂತೆ ಜಾಡನ್ನು ಅನುಸರಿಸಿ ಮಾರ್ಗವನ್ನು ಕ್ರಮಿಸಿ.
2. ಪಾದಚಾರಿಗಳ ನಿಯಮವನ್ನು ತಿಳಿದು ಅನುಸರಿಸಿ.
3. ಪ್ರಕೃತಿ ಅಧ್ಯಯನದಲ್ಲಿ ಜಾಡನ್ನು ಅನುಸರಿಸುವುದು.

ಪ್ರವೇಶದ ನಂತರ ಕನಿಷ್ಠ 6 ತಿಂಗಳು ಪ್ರಥಮ ಸೋಪಾನ ಗೈಡಾಗಿ ಸೇವೆ ಸಲ್ಲಿಸುವಳು.

ಜಲಗೈಡ್: ಮೇಲಿನ ಪರೀಕ್ಷೆಗಳ ಜೊತೆಗೆ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯಬೇಕು.

1. ಜಲಗೈಡಿಂಗ್‌ನ ಸಾಮಾನ್ಯ ತಿಳುವಳಿಕೆ ಪಡೆದಿರಬೇಕು.
2. ನೀರಿನಲ್ಲಿ ಸುರಕ್ಷತಾ ಕ್ರಮವನ್ನು ತಿಳಿದಿರಬೇಕು.
3. ನೀರಿನ ಭಯದಿಂದ ಮುಕ್ತರಾಗಬೇಕು.

ವಾಯುಗೈಡ್: ಮೇಲಿನ ಪ್ರಥಮ ಸೋಪಾನ ಪರೀಕ್ಷೆಗಳ ಜೊತೆಯಲ್ಲಿ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯಬೇಕು.

1. ವಾಯುಗೈಡಿಂಗ್‌ನ ಸಾಮಾನ್ಯ ತಿಳುವಳಿಕೆ ಪಡೆದಿರಬೇಕು.
2. ವಾಯುಯಾನಗಳ ಕನಿಷ್ಠ ಹತ್ತು ಮಾದರಿಯ ಛಾಯಾಚಿತ್ರ ಸಂಗ್ರಹಿಸುವುದು.
3. ವಾಯು ದಳದ ಶ್ರೇಣಿ, ಪದಕ ಮತ್ತು ಧ್ವಜಗಳ ಬಗೆಗೆ ಸಾಮಾನ್ಯ ತಿಳುವಳಿಕೆ ಪಡೆದಿರಬೇಕು.
4. ರಾಷ್ಟ್ರದ ವಾಯುದಳ / ನಾಗರಿಕ ವಾಯು ಯಾನಗಳನ್ನು ಗುರುತಿಸಬೇಕು.
5. ಗೈಡ್ ನಾಯಕಿ ನಿಗದಿಪಡಿಸಿದ ಅವಧಿಯಲ್ಲಿ ನೋಡಿದ ವಾಯು ಯಾನಗಳ ಒಂದು ಸಮಗ್ರಕೋಶ / ದಿನಚರಿ ಪುಸ್ತಕ ತಯಾರಿಸಬೇಕು.

2.1 ಪಟಾಲಂ ಪದ್ಧತಿ – Patrol System :

ನೀವು ಪಟಾಲಂ ಪದ್ಧತಿಯಲ್ಲಿ ತರಬೇತಿ ಪಡೆಯುವಿರಿ. ದಳದಲ್ಲಿ 12 ರಿಂದ 32 ಬಾಲಕಿಯರು ಮಾತ್ರ ಇರುವರು. 6 ರಿಂದ 8 ಬಾಲಕಿಯರ ಚಿಕ್ಕ ಗುಂಪನ್ನು **ಪಟಾಲಂ** (Patrol) ಎನ್ನಲಾಗುವುದು. 2 ರಿಂದ 4 ಪಟಾಲಂಗಳು ಸೇರಿ **ದಳ**ವಾಗುವುದು. (Company)

ಚಿಕ್ಕ ಗುಂಪುಗಳಲ್ಲಿ ಮಕ್ಕಳು/ಹಿರಿಯರಿಗೆ ತರಬೇತಿ ನೀಡುವ ಪದ್ಧತಿಯನ್ನು ಪಟಾಲಂ ಪದ್ಧತಿ ಎನ್ನುತ್ತೇವೆ. ಬಿ.ಪಿ. ಯವರು ಈ ವಿನೂತನ ಪದ್ಧತಿಯನ್ನು ಆವಿಷ್ಕರಿಸಿದರು. ಒಂದೇ ವಯಸ್ಸಿನ ಮಕ್ಕಳು ಕೂಡಿ ಆಡುವ ಮತ್ತು ಕೂಡಿ ಕಲಿಯುವ ಒಲವಿನ ಮನೋಧರ್ಮದ (Sibling Psychology) ಆಧಾರದ ಮೇಲೆ ಈ ಪದ್ಧತಿಯನ್ನು ಆವಿಷ್ಕರಿಸಿದರು.

ನಿಮ್ಮ ಹಿರಿಯ ನಾಯಕಿ ಪಟಾಲಂಗಳನ್ನು ರಚಿಸಿದನಂತರ ನೀವು ಮಾಡಬೇಕಾದ ಚಟುವಟಿಕೆಗಳು.

1) **ಪಟಾಲಂ ಹೆಸರು :** ಪಟಾಲಂ ಸಭೆ ಸೇರಿ ಒಂದು ಹೂವಿನ ಹೆಸರನ್ನು ಆಯ್ಕೆಮಾಡಿಕೊಂಡು ಹಿರಿಯನಾಯಕಿಯವರ ಅನುಮೋದನೆ ಪಡೆದು ಆ ಹೆಸರನ್ನು ಹೊಂದುವುದು. ಉದಾ: ಮಲ್ಲಿಗೆ, ಸಂಪಿಗೆ, ಕಮಲ.

★2) **ಪಟಾಲಂ ಲಾಂಛನ :** ಪಟಾಲಂನ ಹೂವಿನ ಲಾಂಛನವನ್ನು ಪ್ರತಿಯೊಬ್ಬ ಸದಸ್ಯರೂ ಧರಿಸಬೇಕು. ಹಸಿರು ಅಂಚು ಕಟ್ಟಿದ 4 ಸೆಂ. ಮೀ ವ್ಯಾಸವುಳ್ಳ

ಕಪ್ಪುಬಿಲ್ಲೆಯನ್ನು ತಯಾರಿಸಿ ಮಧ್ಯೆ ತಮ್ಮ ಪಟಾಲಂನ ಹೂವಿನ ಚಿತ್ರ ಬಿಡಿಸಿ ಎಡಜೇಬಿನ ಮೇಲೆ ಧರಿಸುವುದು.



★3) **ಪಟಾಲಂನ ಧ್ವಜ** : ತಳ 20 ಸೆಂ. ಮೀ ಬಾಹು 30 ಸೆಂ. ಮೀ. ಇರುವ ಬಟ್ಟೆಯ ತ್ರಿಕೋನ ತಯಾರಿಸಿ. ಇದು ಬಿಳಿ ಬಣ್ಣದ್ದಾಗಿರಬೇಕು. ಇದರ ಮಧ್ಯೆ ಕೆಂಪು ಬಣ್ಣದಲ್ಲಿ ಲಾಂಛನವನ್ನು ರಚಿಸಬೇಕು.

ಈ ಧ್ವಜವನ್ನು ನಿಮ್ಮ ಅಂಕಣದಲ್ಲಿ ಅಥವಾ ನೀವು ಪಟಾಲಂನ ಚಟುವಟಿಕೆ ಮಾಡುವ ಸ್ಥಳದಲ್ಲಿ ಹಾರಿಸಿಕೊಳ್ಳಬೇಕು.

4) **ಪಟಾಲಂನ ಹರ್ಷನಾದ (Yell) ಪಟಾಲಂ ಗೀತೆ** : ಆಯ್ಕೆ ಮಾಡಿದ ಹೂವಿಗೆ ತಕ್ಕ ಗೀತೆ ಮತ್ತು ಹರ್ಷನಾದ ರಚಿಸಿ.

ಉದಾ : ಮಲ್ಲಿಗೆ! ಮೈಸೂರು ಮಲ್ಲಿಗೆ! ಮನಸೂರೆಗೊಳ್ಳುವಾ ಮಲ್ಲಿಗೆ! ಕಂಪಸೂಸುವ ಮಲ್ಲಿಗೆಯಂತಿರುವೆವು ನಾವು!

ಈ ನಾದವನ್ನು ಪಟಾಲಂನಲ್ಲಿ ಕೆಲಸ ಮಾಡುವಾಗ ಸ್ಫೂರ್ತಿದಾಯಕವಾಗಿ ಬಳಸಿ. ಚಲಿಸುವಾಗ ಬಳಸಿ ಆನಂದಿಸಿ. ಇದು ನಿಮ್ಮ ಇರುವಿಕೆ ಮತ್ತು ಬರುವಿಕೆಯನ್ನು ಸಾರುತ್ತದೆ.

ಪಟಾಲಂನ ಲಾಂಛನ ಕುರಿತು ಗೀತೆ ರಚಿಸಿ ಹಾಡಿ.

ಪಟಾಲಂನ ಅಂಕಣ (Patrol Corner) : ನಿಮ್ಮ ನಾಯಕಿಯವರು ಮತ್ತು ನೀವು ಸೇರಿ ಪಟಾಲಂನ ಚಟುವಟಿಕೆಗಳನ್ನು ಮಾಡಲು ಗೊತ್ತುಪಡಿಸಿಕೊಂಡಿರುವ ಸ್ಥಳವೇ ಪಟಾಲಂನ ಅಂಕಣ. ಈ ಸ್ಥಳದಲ್ಲಿ ಪಟಾಲಂನ ನಾಮಫಲಕವನ್ನು ಪ್ರದರ್ಶಿಸುವುದು. ಪಟಾಲಂನ ಧ್ವಜ ಹಾರಿಸಿಕೊಳ್ಳುವುದು. ಆಸನ ವ್ಯವಸ್ಥೆಮಾಡಿಕೊಳ್ಳುವುದು (ಕುರ್ಚಿ/ಚಾಪೆ) ಅಂಕಣಕ್ಕೆ ಬೇಕಾದ ಸಾಧನ ಸಲಕರಣೆಗಳನ್ನು ಜೋಡಿಸಿಕೊಳ್ಳುವುದು. ಈ ಅಂಕಣದಲ್ಲಿ ಪಟಾಲಂ ಚಟುವಟಿಕೆ ಮಾಡಿ.

ನಿಮ್ಮ ಸದಸ್ಯರೊಡನೆ ಸ್ನೇಹದಿಂದ ವರ್ತಿಸಿ ಒಂದುಗೂಡಿ ಕೆಲಸಮಾಡಿ ವಿಚಾರಗಳನ್ನು ಮತ್ತು ವಸ್ತುಗಳನ್ನು ವಿನಿಮಯಮಾಡಿಕೊಳ್ಳಿ. ಒಬ್ಬರನ್ನೊಬ್ಬರು ಗಮನಿಸಿಕೊಳ್ಳಿ, ನೋವು ನಲಿವುಗಳನ್ನು ನಿಂದನೆ ಅಭಿನಂದನೆಗಳನ್ನು ಹಂಚಿಕೊಳ್ಳಿ.

ಈ ಪದ್ಧತಿಯಲ್ಲಿ ಪ್ರಜಾಪ್ರಭುತ್ವದ ತತ್ವಗಳ ಆಧಾರದ ಮೇಲೆ ದಳದ ಆಡಳಿತವನ್ನು ನಡೆಸಲಾಗುವುದು.

ಗೈಡ್ ನಾಯಕಿಯ ಸಲಹೆ ಮತ್ತು **ಗೌರವನ್ಯಾಯ ಸಭೆಯ** ಅನುಮೋದನೆಯ ಮೇರೆಗೆ ದಳನಾಯಕಿ, ಉಪದಳನಾಯಕಿ, ಅಷ್ಟಕನಾಯಕಿ, ಪಟಾಲಂನ ಉಪದಳನಾಯಕಿಯರನ್ನು ಗೈಡುಗಳು ಚುನಾಯಿಸುವರು. ಈ ನಾಯಕಿಯರು ಗು.ನೀ.ನಿ.ಸಂ. ಭಾಗ III ರ ಪ್ರಕಾರ ಸಮವಸ್ತ್ರದ ಮೇಲೆ ಪದಕ ಮತ್ತು ತೋಳ್‌ಪಟ್ಟಿಗಳನ್ನು ಧರಿಸಬೇಕು.

ದಳನಾಯಕಿ : ಹಿರಿಯ ನಾಯಕಿ ಮತ್ತು ಸಹ ನಾಯಕಿ ಅನುಭವದಲ್ಲಿ ಜೇಷ್ಠಳಾದ ಒಬ್ಬ ಅಷ್ಟಕ ನಾಯಕಿಯನ್ನು ಆಯ್ಕೆ ಮಾಡಿ ದಳಸಭೆಯಲ್ಲಿ ಅನುಮೋದನೆ ಪಡೆದು ದಳನಾಯಕಿಯನ್ನಾಗಿ ನೇಮಕ ಮಾಡುತ್ತಾರೆ. ದಳನಾಯಕಿಯು ದಳದ ನಿರ್ವಹಣೆಯಲ್ಲಿ ಹಿರಿಯ ನಾಯಕಿಯವರಿಗೆ ಸಹಾಯ ಮಾಡುವಳು. ಇದೇ ರೀತಿ ದಳನಾಯಕಿಯ ಸಹಾಯಕ್ಕೆ ಉಪದಳನಾಯಕಿಯನ್ನು ನೇಮಕ ಮಾಡಲಾಗುತ್ತದೆ.

ಪಟಾಲಂ ನಾಯಕಿ : ಹಿರಿಯ ನಾಯಕಿ ಮತ್ತು ಸಹನಾಯಕಿಯರು ಅಷ್ಟಕದ ಸದಸ್ಯರಲ್ಲಿ ಅನುಭವಿಯಾದ ಜೇಷ್ಠಳನ್ನು ಅಷ್ಟಕದ ಸದಸ್ಯರ ಸಹಾಯದಿಂದ ಆಯ್ಕೆ ಮಾಡಿ ದಳಸಭೆಯ ಅನುಮೋದನೆ ಪಡೆದು ನೇಮಕ ಮಾಡುತ್ತಾರೆ. ಇವಳು ದಳ ನಾಯಕಿಗೆ ಅಷ್ಟಕದ ನಿರ್ವಹಣೆಯಲ್ಲಿ ಸಹಾಯ ಮಾಡುವಳು ಮತ್ತು ಅಷ್ಟಕದ ಅಭಿವೃದ್ಧಿಗಾಗಿ ಶ್ರಮಿಸುವಳು. ಇವಳಿಗೆ ಸಹಾಯಕಳಾಗಿ ಅಷ್ಟಕದ ಉಪನಾಯಕಿಯನ್ನು (Second) ಅಷ್ಟಕದ ಸದಸ್ಯರು ಆಯ್ಕೆ ಮಾಡಿ ಹಿರಿಯ ನಾಯಕಿ ಮತ್ತು ಹಿರಿಯ ಸಹನಾಯಕಿಯೊಡನೆ ಸಮಾಲೋಚಿಸಿ ದಳಸಭೆಯ ಅನುಮೋದನೆ ಪಡೆದು ನೇಮಕ ಮಾಡಲಾಗುವುದು.

ಪಟಾಲಂನ ಸಭೆ (Patrol in Council): ಗೌರವನ್ಯಾಯ ಸಭೆಗೆ ಹೋಗುವ ಮುನ್ನ ಪಟಾಲಂ ನಾಯಕಿಯ ಅಧ್ಯಕ್ಷತೆಯಲ್ಲಿ ಈ ಸಭೆ ನಡೆಸಲಾಗುವುದು. ಈ ಸಭೆಯಲ್ಲಿ ಪಟಾಲಂನ ಸದಸ್ಯರೆಲ್ಲರೂ ಸೇರಿ ಕಾರ್ಯಕ್ರಮಗಳು, ಹಣಕಾಸು ಮಂಡನೆ, ಸಮಸ್ಯೆಗಳು, ಶಿಸ್ತು ಇತ್ಯಾದಿಗಳ ಬಗ್ಗೆ ಚರ್ಚಿಸುವರು ಅಧ್ಯಕ್ಷೆ ಟಿಪ್ಪಣಿ ಮಾಡಿಕೊಂಡು ಗೌರವನ್ಯಾಯ ಸಭೆಯಲ್ಲಿ ಮಂಡಿಸುವಳು. ಅಲ್ಲಿ ನಡೆದ ಚರ್ಚೆ ಮತ್ತು ತೀರ್ಮಾನಗಳ ಟಿಪ್ಪಣಿಯನ್ನು ಮಾಡಿಕೊಂಡು ಪುನಃ ಅಷ್ಟಕ ಸಭೆ ಕರೆದು ವರದಿ ಸಲ್ಲಿಸುವಳು.

ಗೌರವನ್ಯಾಯ ಸಭೆ (Court of Honour - COH) : ದಳನಾಯಕಿ, ಉಪದಳನಾಯಕಿ, ಪಟಾಲಂನಾಯಕಿ, ಪಟಾಲಂನ ಉಪನಾಯಕಿಯರು ಸೇರಿ ಆಡಳಿತಾತ್ಮಕವಾಗಿ ನಡೆಸುವ ಸಭೆ ಇದಾಗಿದೆ. ಶಿಸ್ತಿನ ವಿಚಾರ ಸಭೆಯಲ್ಲಿ ಮಂಡಿಸುವಾಗ ಅಷ್ಟಕದ ಉಪನಾಯಕಿಯರನ್ನು ಹೊರತುಪಡಿಸಬೇಕು.

ಈ ಸಭೆ ಸೇರಿದ ಮೇಲೆ ದಳನಾಯಕಿ, ಉಪದಳನಾಯಕಿ, ಪಟಾಲಂನಾಯಕಿಯರಲ್ಲಿ ಒಬ್ಬರನ್ನು ಅಧ್ಯಕ್ಷರನ್ನಾಗಿ ಚುನಾಯಿಸುವರು. ಅಧ್ಯಕ್ಷರು ಆಸನಗ್ರಹಣ ಮಾಡಿ ಸಭೆಯನ್ನು ಸ್ವಾಗತಿಸುವರು. ಕಲಾಪ ಪ್ರಾರಂಭವಾಗುವುದು. ಪಟಾಲಂಗಳ ವರದಿ ಮಂಡನೆ, ಕಾರ್ಯಕ್ರಮ, ಶಿಸ್ತು, ಸಮಸ್ಯೆಗಳ ಚರ್ಚೆಯಾಗುವುದು, ತೀರ್ಮಾನ ಕೈಗೊಳ್ಳಲಾಗುವುದು. ಕೆಲವು ಸೇವಾ ಕಾರ್ಯಗಳಿಗೆ ಅನುಮೋದನೆ ನೀಡಲಾಗುವುದು, ಉತ್ತಮ ಕಾರ್ಯಗಳನ್ನು ಉತ್ತಮ ಸಾಧನೆಗಳನ್ನು ಅಭಿನಂದಿಸಲಾಗುವುದು. ಕಾರ್ಯದರ್ಶಿ ಕಲಾಪ ಕುರಿತು ಟಿಪ್ಪಣಿ ಬರೆದು ಕೊನೆಯಲ್ಲಿ ಓದಿ ಸಭೆಯ ಅನುಮೋದನೆ ಪಡೆದುಕೊಂಡು ಅಧ್ಯಕ್ಷರಿಂದ ಸಹಿ ಪಡೆದು ತಾನೂ ಸಹಿ ಮಾಡುವಳು. ಅಧ್ಯಕ್ಷಿಣಿಯು ವಂದಿಸಿ ಸಭೆಯನ್ನು ಮುಕ್ತಾಯ ಮಾಡುವಳು.

ಈ ಸಭೆಯಲ್ಲಿ ಹಿರಿಯ ನಾಯಕಿ ಮತ್ತು ಸಹಾಯಕ ಹಿರಿಯ ನಾಯಕಿಯರು ವೀಕ್ಷಕರಾಗಿ ಮತ್ತು ಸಲಹೆಗಾರರಾಗಿ ಭಾಗವಹಿಸುವರು.

ನಿಮ್ಮ ದಳದಲ್ಲಿ ನೀವು ಈ ಸಭೆಯನ್ನು ಅರ್ಥಪೂರ್ಣವಾಗಿ ನಡೆಸಿದರೆ ಇದು ನಿಮ್ಮಲ್ಲಿ ಉತ್ತಮ ನಾಯಕತ್ವ ಬೆಳೆಸುತ್ತದೆ. ಮನೆಯಿಂದ ರಾಷ್ಟ್ರಮಟ್ಟದವರೆಗೆ ನಿಮ್ಮನ್ನು ನಾಯಕರಾಗಲು ಸಮರ್ಥರನ್ನಾಗಿ ಮಾಡುತ್ತದೆ.

3.4 ಆರೋಗ್ಯದ ನಿಯಮಗಳು

ಬಿ.ಪಿ.ಯವರ ಷಟ್ಕ – ಸೂರ್ಯ ನಮಸ್ಕಾರ – ಯೋಗ

ಆರೋಗ್ಯವೇ ನಿಜವಾದ ಭಾಗ್ಯ. ಆರೋಗ್ಯವು ಜೀವಿಸಲು ಆನಂದ ಮತ್ತು ಉತ್ಸಾಹ ನೀಡುತ್ತದೆ. ಕಾರ್ಯನಿರ್ವಹಿಸಲು ಸಾಮರ್ಥ್ಯ ನೀಡುತ್ತದೆ. ಸೇವೆಸಲ್ಲಿಸಲು ಅನುವು ಮಾಡಿಕೊಡುತ್ತದೆ. **"ದೈಹಿಕವಾಗಿ ದೃಢವಾಗಿರುವ, ಮಾನಸಿಕವಾಗಿ ಜಾಗೃತರಾಗಿರುವ, ಸಾಮಾಜಿಕವಾಗಿ ಉಪಯುಕ್ತರಾಗಿರುವ ವ್ಯಕ್ತಿಗಳೇ ಆರೋಗ್ಯವಂತರು"**– U.N.O. ನಿರೂಪಣೆ. ಹೀಗೆ ಆರೋಗ್ಯವಾಗಿರಲು ಬಿ.ಪಿ.ಯವರು ಆರೋಗ್ಯದ ನಿಯಮಗಳನ್ನು ಮತ್ತು ಸರಳವಾದ ಷಟ್ಕ ವ್ಯಾಯಾಮವನ್ನು (B.P.s' Six) ರೂಪಿಸಿದರು.

ನಿಮ್ಮ ಆರೋಗ್ಯದ ಅವಶ್ಯಕತೆಗಳು

1. ಶುದ್ಧಗಾಳಿ 2. ಸೂರ್ಯನ ಬೆಳಕು 3. ವ್ಯಾಯಾಮ 4. ಸ್ವಚ್ಛತೆ 5. ಉಡುಪು 6. ಆಹಾರ 7. ವಿಶ್ರಾಂತಿ ಮತ್ತು ನಿದ್ರೆ 8. ಮನರಂಜನೆ

1. ಶುದ್ಧಗಾಳಿ :

ಹೀಗೆಂದರೇನು? ಶುದ್ಧಗಾಳಿ 20% ಆಮ್ಲಜನಕದಿಂದ ಕೂಡಿರುತ್ತದೆ. ಇದು ಎಲ್ಲ ಜೀವಿಗಳ ಉಸಿರಾಟಕ್ಕೆ ಅವಶ್ಯಕ. ಜೀವಿಗಳು ಆಮ್ಲಜನಕವನ್ನು ತೆಗೆದುಕೊಂಡು ಇಂಗಾಲದ ಡೈಆಕ್ಸೈಡ್ ಅನ್ನು ಬಿಟ್ಟುಕೊಡುತ್ತವೆ. ಇಂಗಾಲದ ಡೈ ಆಕ್ಸೈಡ್ ಅಂಶ 0.03 ಮಿತಿಗಿಂತ ಗಾಳಿಯಲ್ಲಿ ಹೆಚ್ಚಾದರೆ ಗಾಳಿ ಮಲಿನವಾಗುತ್ತದೆ. ಇದು ಒಂದು ಮುಖ್ಯ ಹಾಗೂ ಸಾಮಾನ್ಯ ಮಲಿನಕಾರಕ. ಇದು ಮಿತಿಮೀರಿದಾಗ ವಾಯು ಮಾಲಿನ್ಯವಾಗುತ್ತದೆ. ಮಲಿನವಾಯು ಅನಾರೋಗ್ಯವನ್ನು ಉಂಟುಮಾಡುತ್ತದೆ. ಗಾಳಿಯನ್ನು ಶುದ್ಧ ಮಾಡುವ ವ್ಯವಸ್ಥೆ ನಿಸರ್ಗದಲ್ಲಿದೆ. ಇಂಗಾಲದ ಡೈಆಕ್ಸೈಡ್‌ನ್ನು ಸಸ್ಯಗಳು ತೆಗೆದುಕೊಂಡು (ಎಲ್ಲಾ ಜೀವಿಗಳಿಗಾಗಿ) ಆಹಾರ ತಯಾರಿಸುತ್ತವೆ. ಹೀಗೆ ತಯಾರಿಸುವಾಗ ಆಮ್ಲಜನಕ ಬಿಟ್ಟುಕೊಡುತ್ತವೆ. ಹೀಗೆ ಸಸ್ಯಗಳು ಗಾಳಿಯನ್ನು ಶುದ್ಧ ಮಾಡುತ್ತವೆ. ನಾವೇಕೆ ಸಸ್ಯಗಳನ್ನು ಹೆಚ್ಚುಹೆಚ್ಚಾಗಿ ಬೆಳೆಸಬೇಕೆಂದು ಈಗ ತಿಳಿಯಿತೆ?

ಅಭ್ಯಾಸ : ಬೆಳಗಿನ ಗಾಳಿಯಲ್ಲಿ ಬಯಲಿನಲ್ಲಿ ಸಂಚರಿಸಿ, ಬಯಲಿನಲ್ಲಿ ಆಡಿ. ನಿಮ್ಮ ಮನೆ ಮತ್ತು ಶಾಲೆಯಲ್ಲಿ ಸಾಧ್ಯವಾದಷ್ಟು ಸಸ್ಯ ಬೆಳೆಸಿ, ಸಸ್ಯಗಳನ್ನು ಕಾಪಾಡಿ. ಮನೆಯಲ್ಲಿ ಕಿಟಕಿಗಳನ್ನು ತೆರೆದಿಡಿ. ಯಾವಾಗಲು ಮೂಗಿನಿಂದ ಉಸಿರಾಡಿ. ಮುಸುಕು ಹಾಕಿಕೊಂಡು ಮಲಗಬೇಡಿ.

2. ವ್ಯಾಯಾಮ :

ವ್ಯಾಯಾಮವು ದೇಹದ ಕ್ರಮಬದ್ಧ ಚಲನೆ. ಇದು ಮಾಂಸಖಂಡಗಳನ್ನು ಸದೃಢಗೊಳಿಸುತ್ತದೆ. ಬೆವರನ್ನು ಹೊರಹಾಕುತ್ತದೆ. ರಕ್ತಪರಿಚಲನೆಯನ್ನು ಸುಸ್ಥಿತಿಯಲ್ಲಿಡುತ್ತದೆ. ಬಿ.ಪಿ.ಯವರು 6 ವ್ಯಾಯಾಮಗಳನ್ನು ರೂಪಿಸಿದ್ದಾರೆ. ಇದನ್ನು ಬಿ.ಪಿ.ಯ ಷಟ್ಕ (B.P. Six) ಎನ್ನುತ್ತೇವೆ. ಇದನ್ನು ಬೆಳಗಿನ ಹೊತ್ತು ಮಾಡುವುದು ಆರೋಗ್ಯಕರ, ಇದಕ್ಕೆ ಪರ್ಯಾಯವಾಗಿ ಸೂರ್ಯ ನಮಸ್ಕಾರ ಅಥವಾ ಯೋಗಾಭ್ಯಾಸ ಗಳನ್ನು ಮಾಡಬಹುದು.

ಅಭ್ಯಾಸ : ಬಿ.ಪಿ. ಷಟ್ಕ, ವಾಯುವಿಹಾರ, ಓಟ, ಯೋಗ, ಸೂರ್ಯ ನಮಸ್ಕಾರ, ಇವುಗಳಲ್ಲಿ ಯಾವುದಾದರೂ ನಿತ್ಯವೂ ಬೆಳಗ್ಗೆ ಮಾಡುವ ಅಭ್ಯಾಸ ಮಾಡಿಕೊಳ್ಳಿ, ಚುರುಕಾಗಿ ಕೆಲಸ ಮಾಡುವುದು ನಡೆದಾಡುವುದೂ ನೈಜ ವ್ಯಾಯಾಮ. ಆಟವು ಆನಂದಮಯ ಅನಿಯಂತ್ರಿತ ವ್ಯಾಯಾಮ, ಚೆನ್ನಾಗಿ ಆಡಿ.

3. ಸ್ವಚ್ಛತೆ :

ದೇಹದ ಸ್ವಚ್ಛತೆ : ನಾವು ಸಂತೋಷವಾಗಿ ಆರೋಗ್ಯವಾಗಿರಬೇಕಾದರೆ ಸ್ವಚ್ಛತೆ ಬಹಳ ಮುಖ್ಯ. ಹಲ್ಲುಗಳನ್ನು ಚೆನ್ನಾಗಿ ಉಜ್ಜಿ ತೊಳೆಯುವುದು, ದಿನವೂ ಸ್ನಾನಮಾಡುವುದು. ಚರ್ಮ, ಉಗುರು, ಮೂಗು ಮತ್ತು ಕೂದಲನ್ನು ಸ್ವಚ್ಛವಾಗಿಟ್ಟುಕೊಳ್ಳಿ. ಮಲಮೂತ್ರ ವಿಸರ್ಜನಾ ಅಂತರವನ್ನು ನಿಗದಿಗೊಳಿಸಿ ಕೊಳ್ಳುವುದು. ಶೌಚಾಲಯವನ್ನು ಸ್ವಚ್ಛವಾಗಿಡುವುದು.

ಮಾನಸಿಕ ಸ್ವಚ್ಛತೆ : ಒಳ್ಳೆಯ ಆಲೋಚನೆ ಮಾಡಿ, ಕೆಟ್ಟ ವಿಚಾರವನ್ನು ಮನಸ್ಸಿನಿಂದ ದೂರವಿಡಿ ಎಲ್ಲದರಲ್ಲೂ ಒಳ್ಳೆಯತನ ಮತ್ತು ಸೌಂದರ್ಯವನ್ನು ಕಾಣಿ. ತಪ್ಪನ್ನು ಒಪ್ಪಿಕೊಳ್ಳಿ. ಪುನಃ ಅದೇ ತಪ್ಪನ್ನು ಮಾಡಬೇಡಿ. ಸೋಮಾರಿಯಾಗಿರಬೇಡಿ, "ಸೋಮಾರಿಯ ತಲೆ ದೆವ್ವದ ಕಾರ್ಖಾನೆ". ದೇವರನ್ನು ಪ್ರಾರ್ಥಿಸಿ, ಧ್ಯಾನವನ್ನು ಮಾಡಿ.

ಸುತ್ತಮುತ್ತಲಿನ ಸ್ವಚ್ಛತೆ : ನಿಮ್ಮ ಸುತ್ತಲನ್ನು ಸ್ವಚ್ಛವಾಗಿಡಿ, ನಿಮ್ಮ ಮನೆ ಶಾಲೆ –ಯನ್ನು ಚೆನ್ನಾಗಿ ಗುಡಿಸಿ, ಒರಸಿ, ಧೂಳು ಝಾಡಿಸಿ. ಅಂಗಳಗಳನ್ನು ಸ್ವಚ್ಛಮಾಡಿ, ಕಸಗಳನ್ನು ಅಲ್ಲಿ ಇಲ್ಲಿ ಹಾಕಬೇಡಿ. ಕಸವನ್ನು ಸರಿಯಾಗಿ ವಿಲೇವಾರಿ ಮಾಡಿ.

ಸೂರ್ಯನ ಬೆಳಕು : ಇದು ಜೀವಿಗಳ ಶಕ್ತಿಯ ಮುಖ್ಯವಾದ ಮೂಲ ಹಾಗೂ ವೆಚ್ಚರಹಿತ ಶಕ್ತಿಯ ನೈಸರ್ಗಿಕ ಮೂಲ. ನಮಗೆ ಬದುಕಲು ಮತ್ತು ಕೆಲಸ ಮಾಡಲು ಶಕ್ತಿಬೇಕು. ಇದು ನಮಗೆ ಹೇಗೆ ದೊರೆಯುತ್ತದೆ? ಸಸ್ಯಗಳು ಸೂರ್ಯನ ಬೆಳಕು ಅಥವಾ ಸೌರಶಕ್ತಿಯನ್ನು ಉಪಯೋಗಿಸಿಕೊಂಡು ಆಹಾರ ತಯಾರಿಸುತ್ತವೆ. ನಾವು ಆಹಾರವನ್ನು ಸೇವಿಸುವುದರ ಮೂಲಕ ಸೌರಶಕ್ತಿಯನ್ನು ಪಡೆಯುತ್ತೇವೆ.

ಅಭ್ಯಾಸ : ಸೌರಶಕ್ತಿಯಿಂದ ನೀರು ಕಾಯಿಸಿ ಸೌರಕುಕ್ಕರ್ ಬಳಸಿ ಅಡಿಗೆ ಮಾಡಿ. ದವಸಧಾನ್ಯಗಳನ್ನು ಬಿಸಿಲಿಗೆ ಹರಡಿ ಸಂರಕ್ಷಿಸಿ. ಕೆಲವು ತರಕಾರಿ, ಹಪ್ಪಳ ಸಂಡಿಗೆಗಳನ್ನು ಬಿಸಿಲಿಗೆ ಒಣಗಿಸಿ ಸಂಗ್ರಹಿಸಿ, ಸೌರಶಕ್ತಿಯನ್ನು ಉರುವಲಿಗೆ ಬದಲಾಗಿ ಉಪಯೋಗಿಸಬಹುದು.

ಎಳೆಬಿಸಿಲು ಇಳಿಬಿಸಿಲಿನಲ್ಲಿ ಸಂಚರಿಸಿ ಚನ್ನಾಗಿ ಆಟವಾಡಿದರೆ ಸೌರಶಕ್ತಿ ಪಡೆಯುವಿರಿ. ಸೌರ ಶಕ್ತಿ ಮೂಳೆಯ ಬಲವರ್ಧನೆಗೆ ಬೇಕಾದ 'ಆ' ಜೀವಸತ್ವವನ್ನು ದೇಹದಲ್ಲಿ ತಯಾರಿಸುತ್ತದೆ. ಸೌರಶಕ್ತಿ ಬಗ್ಗೆ ತಿಳಿದು, ತಿಳಿಸಿ, ಬಳಸಿ. ಹಣ ಮತ್ತು ವಿದ್ಯುಚ್ಛಕ್ತಿ ಉಳಿಸಿ. ಸೂರ್ಯನ ಬೆಳಕು ಕ್ರಿಮಿನಾಶಕ. ಸಾಧ್ಯವಾದಷ್ಟು ಬಿಸಿಲಿಗೆ ದೇಹ ಒಡ್ಡಿ.

4. ಮನರಂಜನೆ : ಇದು ಎಲ್ಲರಿಗೂ ಆನಂದ ನೀಡುತ್ತದೆ. ಶ್ರಮ, ಆಯಾಸ ಮತ್ತು ಚಿಂತೆಗಳನ್ನು ಸ್ವಲ್ಪ ಸಮಯ ದೂರಮಾಡುತ್ತದೆ. ಒಳ್ಳೆಯ ಸಂದೇಶಗಳನ್ನು ಕೊಡುತ್ತದೆ.

ಅಭ್ಯಾಸ : ಆಧುನಿಕ ಕಾಲದ ಅವಿಶ್ರಾಂತ ಬದುಕಿನಲ್ಲಿ ಮನರಂಜನೆಗಾಗಿ ಸಮಯ ಗೊತ್ತುಪಡಿಸಿಕೊಳ್ಳಿ ಇದಿರಂದ ನಿಮ್ಮ ಕಾರ್ಯಸಾಮರ್ಥ್ಯ ಹೆಚ್ಚುತ್ತದೆ. ನಿಮ್ಮ ಪ್ರತಿಭೆ ಮತ್ತು ಮಾತುಗಾರಿಕೆಯಿಂದ ಮನರಂಜನೆ ನೀಡಿ ಅಗ್ಗದ ಮನರಂಜನೆಗೆ ಬಲಿಯಾಗಬೇಡಿ.

5. ಉಡುಪು : ಉಡುಪುಗಳು ಸಡಿಲವಾಗಿರಬೇಕು. ಸಡಿಲ ಉಡುಪು ದೇಹದ ಅಂಗಾಗಗಳ ಚಲನೆಗೆ ಮತ್ತು ಬೆವರನ್ನು ಹೊರಹಾಕಲು ಅನುಕೂಲವಾಗಿರುತ್ತದೆ. ಋತುಮಾನಕ್ಕೆ ತಕ್ಕಂತೆ ಉಡುಪನ್ನು ಧರಿಸಿ.

ಅಭ್ಯಾಸ : ಬೇಸಿಗೆಯಲ್ಲಿ ತಿಳಿ ಬಣ್ಣದ ಹತ್ತಿ ಉಡುಪುಗಳನ್ನು ಧರಿಸುವುದು. ದಟ್ಟಬಣ್ಣದ ಉಡುಪುಗಳನ್ನು, ಉಣ್ಣೆ ಬಟ್ಟೆಯನ್ನು ಮಳೆ ಮತ್ತು ಚಳಿಗಾಲದಲ್ಲಿ ಧರಿಸುವುದು. ಚೊಕ್ಕಟವಾದ ಉಡುಪು ನಿಮ್ಮ ಘನತೆಯನ್ನು ಮತ್ತು ಅಂದವನ್ನು ಹೆಚ್ಚಿಸುತ್ತದೆ.

6. ಆಹಾರ : ಶ್ರೀಮಂತ ಆಹಾರ ಸಮತೋಲನ ಆಹಾರವಲ್ಲ. ಹಾಗಾದರೆ ಸಮತೋಲನ ಆಹಾರವೆಂದರೇನು? ಹೆಚ್ಚು ಶರ್ಕರಪಿಷ್ಟ (ಕಾರ್ಬೋಹೈಡ್ರೇಟ್) ಸಸಾರಜನಕ (ಪ್ರೋಟೀನ್) ಸ್ವಲ್ಪ ಮೇದಸ್ಸು. ಉಪ್ಪು ಹಾಗೂ ಜೀವಸತ್ವ ಮತ್ತು ನಾರು ಪದಾರ್ಥವನ್ನು ಹೊಂದಿರುವ ಆಹಾರವೇ ಸಮತೋಲನ ಆಹಾರ.

ಅಭ್ಯಾಸ : ನಿಮ್ಮ ನಿತ್ಯದ ಆಹಾರಕ್ಕೆ ಮೊಳಕೆ ಕಾಳು, ಹಸಿ ತರಕಾರಿ, ಆಯಾ ಕಾಲದಲ್ಲಿ ಸಿಗುವ ಹಣ್ಣುಗಳನ್ನು ಸೇರಿಸಿಕೊಳ್ಳಿ, ಕರಿದ ಪದಾರ್ಥಗಳನ್ನು ಕಡಿಮೆ ತಿನ್ನಿ. ಆಹಾರ ಸೇವನೆಯ ಅವಧಿಯ ಅಂತರವನ್ನು ನಿಗದಿಗೊಳಿಸಿಕೊಳ್ಳಿ. ಸಂತೋಷದಿಂದ ಆಹಾರ ಸೇವಿಸಿ ದೇಹಕ್ಕೆ ಹೆಚ್ಚು ಲಾಭವಾಗುತ್ತದೆ. ಹಳಸಿದ ಆಹಾರ ಮತ್ತು ತೆರೆದಿಟ್ಟ ಆಹಾರವನ್ನು ತಿನ್ನಬೇಡಿ. ಕುಡಿಯುವ ನೀರನ್ನು ಶುದ್ಧವಾದ ಪಾತ್ರೆಯಲ್ಲಿ ಮುಚ್ಚಿಡಿ.

ಚೆನ್ನಾಗಿ ಚುರುಕಾಗಿ ಕೆಲಸ ಮಾಡಿ ನಂತರ ವಿಶ್ರಾಂತಿ ಪಡೆಯಿರಿ ಕೆಲಸ ಬದಲಾಯಿಸಿದಾಗಲೂ ಮನಸ್ಸಿಗೆ ಬೇಸರವಾಗುತ್ತದೆ. ನಿದ್ರಿಸುವಾಗ ಒಳ್ಳೆಯ ಚಿಂತನೆ ಮಾಡಿ. ಮನಸ್ಸು ಶಾಂತಗೊಳಿಸಿ, ರಾತ್ರಿಯಲ್ಲಿ ಸುಮಾರು ಏಳರಿಂದ ಎಂಟು ಗಂಟೆಗಳ ಕಾಲ ಚೆನ್ನಾಗಿ ನಿದ್ರಿಸಿ.

3.5 ಬಿ.ಪಿ.ಯವರ ಷಟ್ಕ ವ್ಯಾಯಾಮ (B.P. Six Exercise)

ಪ್ರತಿಯೊಬ್ಬರೂ ಆರೋಗ್ಯವನ್ನು ಕಾಪಾಡಿಕೊಳ್ಳಲು ವ್ಯಾಯಾಮ ಮಾಡಬೇಕು. ಪ್ರತಿದಿನ ಕನಿಷ್ಠ 10 ನಿಮಿಷವಾದರೂ ವ್ಯಾಯಾಮ ಮಾಡಬೇಕು. ವ್ಯಾಯಾಮ ಮಾಡುವಾಗ ಸರಳ ಸಡಿಲ ಉಡುಪುಗಳನ್ನು ಧರಿಸಬೇಕು. ವ್ಯಾಯಾಮವನ್ನು ಬಯಲಿನಲ್ಲಿ ಅಥವಾ ಗಾಳಿ ಬೆಳಕು ಇರುವ ಕೊಠಡಿಗಳಲ್ಲಿ ಮಾಡಬೇಕು. ಪ್ರತಿ ಅಂಗ ಚಲನೆಯು ಆದಷ್ಟು ನಿಧಾನವಾಗಿ ಮಾಡುತ್ತಾ ಉಚ್ವಾಸ ಮತ್ತು ನಿಶ್ವಾಸದೊಡನೆ ಸಮನ್ವಯಗೊಳಿಸಬೇಕು. ಹೀಗೆ ಮಾಡಿದಾಗ ದೇಹಕ್ಕೆ ಹೆಚ್ಚು ಲಾಭವಾಗುತ್ತದೆ. ಬಿ.ಪಿ.ಯವರು ಯಾವ ಸಾಧನವೂ ಇಲ್ಲದೆ ಮಾಡಬಹುದಾದ ಆರು ಸರಳ ವ್ಯಾಯಮಗಳನ್ನು ಸೂಚಿಸಿದ್ದಾರೆ. ಈ ವ್ಯಾಯಾಮಗಳನ್ನು ಸ್ವಯಂ ಆದೇಶ ನೀಡಿಕೊಂಡು ನಿಮ್ಮದೇ ಆದ ಗತಿಯಲ್ಲಿ (Speed) ಮಾಡಬಹುದು.

ವ್ಯಾಯಾಮ 1 : ತಲೆ ಮತ್ತು ಕುತ್ತಿಗೆಗೆ :

ಎರಡು ಹಸ್ತಗಳನ್ನು ಒಂದುಕ್ಕೊಂದು ಉಜ್ಜುವುದು. ಬೆರಳುಗಳಿಂದ ಮುಖ, ಕತ್ತು ಮತ್ತು ತಲೆಗಳನ್ನು ಚೆನ್ನಾಗಿ ಹಲವು ಬಾರಿ ಉಜ್ಜಿ, ಬಿಸಿ ಏರಿ ಹಾಯಾಗಿದೆ ಎನ್ನುವವರೆಗೂ ಉಜ್ಜಿ, ನಂತರ ಒಂದು ಲೋಟ ತಣ್ಣೀರು ಕುಡಿದು ಈ ಕೆಳಕಂಡ ವ್ಯಾಯಾಮಗಳನ್ನು ಮಾಡಿ.

ವ್ಯಾಯಾಮ 2 : ಎದೆಗೆ :

ಸಾವಧಾನದಲ್ಲಿ ನಿಂತು ಕೈಗಳನ್ನು ನಿಧಾನವಾಗಿ ಮುಂದಕ್ಕೆ ತಂದು ಜೋಡಿಸಿ ತಲೆ ಮೇಲಕ್ಕೆ ಎತ್ತಿ ಹಿಂದಕ್ಕೆ ಬಾಗಿಸಿ, ಕೈಗಳನ್ನು ತಲೆಯ ಮೇಲಕ್ಕೆ ತನ್ನಿ ಹೀಗೆ ಮಾಡುತ್ತಾ ಉಸಿರು ನಿಧಾನವಾಗಿ ಆಳವಾಗಿ ಎಳೆದುಕೊಳ್ಳಿ, ಸಾಕಷ್ಟು ಶುದ್ಧವಾದ ಗಾಳಿ ದೇಹವನ್ನು ಸೇರುತ್ತದೆ. ನಂತರಜೋರಾಗಿ ಧನ್ಯವಾದ್ ಎಂದು ಕೈಗಳನ್ನು ಹಿಂದಕ್ಕೆ ತೆಗೆದುಕೊಂಡು ದೇವರಿಗೆ ನಮಿಸಿ ನಿಧಾನವಾಗಿ ಉಸಿರು ಬಿಡುತ್ತಾ ಕೈಗಳನ್ನು ಮುಂದಕ್ಕೆ



ತಂದು ಪುನಃ ಸಾವಧಾನ್ ಸ್ಥಿತಿಗೆ ಬನ್ನಿ. ಈ ವ್ಯಾಯಾಮವನ್ನು 12 ಬಾರಿ ಮಾಡಬಹುದು. ಈ ವ್ಯಾಯಾಮವು ಭುಜ, ಎದೆ, ಹೃದಯ ಮತ್ತು ಶ್ವಾಸಕೋಶಗಳನ್ನು ಬಲಗೊಳಿಸುತ್ತದೆ, ಸದೃಢಗೊಳಿಸುತ್ತದೆ ಮತ್ತು ಅವುಗಳ ಬೆಳವಣಿಗೆಗೆ, ಸಹಾಯ ಮಾಡುತ್ತದೆ.

ವ್ಯಾಯಾಮ 3 : ಹೊಟ್ಟೆಗೆ :

ಸಾವಧಾನ್‌ನಲ್ಲಿ ನಿಲ್ಲಿ. ಬೆರಳು ಮತ್ತು ಕೈಗಳನ್ನು ಮುಂದಕ್ಕೆ ಚಾಚಿ. ನಿಧಾನವಾಗಿ ಎರಡೂಕೈಗಳನ್ನು ಸಮಾನ ಅಂತರದಲ್ಲಿ ಉಸಿರು ಎಳೆದುಕೊಳ್ಳುತ್ತಾ ಬಲಕ್ಕೆ ತಿರುಗುತ್ತಾ ಸಾಧ್ಯವಾದಷ್ಟು ಹಿಂದಕ್ಕೆ ಚಾಚಿ ಹೀಗೆ ಮಾಡುವಾಗ ಸೊಂಟಮಾತ್ರ ಚಲಿಸಬೇಕು. ಕಾಲು ನಿಂತಲ್ಲಿಯೆ ಇರಬೇಕು (ಚಲಿಸ ಬಾರದು). ಹಾಗೆಯೇ ತಿರುಗುತ್ತಾ ಉಸಿರನ್ನು ಬಿಡುತ್ತಾ ಎಡಭಾಗದಿಂದ ಹಿಂಬದಿಗೆ ಚಾಚಿ, ಹೀಗೆ 6 ಬಾರಿ ಬಲಗಡೆಯಿಂದ ಪ್ರಾರಂಭಿಸಿ, 6 ಬಾರಿ ಎಡಗಡೆಯಿಂದ ಪ್ರಾರಂಭಿಸಿ, ಮಾಡಿ.

ವ್ಯಾಯಾಮ 4 : ಸೊಂಟಕ್ಕೆ :



ಕೈಗಳನ್ನು ಮೇಲಕ್ಕೆ ಎತ್ತಿ ಬೆರಳುಗಳನ್ನು ಜೋಡಿಸಿ ಸಾಧ್ಯವಾದಷ್ಟು ಹಿಂದಕ್ಕೆ ಬಾಗಿ ಶಂಕುವಿನಾಕಾರ ವಾಗುತ್ತದೆ. ನಿಧಾನವಾಗಿ ಉಸಿರು ಎಳೆದು ಕೊಳ್ಳುತ್ತಾ ಬಲದಿಂದ ಕೈಗಳನ್ನು ಜೋಡಿಸಿಕೊಂಡೇ ಕೆಳಕ್ಕೆ ತನ್ನಿ ನಂತರ ಉಸಿರು ಬಿಡುತ್ತಾ ಕೈಗಳನ್ನು ಎಡ ಪಕ್ಕದಿಂದ ಮೇಲಕ್ಕೆ ತನ್ನಿ 6 ಬಾರಿ ಎಡದಿಂದ ಪ್ರಾರಂಭಿಸಿ 6 ಬಾರಿ ಬಲದಿಂದ ಪ್ರಾರಂಭಿಸಿ ಈ ವ್ಯಾಯಾಮವನ್ನು ಮಾಡಿ.

ಈ ವ್ಯಾಯಾಮದಲ್ಲಿ ಸೊಂಟ ತಿರುಗುತ್ತದೆ. ಸೊಂಟ ಮತ್ತು ಹೊಟ್ಟೆಯ ಸ್ನಾಯುಗಳು ಬಲಗೊಳ್ಳುತ್ತವೆ. ಈ ವ್ಯಾಯಾಮ ಮಾಡುತ್ತಾ ಮೇಲೆ ಸ್ವರ್ಗವನ್ನು

ನೋಡುತ್ತಾ (ಉನ್ನತ ಭಾವನೆ ಹೊಂದುವಿರಿ) ಸುತ್ತುವಾಗ ಉಸಿರು ಬಿಗಿಹಿಡಿದಾಗ ಸದ್ಭಾವನೆಯನ್ನು ಹೊಂದುತ್ತೀರಿ.

ವ್ಯಾಯಾಮ 5 : ದೇಹದ ಕೆಳಭಾಗಕ್ಕೆ – ಉದರ ಮತ್ತು ಕಾಲುಗಳಿಗೆ :

ನೇರವಾಗಿ ನಿಲ್ಲಿ ಹಿಂದಕ್ಕೆ ಕೈ ಜೋಡಿಸಿ ಆಕಾಶ ನೋಡುತ್ತಾ ಸಾಧ್ಯವಾದಷ್ಟು ಹಿಂದಕ್ಕೆ ಬಾಗುತ್ತಾ ಕೈಯನ್ನು ನೇರವಾಗಿ ಜೋಡಿಸಿ ಹಿಂದಕ್ಕೆ ಚಾಚಿ ಉಸಿರನ್ನು ನಿಧಾನವಾಗಿ ಎಳೆದುಕೊಳ್ಳಿ ಅದೇ ಗತಿಯಲ್ಲಿ ಮುಂದಕ್ಕೆ ಬಾಗಿ ಕೈಗಳನ್ನು ಹೆಬ್ಬೆರಳಿಗೆ ಮುಟ್ಟಿಸಿ ಹೀಗೆ ಮಾಡುವಾಗ ಮೊಣಕಾಲು ನೇರವಾಗಿರಲಿ.

ಆಕಾಶದತ್ತ ನೋಡುತ್ತಾ "ಅಡಿಯಿಂದ ಮುಡಿಯವರೆಗೂ ನಾನು ನಿನ್ನವನು ಎಂದು ಹೇಳಿಕೊಳ್ಳಿ".

ಈ ವ್ಯಾಯಾಮದ ಮೌಲ್ಯವು ದೇಹವನ್ನು ಮೇಲೆತ್ತುವುದರ ಮೇಲಿದೆ. ಬಾಗುವುದರ ಮೇಲಲ್ಲ. ಇದು ಹೆಚ್ಚಿನ ಉದರಾಂಗವನ್ನು ಮರ್ಧನ ಮಾಡುತ್ತದೆ. ಪಾದದ ಹೆಬ್ಬೆರಳನ್ನು ಮುಟ್ಟುವುದು ಕಡ್ಡಾಯವಲ್ಲ ಸಾಧ್ಯವಾದಷ್ಟು ಬಾಗಿ.

ವ್ಯಾಯಾಮ 6 : ಕಾಲುಗಳು, ಪಾದಗಳು, ಕಾಲ್ಬೆರಳುಗಳು :



ಸಾವಧಾನ್‌ನಲ್ಲಿ ಮೊಣಕಾಲು ಬಾಗಿಸಿ ಹಿಮ್ಮಡಿ ಎತ್ತಿ ಬೆರಳನ್ನು ಊರಿ ದೇಹವನ್ನು ಕೂಡುವ ಸ್ಥಿತಿಗೆ ತನ್ನಿ, ಉಸಿರನ್ನು ನಿಧಾನವಾಗಿ ಎಳೆದುಕೊಳ್ಳಿ, ನಂತರ ದೇಹವನ್ನು ನಿಧಾನವಾಗಿ ಮೇಲೆತ್ತಿ ನಿಧಾನವಾಗಿ ಉಸಿರುಬಿಡಿ. ದೇಹವನ್ನು ಅಲುಗಾಡ ದಂತೆ ನೋಡಿಕೊಳ್ಳಿ. 12 ಬಾರಿ ಮಾಡಿ ಈ ವ್ಯಾಯಾಮದಿಂದ ಹೊಟ್ಟೆ ಸ್ನಾಯುಗಳು ಮೀನು ಖಂಡ, ಕಾಲ್ಬೆರಳುಗಳು, ಸ್ನಾಯುಗಳು ಬಲಗೊಳ್ಳುತ್ತವೆ. ಕುಳಿತು ಏಳುವ ಈ ವ್ಯಾಯಾಮವು ನಿಮ್ಮ ಅಂಗಗಳನ್ನು ಒಟ್ಟುಗೂಡಿಸುತ್ತದೆ. (Holds Your organs together)

ಈ ವ್ಯಾಯಾಮವನ್ನು ಶಿಬಿರಗಳಲ್ಲಿ, ಸಮಾವೇಶಗಳಲ್ಲಿ ಬೆಳಿಗ್ಗೆ 6–30ರಿಂದ 7 ರ ವರೆಗೆ ಮಾಡಿಸಲಾಗುವುದು. ಅದರೆ ಇದರ ನಿಜವಾದ ಫಲ ಪಡೆಯಲು ಪ್ರತಿದಿನ ಬೆಳಗ್ಗೆ ಮಾಡಬೇಕು ಇದು ಸರಳ ಹಾಗೂ ಪ್ರಭಾವಯುತ ವ್ಯಾಯಾಮ.

3.3 ಹಗ್ಗ ಕೌಶಲ (Rope Craft)

ಹಗ್ಗದ ಬಳಕೆ ಈ ಚಳವಳಿಯಲ್ಲಿ ಸಾಮಾನ್ಯ. ಕಾರಣ ನಾವು ಹೆಚ್ಚು ಹೆಚ್ಚು ಹೊರಾಂಗಣ ಚಟುವಟಿಕೆಯಲ್ಲಿ ತೊಡಗುತ್ತೇವೆ. ಹತ್ತಿ, ತೆಂಗು, ಸೆಣಬು, ಮನಿಲಾ, ನೈಲಾನ್ ಇತ್ಯಾದಿಯ ಎಳೆಗಳಿಂದ ವಿವಿಧ ಗಾತ್ರದ ಹಗ್ಗಗಳನ್ನು ಹೊಸೆಯಲಾಗುವುದು. ಹಗ್ಗವನ್ನು ಸಾಮಾನ್ಯವಾಗಿ 2, 3, 4, 6 ಎಳೆಗಳಿಂದ ಹುರಿ ಸುತ್ತಲಾಗಿರುತ್ತದೆ. ಸಂದರ್ಭಕ್ಕೆ ತಕ್ಕಂತೆ ಹಗ್ಗದ ಮಾದರಿ, ಗಾತ್ರ ಮತ್ತು ಉದ್ದವನ್ನು ನಿರ್ಧರಿಸಬೇಕಾಗುತ್ತದೆ. ಹಗ್ಗವನ್ನು ಬಳಸುವ ಮುನ್ನ ಅದರ ತುದಿಗಳನ್ನು ಸುರಕ್ಷಿತಗೊಳಿಸಬೇಕು. ಇಲ್ಲವಾದರೆ ಎಳೆಗಳು ಬಿಚ್ಚಿ ಹಗ್ಗವು ಬಿಗಿಕಳೆದುಕೊಳ್ಳುತ್ತದೆ.

3.1 ತುದಿಕಟ್ಟು – Whipping:



ಗಂಟುಗಳನ್ನು ಕಟ್ಟಲು 4 ಎಳೆಯ ಹತ್ತಿ ಹಗ್ಗಗಳನ್ನು ಬಳಸಬೇಕು. ಅಭ್ಯಾಸದ ಹಗ್ಗ ಸುಮಾರು 3 ಮೀಟರ್ ಉದ್ದವಿರಬೇಕು. ಹಗ್ಗವನ್ನು ಬಳಸುವ ಮುನ್ನ ಅದರ ಎಳೆಗಳು ಬಿಚ್ಚಿಕೊಳ್ಳದಂತೆ ಎರಡು ತುದಿಗಳಿಗೂ ತುದಿ ಕಟ್ಟುಕಟ್ಟಿ ಹಗ್ಗವನ್ನು ಸುರಕ್ಷಿತ ಗೊಳಿಸಬೇಕು. ಹಗ್ಗದ ತುದಿಯಿಂದ ಅರ್ಧ ಇಂಚು ಕೆಳಗೆ ಒಂದು ಇಂಚಿನಷ್ಟು ಕಟ್ಟು ಕಟ್ಟಬೇಕು.

3.2 ಗಂಟುಗಳು – Knots:

ಗಂಟುಗಳನ್ನು ದಿನನಿತ್ಯವೂ ಬಳಸುತ್ತೇವೆ. ಗಂಟುಗಳು ಸರಕು ಕಟ್ಟಲು, ಹಗ್ಗಕ್ಕೆ ಹಗ್ಗ ಜೋಡಿಸಲು, ಗಾಯಕ್ಕೆ ಪಟ್ಟಿ ಕಟ್ಟಲು, ಕಟ್ಟುಗಳನ್ನು ಕಟ್ಟಲು, ಜೀವ ಉಳಿಸಲು, ಕರಕುಶಲ ವಸ್ತುಗಳನ್ನು ತಯಾರಿಸಲು ಅವಶ್ಯಕವಾದ ಕೌಶಲ. ಕೆಲವು ಕಸಬುಗಳಲ್ಲಿ ಗಂಟುಗಳನ್ನು ಬಳಸಲಾಗುವುದು. ಉದಾ: ಧೋಬಿ. ಬೆಸ್ತರು, ಹೂ ಕಟ್ಟುವವರು, ಮನೆ ಕಟ್ಟುವವರು, ಸೌದೆ ಮಾರುವವರು ತಮ್ಮ ಕಸುಬಿನಲ್ಲಿ ಗಂಟುಗಳನ್ನು ಮತ್ತು ಕಟ್ಟುಗಳನ್ನು ಬಳಸುವ ಪರಿಣತಿ ಹೊಂದಿರುವರು. ಗಂಟು ಹಾಕುವುದನ್ನು ಚೆನ್ನಾಗಿ ಅಭ್ಯಾಸ ಮಾಡಬೇಕು. ಗಂಟನ್ನು ಕೈಕಾಲುಗಳ ಮೇಲೆ ಹಾಕಿಕೊಳ್ಳಬಾರದು. ಅಭ್ಯಾಸ ಮಾಡುವಾಗಲೆ ಸೂಕ್ತ ಸನ್ನಿವೇಶದಲ್ಲಿ ಅಭ್ಯಾಸ ಮಾಡಬೇಕು. 3 ಮೀಟರಿನಷ್ಟು ಹತ್ತಿ ಹಗ್ಗದ ಎರಡು ತುದಿಗಳಿಗೂ ತುದಿಕಟ್ಟು ಕಟ್ಟಿ ನಂತರ ಬಳಸಿ. ಸರಿಯಾದ ಕ್ರಮದಲ್ಲಿ ಗಂಟನ್ನು ಹಾಕಿದರೆ ಬಿಚ್ಚುವುದು

ಸುಲಭ. ಸರಿಯಾದ ಕ್ರಮದಲ್ಲಿ ಹಾಕದಿದ್ದರೆ ಗಂಟುಬಿಚ್ಚಿಕೊಳ್ಳುವುದು, ಇಲ್ಲವೇ ಕಗ್ಗಂಟಾಗಿ ಹಾನಿವುಂಟಾಗುವುದು.

* ಹಗ್ಗದ ಉದ್ದ ಭಾಗವು ಎಡಗೈಯಲ್ಲಿ ಅಚಲವಾಗಿರುತ್ತದೆ (Standing Rope) ಬಲಗೈಯಲ್ಲಿರುವ ಹಗ್ಗದ ಭಾಗವು ಚಲಿಸುತ್ತದೆ. (Running Rope)
* ಗಂಟು ಹಾಕುವ ಮುನ್ನ ಅರೆಗಂಟು (ಮಲಕು = hitch) ಕುಣಿಕೆ (Loop ಮಾಡಿಕೊಳ್ಳಲಾಗುವುದು). ಹಗ್ಗ ಕುಣಿಕೆಯ ಕೆಳಗೆ ಹಾದು ಹೋದರೆ ಕೆಳಗೈ ಹಗ್ಗ (Under hand) ಎನ್ನಲಾಗುವುದು, ಮೇಲೆ ಹಾದು ಹೋದರೆ (over hand) ಮೇಲುಗೈ ಹಗ್ಗ ಎನ್ನಲಾಗುವುದು.

ಸಮಗಂಟು – Reef Knot :



ಒಂದೆ ಹಗ್ಗದ ಎರಡು ತುದಿಗಳನ್ನು ಜೋಡಿಸಲು ಮತ್ತು ಒಂದೇ ಗಾತ್ರದ ಎರಡು ಹಗ್ಗಗಳನ್ನು ಜೋಡಿಸಲು ಈ ಗಂಟನ್ನು ಉಪಯೋಗಿಸಲಾಗುವುದು ಈ ಗಂಟನ್ನು ಪ್ರಥಮ ಚಿಕಿತ್ಸೆಯಲ್ಲಿ ಪಟ್ಟಿಕಟ್ಟಲು, ಸರಕುಗಳನ್ನು ಕಟ್ಟಲು, ಅಗಸರು ಬಟ್ಟೆಯ ಮೂಟೆಯನ್ನು ಕಟ್ಟಲು ಉಪಯೋಗಿಸುವರು.

ಮೂಲೆ ಗಂಟು – Sheet Bend :

ಅಸಮ ದಪ್ಪದ ಹಾಗೂ ತೆಳುವಾದ ಹಗ್ಗಗಳನ್ನು ಜೋಡಿಸುವಾಗ, ಹಡಗಿನ ಹಾಯಿ ಕಟ್ಟುವಾಗ, ಧ್ವಜಕ್ಕೆ ಧ್ವಜಸೂತ್ರ ಕಟ್ಟುವಾಗ ಮತ್ತು ಕುಣಿಕೆಗೆ ಪಟ್ಟಿಯನ್ನು ಅಥವಾ ಹಗ್ಗವನ್ನು ಜೋಡಿಸುವಾಗ ಈ ಗಂಟನ್ನು ಉಪಯೋಗಿಸಲಾಗುವುದು.



ಕೊಟ್ಟಿಗೆ ಗಂಟು – Clove Hitch :

ಹಗ್ಗದಲ್ಲಿ ಸಮನಾಂತರ ಸೆಳೆತವಿದ್ದಾಗ ಈ ಗಂಟನ್ನು ಉಪಯೋಗಿಸಲಾಗುವುದು ಉದಾ : ಬಟ್ಟೆ ಒಣಗಿಸುವ ಹಗ್ಗ, ಆಟದ ಜಾಲ (net), ದೋಣಿಗಳನ್ನು ಮತ್ತು ಪ್ರಾಣಿಗಳನ್ನು ಗೂಟಗಳಿಗೆ ಕಟ್ಟುವಾಗ, ಕೈಮಂಚ–ಡೋಲಿ (Stretcher)


1 2

ತಯಾರಿಸುವಾಗ, ಹೂವನ್ನು ಕಟ್ಟುವಾಗ (ಕಟ್ಟಿದ ಹೂವಿನ ಗಂಟನ್ನು ಗಮನಿಸಿ) ಧ್ವಜದ ಸೂತ್ರವನ್ನು ಗುರುತು ಕಡ್ಡಿಗೆ (Toggle) ಕಟ್ಟಲು, ಹಗ್ಗದ ಬೇಲಿಕಟ್ಟಲೂ ಉಪಯೋಗಿಸಲಾಗುವುದು. ಇದನ್ನು ಕಟ್ಟುಗಳನ್ನು (lashing) ಕಟ್ಟಲು ಉಪಯೋಗಿಸಲಾಗುವುದು.

1 2

ಕಣಕಾಲು ಗಂಟು – Sheep Shank:

ಉದ್ದನೆಯ ಹಗ್ಗ ಕತ್ತರಿಸದೆ ಗಿಡ್ಡ ಮಾಡಲು, ಎರಡೂಕಡೆ ಬಂಧಿಸಿದ ಹಗ್ಗ ಜೋತು ಬಿದ್ದಾಗ ಎಳೆದು ಗಿಡ್ಡಮಾಡಲೂ, ಹಗ್ಗದ ದುರ್ಬಲ ಭಾಗವನ್ನು

ಬಲಗೊಳಿಸಲು, ಕವಣೆ ಬೀಸಲು ಈ ಗಂಟನ್ನು ಉಪಯೋಗಿಸಲಾಗುವುದು. ಉದ್ದನೆಯ ವಿದ್ಯುತ್ ತಂತಿ/ಹಗ್ಗ ನೇತು ಬಿದ್ದಿದ್ದರೆ ಈ ಗಂಟು ಬಳಸಿ ಜೋಡಿಸಬಹುದು.

ಒಂದು ಸುತ್ತು ಮತ್ತು ಎರಡು ಅರೆ ಗಂಟು – Round Turn & Two Half Hitches:

ಒಂದು ತುದಿಯನ್ನು ಪ್ರಾಣಿಯ ಕತ್ತಿನ ಸುತ್ತಲೂ, ದೋಣಿಗೆ, ಗುಡಾರಕ್ಕೆ, ಧ್ವಜ ಸ್ತಂಭಕ್ಕೆ ಕಟ್ಟಿದ್ದು, ಹಗ್ಗದ ಇನ್ನೊಂದು ಮುಕ್ತ ತುದಿಯನ್ನು ಗೂಟಕ್ಕೆ, ಮರಕ್ಕೆ ಬಾಗುವೊಳೆಗೆ (Peg) ಕಟ್ಟಲು, ಕೆಟ್ಟುಹೋದ ಕಾರನ್ನು /



ವಾಹನಗಳನ್ನು ಮತ್ತೊಂದು ವಾಹನಕ್ಕೆ ಕಟ್ಟಿ ಎಳೆದುಕೊಂಡು ಹೋಗಲು, ಉಪಯೋಗಿಸಲಾಗುವುದು. ದೋಣಿಗೆ ಕಟ್ಟಿರುವ ಹಗ್ಗವನ್ನು ಅವಶ್ಯವಿದ್ದಷ್ಟು ಬಿಟ್ಟು ಗೂಟದ ಸುತ್ತಲೂ ಒಂದು ಸುತ್ತುಸುತ್ತಿ ಹಗ್ಗದ ಗಿಡ್ಡ ತುದಿಯಿಂದ ಉದ್ದನೆಯ ತುದಿಯ ಮೇಲೆ ಎರಡು ಅರೆಗಂಟು ಹಾಕಿ.

ಬಾಗು ಗಂಟು – Bowline :

ಪ್ರಾಣಿಗಳ ಕತ್ತಿನ ಸುತ್ತಲೂ ಕತ್ತು ಪಟ್ಟಿ ಕಟ್ಟಲೂ, ನೀರಿನಲ್ಲಿ ಸಿಕ್ಕಿಬಿದ್ದವರನ್ನು ಹೊರತರಲು ಜೀವರಕ್ಷಣೆಗಾಗಿ ಈ ಗಂಟನ್ನು ಉಪಯೋಗಿಸಲಾಗುವುದು.

ಬೆಸ್ತರ ಗಂಟು – Fisherman's Knot

ತೇವವಾದ ಎರಡು ಹಗ್ಗವನ್ನು ಅಥವಾ ಒಂದೇ ಹಗ್ಗದ ಎರಡು ತುದಿಗಳನ್ನು ಜೋಡಿಸಲು, ಪಾತ್ರೆಗೆ ಹಿಡಿಕೆ ಮಾಡಲು ಈ

ಗಂಟನ್ನು ಉಪಯೋಗಿಸಲಾಗುವುದು. ಈ ಗಂಟುಗಳು ಸುಲಭವಾಗಿ ಜಾರುತ್ತವೆ ಆದರೆ ಬಿಚ್ಚಿಕೊಳ್ಳುವುದಿಲ್ಲ.

ಸಮಾನಾಂತರ ಕಟ್ಟು–1 (Parallel Lashing)

ದಂಡಗಳನ್ನು ಸಮಾನಾಂತರವಾಗಿ ಇಟ್ಟು ಸಮಾನಾಂತರವಾಗಿ ಕಟ್ಟು ಕಟ್ಟಿ ಉದ್ದ ಹೆಚ್ಚಿಸಲು ಉಪಯೋಗಿಸಲಾಗುವುದು. ಇದನ್ನು ಧ್ವಜಸ್ತಂಭಗಳ ರಚನೆಯಲ್ಲಿ ಬಳಸಲಾಗುವುದು. ಮನೆ ಕಟ್ಟುವವರು ಕಟ್ಟಿರುವ ಸಾರ್ವಕಂಬದ ಅಟ್ಟಣಿಗೆಯನ್ನು ಗಮನಿಸಿ. ಇದನ್ನು ಶಿಬಿರ ಪೀಠೋಪಕರಣ ಮತ್ತು ಅಗ್ರಗಾಮಿ ಯೋಜನೆಯಲ್ಲಿ ಬಳಸಲಾಗುವುದು.



ಕತ್ತರಿ ಕಟ್ಟು–2 (Sheer Lashing)

ಎರಡು ಕೋಲುಗಳನ್ನು ಸಮಾನಾಂತರವಾಗಿ ಜೋಡಿಸಲು ಉಪಯುಕ್ತವಾದ ಕಟ್ಟು. ಈ ಕಟ್ಟಿನ ಮಧ್ಯೆ ಹಗ್ಗವನ್ನು ಲಂಬವಾಗಿ ಸುತ್ತಲಾಗುವುದು. ಇದನ್ನು ಅಗ್ರಗಾಮಿ ಯೋಜನೆಗಳಲ್ಲಿ ಬಳಸಲಾಗುವುದು.

3.5 ವನಕೌಶಲ ಸಂಕೇತಗಳು – Wood Craft Signs:

ಹೊರಾಂಗಣ ಚಟುವಟಿಕೆ, ಗೈಡ್ ಚಟುವಟಿಕೆಗಳಲ್ಲಿ ಅನಿವಾರ್ಯ, ಕಾಡನ್ನು ಅನ್ವೇಷಿಸುವುದು, ಪ್ರಕೃತಿಯಲ್ಲಿ ಸಂಚರಿಸುವುದು, ಸಾಹಸಯಾತ್ರೆ ಕೈಗೊಳ್ಳುವುದು ಸಾಮಾನ್ಯ. ಇದಕ್ಕಾಗಿ ಅನೇಕ ರೀತಿಯ ಕೌಶಲಗಳನ್ನು ಬೆಳೆಸಿಕೊಳ್ಳಬೇಕು. ಅದರಲ್ಲಿ ವನಕೌಶಲವೂ ಒಂದು.

ಜಾಡು ಅಥವಾ ಸುಳಿವು (Trail) : ಕಾಡಿನಲ್ಲಿ ಸಂಚರಿಸುವಾಗ ಅನೇಕ ಸುಳಿವು ಸಿಗುತ್ತವೆ. ಕೆಲವು ದಾರಿ ತೋರಿಸಿದರೆ, ಕೆಲವು ಅಪಾಯ ಸೂಚಿಸುತ್ತವೆ. ಉದಾ : ಹೆಜ್ಜೆ ಗುರುತು, ರಕ್ತದ ಹನಿ, ತರಿದ ಪುಕ್ಕ. ಉದುರಿದ ಕೂದಲು, ಚದುರಿಬಿದ್ದ ಮಾಂಸದ ಚೂರು, ಹಸಿ ಮೂಳೆ, ಹಸಿ ಲದ್ದಿ, (ಮಲ) ತುಳಿತಕ್ಕೆ ಸಿಕ್ಕ ಹುಲ್ಲು, ಇವುಗಳು ಪ್ರಾಣಿಗಳ ಇರುವಿಕೆಯನ್ನು ಸೂಚಿಸುತ್ತವೆ. ಅವುಗಳಿಂದ ಅಪಾಯದ ಸೂಚನೆ ಕಂಡುಬಂದರೆ, ದಾರಿಯನ್ನು ಬದಲಾಯಿಸ ಬೇಕಾಗುತ್ತದೆ. ಹೆಜ್ಜೆ ಗುರುತುಗಳ ಮೂಲಕ ಪ್ರಾಣಿಗಳ ಇರುವಿಕೆ ಮತ್ತು ಯಾವ ಪ್ರಾಣಿಗಳು ಇವೆ ಎಂದು ಗುರುತಿಸಬಹುದು. ಕಾಡಿನಲ್ಲಿ ಓಡಾಡುವಾಗ ಕಿವಿಯನ್ನು ಚುರುಕುಗೊಳಿಸಬೇಕು. ಶಬ್ದವೂ ಸಹ ಕಾಡಿನ ಪರಿಸ್ಥಿತಿಯ ಸುಳಿವನ್ನು ನೀಡುತ್ತದೆ. ಹೊಗೆ ಹಾಗೂ ಕೆಲವು ವಿಧದ ವಾಸನೆಗಳೂ ಸುಳಿವು ನೀಡುತ್ತವೆ.

ನಾವೇ ಸುಳಿವು ಅಥವಾ ಜಾಡನ್ನು ಹಾಕುತ್ತಾ ಅನುಸರಿಸುವ ತಂಡಕ್ಕೆ ಮಾರ್ಗದರ್ಶನ ಮಾಡುತ್ತಾ ಮುಂದೆ ಸಾಗಬಹುದು. ಒಂದೇ ಬಣ್ಣದ ಕಾಗದದ ಚೂರು ಅಥವಾ ರಂಗೋಲಿ ಪುಡಿ ಒಂದೇ ರೀತಿಯಲ್ಲಿ ಹಾಕುತ್ತಾ ಹೋಗಬೇಕು. ನಮ್ಮ ಜಾನಪದ ಕಥೆಗಳಲ್ಲಿ ಅಪಹೃತರು ಮಣಿ, ಗುಲಗಂಜಿಗಳನ್ನು ಉದುರಿಸುತ್ತಾ ಅಪಹರಣಕಾರರ ಜೊತೆ ಸಾಗುತ್ತಿದ್ದರು. ಈ ಜಾಡನ್ನು ಅನುಸರಿಸಿ ಅವರನ್ನು ಕಾಪಾಡಿದ ಕಥೆಗಳು ಇವೆ. ರಾಮಾಯಣದಲ್ಲಿ ಸೀತೆಯು ಒಡವೆಗಳನ್ನು ಚೆಲ್ಲುತ್ತಾ ಹೋದುದರಿಂದ ರಾಮನಿಗೆ ಅವಳು ಹೋದದಾರಿಯ ಗುರುತು ಸಿಕ್ಕಿತು. ಜಾಡನ್ನು ಅನುಸರಿಸುವುದೊಂದು ಪ್ರಮುಖ ಕೌಶಲ. ಈ ಕೌಶಲವನ್ನು ಅಪರಾಧಗಳನ್ನು ಪತ್ತೆ ಮಾಡಲು ಬಳಸಲಾಗುತ್ತದೆ.

ದಾರಿ ಗುರುತುಗಳು (Tracking Signs) :

ಇವುಗಳು ಚಿತ್ರದ ಸಂಕೇತಗಳು. ಇವುಗಳನ್ನು ಹಾಕುವಾಗ ಅನುಸರಿಸಬೇಕಾದ ಕ್ರಮಗಳು– ನಾಯಕತಂಡ ಮುನ್ನಡೆಯುತ್ತಾ ದಾರಿಗುರುತುಗಳನ್ನು ಹಾಕುತ್ತಾ ಸಾಗುತ್ತಾರೆ. ಯಾವಾಗಲೂ ಗುರುತುಗಳನ್ನು ರಸ್ತೆಯ ಪಕ್ಕಕ್ಕೆ ಹಾಕಬೇಕು. ಗುರುತುಗಳ ಅಂತರ ಕನಿಷ್ಠ 20 ಅಡಿ ಇರಬೇಕು. ಈ ಗುರುತು ಚಿತ್ತಾರಗಳನ್ನು ಕಲ್ಲುಗಳು, ಕಡ್ಡಿ, ರಂಗೋಲಿ ಪುಡಿ, ಸೀಮೆಸುಣ್ಣ ಮತ್ತು ಹುಲ್ಲುಗಳನ್ನು ಬಳಸಿ ಹಾಕಬಹುದು. ಇವುಗಳನ್ನು ಸ್ಪಷ್ಟವಾಗಿ ಕಾಣುವಂತೆ ಹಾಕಬೇಕು.

ಸಂದೇಶ

1.

1. ಅ) ಮೂರು ಕಲ್ಲು ಮುಂದೆ ಒಂದು ಚಿಕ್ಕಕಲ್ಲು, ಆ) ಕಟ್ಟಿ ಬಾಗಿಸಿದ ಹುಲ್ಲು, ಇ) ಬಾಣದ ತಲೆ–ಇವುಗಳ ದಿಕ್ಕನ್ನು ಅನುಸರಿಸಿ

2. 

2. ಅ) ಈ ದಾರಿಯಲ್ಲಿ ಹೋಗಬೇಡಿ. ಆ) ಅಪಾಯ.

3.

3. ಅ) ಎಡಕ್ಕೆ ಸಾಗಿ ಆ) ಬಲಕ್ಕೆ ಸಾಗಿ

4. 

4. ಅ) ಕುಡಿಯುವ ನೀರು.
ಆ) ಕುಡಿಯಲು ಯೋಗ್ಯವಲ್ಲ
ಇ) ನೀರಿಗೆ ದಾರಿ

5.

5. ಶಿಬಿರಕ್ಕೆ ದಾರಿ

6. 

6. ಹೆಜ್ಜೆ ದೂರದಲ್ಲಿ ಬಾಣದ ದಿಕ್ಕಿನಲ್ಲಿ ಸುದ್ದಿ ಅಡಗಿಸಿದೆ

7. 

7. ಅ) ಮಿತ್ರರು
ಆ) ಶತ್ರುಗಳು

8.

8. ಅ) ಮನೆಗೆ ಹೋಗಿದ್ದೇವೆ
ಆ) ಪಟಾಲಂದ ಸಹಿ.

ಜಾಡು ಅಥವಾ ಗುರುತುಗಳನ್ನು ಕೊನೆಯಲ್ಲಿ ಬರುವವರು ಅಳಿಸಬೇಕು. ದಾರಿಗುರುತುಗಳನ್ನು ಮತ್ತು ಅನುಸರಿಸಿದ ಮಾರ್ಗದ ಸರಳ ನಕ್ಷೆಯನ್ನು

ತಯಾರಿಸಿಕೊಳ್ಳಬಹುದು. ವನ ಕೌಶಲವನ್ನು ಬಳಸಿ ಹೊರಸಂಚಾರ (Hike) ವ್ಯಾಪಕ ಆಟ (Wide Game) ಕತ್ತಲೆ ಆಟ (Night Game) ಗಳನ್ನು ಆಡಬಹುದು. ಇವುಗಳನ್ನು ಸಾಹಸ ಯಾತ್ರೆಯಲ್ಲಿ ಬಳಸಬಹುದು.

3.6 ಸೀಟಿ ಮತ್ತು ಹಸ್ತ ಸಂಕೇತಗಳು

Whistle and Hand Signals :

ಸೀಟಿ ಮತ್ತು ಹಸ್ತ ಸಂಕೇತಗಳಿಂದ ಕಂಠಶೋಷಣೆ ಇಲ್ಲದೆ ತಕ್ಷಣವೆ ಗೈಡ್ಸ್‌ಗಳನ್ನು ಶಿಸ್ತಿಗೆ ಒಳಪಡಿಸಬಹುದು. ಈ ಸಂಕೇತಗಳು ನಮ್ಮ ಸಂಸ್ಥೆಯು ಬಳಸುವ ಗುಪ್ತಭಾಷೆಯಾಗಿವೆ.

ಸೀಟಿ ಸಂಕೇತಗಳು : ಗೈಡ್ಸ್‌ಗಳು ಚದುರಿದ್ದಾಗ, ಕಾರ್ಯನಿರತರಾಗಿದ್ದಾಗ, ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದಾಗ, ನಮ್ಮ ಕೂಗಳತೆಯಲ್ಲಿದ್ದಾಗ (within the reach of the sound) ಸೀಟಿಯ ಮೂಲಕ ಆಜ್ಞೆ ಕೊಡಬಹುದು.

ಸೀಟಿ ಸಂಕೇತ

ಸೀಟಿ ಸಂಕೇತದಲ್ಲಿ 2 ಚಿಹ್ನೆಗಳನ್ನು (Code) ರಚಿಸಲಾಗಿದೆ.

● = ಅಲ್ಪಾವಧಿಶಬ್ದ, – = ದೀರ್ಘಾವಧಿ ಶಬ್ದ

ಈ ಸಂಕೇತಗಳನ್ನು ವಿವಿಧ ರೀತಿಯಲ್ಲಿ ವಿವಿಧ ಸಂಖ್ಯೆಯಲ್ಲಿ ಜೋಡಿಸಿದಾಗ ನಿರ್ದಿಷ್ಟ ಅರ್ಥವನ್ನು ಕೊಡುತ್ತವೆ.

	ಸೀಟಿ ಸಂಕೇತ :	ಅರ್ಥ :
1.	●	ಸಾವಧಾನ್.
2.	–––	ನಿಲ್ಲಿ, ಗಮನಿಸಿ, ನಿಶ್ಯಬ್ದವಾಗಿ.
3	● ● ● ● ● ●	ಬನ್ನಿ, ಬನ್ನಿ.
4.	– – – – –	ಚದುರಿ, ಚದುರಿ
5.	● ● ● –	ಅಷ್ಟಕ ನಾಯಕಿ ಕರೆ.
6.	● ●	ಅಷ್ಟಕ ನಾಯಕಿಯ ಹಿಂದೆ ಸಾಲಾಗಿ ನಿಲ್ಲಿ.
7.	● – ● – ● –	ಅಪಾಯ ಸೂಚನೆ.

ಈ ಸಂಕೇತಗಳು ಆಜ್ಞಾಪಾಲನೆ ಮತ್ತು ಚುರುಕುತನವನ್ನು ಬೆಳೆಸುತ್ತವೆ. ಇವುಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಬಳಸಬಾರದು. ನಮ್ಮ ಗುಂಪಿನಲ್ಲಿ ಮಾತ್ರ ಅವಶ್ಯವಿದ್ದಾಗ ಬಳಸಬೇಕು.

ಹಸ್ತ ಸಂಕೇತ

ನಿಶ್ಯಬ್ದವಾಗಿ ಸಂಕೇತ ನೀಡಲು ಹಸ್ತ ಸಂಕೇತ ಬಳಸಬಹುದು. ಈ ಸಂದರ್ಭದಲ್ಲಿ ಗೈಡ್‌ಗಳು ನಮ್ಮ ಕಣ್ಣಳತೆಯಲ್ಲಿರಬೇಕು. ಈ ಸಂಕೇತಗಳಿಂದಲೂ ಶೀಘ್ರವಾಗಿ ಗೈಡ್‌ಗಳನ್ನು ಶಿಸ್ತಿಗೆ ಒಳಪಡಿಸಬಹುದು. ಈ ಸಂಕೇತಗಳನ್ನು ಅನುಸರಿಸಿ ಆಟ ಆಡಬಹುದು. ವ್ಯೂಹ ರಚನೆ ಮಾಡಬಹುದು. ಸಂಕೇತ ನೀಡುವವರು ಸಾವಧಾನದಲ್ಲಿ ನಿಂತು ಸಂಕೇತ ಕೊಡಬೇಕು. ಸಂಕೇತ ನೀಡುವ ಮುನ್ನ ಗಮನ ಸೆಳೆಯಲು ಚಪ್ಪಾಳೆ ಸದ್ದು ಮಾಡಬೇಕು.

1. ಬಲಗೈಯನ್ನು ನೇರವಾಗಿ ಮೇಲೆತ್ತಿ ತೆರೆದ ಹಸ್ತ ತೋರಿಸಿದರೆ–ನಿಲ್ಲಿ, ನಿಶ್ಯಬ್ದವಾಗಿರಿ.


1


2


3

4

5

6

7


8

2. ಬಲ ಮೊಣಕೈ ಬಾಗಿಸಿ ಮೇಲೆ ಕೆಳಗೆ ಆಡಿಸಿದರೆ – ಓಡಿ/ಮುಂದಕ್ಕೆ ಹೋಗಿ.

3. ಬಲ ಮೊಣಕೈಯನ್ನು ಮೇಲಕ್ಕೆ ಮುಷ್ಟಿ ಮಾಡಿ, ಮುಷ್ಟಿಯನ್ನು ಹಿಂದಕ್ಕೆ ಮುಂದಕ್ಕೆ ಚಲಿಸಿದರೆ–ಬನ್ನಿ ಬನ್ನಿ ಬನ್ನಿ.

4. ಎರಡು ಮೊಣಕೈಗಳನ್ನು ಮೇಲೆತ್ತಿ ಮುಷ್ಟಿ ಬಿಗಿದರೆ–ಒಬ್ಬರ ಹಿಂದೆ ಒಬ್ಬರು ನಿಲ್ಲಿ.

5. ಎರಡು ಕೈಗಳನ್ನು ಪಾರ್ಶ್ವಕ್ಕೆ ಚಾಚಿ ಅಂಗೈಯನ್ನು ಎದುರುಬದುರು ಮಾಡಿದರೆ– ಎದುರಾಗಿ ಒಂದೇ ಸಾಲಿನಲ್ಲಿ ನಿಲ್ಲಿ.

6. ಎರಡು ಕೈಯನ್ನು ಮುಂದಕ್ಕೆ ಚಾಚಿ ಅಂಗೈಯನ್ನು ಎದುರುಬದುರು ಮಾಡಿದರೆ– ಎದುರುಬದುರಾಗಿ ಮುಖಮಾಡಿ ಎರಡು ಸಾಲಿನಲ್ಲಿ ನಿಲ್ಲಿ.

7. ಎರಡು ಕೈಯನ್ನು ಎದುರಾಗಿಸಿಕೊಂಡು ಮುಂದಕ್ಕೂ ಹಿಂದಕ್ಕೂ ಚಲಿಸಿದರೆ–ಚದುರಿ ಹೋಗಿ.

8. ಎರಡು ಕೈಗಳನ್ನು ಕೂಡಿಸಿ ಎದೆಯ ಹತ್ತಿರ ಇಟ್ಟುಕೊಂಡರೆ – ವಿಸರ್ಜನೆ.

9. ಎರಡು ಕೈಯನ್ನು ಪಾರ್ಶ್ವಕ್ಕೆ ಚಾಚಿ ಎದುರಿಗೆ ಎತ್ತರ ಗಿಡ್ಡದ ಪರಿವೆ ಇಲ್ಲದೆ ನಿಲ್ಲುವುದು.

10. ಎರಡು ಕೈಯನ್ನು ಪಾರ್ಶ್ವಕ್ಕೆ ಚಾಚಿ ಎಡಗೈ ಎತ್ತಿದರೆ ಬಲಗೈ ತಗ್ಗಿಸಿದರೆ – ಎಡಕ್ಕೆ ಎತ್ತರ, ಬಲಕ್ಕೆ ಗಿಡ್ಡನೆಯವರು ಎದುರಾಗಿ ಸಾಲುಮಾಡಿ.

11. ಎರಡು ಕೈಯನ್ನು ಪಾರ್ಶ್ವಕ್ಕೆ ಚಾಚಿ ಬಲಗೈ ಮೇಲೆತ್ತಿ ಎಡಗೈ ತಗ್ಗಿಸಿದರೆ –ಎತ್ತರದವರು ಬಲಕ್ಕೆ ಗಿಡ್ಡನೆಯವರು ಎಡಕ್ಕೆ ಎದುರಾಗಿ ಸಾಲಾಗಿ ನಿಲ್ಲಿ.

12. ಎರಡು ಕೈಯನ್ನು ಮುಂದಕ್ಕೆ ಚಾಚಿ ಅಂಗೈಯನ್ನು ಕೆಳಗೆ ಮಾಡಿದರೆ ನಾಯಕಿಗೆ ಎದುರಾಗಿ ಎರಡು ಸಾಲಿನಲ್ಲಿ ಒಬ್ಬರ ಹಿಂದೆ ಒಬ್ಬರು ನಿಲ್ಲಿ.

13. ಬಲಗೈಯನ್ನು ಚಾಚಿ ಬೆರಳುಗಳನ್ನು ಅಗಲಿಸಿದರೆ ಅಷ್ಟಕಗಳು ಚಕ್ರದ ಕಂಬಿಗಳ ರೀತಿಯಲ್ಲಿ ನಿಲ್ಲಬೇಕು.

14. ಎರಡು ಕೈಯನ್ನು ಮುಂದಕ್ಕೆ ತಂದು ಜೋಡಿಸಿ ಸುತ್ತಿ ಹಿಂದಕ್ಕೆ ಸೇರಿಸಿ ವೃತ್ತ ಮಾಡಿದರೆ – ನನ್ನ ಸುತ್ತಲೂ ವೃತ್ತ ಮಾಡಿ.

15. ಎರಡು ಕೈಯನ್ನು ಮುಂದಕ್ಕೆ ತಂದು ಜೋಡಿಸಿ ಪಕ್ಕಕ್ಕೆ ತಂದು ಸೇರಿಸಿದರೆ – ನನ್ನನ್ನೂ ಸೇರಿಸಿ ವೃತ್ತ ಮಾಡಿ.

16. ಬಲಗೈಯನ್ನು ಪಕ್ಕದಿಂದ ಮೇಲಕ್ಕೆತ್ತಿದರೆ ತಲೆಯ ಮೇಲೆ ಅಂಗೈ ಕೆಳಮುಖ ಮಾಡಿದರೆ – ಅರ್ಧವೃತ್ತ ಮಾಡಿ.

3.7 ಚುರುಕುತನಕ್ಕಾಗಿ ಸರಳ ವ್ಯಾಯಾಮಗಳು:

Simple Drill for smartness

ವ್ಯಕ್ತಿತ್ವದ ಬೆಳವಣಿಗೆಗಾಗಿ, ಶಾರೀರಿಕ ಬೆಳವಣಿಗೆಗಾಗಿ, ಆರೋಗ್ಯಕ್ಕಾಗಿ, ವ್ಯಕ್ತಿತ್ವದ ಮನ್ನಣೆಗಾಗಿ ಎಲ್ಲರೂ ವ್ಯಾಯಾಮವನ್ನು ಮಾಡಬೇಕು. ವ್ಯಾಯಾಮದಿಂದ ದೇಹವು ಅಂದಗೊಳ್ಳುವುದು ಸದೃಢವಾಗುವುದು, ಮಾತ್ರವಲ್ಲದೆ ಚಲನವಲನದಲ್ಲಿ ಚುರುಕುತನ ಮೂಡುತ್ತದೆ. ಮನಸ್ಸು ಆಹ್ಲಾದಕರವಾಗಿರುತ್ತದೆ.

ವ್ಯಾಯಾಮದಿಂದಾಗುವ ಅನುಕೂಲತೆಗಳು : ಬೌದ್ಧಿಕ ಬೆಳವಣಿಗೆ, ಆಜ್ಞೆಗಳನ್ನು ಅನುಸರಿಸುವ ಅಭ್ಯಾಸ, ವಿಧೇಯರಾಗಿರುವ ಅಭ್ಯಾಸ ಮತ್ತು ಮನೋಭಾವ ಬೆಳೆಯುತ್ತವೆ. ಮುಂದಾಳುತನ ಶಿಸ್ತು ಮೈಗೂಡುತ್ತದೆ. ಬೌದ್ಧಿಕ ಮತ್ತು ಶಾರೀರಿಕ ಚಟುವಟಿಕೆಗಳನ್ನು ಸಮನ್ವಯಗೊಳಿಸುತ್ತದೆ. ಚುರುಕುತನದಿಂದ ಕೂಡಿದ ಚಲನವಲನ, ಆಜ್ಞಾಬದ್ಧ ವಿಧಿಗಳು (ceremonials) ಐಕ್ಯತಾ ಮನೋಭಾವ ಮತ್ತು ನೈತಿಕತೆಯನ್ನು ಬೆಳೆಸುತ್ತದೆ. ಕವಾಯತು ಮತ್ತು ಪಥಸಂಚಲನಗಳು ಸಾರ್ವಜನಿಕರ ಪ್ರಶಂಸೆಗೆ, ಗೌರವಕ್ಕೆ ಪಾತ್ರವಾಗುವುದಲ್ಲದೆ ಸಂಸ್ಥೆಯ ಘನತೆಯನ್ನು ಹೆಚ್ಚಿಸುತ್ತದೆ.

ವ್ಯಕ್ತಿ ಗೌರವವನ್ನು ಸುಧಾರಿಸುತ್ತದೆ, ತಮ್ಮ ಕೆಲಸ ಮತ್ತು ಸಾಮರ್ಥ್ಯದ ಬಗ್ಗೆ ಹೆಮ್ಮೆ ಪಡುವಂತಾಗುತ್ತದೆ. ದಳದ ಸದಸ್ಯರಲ್ಲಿ ಐಕ್ಯತೆ, ಸ್ಫೂರ್ತಿ ಮತ್ತು ಸಹಕಾರ ಮನೋಭಾವ ಬೆಳೆಸುತ್ತದೆ. ಒಳ್ಳೆಯ ಶಿಷ್ಟಾಚಾರ ಬೆಳೆಯುತ್ತದೆ. ದೇಹದ ಚಲನೆಯು ಸರಿಯಾದ ಭಂಗಿಯನ್ನು (Posture) ಹೊಂದುತ್ತದೆ. ಸೈನಿಕ ತರಬೇತಿ ಮತ್ತು ಶಸ್ತ್ರಾಸ್ತ್ರ ತರಬೇತಿ ಪಡೆಯಲು ಸಹಾಯಕವಾಗುತ್ತದೆ.

ಗೈಡಾದ ನೀವು ಪ್ರತಿ ದಿನವೂ ಸರಳ ವ್ಯಾಯಾಮ ಮಾಡುವ ಅಭ್ಯಾಸ ಮಾಡಿ. ದಳದಲ್ಲಿ ಆಜ್ಞೆ ಕೊಡುವ ಆಜ್ಞೆ ಪಾಲಿಸುವ ಅಭ್ಯಾಸವನ್ನು ಮಾಡಿ.

ಗಮನಿಸಿ: ವ್ಯಾಯಾಮದ ಆಜ್ಞೆಗಳನ್ನು ಹಿಂದಿ ಅಥವಾ ಇಂಗ್ಲಿಷ್, ಯಾವುದಾದರೂ ಒಂದು ಭಾಷೆಯಲ್ಲಿ ಕೊಡುವ ಅಭ್ಯಾಸವನ್ನು ಮಾಡಿ. ಎರಡು ಭಾಷೆ ಮಿಶ್ರಮಾಡಿ ಕೊಡಬೇಡಿ.

ಸರಳ ಆಜ್ಞೆಗಳು

1. Fall in	1. ಸಜ್‌ದೊ
2. Attention	2. ಸಾವಧಾನ್
3. Stand at ease	3. ವಿಶ್ರಾಮ್
4. Stand easy	4. ಆರಾಮ್ ಸೆ
5. Turn to right (left)	5. –ದಾಹಿನೆ/ ಬಾಯೆ ಮುಡೆಗಾ/ಚಲೆಗಾ
6. Right turn	6. ದಾಹಿನೆ ಮುಡ್
7. Left turn	7. ಬಾಯೆ ಮುಡ್
8. About turn	8. ಪೀಛೆಮುಡ್
9. Fall in single/two/ three ranks	9. ಎಕ್ / ದೊ / ತೀನ್ ಲೈನ್ ಬನ್
10. Dress up	10. ಸಜ್ ಜಾ
11. Number off	11. ಗಿನ್‌ತಿ ಶುರು
12. In two's / three's number off	12. ದೋ / ತೀನ್ ಮೆ ಗಿನ್‌ತಿ ಶುರು
13. As you were	13. ಜೈಸೆ ಥೆ
14. Mark time Mark	14. ಕದಮ್ ತಾಲ್
15. Forward march	15. ಆಗೆ ಚಲ್
16. Quick march	16. ತೇಜ್ ಚಲ್
17. By the right / left quick march	17. ದಾಯಿನೆ (ಬಾಯ್ವೆ) ಸೆ ತೇಜ್ ಚಲ್
18. Halt	18. ಥಂ
19. Right Wheel	19. ದಾಯಿನೆ ಘೂಮ್
20. Left Wheel	20. ಬಾಯೆ ಘೂಮ್
21. Salute	21. ಸೆಲ್ಯೂಟ್/ಸಲಾಮಿ ಆಮ್ ದೊ
22. Ganeral salute	22. ಜನರಲ್ ಸೆಲ್ಯೂಟ್
23. National salute	23. ರಾಷ್ಟ್ರೀಯ ಸಲ್ಯೂಟ್

24. Eyes right	24. ದಾಯಿನೆ ದೇಖ್
25. Eyes front	25. ಸಾಮ್ ನೆ ದೇಖ್
26. Fall out	26. ಸ್ವಸ್ಥಾನ್
27. Disperse	27. ವಿಸರ್ಜನ್

3.8 ಪ್ರಥಮ ಚಿಕಿತ್ಸೆ: First Aid

ನಾವು ವಿಜ್ಞಾನ ಮತ್ತು ತಂತ್ರಜ್ಞಾನ ಪ್ರಧಾನವಾದ ಪ್ರಪಂಚದಲ್ಲಿ ಬದುಕುತ್ತಿದ್ದೇವೆ. ಈ ಪ್ರಪಂಚವು ಅನುಕೂಲತೆ ಮತ್ತು ಆಪತ್ತುಗಳಿಂದ ತುಂಬಿತುಳುಕುತ್ತಿದೆ. ವಿಜ್ಞಾನ ತಂತ್ರಜ್ಞಾನಗಳು ನಮ್ಮ ಮನೆಗಳನ್ನು ಪ್ರವೇಶಿಸಿ ಸ್ವಾಮ್ಯವನ್ನು ಸ್ಥಾಪಿಸಿವೆ. ಮನೆಯು ಯಂತ್ರ ಜಗತ್ತಾಗಿದೆ. ರಸ್ತೆಗಳು ವಾಹನಗಳಿಂದ ತುಂಬಿವೆ. ನಾವು ನೈಸರ್ಗಿಕ ಮತ್ತು "ನಮ್ಮ ನಿರ್ಮಿತ" (We made) ವಸ್ತುಗಳೊಡನೆ ನಿತ್ಯವು ಪ್ರತಿಕ್ರಿಯಿಸುತ್ತೇವೆ, ಆದ್ದರಿಂದ ಅಪಘಾತಗಳು ಸಾಮಾನ್ಯ. ಅಪಘಾತಗಳು ಎಲ್ಲಿಯಾದರೂ ಯಾವಾಗಲಾದರೂ, ಯಾರಿಗಾದರೂ ಸಂಭವಿಸಬಹುದು. ಆದ್ದರಿಂದ ಪ್ರಥಮ ಚಿಕಿತ್ಸೆ ಜ್ಞಾನ, ಕೌಶಲ ಮತ್ತು ಮಾಡುವ ಸಾಮರ್ಥ್ಯ ಪಡೆದುಕೊಳ್ಳಬೇಕು.

ಇಷ್ಟೇ ಅಲ್ಲದೆ ನೀವು ಸೇವಾದೀಕ್ಷೆಯನ್ನು ಪಡೆದಿರುವುದರಿಂದ ನೋವು ಶಮನಮಾಡಲು, ಗಾಯದ ತೀವ್ರತೆ ಕಡಿಮೆ ಮಾಡಲು, ಸಹಚರರ ಹಾಗೂ ನಿಮ್ಮ ಸುರಕ್ಷತೆಗಾಗಿ ಪ್ರಥಮ ಚಿಕಿತ್ಸೆಯನ್ನು ಕಲಿಯಬೇಕು. ಈ ಕೌಶಲವು ಸಮಯದಲ್ಲಿ ಜೀವವನ್ನು ಉಳಿಸಲು ಸಹಾಯ ಮಾಡುವುದು.

ಪ್ರಥಮಚಿಕಿತ್ಸೆ ಎಂದರೇನು? ಅಪಘಾತವಾದ ಸ್ಥಳದಲ್ಲಿ ಗಾಯಾಳುಗಳಿಗೆ (ಪ್ರಾಣಿಗಳಿಗೆ) ಸ್ಥಳದಲ್ಲೇ ದೊರೆಯುವ ವಸ್ತುಗಳನ್ನು ಬಳಸಿ ವೈದ್ಯರನ್ನು ಸಂಪರ್ಕಿಸುವ ಮುನ್ನ ನೀಡುವ ಚಿಕಿತ್ಸೆಯೇ ಪ್ರಥಮಚಿಕಿತ್ಸೆ.

ಪ್ರಥಮ ಚಿಕಿತ್ಸಕರು ಈ ಮೂರು ಅಂಶಗಳನ್ನು ನೆನಪಿನಲ್ಲಿಡಬೇಕು. ಪ್ರಥಮ ಚಿಕಿತ್ಸೆ ನೀಡುವ ಮುನ್ನ ಇವುಗಳನ್ನು ಗಮನಿಸಬೇಕು.

A – ಶ್ವಾಸ ಮಾರ್ಗ Air passage B – ರಕ್ತಸ್ರಾವ Bleeding

C – ರಕ್ತಪರಿಚಲನೆ (ನಾಡಿ) Circulation

ಪ್ರಥಮ ಚಿಕಿತ್ಸೆಯ ಉದ್ದೇಶಗಳು : 1. ನೋವು ಶಮನ ಮಾಡುವುದು. 2. ಆಗಬಹುದಾದ ಅನರ್ಥತೀವ್ರಗೊಳ್ಳದಂತೆ ನೋಡಿಕೊಳ್ಳುವುದು. 3. ಪ್ರಾಣಾಪಾಯವಾಗದಂತೆ ನೋಡಿಕೊಳ್ಳುವುದು.

ಪ್ರಥಮ ಚಿಕಿತ್ಸಕರು ಹೊಂದಿರಬೇಕಾದ ಅಂಶಗಳು :

1. ಧೈರ್ಯವಂತರಾಗಿರಬೇಕು, ಚುರುಕಾಗಿರಬೇಕು.
2. ಪ್ರಥಮ ಚಿಕಿತ್ಸಾ ಕೌಶಲ ಮತ್ತು ಜ್ಞಾನದ ಅರಿವು ಚೆನ್ನಾಗಿ ಪಡೆದಿರಬೇಕು.
3. ತಮ್ಮನ್ನು ವೈದ್ಯರೆಂದು ಭಾವಿಸಬಾರದು. ತತ್‌ಕ್ಷಣವೇ ವೈದ್ಯರ ಹತ್ತಿರ ಕಳುಹಿಸುವ ಅಥವಾ ವೈದ್ಯರನ್ನು ಕರೆಸುವ ವ್ಯವಸ್ಥೆ ಮಾಡಬೇಕು.
4. ಚಿಕಿತ್ಸೆಯನ್ನು ತಕ್ಷಣ ಸ್ಥಳದಲ್ಲೇ ದೊರಕುವ ವಸ್ತುಗಳಿಂದ ಪ್ರಾರಂಭಿಸಬೇಕು.
5. ಗುಂಪನ್ನು ನಿಂಯತ್ರಿಸಬೇಕು. ಜನಸಹಾಯ ಪಡೆಯಬೇಕು.
6. ಗಾಯಾಳುವಿಗೆ ಪ್ರಜ್ಞೆ ಇದ್ದರೆ ಅಪಘಾತದ ವಿವರ, ಆರೋಗ್ಯ ಮತ್ತು ತೊಂದರೆಗಳ ಬಗ್ಗೆ ಅವರಿಂದಲೇ ತಿಳಿದುಕೊಳ್ಳಬೇಕು. ಇಲ್ಲದಿದ್ದರೆ ನೋಡಿದವರಿಂದ ವಿವರ ಸಂಗ್ರಹಿಸಬೇಕು.
7. ಗಾಯಾಳುವಿನ ಆತಂಕ ಕಡಿಮೆ ಮಾಡಬೇಕು.
8. ಭಾರಿ ಅಪಘಾತಗಳಲ್ಲಿ ನಾಡಿ ಮತ್ತು ಉಸಿರಾಟ ಗಮನಿಸುತ್ತಿರಬೇಕು. ರಕ್ತಸ್ರಾವ ನಿಲ್ಲಿಸುವ ಪ್ರಯತ್ನ ಮಾಡಬೇಕು.
9. ವಿಳಾಸ ಪತ್ತೆಹಚ್ಚಿ ಸಂಬಂಧಪಟ್ಟವರಿಗೆ ಸುದ್ದಿ ತಿಳಿಸುವ ಪ್ರಯತ್ನ ಮಾಡಬೇಕು.

ಪ್ರಥಮಚಿಕಿತ್ಸೆ ಪೆಟ್ಟಿಗೆ – First Aid Box

ದಳದಲ್ಲಿ ಒಂದು ಪ್ರಥಮಚಿಕಿತ್ಸೆ ಪೆಟ್ಟಿಗೆ ಇರಬೇಕು. ಪಟಾಲಂನಲ್ಲೂ ಒಂದು ಪ್ರಥಮ ಚಿಕಿತ್ಸೆ ಪೆಟ್ಟಿಗೆ ಇರಬೇಕು. ವೈಯಕ್ತಿಕವಾಗಿ ಒಂದು ಪ್ರಥಮ ಚಿಕಿತ್ಸೆ ಸಂಚಿಯನ್ನು ಪ್ರತಿಗೈಡ್‌ಗಳು ಹೊಂದಿರಬೇಕು. ಈ ಪೆಟ್ಟಿಗೆ ಪ್ಲಾಸ್ಟಿಕ್ ಆಗಿದ್ದರೆ ಉತ್ತಮ. ಪ್ಲಾಸ್ಟಿಕ್ ಹಗುರವಾಗಿರುತ್ತದೆ. ತುಕ್ಕು ಹಿಡಿಯುವುದಿಲ್ಲ. ಇದರಲ್ಲಿರುವ ಜಾಲರಿ ಪಟ್ಟಿ (Bandages) ಹತ್ತಿ ಔಷಧಿಗಳನ್ನು 3 ತಿಂಗಳಿಗೊಮ್ಮೆಯಾದರೂ ಬದಲಾಯಿಸಬೇಕು.

ಪ್ರಥಮ ಚಿಕಿತ್ಸೆ ಪೆಟ್ಟಿಗೆಯಲ್ಲಿರುವ ವಸ್ತುಗಳು :

1. ಮುಮ್ಮೂಲೆ ಪಟ್ಟಿ – ಕನಿಷ್ಠ 2
2. ಕ್ರಿಮಿನಾಶಕ ಜಾಲರಿ ಬಟ್ಟೆ (Sterlised Bandage) = 1" ಮತ್ತು 4" ಅಗಲದ 2 ಸುರಳಿ ಅಥವಾ ಅಣುರಂಧ್ರ ಅಂಟುಪಟ್ಟಿ (Micropore

Plaster) ಇದಕ್ಕೆ ಬದಲಾಗಿ 1" ಮತ್ತು 2" ಸುರುಳಿಪಟ್ಟಿಗಳ ಸುರುಳಿಯನ್ನು ಇಟ್ಟುಕೊಳ್ಳ ಬಹುದು.

3. ಮೆದು ಗಾಯ ಪಟ್ಟಿ (lint) – 6 ಚೂರು
4. ಕ್ರೇಪ್ ಬ್ಯಾಂಡೇಜ್ – 4" 1 ಸುರಳಿ
5. ಕ್ರಿಮಿನಾಶಿತ ಹತ್ತಿ 100 ಗ್ರಾಂ.
6. ಸೇಫ್ಟಿ ಪಿನ್ 1 ಡಜನ್
7. ಕತ್ತರಿ ಚಿಕ್ಕದ್ದು ಮತ್ತು ಮಧ್ಯಮ ಗಾತ್ರದ್ದು
8. ಕೆದಕು ಸೂಜಿ (Teasing Needle)-1
9. ಚಿಮಟ (Forceps) - 1
10. ಕ್ರಿಮಿನಾಶಕ ದ್ರವ – ಡೆಟ್ಟಾಲ್/ಸೇವಲಾನ್ (ಚಿಕ್ಕ ಶೀಸೆ)
11. ಮರ್ಕ್ಯುರಿಕ್ ದ್ರಾವಣ – ಸ್ವಲ್ಪ
12. ಅಡಿಗೆ ಉಪ್ಪು, ಸಕ್ಕರೆ, ಅಡಿಗೆ ಸೋಡಾ – ತಲಾ 25 ಗ್ರಾಂ
13. ಅಂಟು ಪಟ್ಟಿ (ಪ್ಲಾಸ್ಟರ್) – 1
14. ಬ್ಯಾಂಡ್ ಏಡ್ – 6
15. ಬ್ಯಾಟ್ರಿ, ಸಾಬೂನು, ಕರವಸ್ತ್ರ
16. ಚಿಕ್ಕ ಪುಸ್ತಕ–ಸೀಸದ ಕಡ್ಡಿ (ಗಾಯಾಳುಗಳಿಗೆ ನೀಡಿದ ಚಿಕಿತ್ಸೆಯ ಸಂಕ್ಷಿಪ್ತ ಟಿಪ್ಪಣಿ ಬರೆಯುವುದಕ್ಕಾಗಿ)

ನಿಮಗೆ ಅವಶ್ಯವೆನಿಸಿದ ಇತರೆ ಸಾಮಾನ್ಯ ಔಷಧಿಗಳು ಮತ್ತು ವಸ್ತುಗಳನ್ನು ವೈದ್ಯರ ಸಲಹೆ ಮೇರೆಗೆ ಇಟ್ಟುಕೊಳ್ಳಬಹುದು. ಔಷಧಿ ಶೀಸೆಗಳಿದ್ದರೆ ಅವುಗಳ ಮೇಲೆ ಹೆಸರು ಬರೆದಿರಬೇಕು. ಅತಿಹಳೆಯದಾದ ವಸ್ತುಗಳನ್ನು ಉಪಯೋಗಿಸಬಾರದು.

ಪೆಟ್ಟಿಗೆಯ ಮೇಲೆ ಈ 'ಪ್ರಥಮ ಚಿಕಿತ್ಸೆ' ಚಿಹ್ನೆಯನ್ನು ಹಸಿರು ಬಣ್ಣದಲ್ಲಿ ಹಾಕಬೇಕು. ಪ್ರಥಮ ಚಿಕಿತ್ಸೆ ಪೆಟ್ಟಿಗೆ ಸುಲಭವಾಗಿ ಸಿಗುವಂತೆ ಇಟ್ಟುಕೊಳ್ಳಬೇಕು.

3.10 ಕರಕುಶಲವಸ್ತು ಅಥವಾ ಶಿಬಿರೋಪಕರಣ ತಯಾರಿಕೆ:
Handicraft or Gadget

ಕರಕುಶಲವಸ್ತು ತಯಾರಿಕೆ:

ಪ್ರತಿಯೊಬ್ಬರಿಗೂ ಕ್ರಿಯಾತ್ಮಕವಾದ ಕಲ್ಪನಾಶಕ್ತಿ ಇರುತ್ತದೆ. ಇದನ್ನು ಹೊರ ಹೊಮ್ಮಿಸಲು ಕರಕುಶಲತೆಯನ್ನು ಪ್ರೋತ್ಸಾಹಿಸುವುದು ಒಂದು ಮಾರ್ಗ ಕರಕುಶಲತೆಯನ್ನು ಸ್ಕೌಟ್ ಗೈಡ್‌ನ ನಾಲ್ಕು ಮಾರ್ಗೋಪಾಯಗಳಲ್ಲಿ ಒಂದನ್ನಾಗಿ ಪರಿಗಣಿಸಲಾಗಿದೆ. ಈ ಅವಕಾಶವನ್ನು ಕಲ್ಪಿಸುವುದರಿಂದ ಪ್ರತಿಯೊಬ್ಬರಲ್ಲೂ ಸೃಜನಶೀಲತೆ ಹೊರಹೊಮ್ಮಿ, ವಸ್ತುಗಳನ್ನು ತಯಾರಿಸಿದಾಗ ಆತ್ಮಾನಂದವಾಗುತ್ತದೆ. ಆತ್ಮತೃಪ್ತಿಯಾಗುತ್ತದೆ, ಸಮಯದ ಸದುಪಯೋಗವಾಗುತ್ತದೆ. ಮುಂದೆ ಯಾವ ಸಮಯದಲ್ಲಾದರೂ ಆದಾಯದಾಯಕವೂ ಆಗಬಹುದು. ತಯಾರಿಸಿದ ವಸ್ತುಗಳನ್ನು ಪಟಾಲಂನಲ್ಲಿ ದಳದಲ್ಲಿ, ಶಾಲೆಯಲ್ಲಿ ಹಾಗೂ ಸಾರ್ವಜನಿಕರಿಗಾಗಿ, ವಸ್ತುಪ್ರದರ್ಶನವನ್ನು ಏರ್ಪಡಿಸಿ ವಸ್ತುಗಳು ಉತ್ತಮವಾಗಿದ್ದರೆ ಮಾರಾಟ ಮಾಡಬಹುದು. ದೊರೆತ ಹಣವನ್ನು ದಳದ ಚಟುವಟಿಕೆಗಳಿಗಾಗಿ ಉಪಯೋಗಿಸಬಹುದು.

ಈ ಕೆಳಗೆ ಕೆಲವು ಸಲಹೆಯನ್ನ ಕೊಡಲಾಗಿದೆ. ಸಾಧ್ಯವಾದಷ್ಟು ಸುತ್ತಲೂ ದೊರೆಯುವ ವಸ್ತು, ಕಡಿಮೆ ಬೆಲೆಯ ವಸ್ತು, ತ್ಯಾಜ್ಯವಸ್ತುಗಳನ್ನು ಬಳಸಿ ಕರಕುಶಲ ವಸ್ತುಗಳನ್ನು ತಯಾರಿಸಿ.

ಅಲಂಕಾರಿಕ ವಸ್ತುಗಳು : ಕಸೂತಿ, ಕಾಗದ, ಜೇಡಿಮಣ್ಣು, ಪ್ಲಾಸ್ಟರ್ ಆಫ್ ಪ್ಯಾರೀಸ್, ಸೀಮೆಸುಣ್ಣದ ಪುಡಿ, ಮರ, ಬಿದಿರು, ಕಾಗದದಮಡ್ಡಿಗಳಿಂದ ಮಾದರಿ ತಯಾರಿಸಿ. ತ್ಯಾಜ್ಯವಸ್ತುಗಳಿಂದ ಕಲಾತ್ಮಕ ವಸ್ತುಗಳನ್ನು ಮತ್ತು ಬೋಧನೋಪಕರಣಗಳನ್ನು ತಯಾರಿಸಿಕೊಳ್ಳಬಹುದು.

ಗೃಹಾಲಂಕಾರಣ : ಕಸೂತಿ, ವರ್ಣಚಿತ್ರ, ಗೋಡೆ ತೂಗು, ರಂಗೋಲಿ, ಹೂದಾನಿ ಜೋಡಣೆ, ಪೀಠೋಪಕರಣ ಜೋಡಣೆ, ಬಾಗಿಲು-ಹೊಸಿಲುಗಳ ಶೃಂಗಾರ, ದೇವರ ಮನೆ ಜೋಡಣೆ, ತಿನಿಸುಗಳ ಶೃಂಗಾರಜೋಡಣೆ. ತಮ್ಮ ಗುಡಾರದ ಅಲಂಕರಣ, ಆಹ್ವಾನ ಪತ್ರಿಕೆ, ಶುಭ ಕೋರುವ ಪತ್ರಿಕೆಗಳ ತಯಾರಿಕೆ. ಉಡುಗೊರೆಗಳ ಅಂದವಾದ ಅಲಂಕರಣ, ಬೊಂಬೆಗಳ ತಯಾರಿಕೆ.

ಲಲಿತ ಕಲೆ ಮತ್ತು ಸಾಹಿತ್ಯ : ಸಂದರ್ಭೋಚಿತವಾಗಿ ಹಾಡುಗಳ ರಚನೆ, ರಾಗ ಸಂಯೋಜನೆ, ಹಾಡುವಿಕೆ, ನೃತ್ಯ ಸಂಯೋಜನೆ, ಸೃಜನಶೀಲ ನಾಟಕ

ರಚನೆ, ಪ್ರಹಸನ, ಉಡುಪು, ಮುಖಾಲಂಕಾರ, ಮುಖವಾಡಗಳ ತಯಾರಿಕೆ.

ಅಥವಾ

ಶಿಬಿರ ಪೀಠೋಪಕರಣಗಳ ತಯಾರಿಕೆ:

ಈ ಚಳವಳಿಯಲ್ಲಿ ಗುಡಾರವಾಸ ಸಾಮಾನ್ಯ ಹಾಗೂ ಕಡ್ಡಾಯ. ಗುಡಾರವಾಸ ಮಾಡದಿದ್ದರೆ ಗೈಡ್ ಆಗಲು ಅರ್ಹಳಾಗುವುದಿಲ್ಲ. ಎಲ್ಲಿದ್ದರೇನಂತೆ ಅನುಕೂಲಕರವಾಗಿ ವಾಸಮಾಡಬೇಕು. ಸಾಮಾನು ಸರಂಜಾಮುಗಳನ್ನು







Camp Table with Seats



ಸುರಕ್ಷಿತವಾಗಿಡಬೇಕು. ಅವುಗಳನ್ನು ಅಂದವಾಗಿ ಜೋಡಿಸಬೇಕು. ಆಗ ವಾಸ ಹಿತಕರವಾಗಿರುತ್ತದೆ ಎಂದು ಬಿ.ಪಿ.ಯವರು ಹೇಳುತ್ತಿದ್ದರು.

ಬಿದಿರು, ಕಡ್ಡಿ, ಒಣಗಿದ ಮರದ ಕೊಂಬೆಗಳನ್ನು ತೆಂಗಿನಹುರಿ ಸೆಣಬಿನ ಹುರಿ ಉಪಯೋಗಿಸಿ ಗಂಟು ಮತ್ತು ಕಟ್ಟುಗಳಿಂದ ಕಟ್ಟಿ ವಿವಿಧ ಮಾದರಿಯ ಆಧಾರಕಗಳನ್ನು, ನೆಲವುಗಳನ್ನು, (Laurdals) ತಯಾರಿಸಬಹುದು. ಎಲ್ಲಾ ಸಾಮಾನುಗಳನ್ನು ಆಧಾರಕಗಳ (Stands) ಮೇಲೆ ಜೋಡಿಸಬಹುದು. ಬಟ್ಟೆ ಒಣಗಿಸಲು ಹಗ್ಗ ಕಟ್ಟುವುದು. ಹೀಗೆ ಕಲ್ಪನಾಶಕ್ತಿಯಿಂದ ಮೇಜು, ಕುರ್ಚಿ, ಮಂಚ ಇತ್ಯಾದಿಗಳನ್ನು ಮಾಡಬಹುದು. ಇವುಗಳನ್ನು ಚೆನ್ನಾಗಿ ಮಾಡಿ ಜೋಡಿಸಿದರೆ ನೋಡಲು ಬಹಳ ಆಕರ್ಷಕವಾಗಿರುತ್ತದೆ. ಇವುಗಳ ಮಾದರಿ ಮಾಡಿ ಮನೆಯಲ್ಲಿ ಅಲಂಕಾರಿಕ ಕಪಾಟಿನಲ್ಲಿ ಪ್ರದರ್ಶಿಸಬಹುದು ಅಥವಾ ಬಳಸಬಹುದು.

3.11 ಮನೆಯ ಜವಾಬ್ದಾರಿಕೆ: Household Responsibilities

ಪೋಷಕರ ಸಹಾಯದಿಂದ ಮನೆಯ ಈ ಕೆಳಗಿನ ಜವಾಬ್ದಾರಿಕೆಯನ್ನು ಒಂದುವಾರ ನಿರ್ವಹಿಸುವುದು :

ಆಹಾರ ತಯಾರಿಕೆ, ನೀರಿನ ಸಂಗ್ರಹ, ಸ್ವಚ್ಛತೆ

ಆಹಾರ ತಯಾರಿಕೆ :

- ☆ ಮನೆಯ ಸಾಮಾನುಗಳನ್ನು, ತರಕಾರಿಗಳನ್ನು ತರುವುದು ಮತ್ತು ದಾಸ್ತಾನು ಮಾಡುವುದು.
- ☆ ಅಡಿಗೆ ಮಾಡಲು ಕಲಿತು, ನಿಮ್ಮ ಮನೆಯವರಿಗೆ ಆಹಾರವನ್ನು ತಯಾರಿಸಿ, ಬಡಿಸುವುದು.
- ☆ ದ್ರವ ಮತ್ತು ಗಟ್ಟಿಯಾದ ಪದಾರ್ಥಗಳನ್ನು ಅಳತೆ ಮಾಡುವುದನ್ನು ಕಲಿಯುವುದು.
- ☆ ಮೂರು ವಿಧವಾದ ಕಾಳುಗಳನ್ನು ಉಪಯೋಗಿಸಿ ಆಹಾರವನ್ನು ತಯಾರಿಸುವ ಕ್ರಮವನ್ನು ತಿಳಿಯುವುದು, ಯಾವುದಾದರೂ ಒಂದು ಪದಾರ್ಥವನ್ನು ತಯಾರಿಸುವುದು.
- ☆ ನಿಮ್ಮ ಮನೆಯವರಿಗೆ ಸಮತೋಲನ ಆಹಾರವನ್ನು ರಾತ್ರಿ ಊಟಕ್ಕೆ ತಯಾರಿಸುವುದು.
- ☆ ಹಸಿ ತರಕಾರಿ ಮತ್ತು ಮೊಳಕೆ ಕಾಳುಗಳನ್ನು ಆಹಾರದಲ್ಲಿ ಬಳಸುವ

ಮಹತ್ವವನ್ನು ತಿಳಿಯುವುದು. ಪದಾರ್ಥಗಳನ್ನು ಹದವಾಗಿ ಬೇಯಿಸುವ ಬಗ್ಗೆ ತಿಳಿಯುವುದು.

- ★ ಆಯಾ ಋತುವಿನಲ್ಲಿ ದೊರೆಯುವ ಒಂದು ಹಣ್ಣನ್ನು ಊಟದ ನಂತರ ತೆಗೆದುಕೊಳ್ಳುವುದರ ಮಹತ್ವ ತಿಳಿಯುವುದು.
- ★ ಒಂದು ಊಟಕ್ಕೆ ಬೇಕಾದ ತಿನಿಸಿನ ಪಟ್ಟಿ ತಯಾರಿಸಿ. ಹೀಗೆ ಮಾಡುವಾಗ ಸಮತೋಲನ ಆಹಾರದ ಮಹತ್ವ ನೆನಪಿನಲ್ಲಿಡುವುದು.
- ★ 'ಅಡಿಗೆ ಮಾಡುವಾಗ ವಹಿಸಬೇಕಾದ ಎಚ್ಚರಿಕೆಗಳ ಬಗ್ಗೆ ಮಾಹಿತಿ ಪಡೆದು ಅನುಸರಿಸುವುದು.
- ★ ಶುಚಿಯಾಗಿ, ರುಚಿಯಾಗಿ ಅಚ್ಚುಕಟ್ಟಾಗಿ ಸರಳವಾದ ಅಡಿಗೆಮಾಡುವುದು.

ನೀರು ಶೇಖರಿಸುವ ಕ್ರಮ :

ಜೀವನಕ್ಕೆ ನೀರು ಆಧಾರ, ಈ ಕೆಳಗೆ ಕಂಡ ಬಂಗಾರಕ್ಕೆ ಸಮನಾದ ಸೂತ್ರಗಳನ್ನು ಜ್ಞಾಪಕದಲ್ಲಿಟ್ಟುಕೊಂಡು ನಿಮ್ಮ ನಿತ್ಯ ಜೀವನದಲ್ಲಿ ಅಭ್ಯಾಸ ಮಾಡುವುದು

- ★ ನೀರು ಬಹುಮುಖ್ಯ ಸಂಪನ್ಮೂಲ. ಪ್ರಪಂಚದಲ್ಲಿ 3/4 ಭಾಗ ನೀರು ಇದ್ದರೂ ಕುಡಿಯಲು ಯೋಗ್ಯವಾದ ನೀರು ಅತಿ ಕಡಿಮೆ ಪ್ರಮಾಣದಲ್ಲಿದೆ. ಆದುದರಿಂದ ನೀರನ್ನು ಮಿತವಾಗಿ ಬಳಸಬೇಕು.
- ★ ಕುಡಿಯುವ ನೀರಿನ ಮೂಲದಿಂದ ಬಟ್ಟೆ ಒಗೆಯುವ ಕಲ್ಲನ್ನು ದೂರವಿಡುವುದು.
- ★ ನೀರು ಸರಬರಾಜಾಗುವ ಸ್ಥಳ ಮತ್ತು ನೀರಿನ ಪಾತ್ರೆಯನ್ನು ಸದಾ ಶುಚಿಯಾಗಿಟ್ಟಿರುವುದು.
- ★ ನೀರನ್ನು ಶುಚಿಯಾದ ಪಾತ್ರೆ ಅಥವಾ ಮಡಿಕೆಯಲ್ಲಿ ಸಂಗ್ರಹಿಸಿ ಮುಚ್ಚಿಡಬೇಕು. ನೀರನ್ನು ತೆಗೆದುಕೊಳ್ಳಲು ಕೈಬಟ್ಟಲು, ಹಿಡಿಕೆಬಟ್ಟಲು ಇಡಬೇಕು.
- ★ ಕುಡಿಯುವ ನೀರಿನ ಸುರಕ್ಷತೆಗಾಗಿ ನೀರನ್ನು ಶೋಧಿಸಿ, ಕುದಿಸಿ, ಆರಿಸಿ. ಮೂರು ಮಡಿಕೆ ಶೋಧಕ/ಆಧುನಿಕ ನೀರು ಶೋಧಕಗಳನ್ನು, ಬಳಸಬಹುದು. ಯೋಗ್ಯವಾಗಿ ಸಂಗ್ರಹಿಸಿ. ಶುದ್ಧ ನೀರು ಆರೋಗ್ಯವಾಗಿರಲು ಸಹಕಾರಿ ಯಾಗುವುದು.

ಸ್ವಚ್ಛತೆ

- ★ ಧೂಳು, ಕಸ, ಹರಡಿಕೆ ಇಲ್ಲದಂತೆ ಮನೆಯನ್ನು ಸ್ವಚ್ಛವಾಗಿಡುವುದು. ಮನೆಯಷ್ಟೇ ಮನಸ್ಸಿನ ಸ್ವಚ್ಛತೆಯೂ ಮುಖ್ಯ. ಮನೆಯವರೊಡನೆ ಸ್ನೇಹ ಮತ್ತು ಪ್ರೀತಿಯಿಂದಿರುವುದರಿಂದ ನೀವೂ ಯಥೇಚ್ಛವಾಗಿ ಪ್ರೀತಿವಾತ್ಸಲ್ಯಗಳನ್ನು ಪಡೆಯುವಿರಿ.
- ★ ಕಪಾಟಿನಲ್ಲಿ ಬಟ್ಟೆಯನ್ನು ಶುಭ್ರವಾಗಿ ಮಡಚಿ ಜೋಡಿಸಿ ಇಡುವುದನ್ನು ಹಾಗೂ ಇಸ್ತ್ರೀ ಮಾಡುವುದನ್ನು ಕಲಿಯುವುದು. ನಿಮ್ಮ ವಸ್ತುಗಳನ್ನು ಪುಸ್ತಕಗಳನ್ನು ಅಚ್ಚುಕಟ್ಟಾಗಿ ಜೋಡಿಸುವುದು.
- ★ ಪೋಷಕರಿಂದ ಮನೆಯ ಸ್ವಚ್ಛತೆಯ ಕ್ರಮ ತಿಳಿದುಕೊಂಡು ಪಟ್ಟಿಮಾಡಿ. ಈ ಕ್ರಮವನ್ನು ಬಳಸಿ ಸ್ವಚ್ಛಮಾಡುವುದು.
- ★ ಶೀತಲ ಕಪಾಟನ್ನು (Fridge) ಶುಚಿಮಾಡುವುದನ್ನು, ಗುಡಿಸುವುದನ್ನು ಕಲಿಯುವುದು, ಕುರ್ಚಿ–ಮೇಜುಗಳ ಧೂಳನ್ನು ಒರೆಸುವುದು, ವಸ್ತು ಮತ್ತು ಪಾತ್ರೆಗಳನ್ನು ಶುಚಿಗೊಳಿಸುವುದನ್ನು ಕಲಿಯುವುದು.
- ★ ಮನೆಯ ಸುತ್ತಲೂ ಸ್ವಚ್ಛವಾಗಿಡುವುದು.
- ★ ತಪ್ಪದೇ ಗಿಡಗಳನ್ನು ಬೆಳೆಸುವುದು. ಸ್ಥಳಾವಕಾಶವಿಲ್ಲದಿದ್ದರೆ ಕುಂಡದಲ್ಲಿ ಬೆಳಸುವುದು. ಗಿಡಗಳು ನಿಮಗೆ ಶುದ್ಧವಾದ ಗಾಳಿಯನ್ನು ನೀಡುತ್ತವೆ. ಪರಿಸರವನ್ನು ಹಸನಾಗಿಡುತ್ತದೆ.

3.12 ಅಧ್ಯಯನ ಚಟುವಟಿಕೆ – ವರದಿ

ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಚಟುವಟಿಕೆಗಳನ್ನು ಮಾಡಿ ವರದಿಯನ್ನು ಸಲ್ಲಿಸಿ.

i) ಪ್ರಕೃತಿ ಅಧ್ಯಯನ : Nature Study

ನಿಮ್ಮ ಸುತ್ತಮುತ್ತಲಿನ ಪ್ರಕೃತಿ ಅಧ್ಯಯನ ಮಾಡಿ. ಅಂದರೆ ಗಿಡಮರ ಪಶುಪಕ್ಷಿಗಳನ್ನು ವೀಕ್ಷಿಸಿ ಅವುಗಳ ಬಗ್ಗೆ ಮಾಹಿತಿಯನ್ನು ಸಂಗ್ರಹಿಸಿ. ಚಿತ್ರ ಬಿಡಿಸಿ ಇಲ್ಲವೆ ಛಾಯಚಿತ್ರ ಸಂಗ್ರಹಿಸಿ ಅಂಟಿಸಿ. ಪ್ರಕೃತಿಯ ಸಂರಕ್ಷಣೆ ಬಗ್ಗೆ ಮಾಹಿತಿ ಸಂಗ್ರಹಿಸಿ ವರದಿ ತಯಾರಿಸಿ.

ii) ನಿಯಮದ ಒಂದು ಅಂಶಕ್ಕೆ ಅನ್ವಯಿಸುವ ಸೇವಾಕಾರ್ಯ :

ನಿಯಮದ ಒಂದು ಅಂಶ ಆರಿಸಿಕೊಳ್ಳಿ. ನಿಮ್ಮ ಹಿರಿಯ ನಾಯಕಿಯೊಡನೆ ಸಮಾಲೋಚಿಸಿ, ಚರ್ಚಿಸಿ ಅದಕ್ಕೆ ಸರಿಹೊಂದುವ ಸೇವಾ ಕಾರ್ಯವನ್ನು ಆರಿಸಿಕೊಂಡು ಯೋಜನೆಯನ್ನು ಸಿದ್ಧಪಡಿಸಿ ಸೇವಾಕಾರ್ಯವನ್ನು ಕಾರ್ಯಗತಗೊಳಿಸಿ ವರದಿ ಸಲ್ಲಿಸುವುದು.

iii) ಸರ್ಕಾರಿ ಸಾರ್ವಜನಿಕ ಸೇವಾಕಾರ್ಯಗಳ ಮಾಹಿತಿ ಸಂಗ್ರಹ :

ಗ್ರಾಮಪಂಚಾಯಿತಿ / ಕ್ಷೇತ್ರಾಭಿವೃದ್ಧಿ ಕಛೇರಿಗಳಿಗೆ ಭೇಟಿ ನೀಡಿ. ಅವರು ಹಮ್ಮಿಕೊಂಡಿರುವ ಸಾರ್ವಜನಿಕ ಸೇವಾ ಕಾರ್ಯಕ್ರಮಗಳ ಪಟ್ಟಿಮಾಡಿ. ಆ ಕಾರ್ಯಚರಣೆಗಳ ವಿವರವಾದ ಮಾಹಿತಿ ಸಂಗ್ರಹಿಸಿ ದಿನಾಂಕ, ಭೇಟಿಯಾದ ಕಛೇರಿ ವಿಳಾಸ, ಅಧಿಕಾರಿ ಅಥವಾ ಸಂಬಂಧಪಟ್ಟವರ ಹೆಸರು, ಪದನಾಮ (designation) ಬರೆದು ಮಾಹಿತಿಯನ್ನು ಒಂದು ಒಳ್ಳೆಯ ಪ್ರಬಂಧ ರೂಪದಲ್ಲಿ ಸಲ್ಲಿಸಿ. ಅಧಿಕಾರಿಗಳ ಸಹಿ ಮತ್ತು ಮೊಹರನ್ನು ಪಡೆಯಿರಿ.

ಹೆಜ್ಜೆ – 4 : ದ್ವಿತೀಯ ಸೋಪಾನ

ದ್ವಿತೀಯ ಸೋಪಾನದ ಗೈಡ್ ಪರೀಕ್ಷೆಗಳು :

1. **ಅಗ್ರಗಾಮಿತ್ವ :** ಈ ಗಂಟು, ಕಟ್ಟುಗಳನ್ನು ಕಟ್ಟಿ ಬಳಸಿ.

   a) ದಿಮ್ಮಿ ಗಂಟು (Timber Hitch), 8 ಸಂಖ್ಯೆಯ ಗಂಟು (Figure of 8 Knot), ಸುರುಳಿ ಗಂಟು (Rolling Hitch), ಸನ್ನೆ ಗಂಟು (Marline Spike).

   b) ಚೌಕ ಕಟ್ಟು (Square Lashing) , 8 ಸಂಖ್ಯೆ ಕಟ್ಟು (Figure of 8 Lashing).

   c) ಶಿಬಿರ ಸಲಕರಣೆ ಕೈಗೊಡಲಿ ಅಥವಾ ಮಚ್ಚು ಹರಿತವಾಗಿಡುವುದು. ತುಕ್ಕು ಹಿಡಿಯದಂತೆ ಸುರಕ್ಷಿತವಾಗಿಡುವುದು.

   d) ಭರ್ಜಿ ಅಥವಾ ಚಾಕು ಉಪಯೋಗಿಸಿ ಸುರಕ್ಷಿತವಾಗಿ ಹರಿತವಾಗಿ ಸ್ಕ್ರೂಡ್ರೈವರ್ ಮತ್ತು ಕಟಿಂಗ್ ಪ್ಲೆಯರ್ ಮತ್ತು ಸುತ್ತಿಗೆಯನ್ನು ಬಳಸಿ ಸುರಕ್ಷಿತವಾಗಿಡಿ.

2. **ಬೆಂಕಿ:**

   a) ಶಿಬಿರದಲ್ಲಿ ಅಥವಾ ಬಯಲಿನಲ್ಲಿ ಬಳಸುವ ವಿವಿಧ ರೀತಿಯ ಬೆಂಕಿ ಜೋಡಣೆಯನ್ನು ತಿಳಿಯಿರಿ.

   b) ಎರಡು ಬೆಂಕಿಕಡ್ಡಿಗಿಂತ ಹೆಚ್ಚು ಬಳಸದೆ ಬಯಲಿನಲ್ಲಿ ಬೆಂಕಿ ಹತ್ತಿಸಿ.

3. **ಅಡುಗೆ:**

   a) ಸೀಮೆಎಣ್ಣೆ/ಅನಿಲ ಒಲೆಗಳ ಕಾರ್ಯರೀತಿ ತಿಳಿದು ಅದನ್ನು ಸರಿಯಾಗಿ ಇಡುವುದನ್ನು ತಿಳಿಯಿರಿ.

   b) ಬಯಲಿನಲ್ಲಿ ಇಬ್ಬರಿಗೆ ಸರಳ ತಿನಿಸುಗಳನ್ನು ಮತ್ತು ಟೀ/ಕಾಫಿ ಮಾಡಿ.

c) ಅನಿಲ ಸೋರಿಕೆ ಬಗ್ಗೆ ಮುನ್ನೆಚ್ಚರಿಕೆ ಕ್ರಮ ತಿಳಿಯಿರಿ.

4. **ದಿಕ್ಸೂಚಿ ಮತ್ತು ನಕ್ಷೆ:**

a) ದಿಕ್ಸೂಚಿಯಲ್ಲಿ 16 ದಿಕ್ಕುಗಳನ್ನು ತಿಳಿಯಿರಿ.

b) ರಾತ್ರಿ ಸಮಯದಲ್ಲಿ ನಕ್ಷತ್ರ ಪುಂಜಗಳ ಸಹಾಯದಿಂದ ಉತ್ತರ ದಿಕ್ಕನ್ನು ಕಂಡುಹಿಡಿಯುವುದು.

c) ದಿಕ್ಸೂಚಿಯನ್ನು ಬಳಸಿ ನೀವು ನಿಲ್ಲುವ ಸ್ಥಾನದಿಂದ ವಿವಿಧ ವಸ್ತುಗಳ (ಗಿಡಮರ, ಕಟ್ಟಡ ಇತ್ಯಾದಿ) ದಿಕ್ಕೋನವನ್ನು (ಬೇರಿಂಗ್) ಕಂಡುಹಿಡಿಯಿರಿ.

d) ಜಾಡನ್ನು ಅನುಸರಿಸುತ್ತ ದಿಕ್ಸೂಚಿಯಿಂದ ದಿಕ್ಕೋನ ಮತ್ತು ದೂರವನ್ನು ಕಂಡುಹಿಡಿಯಿರಿ.

e) ಮಾಪಕ (ಸ್ಕೇಲ್), ದಿಕ್ಕು, ಸಾಂಪ್ರದಾಯಿಕ ಚಿಹ್ನೆಗಳು, ಗ್ರಿಡ್, ಸಮಪಾತಳಿ ರೇಖೆಗಳು, ರೆಫೆರೆನ್ಸ್‌ಗಳನ್ನು ತಿಳಿಯಿರಿ.

f) ಪ್ರವಾಸ ನಕ್ಷೆಯ ಉಪಯೋಗ ತಿಳಿಯಿರಿ.

5. **ಪ್ರಥಮ ಚಿಕಿತ್ಸೆ:**

a) ಗಾಯಗಳ ಬಗ್ಗೆ ತಿಳಿದು ರಕ್ತಸ್ರಾವ, ಸುಟ್ಟಗಾಯ, ಬೆಂದಗಾಯ, ಉಳುಕು, ಕುಟುಕು, ಕಚ್ಚುವಿಕೆಗೆ ಪ್ರಥಮ ಚಿಕಿತ್ಸೆ ತಿಳಿಯಿರಿ.

b) ಸುರುಳಿ ಪಟ್ಟಿ (ರೋಲರ್ ಬ್ಯಾಂಡೇಜ್) ಕಟ್ಟಿ ಪ್ರದರ್ಶಿಸಿ, ಬಳಸಿ.

c) ತ್ರಿಕೋನ ಪಟ್ಟಿಯ ಉಪಯೋಗ ತಿಳಿದು ತಲೆ, ಕೈ, ಪಾದ, ತೋಳು, ಮೊಣಕಾಲು, ಪಾದಪಟ್ಟಿಗಳನ್ನು ಕೊರಳಿನ ಅಸ್ತಿಭಂಗಕ್ಕೆ ಪಟ್ಟಿ ಕಟ್ಟಿ.

d) ತಾತ್ಕಾಲಿಕ ಡೋಲಿಯನ್ನು (Stretcher) ತಯಾರಿಸಿ.

6. **ಅಂದಾಜು ಅಳತೆ:**

a) 2 ದೂರ/ 1 ಅಗಲ 100 ಮೀಟರ್ ಮೀರದಂತೆ 30 ಮೀ. ಕಡಿಮೆ ಇರದಂತೆ ಸುಧಾರಿತ ಉಪಕರಣವನ್ನು ಮಾಡಿಕೊಂಡು ಅಳತೆ ಅಂದಾಜುಮಾಡಿ.

b) ಗೊತ್ತುಪಡಿಸಿದ ದೂರವನ್ನು ಕ್ರಮಿಸಿ ಹೆಜ್ಜೆಯ ಅಳತೆಯ ಆಧಾರದ ಮೇಲೆ ಅಂದಾಜು ಮಾಡಿ.

7. **ಹೊರಾಂಗಣ:**

a) ದಳದ ವ್ಯಾಪಕ ಆಟದಲ್ಲಿ ಭಾಗವಹಿಸಿ.

b) ಎರಡು ದೇಶಭಕ್ತಿ ಗೀತೆ / ಜಾನಪದ ಗೀತೆ/ ಪಟಾಲಂ ಕಿರುನಾಟಕವನ್ನು ಅಭ್ಯಾಸ ಮಾಡಿ.

c) ವಾಹನ ಸಂಚಾರ ನಿಯಮಗಳನ್ನು ತಿಳಿದು ಅಭ್ಯಾಸ ಮಾಡಿ.

d) ಸೈಕಲ್ ಸವಾರಿಯನ್ನು ಕಲಿಯಿರಿ.

e) ಹತ್ತಿರದ ಕಾರ್ಖಾನೆಗೆ ಭೇಟಿ ನೀಡಿ ಅದರ ಉತ್ಪಾದನೆಯನ್ನು, ಉತ್ಪಾದಿಸುವ ಪ್ರಕ್ರಿಯೆಯನ್ನು ತಿಳಿಯಿರಿ. ಜೊತೆಗೆ ಕಾರ್ಮಿಕತೆಯ ಗೌರವವನ್ನು ತಿಳಿಯುವುದು.

8. **ಸೇವಾಕಾರ್ಯ:**

ಕೆಳಗಿನವುಗಳಲ್ಲಿ ಯಾವುದಾದರೂ ಒಂದನ್ನು ಪೂರ್ಣಗೊಳಿಸಿ.

a) ಶಾಲಾ ಮುಖ್ಯಸ್ಥರೊಡನೆ ವಿಚಾರಮಾಡಿ ಶಾಲೆಗೆ ಬೇಕಾದ ಅಭಿವೃದ್ಧಿ ಸೇವಾ ಯೋಜನೆಯನ್ನು ಪಟಾಲಂವಾರು ಮಾಡಿ.

b) ಕನಿಷ್ಠ ಒಂದು ತಿಂಗಳು ಒಂದಕ್ಕಿಂತ ಹೆಚ್ಚು ಸಮಾಜ ಕಾರ್ಯದಲ್ಲಿ ಭಾಗವಹಿಸುವುದು.

c) ಸಮುದಾಯದಲ್ಲಿ ನಡೆಯುವ ಜಾತ್ರೆ ಮತ್ತು ಉತ್ಸವದ ಪೂರ್ವಸಿದ್ಧತೆ ಮತ್ತು ಜಾತ್ರೆ ಉತ್ಸವ ನಡೆಯುವಾಗ ನಿಯೋಜನ ಸೇವಾಕಾರ್ಯ ವನ್ನು ನಿರ್ವಹಿಸುವುದು.

d) ಕಸ ವಿರೋಧ ಚಟುವಟಿಕೆ ಆಂದೋಲನದಲ್ಲಿ ಭಾಗವಹಿಸಿ ನೀವು ಶಾಲೆ/ಸ್ಥಳೀಯ ಮತ್ತು ಜಿಲ್ಲಾ ಕೇಂದ್ರದ ಸುತ್ತಲೂ ಸ್ವಚ್ಛಮಾಡಿ.

e) 3 R's ಸಂರಕ್ಷಣೆ, ಕಡಿಮೆ ಬಳಕೆ, ಪುನರ್ ಚಾಲನೆ ಮತ್ತು ಪುನರ್ ಬಳಕೆಗಳನ್ನು ಮಾಡಿ ತೋರಿಸಿ.

f) ಸ್ವಸಹಾಯ ಸಂಘಗಳನ್ನು ಅಥವಾ ತತ್ಸಮವಾದ ಸಂಘಟನೆಗಳನ್ನು ರಚಿಸಿ ಗೈಡ್ ಕೌಶಲಗಳನ್ನು ಬಳಸುವುದು.

9. **ಜ್ಞಾನೇಂದ್ರಿಯ ತರಬೇತಿ:** ಕಿಮ್ಸ್‌ನ ಜ್ಞಾನೇಂದ್ರಿಯಗಳ ಆಟ ರುಚಿ, ವಾಸನೆ, ದೃಷ್ಟಿ, ಶಬ್ದ ಮತ್ತು ಸ್ಪರ್ಶ ಸಾಮರ್ಥ್ಯ ಮತ್ತು ವೀಕ್ಷಣಾ ಸಾಮರ್ಥ್ಯಗಳನ್ನು ಅಭಿವೃದ್ಧಿಗೊಳಿಸಿಕೊಳ್ಳಿ.

10. ಕೆಳಗಿನ ಪ್ರಾವೀಣ್ಯತಾ ಪದಕಗಳಲ್ಲಿ ಯಾವುದಾದರೂ ಎರಡನ್ನು ಪಡೆಯುವುದು

1. ಪಾಕ ಪ್ರವೀಣೆ (ಕುಕ್)
2. ಚರ್ಚಾಪಟು (ಡಿಬೇಟರ್)
3. ಪ್ರಾಣಿಮಿತ್ರೆ (ಫ್ರೆಂಡ್ ಟು ಅನಿಮಲ್)
4. ತೋಟಗಾರ್ತಿ (ಗಾರ್ಡನರ್)
5. ಗೃಹಕುಶಲಿ (ಹ್ಯಾಂಡಿ ವುಮನ್)
6. ಸೈಕಲ್ ಸವಾರಕಿ (ಸೈಕಲಿಸ್ಟ್)
7. ಮಡಿವಾಳಗಿತ್ತಿ (ಲಾಂಡ್ರಸ್)
8. ವಾಚಕಿ (ರೀಡರ್)
9. ಶಿಶುದಾದಿ (ಚೈಲ್ಡ್ ನರ್ಸ್)

11. ಶಿಸ್ತು

a) ವಿವಿಧ ರೀತಿಯಲ್ಲಿ ದಳ ರಚನೆ ಮಾಡಿ

b) ಚುರುಕಾಗಿ ಆಜ್ಞೆಗಳನ್ನು ಪಾಲಿಸುತ್ತಾ ಮೂರರ ಸಾಲಿನಲ್ಲಿ ಪಥಸಂಚಲನ ಮಾಡಿ

c) ನಿಮ್ಮ ದಳದ ನಾಲ್ಕು ಸರ್ವಧರ್ಮ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿ.

12. ಸಂಪರ್ಕ–ಸಂವಹನ:

a) ಕಂಪ್ಯೂಟರ್ ಬಳಸುವುದನ್ನು ಕಲಿಯಿರಿ. ಅಂತರ್ಜಾಲದ ಬಗ್ಗೆ ಮತ್ತು ಮೊಬೈಲ್ ಅನುಕೂಲತೆ ಮತ್ತು ಅನಾನುಕೂಲತೆ ತಿಳಿಯಿರಿ.

b) ಜಾಲತಾಣಗಳ ಬಳಕೆ ತಿಳಿದು ಭಾರತ ಸ್ಕೌಟ್ಸ್–ಗೈಡ್ಸ್‌ನ ಜಾಲತಾಣ –ವನ್ನು ಸಂಪರ್ಕಿಸಿ.

13. ದೇಶಭಕ್ತಿ:

a) ನಮ್ಮ ಸಂಸ್ಕೃತಿ ಮತ್ತು ಪರಂಪರೆಯ ಬಗ್ಗೆ ಮಾಹಿತಿ ಸಂಗ್ರಹಿಸಿ ದಿನಚರಿ (ಲಾಗ್) ಪುಸ್ತಕ ತಯಾರಿಸುವುದು.

14. ಪ್ರಥಮ ಸೋಪಾನದ ನಂತರ ಕನಿಷ್ಠ 6 ತಿಂಗಳು ದ್ವಿತೀಯ ಸೋಪಾನದಲ್ಲಿ ಸೇವೆ ಸಲ್ಲಿಸುವುದು.

ಸೂಚನೆ:

i) ಸ್ಥಳೀಯ / ಜಿಲ್ಲಾ ಸಂಸ್ಥೆಯ ಪದಕ ಸಮಿತಿಯಿಂದ ನೇಮಿಸಲ್ಪಟ್ಟ ಸ್ವತಂತ್ರ ಪರೀಕ್ಷಕರಿಂದ ಪರೀಕ್ಷೆ ನಡೆದ ನಂತರ ಪರೀಕ್ಷಕರು ಪ್ರಮಾಣ ಪತ್ರ ನೀಡುತ್ತಾರೆ.

ii) ದ್ವಿತೀಯ ಸೋಪಾನದ ಪದಕ ದೇವನಾಗರಿ ಲಿಪಿಯಾದ 'TAYYAR' ಎಂಬ ಪದ ಇದ್ದು, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಲಾಂಛನದಿಂದ ಒಳಗೊಂಡಿರುತ್ತದೆ.

iii) ಎಡತೋಳಿನಲ್ಲಿರುವ ಪ್ರಥಮ ಸೋಪಾನದ ಪದಕ ತೆಗೆದು ಅದೇ ಸ್ಥಳದಲ್ಲಿ ದ್ವಿತೀಯ ಸೋಪಾನದ ಪದಕ ಧರಿಸಬೇಕು.

1. ಅಗ್ರಗಾಮಿತ್ವ (Pioneering)

ಅಗ್ರಗಾಮಿಗಳು ಕಾಡಿನಲ್ಲಿ/ಬೆಟ್ಟಗುಡ್ಡಗಳಲ್ಲಿ ಸಾಹಸಕ್ಕಾಗಿ/ಯುದ್ಧಕ್ಕಾಗಿ ಮುಂದಾಗಿ ಹೋಗುವ ಒಂದು ಮುಂದಾಳು ತಂಡ (Advance party).

ಅಗ್ರಗಾಮಿಗಳಿಗೆ ಗಂಟು ಮತ್ತು ಕಟ್ಟುಗಳಲ್ಲಿ (lashing) ಪರಿಣತಿ ಇರಬೇಕು. ಇವರು ಸೇತುವೆ, ಏಣಿ, ಮರದ ಮೇಲೆ ಗುಡಿಸಲು, ಅಟ್ಟಣೆ, ವೀಕ್ಷಣಾಗೋಪುರ, ಹಗ್ಗದ ಹಾದಿ (Rope Way) ಮುಂತಾದವುಗಳನ್ನು ಕಟ್ಟುತ್ತಾ ಎಂತ ದುರ್ಗಮವಾದ ಬೆಟ್ಟ, ಗುಡ್ಡ, ಕಾಡುಗಳಲ್ಲೂ ದಾರಿ ಮಾಡುತ್ತಾ ಸಾಗುತ್ತಾರೆ. ನೀವು ಇವುಗಳಿಗೆ ಬೇಕಾದ ವಿಶಿಷ್ಟ ಗಂಟುಗಳನ್ನು ಮತ್ತು ಕಟ್ಟುಗಳನ್ನು ಕಟ್ಟಲೂ ಕಲಿಯಬೇಕು. ಈ ಕೌಶಲಗಳು ಹೊರಸಂಚಾರ, ಸಾಹಸಯಾನ, ಅನ್ವೇಷಣಾಯಾನಾ ಮತ್ತು ಶಿಬಿರವಾಸಗಳಲ್ಲಿ ಉಪಯುಕ್ತವಾಗುತ್ತವೆ.

ಹೊರೆಕಟ್ಟು / ದಿಮ್ಮಿಗಂಟು (Timber Hitch)

ಈ ಗಂಟನ್ನು ಸೌದೆ ಕಟ್ಟಲು ಉಪಯೋಗಿಸಲಾಗುವುದು. ಸೌದೆ ಮಾರುವವರು ಸಿಕ್ಕರೆ ಅವರು ಹೊರಗೆ ಕಟ್ಟಿರುವ ಗಂಟನ್ನು ಗಮನಿಸಿ. ದಿಮ್ಮಿಗಳಿಗೆ ಈ ಗಂಟು ಕಟ್ಟಿ ಎಳೆಯಲು ಮತ್ತು ಕರ್ಣ ಕಟ್ಟನ್ನು ಆರಂಭಿಸಲು ಉಪಯೋಗಿಸಲಾಗುವುದು.



ಸುರಳಿ ಗಂಟು (Rolling Hitch)

ಈ ಗಂಟನ್ನು ಮೂಟೆ ಬಾಯಿ ಕಟ್ಟಲು, ಹಗ್ಗವನ್ನು ಗೂಟಕ್ಕೆ ಕಟ್ಟಲು ಅಥವಾ ಇನ್ನೊಂದು ಹಗ್ಗಕ್ಕೆ ಜೋಡಿಸಲು ಉಪಯೋಗಿಸಲಾಗುವುದು.



ಕೊಟ್ಟಿಗೆ ಗಂಟಿಗೆ ಮತ್ತೊಂದು ಸುರುಳಿ ಹಾಕಿ ಹಗ್ಗವನ್ನು ತೂರಿಸಿ. ಗಂಟನ್ನು ಬಿಗಿಮಾಡಿ. ಇದು ಸಡಿಲವಾಗುವುದಿಲ್ಲ, ಜಾರುವುದಿಲ್ಲ.



ಅಷ್ಟಕ ಗಂಟು (Figure of Eight) ಹಗ್ಗದ ತುದಿಯನ್ನು ಸುರಕ್ಷಿತವಾಗಿಡಲು ಮತ್ತು ತುದಿಯ ಅಲಂಕರಣಕ್ಕಾಗಿ ಉಪಯೋಗಿಸಲಾಗುವುದು.

ಸನ್ನೆಗಂಟು (Marline Hitch)

ಇದನ್ನು ಹಗ್ಗದ ತುದಿ ಬಳಸದೆ ಹಗ್ಗದ ಮಧ್ಯಮಧ್ಯೆ ಗಂಟುಗಳನ್ನು ಹಾಕಬಹುದು. ಗಂಟಿನಿಂದ ಉಂಟಾಗುವ ಕುಣಿಕೆಯನ್ನು ಏಣಿಯ



ಅಡ್ಡದಂತೆ ಉಪಯೋಗಿಸಬಹುದು. ಕೋಲುಗಳಿಂದ ಏಣಿ ಕಟ್ಟಲು, ಕಟ್ಟಿಗೆ ಹೆಣೆಯಲು ಉಪಯೋಗಿಸಬಹುದು. ಈ ಗಂಟುಗಳು ಜಾರುವುದಿಲ್ಲ.

ಕಟ್ಟುಗಳು (Lashings)

ಇವುಗಳನ್ನು ಗಂಟಿನಿಂದ ಪ್ರಾರಂಭಿಸಿ ವಿವಿಧ ರೀತಿಯಲ್ಲಿ ಅಡ್ಡವಾಗಿ ಮತ್ತು ಲಂಬವಾಗಿ ಸುತ್ತು ಸುತ್ತಿ ಗಂಟಿನಿಂದ ಕೊನೆಗೊಳಿಸಲಾಗುವುದು. ಈ ಕಟ್ಟುಗಳನ್ನು, ಕೋಲು, ದಂಡ, ಕಂಭಗಳನ್ನು ವಿವಿಧ ರೀತಿಯಲ್ಲಿ ಜೋಡಿಸಿ ಕಟ್ಟಲು ಉಪಯೋಗಿಸಲಾಗುವುದು. ಇವುಗಳಲ್ಲಿ 4 ವಿಧದ ಕಟ್ಟುಗಳನ್ನು ಅಭ್ಯಾಸ ಮಾಡುವುದು.

1) ಚೌಕಕಟ್ಟು 2) ಕರ್ಣಕಟ್ಟು 3) ಸಮಾನಾಂತರಕಟ್ಟು 4) ಅಷ್ಟಕಕಟ್ಟು

ಈ ಕಟ್ಟುಗಳ ಸಹಾಯದಿಂದ ಶಿಬಿರದ ಪೀಠೋಪಕರಣ, ವೀಕ್ಷಣಾ ಗೋಪುರ, ಸೇತುವೆ, ಮರದ ಮೇಲೆ ಅಟ್ಟಣಿಗೆ, ಗುಡಿಸಲು ಮುಂತಾದವುಗಳನ್ನು ಕಟ್ಟಲು ಬಳಸಲಾಗುವುದು.

1. ಚೌಕ ಕಟ್ಟು (Square Lashing)



1 2 3

ಎರಡು ಕೋಲುಗಳನ್ನು ಲಂಬ ಕೋನದಲ್ಲಿ ಜೋಡಿಸಲು ಈ ಕಟ್ಟನ್ನು ಉಪಯೋಗಿಸ ಲಾಗುವುದು. ಈ ಕಟ್ಟಿನಲ್ಲಿ ಕೋನಗಳು ಸ್ಥಿರವಾಗಿರುತ್ತದೆ. ಈ ಕಟ್ಟನ್ನು ಶಿಬಿರ ಪೀಠೋಪಕರಣ ತಯಾರಿಸಲು ಆಗ್ರಾಮಿ ಯೋಜನೆಗಳಾದ ಸೇತುವೆಗಳು, ವೀಕ್ಷಣಾ ಗೋಪುರ, ಅಟ್ಟಣಿಗೆ ಮುಂತಾದವುಗಳನ್ನು ತಯಾರಿಸಲು ಬಳಸಲಾಗುವುದು.

ಸಂಖ್ಯೆ 8ರ ಕಟ್ಟು (Figure of Eight Lashing)



3 ಕೋಲುಗಳನ್ನು ಸಮಾನಾಂತರವಾಗಿಟ್ಟು ಮಧ್ಯದ ಕೋಲನ್ನು ಚಿತ್ರದಲ್ಲಿ ತೋರಿಸಿದಂತೆ ಲಂಬಿಸಿ, ಚಿತ್ರದಲ್ಲಿ ತೋರಿಸಿದಂತೆ ಕಟ್ಟಿ, ಇದನ್ನು ತ್ರಿಪದಿ ಆಧಾರಕ (Sheer Lashing) ಕೈ ತೊಳೆಯುವ ತೊಟ್ಟಿ, ಸಾಮಾನುಗಳನ್ನು ನೇತುಹಾಕಲು ಮತ್ತು ಜೋಡಿಸಲು ವಿವಿಧೋದ್ದೇಶದ ಆಧಾರಕಗಳನ್ನು (Multipurpose stand) ತಯಾರಿಸಲು ಬಳಸಲಾಗುತ್ತದೆ.

ಗಮನಿಸಿ: ನಿಮ್ಮ ಶಿಕ್ಷಕರಿಂದ ಗಂಟುಹಾಕುವುದನ್ನು ಕಲಿಯಿರಿ ಚಿತ್ರ ನೋಡಿ, ಅಭ್ಯಾಸ ಮಾಡಬಹುದು. ಕಲಿತಗಂಟನ್ನು ಉಪಯೋಗಕ್ಕೆ ಅನುಗುಣವಾಗಿ ಬಳಸಿ ತೋರಿಸಿ.

ಶಿಬಿರ ಸಲಕರಣೆಗಳು (Camp Tools)

ಈ ಕೆಳಕಂಡ ಸಲಕರಣೆಗಳು, ನಿಮಗೆ ಶಿಬಿರದಲ್ಲಿ ಉಪಯೋಗವಾಗುತ್ತವೆ. ಈ ಸಲಕರಣೆಗಳ ಬಳಕೆ ಮತ್ತು ಸುರಕ್ಷತೆಯ ಬಗ್ಗೆ ತಿಳಿದುಕೊಳ್ಳಬೇಕು. ಗುದ್ದಲಿ

(Spade), ಕೊಡಲಿ (Axe), ಕೈಗರಗಸ (Handsaw), ಕಬ್ಬಿಣದಹಾರೆ (Crowbar), ಮಚ್ಚು (Chopper), ಚಾಕು (Knife), ಸುತ್ತಿಗೆ (Hammer), ಮರದ ಸುತ್ತಿಗೆ (Mallet).



ಸುರಕ್ಷೆ (Safety)

- ಇವುಗಳ ಲೋಹದ ಹಾಗೂ ಚೂಪಾದ ಅಲಗುಗಳನ್ನು ಮರಕ್ಕೆ/ಮರದ ತುಂಡಿಗೆ ಕಚ್ಚಿಸಿ ಇಡಬೇಕು. ಇಲ್ಲವೇ ಚರ್ಮದ ಕವಚದಲ್ಲಿ ಇಡಬೇಕು.
- ಈ ಉಪಕರಣಗಳನ್ನು ಬಳಸುವುದರಿಂದ ಸುಸ್ಥಿತಿಯಲ್ಲಿರುತ್ತದೆ ಇವುಗಳು ಮೊಂಡಾದಾಗ ಸಾಣಿ ಹಿಡಿಸಬೇಕು.
- ಲೋಹದ ಭಾಗಕ್ಕೆ ತುಕ್ಕು ಹಿಡಿಯುವುದನ್ನು ತಡೆಗಟ್ಟಲು ಎಣ್ಣೆ ಸವರಿ ಇಡಬೇಕು ಇಲ್ಲವೇ ಒರಸಿ ಒಣಗಿಸಿ ಒರೆಯಲ್ಲಿ (Cover) ಇಡಬೇಕು

ಎಚ್ಚರಿಕೆಗಳು :

- ಬಳಸುವ ಮುನ್ನ ಹಿಡಿಕೆಗಳು ಭದ್ರವಾಗಿರುವಂತೆ ನೋಡಿಕೊಳ್ಳಬೇಕು.
- ಕೊಡಲಿ ಮಚ್ಚುಗಳನ್ನು ಕೆಲಸ ಮಾಡುವಾಗ ಹತ್ತಿರ ಅಥವಾ ಎದುರಿಗೆ ಯಾರು ಇರಬಾರದು.
- ನಿಮಗೆ ಅನುಕೂಲಕರವಾಗುವಷ್ಟು ಮುಂದೆ ವಸ್ತುವನ್ನು ಇಟ್ಟುಕೊಂಡು ಒತ್ತಡವನ್ನು ಮುಂದಕ್ಕೆ ಅದರ ಮೇಲೆ ಹಾಕಬೇಕು.

2. ಬೆಂಕಿ

1) ಬಯಲಿನಲ್ಲಿ ಸೌದೆ ಕಟ್ಟಿಗೆ ಜೋಡಿಸುವುದು :

ಪುರಲೆ ಕಡ್ಡಿ (ಚಿಕ್ಕ ಚಿಕ್ಕ ಕಡ್ಡಿ) ಮತ್ತು ಸೌದೆಗಳನ್ನು ಸಂಗ್ರಹಿಸಿ, ಕಟ್ಟಿಗೆಗಳನ್ನು ಜೋಡಿಸುವುದು ಚಿತ್ರದಲ್ಲಿ ತೋರಿಸಿದಂತೆ ವಿವಿಧ ರೀತಿಯಲ್ಲಿ ಕಟ್ಟಿಗೆಗಳನ್ನು ಜೋಡಿಸುವ ಅಭ್ಯಾಸ ಮಾಡಿ ಮತ್ತು ಒಂದು ಅಥವಾ ಎರಡು ಬೆಂಕಿಕಡ್ಡಿಯಲ್ಲಿ ಹೊತ್ತಿಸಿ. ಸಂದರ್ಭಕ್ಕೆ ತಕ್ಕಂತಹ ಮಾದರಿಯಲ್ಲಿ ಕಟ್ಟಿಗೆಗಳನ್ನು ಜೋಡಿಸಿಕೊಳ್ಳಿ.

ಗೋಪುರದ ಜೋಡಣೆ (Pyramid Fire)

ಗೋಪುರದ ಒಳಗೆ ಪುರಲೆ, ಸಣ್ಣ ಕಡ್ಡಿಗಳನ್ನು ಬೆಂಕಿ ಹೊತ್ತಿಸಲು ಜೋಡಿಸಬೇಕು. ಇದರ ಮೇಲೆ ದೊಡ್ಡ ದೊಡ್ಡ ಕಟ್ಟಿಗೆಗಳನ್ನು ಗೋಪುರಾಕಾರದಲ್ಲಿ ಜೋಡಿಸಬೇಕು. ಹೆಚ್ಚಾಗಿ ಶಿಬಿರಾಗ್ನಿ ಹೊತ್ತಿಸಲು, ಈ ರೀತಿ ಜೋಡಿಸ ಲಾಗುವುದು. ಈ ಮಾದರಿಯ ಜೋಡಣೆಯಲ್ಲಿ, ಬೆಂಕಿ ಎತ್ತರವಾಗಿ ಜ್ವಾಲೆ ಚಾಚಿ ಉರಿಯುವುದು. ರಾತ್ರಿವೇಳೆ ಕಾಡಿನಲ್ಲಿ ಪ್ರಾಣಿಗಳನ್ನು ಓಡಿಸಲು, ಕ್ರಿಮಿಕೀಟಗಳನ್ನು ದೂರವಿಡಲು ಉಪಯುಕ್ತವಾಗುತ್ತದೆ.

ಹೋಮಕುಂಡ ಜೋಡಣೆ (Altar Fire)



ದೊಡ್ಡ ಸೌದೆಗಳನ್ನು ಕೆಳಭಾಗದಲ್ಲಿ ಚಿಕ್ಕಸೌದೆಗಳನ್ನು ಮೇಲ್ಭಾಗದಲ್ಲಿ ಚೌಕಾಕಾರವಾಗಿ ಜೋಡಿಸಿ ಮಧ್ಯದಲ್ಲಿ ಬೆಂಕಿ ಹೊತ್ತಿಸಲು ಪುರಲೆ ಮತ್ತು ಚಿಕ್ಕ ಚಿಕ್ಕ ಸೌದೆ ಚೂರುಗಳನ್ನು ಇಡಲಾಗುವುದು. ಇದನ್ನು ಹೆಚ್ಚು ಕಾಲ ಉರಿಸಲು ಬಳಸಲಾಗುವುದು.

ನಕ್ಷತ್ರ ಜೋಡಣೆ (Star Fire)

ಸುತ್ತಲೂ 3 ಅಥವಾ 5 ದಪ್ಪ ಸೌದೆ ಇಟ್ಟು ಮಧ್ಯದಲ್ಲಿ ಪುರಲೆಹಾಕಿ ಬೆಂಕಿ ಹೊತ್ತಿಸಬೇಕು. ಬೆಂಕಿ ಮಂದಗತಿಯಲ್ಲಿ ಉರಿಯುತ್ತದೆ. ಚಳಿ ಕಾಯಿಸಲು ಅಡಿಗೆ ಮಾಡಲು ಉಪಯೋಗಿಸಬಹುದು.

ಚಿತ್ರನೋಡಿ ಗುರಿ ಇಟ್ಟು ಎಸೆಯುವುದನ್ನು ಚೆನ್ನಾಗಿ ಅಭ್ಯಾಸಮಾಡಿ.

ಗಾಯಗಳು :

i) ಕತ್ತರಿಸಿದ ಗಾಯ : ಲೋಹದ ಅಥವಾ ಯಾವುದಾದರೂ ಹರಿತವಾದ ಅಥವಾ ಚೂಪಾದ ಕೊನೆಗಳಿಂದ ಚರ್ಮದ ಮೇಲೆ ಆಗುವ ಗಾಯಗಳೇ ಕೊಯ್ದ ಗಾಯ. ಕೆಲವೊಮ್ಮೆ ಗಾಯ ಆಳವಾಗಿಯೂ ಆಗಬಹುದು. ಆಗ ಹೊಲಿಸ ಬೇಕಾಗುತ್ತದೆ. ಗಾಯ ಮೇಲ್ಮೈಯಲ್ಲಾಗಿದ್ದರೆ, ಹೆಚ್ಚು ರಕ್ತಸ್ರಾವವಿಲ್ಲದಿದ್ದರೆ ಗಾಯವನ್ನು ಕ್ರಿಮಿನಾಶಕ ದ್ರಾವಣದಲ್ಲಿ ಅದ್ದಿದ ಹತ್ತಿಯಿಂದ ಒರಸಿ ಶುಚಿ ಮಾಡಿ ನಂತರ ಬೆರಳುಗಳಿಂದ ಒತ್ತಡ ಹಾಕಿ. ರಕ್ತಸ್ರಾವ ನಿಂತಿರುವುದು ಖಾತ್ರಿಯಾದ ಮೇಲೆ ನಿಧಾನವಾಗಿ ಒತ್ತಡವನ್ನು ಸಡಿಲಿಸಿ. ಗಾಯ ದೊಡ್ಡದಾಗಿದ್ದರೆ ವೈದ್ಯರ ಬಳಿ ಕರೆದುಕೊಂಡು ಹೋಗಿ.

ಹಳೆಯ ಮೊಳೆ, ಕತ್ತಿ, ಚೂಪಾದ ಮೊನಚಾದ ಲೋಹದ ಚೂರಿನಿಂದಾಗಿದ್ದರೆ ವೈದ್ಯರ ಬಳಿಗೆ ಕೂಡಲೆ (6 ಗಂಟೆಗಳ ಒಳಗೆ) ಹೋಗಿ ಟೆಟನಸ್ (ನಿರೋಧಕ ಚುಚ್ಚುಮದ್ದು) ಕೊಡಿಸಬೇಕು.

ಕ್ರಿಮಿನಾಶಕ ದ್ರಾವಣ : ಒಂದು ಲೀಟರ್ ನೀರಿಗೆ 4 ರಿಂದ 6 ಹನಿ ಡೆಟಾಲ್ ಸೆವಲಾನ್ ಹಾಕಿ ಕಲಕಿ ದುರ್ಬಲ ದ್ರಾವಣ ಮಾಡಿಕೊಂಡು ಗಾಯವನ್ನು ಒರಸಿ.

ii) ತರಚು ಗಾಯ : ಚರ್ಮ ಛಿದ್ರವಾಗಿರುತ್ತದೆ. ಈ ಗಾಯ ಒರಟು ನೆಲದ ಮೇಲೆ ಅಥವಾ ಮಣ್ಣಿನ ಮೇಲೆ ಬಿದ್ದಾಗ ಆಗುತ್ತದೆ. ಚರ್ಮದ ಕೆಳಗೆ ಕೆಂಪು ಮಾಂಸದ ಪದರ ಕಾಣುತ್ತದೆ. ಇದು ಮೇಲ್ಮೈಗಾಯ. ಹತ್ತಿಯನ್ನು ಕ್ರಿಮಿನಾಶಕ

ದ್ರಾವಣದಲ್ಲಿ ಅದ್ದಿ ಮೃದುವಾಗಿ ಶುದ್ಧಮಾಡಿ, ಕ್ರಿಮಿನಾಶಕ ಪುಡಿ (Nebasulf Pencilin ointment) ಹಚ್ಚಿ. ಗಾಯಕ್ಕೆ ಪಟ್ಟಿಕಟ್ಟುವ ಅವಶ್ಯಕತೆ ಇಲ್ಲ.

ಸುಟ್ಟಗಾಯ (Burns)

ಕಾದಲೋಹ, ಬಿಸಿಪಾತ್ರೆ, ಕಾದ ವಿದ್ಯುತ್ ಉಪಕರಣ, ಆಮ್ಲ, ಕ್ಷಾರ, ನೇರವಾದ ಬೆಂಕಿಜ್ವಾಲೆ, ಕೆಂಡಗಳಿಂದ ಸುಟ್ಟಗಾಯ ಉಂಟಾಗುತ್ತದೆ. ಕೆಲವೊಮ್ಮೆ ಸುಟ್ಟಗಾಯದ ಮೇಲೆ ಹೊಪ್ಪಳೆಗಳೂ ಬರಬಹುದು. ಚರ್ಮ ಮೊದಲು ಕೆಂಪಾಗುವುದು ಕ್ರಮೇಣ ಕಪ್ಪಾಗುವುದು. ಗಾಯ ಉರಿಯಿಂದ ಕೂಡಿರುವುದು.

ಸುಟ್ಟಗಾಯ ಚಿಕ್ಕದಾಗಲಿ, ದೊಡ್ಡದಾಗಲಿ ಅದರ ಮೇಲೆ ಸತತವಾಗಿ ತಣ್ಣೀರು ಹರಿಸಿ, (ಗಾಯದ ಪ್ರಮಾಣ ಅನುಸರಿಸಿ) ನಂತರ ಹೊಪ್ಪಳೆ ಇದ್ದರೆ ಒಡೆಯದಂತೆ ಬರ್ನಾಲ್ ಮೃದುವಾಗಿ ಲೇಪಿಸಿ ಸ್ವಚ್ಛ ಬಿಳಿ ಹತ್ತಿ ಬಟ್ಟೆಯಿಂದ ಸಡಿಲವಾಗಿ ಗಾಯವನ್ನು ಸುತ್ತಿ, ವೈದ್ಯರಲ್ಲಿಗೆ ಕರೆದು ಕೊಂಡು ಹೋಗಿ. ಗಾಯ ಹೇಗಾಯಿತು ಎಂಬ ಬಗ್ಗೆ ಚರ್ಚಿಸುವುದಕ್ಕಿಂತ ಅವರ ಆತಂಕ ದೂರ ಮಾಡಿ. ಕುಡಿಯಲು ತಂಪು ಪಾನೀಯ ಕೊಡಿ. ಗಾಯಾಳುವಿನ ಗಾಯದ ಮುಂದೆ ಕೆಮ್ಮಬಾರದು, ಸೀನಬಾರದು, ಅನವಶ್ಯಕವಾಗಿ ಗಾಯ ಮುಟ್ಟಬಾರದು ಹೀಗೆ ಮಾಡಿದರೆ ಗಾಯ ಸೋಂಕಿಗೆ ಒಳಗಾಗುತ್ತದೆ.

ಬೆಂದ ಗಾಯ (Burnt Wound) : ಕುದಿಯುವ ದ್ರವಗಳಿಂದ/ ದ್ರವಲೋಹಗಳಿಂದ / ದೊಡ್ಡ ಪ್ರಮಾಣದ ಬೆಂಕಿಯಿಂದ ಬೆಂದಗಾಯವಾಗುತ್ತದೆ. ಇದರಲ್ಲಿ ಹೊಪ್ಪಳೆಗಳು ಕಾಣಿಸಿಕೊಳ್ಳುತ್ತವೆ. ಇದರ ಮೇಲೆ ಚೆನ್ನಾಗಿ ತಣ್ಣೀರು ಹಾಯಿಸಿ, ಗಾಯ ತಂಪು ಮಾಡುವುದರಿಂದ ಗಾಯದ ಆಳ ಕಡಿಮೆಯಾಗುತ್ತದೆ. ಹೊಪ್ಪಳೆಗಳನ್ನು ಒಡೆಯಬೇಡಿ. ಏನನ್ನೂ ಹಚ್ಚಬೇಡಿ. ಸ್ವಚ್ಛವಾದ ಬಿಳಿ ಹತ್ತಿ ಬಟ್ಟೆಯನ್ನು ಸಡಿಲವಾಗಿ ಸುತ್ತಿ. ತಂಪು ಪಾನೀಯ ಕೊಟ್ಟು ಆತಂಕ ದೂರಮಾಡುತ್ತಾ ವೈದ್ಯರಲ್ಲಿಗೆ ಕರೆದುಕೊಂಡು ಹೋಗಿ.

ಬೆಂಕಿ ದೇಹದ ಮೇಲೆ ಹತ್ತಿ ಉರಿಯುತ್ತಿದ್ದರೆ, ನೆಲದ ಮೇಲೆ ಬೀಳಿಸಿ (ಮಲಗಿಸಿ) ಉರುಳಾಡಿಸಿ. ಇಲ್ಲವೆ ದಪ್ಪ ಕಂಬಳಿಯನ್ನು ಅವರಿಗೆ ಸುತ್ತಿ ನೆಲದ ಮೇಲೆ ಉರುಳಿಸಬೇಕು. ಅವರನ್ನು ಓಡಲು ಬಿಡಬಾರದು. ಗಾಳಿ ಬೀಸಿದಾಗ ಬೆಂಕಿ ಜೋರಾಗುತ್ತದೆ. ಹೀಗೆ ಮಾಡುವಾಗ ಆತುರಕ್ಕೆ ಒಳಗಾಗದಂತೆ ನಿಮ್ಮನ್ನು ನೀವು ರಕ್ಷಿಸಿಕೊಳ್ಳುವುದನ್ನು ಮರೆಯಬಾರದು.

ಕಡಿತಗಳು (Bites) : ಮನುಷ್ಯರನ್ನು ಪ್ರಾಣಿಗಳು ಕೆಲವೊಮ್ಮೆ ಕಚ್ಚುತ್ತವೆ. ಇದರಿಂದ ಗಾಯ ಉಂಟಾಗುತ್ತದೆ. ಗಾಯ ತೀವ್ರವಾದರೆ ಮಾಂಸಖಂಡ ಹರಿದು ರಕ್ತಸ್ರಾವವಾಗುತ್ತದೆ. ವಿಷ ಪ್ರಾಣಿಗಳಿಂದಾದ ಗಾಯಕ್ಕೆ ಶಮನಕಾರಿ ಚಿಕಿತ್ಸೆ ಮಾಡಿ ವೈದ್ಯರಲ್ಲಿಗೆ ಕರೆದುಕೊಂಡು ಹೋಗಬೇಕು. ರಕ್ತಸ್ರಾವವಾಗುತ್ತಿದ್ದರೆ ನಿಲ್ಲಿಸುವುದು ಗಾಯಕ್ಕೆ ಕ್ರಿಮಿನಾಶಕ ವಸ್ತು ಹಾಕಿ ಪಟ್ಟಿಕಟ್ಟಿ ವೈದ್ಯರನ್ನು ಸಂಪರ್ಕಿಸುವುದು.

ಹಾವು, ನಾಯಿಯಂತಹ ಅಪಾಯಕಾರಿ ಪ್ರಾಣಿ ಕಚ್ಚಿದಾಗ ಹೆಚ್ಚಿನ ಎಚ್ಚರಿಕೆ ವಹಿಸಬೇಕು. ಸಮಯ ವ್ಯರ್ಥಮಾಡದಂತೆ ತಕ್ಷಣವೇ ವೈದ್ಯರನ್ನು ಸಂಪರ್ಕಿಸಬೇಕು.

ಹಾವಿನ ಕಡಿತ : ಎಲ್ಲಾ ಹಾವು ವಿಷಪೂರಿತವಲ್ಲ. ಆದರೆ ಹಾವು ಎಂಬ ಪದವೇ ನಮ್ಮನ್ನು ಆಘಾತಕ್ಕೆ ಈಡುಮಾಡುತ್ತದೆ. ಆದ್ದರಿಂದ ಹಾವಿನ ಬಗ್ಗೆ ತಿಳಿದುಕೊಳ್ಳಬೇಕು. ಅಂತಹ ಸಂದರ್ಭಗಳಲ್ಲಿ ಧೈರ್ಯವಾಗಿರಬೇಕು. ತಕ್ಷಣ ಕ್ರಮಕೈಗೊಳ್ಳಬೇಕು.

ಕೂಡಲೇ ಗಾಯಗೀರಿ ರಕ್ತಸ್ರಾವ ಮಾಡಿಸಬೇಕು. ಗಾಯದ ಮೇಲೆ ಅಂದರೆ ಹೃದಯದ ದಿಕ್ಕಿಗೆ ಬಿಗಿಕಟ್ಟು ಕಟ್ಟಬೇಕು. ಇದನ್ನು 20 ನಿಮಿಷಕ್ಕೊಮ್ಮೆ ಸಡಿಲಿಸಿ, ಪುನಃ ಕಟ್ಟಬೇಕು. ಇಲ್ಲದಿದ್ದರೆ ರಕ್ತನಾಳಗಳು ಒತ್ತಡಕ್ಕೆ ಒಳಗಾಗಿ, ಅಂಟಿಕೊಂಡುಬಿಡುತ್ತವೆ. ಮಂಜುಗಡ್ಡೆ ಬಟ್ಟೆಯಲ್ಲಿ ಸುತ್ತಿ, ಗಾಯದ ಮೇಲಿಟ್ಟು ಕಟ್ಟುವುದರಿಂದ ವಿಷಪೂರಿತ ರಕ್ತ ಮೇಲೇರುವುದಿಲ್ಲ.

ಈ ಸಂದರ್ಭದಲ್ಲಿ ಆತಂಕ ದೂರ ಮಾಡುತ್ತಾ ಧೈರ್ಯ ತುಂಬುತ್ತ ಚಿಕಿತ್ಸೆ ಮಾಡಬೇಕು. ನಿದ್ರೆ ಮಾಡಲು ಅವಕಾಶ ಕೊಡಬಾರದು. ಪೊಟ್ಯಾಸಿಯಂ ಪರ್ಮಾಂಗನೇಟ್ ದ್ರಾವಣವಿದ್ದರೆ ಗಾಯದ ಮೇಲೆ ಲೇಪಿಸಬೇಕು.

ಹಾವಾಡಿಗನಬಳಿ, ಪ್ರಾಣಿಸಂಗ್ರಹಾಲಯಕ್ಕೆ ಹೋದಾಗ ವಿಶೇಷವಾಗಿ ನಾಗರ ಹಾವಿನ ಕೆಳಭಾಗದ ಪೊರೆ ಹೇಗಿರುತ್ತದೆ ಎಂದು ಗಮನಿಸಿ, ಹಾವು ಹರಿದ ನೆಲ ಗಮನಿಸಿ. ಹಿರಿಯರಿದ್ದರೆ ಅವರ ಸಹಾಯು ಪಡೆದು ಹಾವು ಯಾವುದೆಂದು ತಿಳಿಯಲು ಪ್ರಯತ್ನಿಸಿ, ವೈದ್ಯರಿಗೆ ಹಾವಿನ ಬಗ್ಗೆ ತಿಳಿಸಿದರೆ ಸರಿಯಾದ ಪ್ರತಿವಿಷ ನೀಡಲು ಸಹಾಯವಾಗುತ್ತದೆ.

ಹಾವು ಕಚ್ಚಿದಾಗ, ಆ ಜಾಗ ಅಚಲಗೊಳಿಸಿ, ನಡೆಸಿಕೊಂಡು ವೈದ್ಯರಲ್ಲಿ ಕರೆದೊಯ್ಯಬೇಡಿ. ಅವಶ್ಯವಿದ್ದರೆ ನೀರು ಕುಡಿಸಿ.

ನಾಯಿ ಕಡಿತ : ಹುಚ್ಚು ನಾಯಿ ಕಡಿತ ಅಪಾಯಕಾರಿ. ಇದರಲ್ಲಿ ರೇಬಿಸ್ ರೋಗಾಣುಗಳು ಇರುತ್ತವೆ. ಸಾಕುನಾಯಿ, ಬೀದಿನಾಯಿ ಕಚ್ಚಿದಾಗಲೂ

ಎಚ್ಚರವಾಗಿರಬೇಕು. ಸಾಕು ನಾಯಿಗೆ ರೇಬಿಸ್ ರೋಗ ನಿರೋಧಕ ಚುಚ್ಚುಮದ್ದು ಚುಚ್ಚಿಸಬೇಕು.

ಹುಚ್ಚುನಾಯಿ ಕಂಡುಬಂದರೆ ಬೀದಿಯಲ್ಲಿ ನಾಯಿಗಳ ಸಂಖ್ಯೆ ಹೆಚ್ಚಾದರೆ ಸಾರ್ವಜನಿಕ ಆರೋಗ್ಯ ಇಲಾಖೆಗೆ (Public Health Office)/ ಪುರಸಭೆಗೆ ದೂರುಕೊಡಿ.

ರೇಬಿಸ್ ರೋಗವು ನಾಯಿ ಕಚ್ಚಿದ ಸುಮಾರು 18 ತಿಂಗಳಲ್ಲಿ ಅಥವಾ ಇನ್ನೂ ಹೆಚ್ಚು ಅವಧಿಗಳಲ್ಲಿ ಕಾಣಿಸಿಕೊಳ್ಳಬಹುದು.

ನಾಯಿ ಕಚ್ಚಿದ ಭಾಗವನ್ನು ಡೆಟ್ಟಾಲ್ ದ್ರಾವಣ ಅಥವಾ ಅಡಿಗೆ ಸೋಡ ದ್ರಾವಣದಿಂದ ಚೆನ್ನಾಗಿ ತೊಳೆಯಬೇಕು.

ಗಾಯದ ಮೇಲೆ ಮೃದುವಾಗಿ ಬಟ್ಟೆಸುತ್ತಿ ನೀರು ಹಾಕಿದರೆ ನೋವು ಕಡಿಮೆಯಾಗುತ್ತದೆ. ಕೂಡಲೆ ವೈದ್ಯರಲ್ಲಿಗೆ ಹೋಗಿ ರೇಬೀಸ್ ನಿರೋಧಕ ಚುಚ್ಚುಮದ್ದು ಪಡೆಯಬೇಕು.

ಉಳುಕು (Sprain) : ಅಸ್ತಿಬಂಧಕವು (ligaments) ಆಕಸ್ಮಿಕ ತಿರುಚು ಅಥವಾ ಚಲನೆಗಳಿಂದ ತಿರುಚಿಕೊಳ್ಳುವುದರಿಂದ, ತುಂಡಾಗುವುದರಿಂದ ಉಳುಕು ಉಂಟಾಗುತ್ತದೆ. ಅಸ್ತಿ ಬಂಧಕವು ಹಿಗ್ಗುವ, ಕುಗ್ಗುವ ಶಕ್ತಿ ಹೊಂದಿರುವ ಕೀಲುಗಳನ್ನು ಬಂಧಿಸುವ ಸ್ನಾಯುನಿಂದಾದ ಹುರಿ.

ಹೀಗಾದಾಗ ತೀವ್ರ ನೋವು, ಊತ ಕಾಣಿಸಿಕೊಳ್ಳುತ್ತದೆ. ಚಲನೆ ಅಸಾಧ್ಯವಾಗುತ್ತದೆ.

ಉಳುಕಿದ ಭಾಗವನ್ನು ಅಚಲಗೊಳಿಸಬೇಕು. ಆ ಭಾಗವನ್ನು ಸುಸ್ಥಿತಿಯಲ್ಲಿ ಇರಿಸಿ ನಂತರ ಪ್ರಥಮೋಪಚಾರ ಪ್ರಾರಂಭ ಮಾಡಬೇಕು.

ಆ ಭಾಗಕ್ಕೆ ಪಟ್ಟಿಕಟ್ಟಿ. ಕಟ್ಟು ಹಿತಕರವಾದಷ್ಟು ಮಾತ್ರ ಬಿಗಿಯಾಗಿರಬೇಕು. ಚೆನ್ನಾಗಿ ನೀರು ಹಾಕಿ, ತೇವಮಾಡಿ. ಒಣಗಿದ್ದರೆ ಪುನಃ ತೇವಮಾಡಿ.

ಮಂಜುಗಡ್ಡೆಯಿಂದ/ತಂಪಾದ ನೀರಿನಿಂದ ಒತ್ತಡ ಹಾಕಿ ಉಳುಕಿದ ಭಾಗಕ್ಕೆ ಸಂಪೂರ್ಣ ವಿಶ್ರಾಂತಿ ನೀಡಿ.

ಮೂಗಿನಿಂದ ರಕ್ತಸ್ರಾವ : ಮೂಗಿನಿಂದಾಗುವ ಸಾಮಾನ್ಯ ರಕ್ತಸ್ರಾವವು ಹೆಚ್ಚು ಅಪಾಯಕಾರಿಯಲ್ಲ. ಆದರೆ ತಲೆಗೆ ಪೆಟ್ಟಾದಾಗ ಮೂಗಿನಿಂದ ಆಗುವ ರಕ್ತಸ್ರಾವ ಅಪಾಯಕಾರಿಯಾಗಿರುತ್ತದೆ.

ಗಾಳಿಯಲ್ಲಿ ಕೂರಿಸಿ, ತಲೆ ತಗ್ಗಿಸಿ ಮೂಗಿನ ಮೇಲ್ಭಾಗ ಒತ್ತಿ ಹಿಡಿಯಿರಿ. ಬಾಯಿಯಿಂದ ಉಸಿರಾಡುವಂತೆ ಹೇಳಿ. ಮಂಜುಗಡ್ಡೆಯನ್ನು ತಣ್ಣೀರನ್ನು ಮೂಗಿನ ಮೇಲೆ ಬಟ್ಟೆಯಲ್ಲಿ ಸುತ್ತಿಡಿ.

ರಕ್ತಸ್ರಾವವು 10 ನಿಮಿಷದಲ್ಲಿ ನಿಲ್ಲದಿದ್ದರೆ ಕೂಡಲೇ ವೈದ್ಯರನ್ನು ಸಂಪರ್ಕಿಸಿ.

ಸಾಮಾನ್ಯ ಹಾಗೂ ಅಗತ್ಯ ಎಚ್ಚರಿಕೆಗಳು : (ಸಂದರ್ಭಕ್ಕೆ ತಕ್ಕಂತೆ ಬಳಸಿ)

1. ವೈದ್ಯರನ್ನು ತಕ್ಷಣವೇ ಸಂಪರ್ಕಿಸಲು ಪ್ರಯತ್ನಿಸುತ್ತಾ ಪ್ರಥಮ ಚಿಕಿತ್ಸೆ ಮಾಡಿ.
2. ಪ್ರಥಮ ಚಿಕಿತ್ಸೆಗೆ ಹೆಚ್ಚು ಸಮಯ ತೆಗೆದುಕೊಳ್ಳಬೇಡಿ. ಸಾಧ್ಯವಿದ್ದಷ್ಟು ಮಾತ್ರ ಮಾಡಿ.
3. ಗಾಯಾಳುವಿನ ನಾಡಿ ಉಸಿರಾಟ ಗಮನಿಸಿ. ಅವರ ಪ್ರಾಣಾಪಾಯ ಅಂದಾಜು ಮಾಡಿ ಕ್ರಮ ತೆಗೆದುಕೊಳ್ಳಿ.
4. ಅಪಘಾತಕ್ಕೆ ಕಾರಣ ತಿಳಿಯಿರಿ. ಪ್ರಜ್ಞೆ ಇದ್ದರೆ ರೋಗಿಯಿಂದಲೇ ಅಪಘಾತ ಸಂದರ್ಭದ ಬಗ್ಗೆ ಮತ್ತು ಅವರ ಆರೋಗ್ಯದ ಬಗ್ಗೆ ತಿಳಿಯಿರಿ.
5. ಅವರ ಆತಂಕವನ್ನು ಹಿತಮಿತ ಹಾಗೂ ಪ್ರಭಾವಶಾಲಿಯಾದ ಮಾತಿನಿಂದ ದೂರಮಾಡುತ್ತಾ ಚಿಕಿತ್ಸೆ ನೀಡಿ.
6. ಸ್ಥಳದಲ್ಲಿ ದೊರೆಯುವ ವಸ್ತು, ನಿಮ್ಮ ಬಳಿ ದೊರೆಯುವ ವಸ್ತುಗಳ ಸ್ವಚ್ಛತೆಯನ್ನು ಗಮನಿಸಿ. ಗಾಯವನ್ನು ಕೊಳಕಾದ ಬಟ್ಟೆಯಿಂದ ಒರೆಸಿದರೆ ಸೋಂಕು ತಗಲುತ್ತದೆ.
7. ಗುಂಪು ಇದ್ದರೆ, ಅದನ್ನು ಹತೋಟಿಗೆ ತೆಗೆದುಕೊಂಡು ಜನ ಸಹಾಯ ಪಡೆಯಿರಿ.

ಕೆಲವು ಸಣ್ಣಪುಟ್ಟ ಅಪಘಾತಗಳಾದರೆ, ಕೆಲವು ತೀವ್ರ ಸ್ವರೂಪದ ಅಪಘಾತಗಳಾಗಿರುತ್ತವೆ. ಆದ್ದರಿಂದ ಸಂದರ್ಭೋಚಿತವಾಗಿ ಕ್ರಮ ತೆಗೆದುಕೊಂಡು ಚಿಕಿತ್ಸೆ ನೀಡಿ. ನಿಮ್ಮ ಚಿಕಿತ್ಸೆ ಉಪಯುಕ್ತವಾಗುತ್ತದೆ.

7. ಅಂದಾಜು ಅಳತೆ (Estimation)

ಅಂದಾಜು ಅಳತೆಯ ಕೌಶಲ ಜೀವನದಲ್ಲಿ ಬಹುಮುಖ್ಯ. ಸಮಯ, ದೂರ ಅಥವಾ ಅಗಲ, ಎತ್ತರ, ಆಳ, ತೂಕ, ಗಾತ್ರ ಸಂಖ್ಯೆ ಮತ್ತು ಬೆಲೆಗಳ ಅಂದಾಜು ಬಹಳ ಸಹಾಯವಾಗುತ್ತದೆ. ಕೊಳ್ಳುವ ವಸ್ತುಗಳ ತೂಕ, ಗಾತ್ರ, ಅಳತೆ ಅಂದಾಜು ಮಾಡಲು ಸಾಧ್ಯವಿದ್ದರೆ ನೀವು ವ್ಯಾಪಾರದಲ್ಲಿ ಮೋಸ ಹೋಗುವುದಿಲ್ಲ. ಅಂದಾಜು

ಮಾಡುವುದನ್ನು ಅಭ್ಯಾಸ ಮಾಡಬೇಕು. ಒಳ್ಳೆಯ ಅಂದಾಜುಗಾರರ ತಪ್ಪು 10%ವರೆಗೆ ಮಾನ್ಯ ಮಾಡಲಾಗುವುದು. ಗೈಡಾದ ನೀವು ಈ ಜೀವನ ಕೌಶಲ ಬೆಳೆಸಿಕೊಳ್ಳಬೇಕು.

ದೂರದ ಅಂದಾಜು (Estimation of distance)

ಗೈಡ್‌ಗಳಾದವರು 1 ಇಂಚಿನಿಂದ 1 ಮೈಲಿಯವರೆಗೂ ಅಂದಾಜು ಮಾಡುವ ಸಾಮರ್ಥ್ಯ ಪಡೆಯಬೇಕು. ಇದು ನಿಮಗೆ ಗೊತ್ತೇ? ನಮ್ಮ ದೇಹವೇ ಒಂದು ಮಾಪಕ! ದೇಹದ ಎತ್ತರ, ಕೈಕಾಲುಗಳಿಂದ ಚೋಟು, ಗೇಟು, ಮೊಳ, ಗಜ, ಮೀಟರ್, ಮಾರು, ಹೆಜ್ಜೆ ಇವುಗಳ ಅಳತೆಯನ್ನು ತೆಗೆದುಕೊಂಡು ಸಿದ್ಧದಾಖಲೆ ತಯಾರಿಸಿಕೊಳ್ಳಿ.

i) ದೂರವನ್ನು ಕಂಡುಹಿಡಿಯಲು ಹೊರಾಂಗಣದಲ್ಲಿರುವ ಕೆಲವು ಸ್ಥಳಗಳನ್ನು ಗುರುತಿಸಿಕೊಳ್ಳಬೇಕು. ನೀವು ನಿಂತಿರುವ ಸ್ಥಳದಿಂದ ಗುರುತು ಮಾಡಿದ ಸ್ಥಳಕ್ಕೆ ನಡೆದು ಹೆಜ್ಜೆಯನ್ನು ಎಣಿಸಿ ಲೆಕ್ಕಾಚಾರ ಮಾಡಿ. ಈ ಅಂತರದ ನಿಜ ದೂರ ತಿಳಿದಿದ್ದರೆ ನಿಮ್ಮ ಅಂದಾಜನ್ನು ಹೋಲಿಸಿ, ಇಲ್ಲದಿದ್ದರೆ ನಿಮ್ಮ ಪಟಾಲಂನ ಎಲ್ಲರ ಅಂದಾಜು ಕೂಡಿ ಸರಾಸರಿ ಕಂಡುಹಿಡಿದು ಅದಕ್ಕೆ ಪ್ರತಿಯೊಬ್ಬರ ಅಂದಾಜನ್ನು ಹೋಲಿಸಿ. ನೀವು ಅರ್ಧ ಗಂಟೆಯಲ್ಲಿ ಎಷ್ಟು ನಡೆಯುವಿರೆಂದು ಕಂಡುಹಿಡಿದುಕೊಳ್ಳಿ. ಇದು ಕನಿಷ್ಠ ವೇಗಮಿತಿಯಾಗುತ್ತದೆ. ಇದರಿಂದಲೂ ಅಂದಾಜು ಮಾಡಬಹುದು.

ii) ವಾಹನಗಳು ಒಂದು ಗಂಟೆಗೆ ಕ್ರಮಿಸುವ ವೇಗಮಿತಿ ತಿಳಿದುಕೊಳ್ಳಿ. ನಿಮ್ಮ ಪ್ರಯಾಣದ ಸಮಯದಿಂದ ವೇಗ ಮಿತಿಯ ಆಧಾರದ ಮೇಲೆ ದೂರದ ಅಂದಾಜು ಮಾಡಿ.

iii) ಸ್ಥಿರಗೊಳಿಸಿದ ವಸ್ತುಗಳ ಅಂತರದಿಂದ ದೂರವನ್ನು ಕಂಡು ಹಿಡಿಯಬಹುದು. ಉದಾಹರಣೆಗೆ ರಸ್ತೆಯಲ್ಲಿರುವ ಟೆಲಿಗ್ರಾಫ್/ವಿದ್ಯುತ್ ಕಂಬದಿಂದ ಕಂಬಕ್ಕೆ ಇರುವ ಅಂತರ ನಿರ್ದಿಷ್ಟವಾಗಿರುತ್ತದೆ. ನೀವು ಎಷ್ಟು ಕಂಬದ ದೂರ ನಡೆದಿರೆಂದು ತಿಳಿದರೆ ದೂರವನ್ನು ಸುಲಭವಾಗಿ ಅಂದಾಜು ಮಾಡಬಹುದು.

iv) ದೂರದ ಅಳತೆಯನ್ನು ಶಬ್ದದ ಸಹಾಯದಿಂದಲೂ ಕಂಡು ಹಿಡಿಯಬಹುದು. ಉದಾಹರಣೆಗೆ ಬಂದೂಕು ಹಾರಿಸಿದರೆ ಮದ್ದಿನಿಂದ ಧಗ್ಗನೆ ಬಂದ ಉರಿಯನ್ನು ಕಂಡ ಕ್ಷಣದಿಂದ ಬಂದೂಕು ಹೊಡೆತದ ಶಬ್ದ

ಕೇಳಿ ಬರುವವರೆಗೂ ನಿಮಿಷಗಳನ್ನು ಎಣಿಸಿ. ಆಗ ನೀವು ಬಂದೂಕು ಹಾರಿಸಿದ ಸ್ಥಳದಿಂದ ಎಷ್ಟುದೂರದಲ್ಲಿ ಇದ್ದೀರೆಂದು ತಿಳಿದು ಬರುತ್ತದೆ. ಬೆಳಕು, ಶಬ್ದಕ್ಕಿಂತ ಅತಿವೇಗವಾಗಿ ಚಲಿಸುತ್ತದೆ. ಮೊದಲು ಬೆಳಕು ಕಂಡು ನಂತರ ಶಬ್ದ ಕೇಳಿಬರುತ್ತದೆ.

ಬೆಳಕು ನಿಮಿಷಕ್ಕೆ : 3 × 10 ಮೀ/ಸೆ. ದೂರ, ಶಬ್ದ ನಿಮಿಷಕ್ಕೆ 320 ಮೀ/ಸೆ. ದೂರ ಚಲಿಸುತ್ತದೆ.

v) ಸ್ಕೌಟ್ ದಂಡದ ಅಳತೆ ಗೊತ್ತುಪಡಿಸಿಕೊಂಡು ಅದರ ಸಹಾಯದಿಂದ ದೂರದ ಅಳತೆಯನ್ನು ಅಂದಾಜು ಮಾಡಬಹುದು.

vi) ವೀಕ್ಷಣೆಯ ಮೂಲಕ ದೂರದ ಅಂದಾಜು ಮಾಡಬಹುದು.

ಕೆಳಗೆ ಕೊಟ್ಟಿರುವ ವೀಕ್ಷಣಾ ದೂರದ ಅಂದಾಜು ಮಾಡಿ. ನಿಮ್ಮ ಅಂದಾಜು ಸ್ವಲ್ಪ ಹೆಚ್ಚು ಕಡಿಮೆ ಆಗುವ ಸಾಧ್ಯತೆ ಇರುತ್ತದೆ. ಅದನ್ನೇ ಅನುಸರಿಸಿ.

1) 50 ಮೀ.ಗಳ ದೂರದಲ್ಲಿ	–	ಒಬ್ಬ ವ್ಯಕ್ತಿಯ ಬಾಯಿ ಮತ್ತು ಕಣ್ಣುಗಳು ಸ್ಪಷ್ಟವಾಗಿ ಕಾಣಿಸುತ್ತವೆ.
2) 100 ಮೀ.ಗಳ ದೂರದಲ್ಲಿ	–	ಕಣ್ಣುಗಳು ಚುಕ್ಕೆಯಂತೆ ಕಾಣಿಸುತ್ತವೆ.
3) 200 ಮೀ.ಗಳ ದೂರದಲ್ಲಿ	–	ಸಮವಸ್ತ್ರಗಳ ಗುಂಡಿಗಳು ಮತ್ತಿತರ ವಿವರಗಳನ್ನು ಕಾಣಬಹುದು.
4) 400 ಮೀ.ಗಳ ದೂರದಲ್ಲಿ	–	ಕಾಲುಗಳ ಚಲನೆಯನ್ನು ಕಾಣಬಹುದು.
5) 500 ಮೀ.ಗಳ ದೂರದಲ್ಲಿ	–	ಸಮವಸ್ತ್ರದ ಬಣ್ಣಗಳನ್ನು ಕಾಣಬಹುದು.

ದೂರದ ಅಂದಾಜು ಕೆಳಗಿನ ಸಂದರ್ಭಗಳಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

1. ಗುಡ್ಡಗಳ ನಡುವೆ ಇರುವ ಕಣಿವೆಯನ್ನು ವೀಕ್ಷಿಸಿದಾಗ ಅಥವಾ ವಿಕಾರವಾಗಿರುವ ಅಥವಾ ಪಾತಾಳದ ಸ್ಥಳವನ್ನು ವೀಕ್ಷಿಸಿದಾಗ
2. ದೊಡ್ಡ ದೊಡ್ಡ ರಸ್ತೆಗಳಲ್ಲಿ ನಿಂತು ನೋಡಿದಾಗ.
3. ಮಂಡಿಯೂರಿ, ಅಥವಾ ಮಲಗಿಕೊಂಡು ನೋಡಿದಾಗ ದೂರದ ಅಂದಾಜು ಕೆಳಗಿನ ಸಂದರ್ಭಗಳಲ್ಲಿ ಕಡಿಮೆ ಕಂಡುಬರುತ್ತದೆ.

ದೂರದ ವಸ್ತುವಿನ ಬಣ್ಣವು ಹಿನ್ನೆಲೆಯೊಡನೆ ಬೆರೆತಾಗ ಅಥವಾ ನೆರಳಿನಿಂದ ಮುಚ್ಚಿರುವಾಗ ದೂರದ ಅಂದಾಜು ಕಡಿಮೆಯಾಗುತ್ತದೆ.

1. ಮೇಲೆ ನೋಡಿದಾಗ ಅಥವಾ ಆಳ ನೋಡಿದಾಗ ಮತ್ತು ನೀರಿನ ಮೂಲಕ ನೋಡಿದಾಗ.
2. ಪರಿಸರದಲ್ಲಿ ಇರುವುದಕ್ಕಿಂತ ವಸ್ತು ಹೆಚ್ಚಿನ ಗಾತ್ರದಲ್ಲಿದ್ದಾಗ.
3. ಮಂಜು ಬಿದ್ದಾಗ, ನೆಲ ಸಮನಾಗಿರುವಾಗ

ಅಗಲದ ಅಂದಾಜು (Estimation of Width)

ನದಿ ಪಾತ್ರ, ಬಯಲಿನ ಅಗಲ, ದೊಡ್ಡರಸ್ತೆಯ ಅಗಲಗಳನ್ನು ಅಂದಾಜಿಸಬಹುದು. 100 ಮೀಟರ್ ಅಗಲ ಅಂದಾಜಿಸಿ.

ಚಿತ್ರವನ್ನು ನೋಡಿ ಜ್ಯಾಮಿತಿಯ ಆಧಾರದ ಮೇಲೆ ಓದಿಕೊಳ್ಳಿ.



ನೀವು ಅಂದಾಜಿಸಬೇಕಾದ ಅಗಲದ ಮತ್ತೊಂದು ಭಾಗದಲ್ಲಿರುವ ಸ್ಥಿರವಾದ ವಸ್ತುವನ್ನು O ಎಂದು ಗುರುತಿಸಿ. A ನೀವು ವಸ್ತುವಿನ ಅಭಿಮುಖವಾಗಿ ನಿಲ್ಲುವ ಬಿಂದು. A ಯಿಂದ ಅನುಕೂಲಕ್ಕೆ ತಕ್ಕಂತೆ ಎಡ ಅಥಾವಾ ಬಲಕ್ಕೆ ನೇರವಾಗಿ ನಡೆದು B ಯಲ್ಲಿ ಗುರುತು ಕೋಲು ಇಡಿ. ಅಷ್ಟೆ ಹೆಜ್ಜೆ C ವರೆಗೆ ನಡೆಯಿರಿ. (AB ಮತ್ತು CB ಯ ಅಂತರ ಸಮನಾಗಿರಬೇಕು) ಈ ಅಳತೆಯನ್ನು ಸ್ಥಳಕ್ಕೆ ತಕ್ಕಂತೆ ಅಂದಾಜಿನಲ್ಲಿ ತೆಗೆದುಕೊಳ್ಳಬಹುದು.

AB=BC

ನಂತರ C ಬಿಂದುವಿನಲ್ಲಿ ವಸ್ತುವಿಗೆ ಅಭಿಮುಖವಾಗಿ 90^0 ಕೋನದಲ್ಲಿ ತಿರುಗಿ ನೇರ ನಡೆಯುತ್ತ ವಸ್ತುವನ್ನು ದಂಡದ ಮೂಲಕ ನೋಡುತ್ತಾ ಸಾಗಿ. ದಂಡ ಮತ್ತು ವಸ್ತು ಒಂದೇ ನೇರದಲ್ಲಿ ಸ್ಪಷ್ಟವಾಗಿ ಕಾಣಿಸಿದ ಬಿಂದುವಿನಲ್ಲಿ ನಿಂತು D ಗುರುತುವಮಾಡಿ. CD ಅಳೆಯಿರಿ–ಈ ಅಳತೆಯು ವಸ್ತುವಿನ ಅಗಲಕ್ಕೆ ಸಮನಾಗಿರುತ್ತದೆ.

CD = AO

ಚಿತ್ರವನ್ನು ನೋಡಿ, ಜ್ಯಾಮಿತಿಯ ಕೌಶಲವನ್ನು ಬಳಸಿಕೊಂಡು ಅಗಲದ ಅಂದಾಜು ಅಭ್ಯಾಸ ಮಾಡಿ.

ಪ್ರತಿಸಾರಿ ಅಂದಾಜು ಮಾಡಿದಾಗಲೂ ಪರೀಕ್ಷಿಸಿಕೊಳ್ಳಿ ನಿಮ್ಮ ಅಂದಾಜು ಎಷ್ಟು ಸರಿ?

ಅಂದಾಜು ಅಳತೆ – ನಿಜವಾದ ಅಳತೆ ಲಭ್ಯವಿದ್ದರೆ, ಇಲ್ಲವಾದರೆ ಅಷ್ಟಕದ ಅಂದಾಜಿನ ಸರಾಸರಿ ಅಳತೆ = ತಪ್ಪು (Error)

8. ವ್ಯಾಪಕ ಆಟ (Wide Game)

ದಳವು ಸೇರಿ ಒಂದು ವ್ಯಾಪಕ ಆಟವನ್ನು ಆಡುವುದು

ವ್ಯಾಪಕ ಆಟವೆಂದರೆ ವಿಶಾಲವಾದ ಕ್ಷೇತ್ರದಲ್ಲಿ, ಪ್ರಕೃತಿಯಲ್ಲಿ ಹೆಚ್ಚು ಸಮಯ ತೆಗೆದುಕೊಂಡು ಗೈಡ್ ಕೌಶಲಗಳನ್ನು ಬಳಸಿ ಆಡುವ ಸಾಹಸಮಯ ಆಟ. ಈ ಆಟವನ್ನು ಹಗಲಿನಲ್ಲಾಗಲಿ, ರಾತ್ರಿಯಲ್ಲಾಗಲಿ ಆಡಬಹುದು. ಈ ಆಟಗಳು ಗೈಡ್‌ಗಳಲ್ಲಿ, ಸವಾಲನ್ನು ಎದುರಿಸುವ ಧೈರ್ಯವನ್ನು, ಪರಿಹರಿಸುವ ಚಾತುರ್ಯವನ್ನು, ಸಹಕಾರ, ಸ್ನೇಹ, ಹೊಂದಾಣಿಕೆ ಮುಂತಾದ ಜೀವನಕೌಶಲಗಳನ್ನು ಬೆಳೆಸುತ್ತವೆ. ಈ ಆಟವು ಉಲ್ಲಾಸವನ್ನು ನೀಡುತ್ತದೆ ಮತ್ತು ನೈಜ ರೀತಿಯಲ್ಲಿ ಸಂಸ್ಥಾಪಕರು ಗೊತ್ತುಪಡಿಸಿರುವ ಚಾರಿತ್ರ್ಯ, ಆರೋಗ್ಯ, ಕರಕೌಶಲವನ್ನು ಈ ತಂತ್ರಗಳ ಮೂಲಕ ಅಭಿವೃದ್ಧಿಗೊಳಿಸುತ್ತದೆ.

ಆಟದ ಯೋಜನೆ :

ಈ ಆಟವನ್ನು ಗೈಡ್ ನಾಯಕಿ ಸಹನಾಯಕಿಯರೊಡನೆ ಗಹನವಾಗಿ ವಿವರವಾಗಿ ಯೋಚಿಸಿ ಗೌರವ ನ್ಯಾಯ ಸಭೆಯಲ್ಲಿ ವಿಚಾರ ವಿನಿಮಯಮಾಡಿ ಅನುಮೋದನೆ ಪಡೆದು ಆಯೋಜಿಸಬೇಕು.

ಆಟವು ಗೈಡ್‌ಗಳ ವಯೋಮಿತಿಗೆ ಅನುಗುಣವಾಗಿರಬೇಕು.

ಆಟವನ್ನು ಆಡಿಸುವ ಮೊದಲೇ ಸ್ಥಳವನ್ನು ವೀಕ್ಷಿಸಬೇಕು.

ಆ ಸ್ಥಳಕ್ಕೆ ಭೇಟಿ ನೀಡಿದಾಗ ಎಲ್ಲೆಲ್ಲಿ ಯಾವ ಕೌಶಲಗಳನ್ನು ಪ್ರದರ್ಶಿಸಬೇಕು. ಆಟವನ್ನು ಹೇಗೆ ಹೆಣೆಯಬೇಕೆಂದು ಟಿಪ್ಪಣಿ ಮಾಡಿಕೊಳ್ಳಬೇಕು.

ಈ ಆಟಕ್ಕೆ ಒಂದು ಕಥೆ/ಸಂದರ್ಭ/ಘಟನೆಯನ್ನು ಸಿದ್ಧಗೊಳಿಸಿಕೊಂಡು ಅದನ್ನು ಸಕ್ರಮವಾಗಿ ವ್ಯವಸ್ಥೆಗೊಳಿಸಬೇಕು.

ಅವಶ್ಯಕ ವಸ್ತು ಮತ್ತು ಜನಬಲವನ್ನು ಸಿದ್ಧಗೊಳಿಸಿಕೊಳ್ಳಬೇಕು.

ಬರುವ ಆಪತ್ತುಗಳನ್ನು ಊಹಿಸಿ ಅವುಗಳನ್ನು ಎದುರಿಸಲು ಸಿದ್ಧತೆ ಮಾಡಿಕೊಳ್ಳಬೇಕು.

ಗೈಡ್‌ಗಳಿಗೆ ಸ್ಪಷ್ಟವಾಗಿ ಸರಿಯಾದ ರೀತಿಯಲ್ಲಿ ಸೂಚನೆಗಳನ್ನು ಕೊಡಬೇಕು.

ಹೊರಡುವ ಮತ್ತು ಬರುವ ಸಮಯಗಳನ್ನು ಕರಾರುವಕ್ಕಾಗಿ ಹೇಳಬೇಕು.

ಹಿರಿಯ ನಾಯಕರು ಆಟ ನಡೆಯುವಾಗ ಗೈಡ್‌ಗಳ ಬೆಂಗಾವಲಾಗಿರಬೇಕು.

ಆಟದ ನಂತರ ಸಭೆ ಸೇರಿ ಅವರ ಅನುಭವಗಳನ್ನು ಹಂಚಿಕೊಳ್ಳಬೇಕು.

ಹಿರಿಯ ನಾಯಕಿ ಮತ್ತು ಸಹನಾಯಕಿಯರು ಸಭೆ ಸೇರಿ ತೊಡಕುಗಳ ಪಟ್ಟಿಮಾಡಿಕೊಳ್ಳಬೇಕು. ಇದರಿಂದ ಮುಂದಿನ ಯೋಜನೆ ಉತ್ತಮಗೊಳ್ಳುತ್ತದೆ. ಆಟದ ಯಶಸ್ಸಿನ ಮೌಲ್ಯಮಾಪನ ಮಾಡಿಕೊಳ್ಳಬೇಕು.

ಆಡಬಹುದಾದ ಆಟಗಳು

1. ಅಪಹೃತರನ್ನು ಬಿಡಿಸುವುದು
2. ಶತ್ರುಗಳನ್ನು ತಡೆಗಟ್ಟುವುದು
3. ಕಳ್ಳರನ್ನು ಹಿಡಿಯುವುದು
4. ಪತ್ತೆದಾರಿಕೆ
5. ನಿಧಿ ಅರಸುವುದು.
6. ಹೊಸ ಸ್ಥಳ ಅನ್ವೇಷಿಸುವುದು.
7. ಜ್ಞಾನೇಂದ್ರಿಯ, ಆಟ

ಹೀಗೆ ಅನೇಕ ರೀತಿಯ ಆಟಗಳನ್ನು ಕೃತಕ ಸನ್ನಿವೇಶ ಸೃಷ್ಟಿಸಿ ಆಡಿಸಬಹುದು. ಈ ಆಟವನ್ನು ಆಡುವುದರಿಂದ ದೇಹ ಮತ್ತು ಮನಸ್ಸು ಸದೃಢವಾಗಲು ಸಹಾಯಕವಾಗುತ್ತದೆ.

9. ಸಮುದಾಯ ಸೇವೆ

ಗೈಡ್ ನಾಯಕಿ ಏರ್ಪಡಿಸುವ ಸಮುದಾಯ ಸೇವೆಯಲ್ಲಿ ಒಂದು ತಿಂಗಳ ಕಾಲ ದಳ/ಪಟಾಲಂನ ಜೊತೆಗೂಡಿ ನೀವು ಕಲಿತ ಗೈಡ್ ಕೌಶಲಗಳನ್ನು ಬಳಸಿಕೊಂಡು ನಿರಂತರ ಸೇವೆ ಮಾಡಿ.

ಸೇವೆಯನ್ನು ನಿಷ್ಠೆಯಿಂದ ಮಾಡಿ. ಸಾರ್ವಜನಿಕ ಆಸ್ತಿಯನ್ನು ಗೌರವದಿಂದ ಕಾಣಿರಿ.

ಶಿಸ್ತು ಮತ್ತು ವಿನಯದಿಂದ ವರ್ತಿಸಿ. ನಿಮ್ಮನ್ನು ಒಂದು ಚಳವಳಿಯ ಪ್ರತಿನಿಧಿಯಾಗಿ ಸಾರ್ವಜನಿಕರು ಮತ್ತು ಪೋಷಕರು ಗಮನಿಸುತ್ತಾರೆ.

ಸಮಯ ಪಾಲನೆ ಮಾಡಿ. ಎಲ್ಲರೊಡನೆ ಸಹಕರಿಸಿ

ನಿಮ್ಮ ಸೇವೆಯ ಮೂಲಕ ನಿಮ್ಮ ಹಾಗೂ ಚಳವಳಿಯ ಘನತೆ ಹೆಚ್ಚಿಸಿ.

ಪ್ರತಿದಿನ ದಿನಚರಿ ಬರೆಯಿರಿ.

ಕೊನೆಯಲ್ಲಿ ನಾಯಕಿಗೆ ವರದಿ ಸಲ್ಲಿಸಿ.

ನಿಮಗೆ ಸಹಾಯ ಮಾಡಿದ ಹಿರಿಯರಿಗೆ (ಮುಖ್ಯಸ್ಥರಿಗೆ) ವಂದನಾ ಪತ್ರ ಬರೆಯಿರಿ.

ಈ ಕಾರ್ಯಕ್ರಮವು "ಗೈಡಳು ಸಾರ್ವಜನಿಕ ಆಸ್ತಿಯನ್ನು ರಕ್ಷಿಸಲು ಸಹಾಯ ಮಾಡುವಳು". ಎಂಬ ನಿಯಮದ ಅಂಶದ ಪ್ರತ್ಯಕ್ಷ ಚಟುವಟಿಕೆಯಾಗುತ್ತದೆ. ಈ ಚಟುವಟಿಕೆಯಲ್ಲಿ ಒಳಪಡುವ ನಿಯಮದ ಇತರ ಅಂಶಗಳ ಪಟ್ಟಿಮಾಡಿ. ಈ ಚಟುವಟಿಕೆ ನಿಮಗೆ ಉತ್ತಮ ನಾಗರಿಕರಾಗಲು ಸಹಾಯ ಮಾಡುತ್ತದೆ.

ಹಿರಿಯ ನಾಯಕಿಯರು ಮತ್ತು ಗೈಡ್‌ಗಳು ಸಮುದಾಯದ ಅವಶ್ಯಕತೆಯ ಸಮೀಕ್ಷೆ ನಡೆಸಿ ಆದ್ಯತೆ ಮತ್ತು ಸಾಧ್ಯತೆಯ ಮೇರೆಗೆ ಅದಕ್ಕೆ ಅವಶ್ಯಕವಾದ ಸೇವಾಕಾರ್ಯವನ್ನು ಕೈಗೊಳ್ಳಬೇಕು. ಸರಿಯಾದ ಯೋಜನೆ ತಯಾರಿಸಿ ಸಂಬಂಧಪಟ್ಟ ಅನುಮತಿ ಮತ್ತು ಸಹಕಾರ ಪಡೆಯಬೇಕು ಹಾಗೂ ಸಾರ್ವಜನಿಕರ ಸಹಾಯ ಪಡೆಯಬೇಕು.

11. ಸರ್ವಧರ್ಮ ಪ್ರಾರ್ಥನೆ

ನಿಮ್ಮ ದಳದಲ್ಲಿ ನಡೆಯುವ ನಾಲ್ಕು ಸರ್ವಧರ್ಮ ಪ್ರಾರ್ಥನಾ ಸಭೆಯಲ್ಲಿ ಭಾಗವಹಿಸಿ

ಮೂಲತಃ ಚಳವಳಿಯ ಸಂಸ್ಥಾಪಕರು ದೇವರಲ್ಲಿ ಅಚಲ ನಂಬಿಕೆಯುಳ್ಳವರು. ಇದರ ಮೂಲಭೂತ ತತ್ವಗಳ ಪ್ರಕಾರ (fundamentals) ದೇವರಲ್ಲಿ ನಂಬಿಕೆಯುಳ್ಳವರು ಮಾತ್ರ ಈ ಸಂಸ್ಥೆಯ ಸದಸ್ಯರಾಗಲು ಸಾಧ್ಯ. ಪ್ರತಿಯೊಬ್ಬ ಸದಸ್ಯರು ದೇವರಿಗೆ ನನ್ನ ಕೈಲಾದ ಕರ್ತವ್ಯವನ್ನು ಮಾಡುತ್ತೇನೆ ಎಂದು ಪ್ರತಿಜ್ಞೆ ಮಾಡುತ್ತೇವೆ. ಆದ್ದರಿಂದ ಪ್ರಾರ್ಥನೆಗೆ ನಮ್ಮ ಕಾರ್ಯಕ್ರಮದಲ್ಲಿ ಅಗ್ರಸ್ಥಾನವನ್ನು ನೀಡಲಾಗಿದೆ. ಎಲ್ಲಾಕಾರ್ಯವನ್ನು ದೇವರಿಗೆ ಅರ್ಪಿಸುತ್ತೇವೆ. ವಿಶ್ವದಾದ್ಯಂತ ಈ ಚಳವಳಿಯಲ್ಲಿ, ದಿನದ ಪ್ರಾರಂಭದಲ್ಲಿ, ಸಮಾರಂಭಗಳ ಪ್ರಾರಂಭದಲ್ಲಿ, ಭೋಜನದ ಪ್ರಾರಂಭದಲ್ಲಿ ಮತ್ತು ದಿನದ ಅಂತ್ಯದಲ್ಲಿ ಪ್ರಾರ್ಥನೆಯನ್ನು ಮಾಡಲಾಗುತ್ತದೆ.

ಬಹುಧರ್ಮಿಯರು ಒಟ್ಟಾಗಿ ಬಾಳುತ್ತಿರುವ ವಿಶ್ವದಲ್ಲೇ ಒಂದು ವಿಶಿಷ್ಟ ರಾಷ್ಟ್ರ ನಮ್ಮ ಭಾರತವಾಗಿದೆ. ಹೀಗಿರುವಾಗ ಕೆಲವೊಮ್ಮೆ ಐಕ್ಯತೆಯಲ್ಲೂ ಗೊಂದಲ ಉಂಟಾಗುವ ಸಂದರ್ಭಗಳಿರುತ್ತವೆ.

ಗಾಂಧೀಜಿಯವರು ಸರ್ವಧರ್ಮ ಸಮನ್ವಯಕ್ಕಾಗಿ, ಧಾರ್ಮಿಕ ಸೌಹಾರ್ದತೆಗಾಗಿ, ಹಾಗೂ ಭಾವೈಕ್ಯತೆಗಾಗಿ ಸರ್ವಧರ್ಮ ಪ್ರಾರ್ಥನಾ ಸಭೆಯನ್ನು ಆರಂಭಿಸಿದರು. ಎಲ್ಲಾ ಧರ್ಮಿಯರು ಭೇದವನ್ನು, ದ್ವೇಷವನ್ನು ಮರೆತು ಒಂದಾಗಿ ಪ್ರಗತಿಯನ್ನು ಸಾಧಿಸಬೇಕೆಂದು ಕರೆನೀಡಿದರು. ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಚಳವಳಿಯನ್ನು ನಮ್ಮ ರಾಷ್ಟ್ರಕ್ಕೆ ಅಳವಡಿಸಿಕೊಂಡಾಗ ಈ ಪ್ರಾರ್ಥನಾ ಕ್ರಮವನ್ನು ಶ್ರೀಮತಿ ಲಕ್ಷ್ಮೀ ಮುಜುಂದಾರ್ ಅಂದಿನ ರಾಷ್ಟ್ರೀಯ ಆಯುಕ್ತರು, ದೇವನೊಬ್ಬ ನಾಮ ಹಲವು ಎಂಬ ಅರಿವು ಮೂಡಬೇಕು ಎಂದು ತಿಳಿಸಿದರು.

ಈ ಚಟುವಟಿಕೆಯನ್ನು ವಿಧಿಬದ್ಧವಾಗಿ ನಡೆಸಲಾಗುವುದು. ಈ ಸಭೆಯನ್ನು ಒಳಾಂಗಣ ಅಥವಾ ಹೊರಾಂಗಣದಲ್ಲಿ ಏರ್ಪಡಿಸಲಾಗುವುದು. ಬೆಳಗಿನ ಅಥವಾ ಸಂಜೆಯ ಸಮಯದಲ್ಲಿ ನಡೆಸಲಾಗುವುದು. ಸಭೆಯಲ್ಲಿ ಭಾಗವಹಿಸುವ ಎಲ್ಲಾ ಧರ್ಮದ ಪ್ರತಿನಿಧಿಗಳು ಮತ್ತು ಪ್ರಾರ್ಥನಾ ತಂಡವು ಗೊತ್ತುಪಡಿಸಿದ ಸಮಯಕ್ಕೆ ಸರಿಯಾಗಿ, ಸರಳವಾಗಿ, ಸುಂದರವಾಗಿ ಸಜ್ಜುಗೊಳಿಸಿದ ವೇದಿಕೆಯ ಮೇಲೆ ಆಸೀನರಾಗುವರು. ನಂತರ ಸದಸ್ಯರು ಸಾಲಾಗಿ ನಿಶ್ಯಬ್ದವಾಗಿ ಬಂದು ಎದುರಾಗಿ ಆಸೀನರಾಗುವರು. ನಾಯಕ/ನಾಯಕಿ ಜ್ಯೋತಿಬೆಳಗಿ ಪ್ರಾರ್ಥನೆಯನ್ನು ಪ್ರಾರಂಭಿಸುವರು. ಮೊದಲಿಗೆ ಶ್ಲೋಕಗಳು, ಸರ್ವಧರ್ಮ ಗೀತೆಗಳು, ರಾಮ್‌ಧುನ್, ಶಾಂತಿಪಾಠ ಹಾಡಿ ನಂತರ ಒಂದು ನಿಮಿಷ ಮೌನ ಪ್ರಾರ್ಥನೆ ಮಾಡಿ ಸಭಾಂಗಣದ ಪ್ರಶಾಂತತೆಗೆ ಭಂಗತರದಂತೆ ಸಾಲಾಗಿ ಸದಸ್ಯರು ನಿರ್ಗಮಿಸಿದ ನಂತರ ವೇದಿಕೆಯ ಮೇಲಿನ ಪ್ರಾರ್ಥನಾ ತಂಡವು ನಿರ್ಗಮಿಸುವುದು.

ಈ ಪ್ರಾರ್ಥನಾ ಸಭೆಯನ್ನು ದಳದಲ್ಲಿ, ಶಿಬಿರದಲ್ಲಿ, ಮೇಳಗಳಲ್ಲಿ ಒಮ್ಮೆಯಾದರೂ ಏರ್ಪಡಿಸಲಾಗುತ್ತದೆ. ನಿಮ್ಮ ದಳದಲ್ಲಿ ಹುತಾತ್ಮರ ದಿನಾಚರಣೆಗಳಲ್ಲಿ ಶ್ರದ್ಧಾಂಜಲಿ ಅರ್ಪಿಸುವಾಗ, ಪರೀಕ್ಷೆಗಾಗಿ ಮಾಡುವ ಪ್ರಾರ್ಥನಾ ಕೂಟಗಳಲ್ಲಿ ಸರ್ವಧರ್ಮ ಪ್ರಾರ್ಥನೆ ಏರ್ಪಡಿಸಬಹುದು. ನೀವು ನಾಯಕಿಯರ ಮಾರ್ಗದರ್ಶನದಲ್ಲಿ ಸರ್ವಧರ್ಮ ಪ್ರಾರ್ಥನಾ ಸಭೆಯನ್ನು ಏರ್ಪಡಿಸಿ ಭಾಗವಹಿಸಿ.

ಹೆಜ್ಜೆ 5 – ತೃತೀಯ ಸೋಪಾನ

1. ಅಗ್ರಗಾಮಿತ್ರ

ಎ) ಕೆಳಗಿನ ಗಂಟುಗಳನ್ನು ಕಟ್ಟುವುದನ್ನು ಮತ್ತು ಅದರ ಉಪಯೋಗವನ್ನು ತಿಳಿಯಿರಿ.

1 ಅಗ್ನಿಶಾಮಕ ಗಂಟು (ಫೈರ್‌ಮನ್ಸ್ ಚೇರ್ ನಾಟ್)

1 ಏರಿಳಿವ ಗಂಟು (ಮ್ಯಾನ್ ಹಾರ್‌ನೆಸ್)

1 ಬೋಲೈನ್ ಆನ್ ಎ ಬೈಟ್

1 ಸೆಳೆವ ಗಂಟು (ಡ್ರಾ ಹಿಚ್)

ಬಿ) ಕರ್ಣ ಕಟ್ಟನ್ನು (ಡಯಾಗನಲ್ ಲ್ಯಾಷಿಂಗ್) ಕಟ್ಟಿ ಪ್ರದರ್ಶಿಸಿ

ಸಿ) ತುದಿ ಕಟ್ಟನ್ನು ಪ್ರಥಮ ಸೋಪಾನದಲ್ಲಿ ಕಟ್ಟಿದ ವಿಧವನ್ನು ಹೊರತುಪಡಿಸಿ ಮತ್ತೊಂದು ವಿಧಾನವನ್ನು ಕಲಿಯುವುದು.

ಡಿ) ಪಟಾಲಂದಲ್ಲಿ 3 ದಂಡಗಳಿಂದ ಧ್ವಜಸ್ತಂಭವನ್ನು ರಚಿಸಿ ಧ್ವಜ ಕಟ್ಟಿ ಹಾರಿಸಿ.

ಇ) ತಾತ್ಕಾಲಿಕ ಗುಡಾರವನ್ನು ಸಿದ್ಧಪಡಿಸಿ.

ಎಫ್) ಯಾವುದಾದರೂ ಒಂದು ವಿಧದ ಹೆಣಿಗೆಯ (Splicing) ಅಭ್ಯಾಸ ಮಾಡಿ ಕಣ್ಣು ಹೆಣಿಗೆ / ಹಿಮ್ಮುಖ ಹೆಣಿಗೆ / ಗಿಡ್ಡ ಹೆಣಿಗೆ.

2. ಈಜುಗಾರಿಕೆ

a) 50 ಮೀಟರ್ ಈಜುವುದು

b) ಈಜುವಿಕೆಯ ಸುರಕ್ಷತಾ ನಿಯಮ ತಿಳಿಯುವುದು.

c) ಸ್ನಾಯು ಸೆಳೆತಕ್ಕೆ ಚಿಕಿತ್ಸೆ ತಿಳಿದಿರುವುದು.

ಅಥವಾ

II. ಕೆಳಗಿನ ಪ್ರಾವೀಣ್ಯತಾ ಪದಕಗಳಲ್ಲಿ ಯಾವುದಾದರೂ ಒಂದನ್ನು ಗಳಿಸಿ

a) ಕ್ರೀಡಾಪಟು (ಅಥ್ಲೆಟ್)

b) ಪರ್ವತಾರೋಹಿ (ಕ್ಲೈಂಬರ್)

c) ಕ್ರೀಡಾನಾಯಕಿ (ಗೇಮ್ಸ್ ಲೀಡರ್)

d) ಅಂಗಸಾಧಕಿ (ಜಿಮ್ನಾಸ್ಟ)

e) ಹೊರಸಂಚಾರಿ (ಹೈಕರ್)

f) ಯೋಗಪಟು (ಯೋಗ)

g) ಸೈಕಲ್ ಸವಾರಕಿ (ಸೈಕ್ಲಿಸ್ಟ್)

3. **ಅಳತೆ ಅಂದಾಜು**

a) ಎತ್ತರ

b) ಆಳ, ಅಗಲ

c) ಸಂಖ್ಯೆ

d) ತೂಕ ಇವುಗಳ ಅಂದಾಜು ಅಳತೆ ಮಾಡಿ

4. **ಪ್ರಥಮ ಚಿಕಿತ್ಸೆ**

a) ಕೆಳಗಿನವುಗಳಿಗೆ ಮಾಡಬೇಕಾದ ಪ್ರಥಮ ಚಿಕಿತ್ಸೆಯನ್ನು ಅಭ್ಯಾಸ ಮಾಡಿ.

* ಮುಳುಗಿದಾಗ
* ವಿದ್ಯುತ್ ಅಪಘಾತ
* ಸಾಮಾನ್ಯ ಅಪಘಾತ
* ವಾಹನ ಅಪಘಾತ
* ಬೆಂಕಿಯಲ್ಲಿ ಸಿಕ್ಕಿಬಿದ್ದವರು

b) ಶ್ವಾಸ ಬಂಧಕ (ಚೋಕಿಂಗ್) ಚಿಕಿತ್ಸೆ ನೀಡುವುದನ್ನು

c) ಕೊರಳು ಮೂಳೆ, ಮುಂಗೈ, ಪೃಷ್ಠ (ಹಿಪ್), ಮುಂಗಾಲು ಈ ಸರಳ ಅಸ್ಥಿಭಂಗಗಳಿಗೆ ಚಿಕಿತ್ಸೆ ನೀಡುವುದನ್ನು ಕಲಿಯಿರಿ.

d) ಬಿಸಿಲು ಆಘಾತ (ಸನ್ ಸ್ಟ್ರೋಕ್) ಶಾಖದಿಂದ ಆಘಾತ (ಹೀಟ್ ಸ್ಟ್ರೋಕ್)ಗಳಿಗೆ ಚಿಕಿತ್ಸೆ ಅಭ್ಯಾಸ ಮಾಡಿ

e) ಕಾರ್ಡಿಯೋಪಲ್ಮನರಿ (ರಿಸಸಿಸ್ಟೇಷನ್) ಕಲಿತು ಪ್ರದರ್ಶಿಸಿ (CPR)

f) ಜ್ಞಾನ ತಪ್ಪಿದವರನ್ನು ಸುಸ್ಥಿತಿಯಲ್ಲಿ ಮಲಗಿಸಿ.

g) ಗಾಯಾಳುಗಳನ್ನು ಸಾಗಿಸುವಿರಿ. ಒಬ್ಬರು ಇದ್ದಾಗ ಮತ್ತು ಇಬ್ಬರು ಇದ್ದಾಗ.

5. ಜ್ಞಾನ

a) ಭಾರತದಲ್ಲಿ ಗೈಡಿಂಗ್ ಮತ್ತು ವಿಶ್ವ ಗೈಡಿಂಗ್ ವ್ಯಾಗ್ಸ್ ಬಗ್ಗೆ ಅರಿವು.

b) ಎ.ಟಿ.ಎಂ. ಮತ್ತು ಮೊಬೈಲ್ ಬಳಕೆಯ ಬಗ್ಗೆ **ಅಥವಾ** ಮನೆಗೆ ಉಪಯುಕ್ತವಾದ ವಿದ್ಯುತ್/ವಿದ್ಯುನ್ಮಾನ ಸಾಮಾನ್ಯ ಸಲಕರಣೆಗಳನ್ನು ತರಬೇತಿ ಹೊಂದಿದ ಹಿರಿಯರ ಮೇಲ್ವಿಚಾರಣೆಯಲ್ಲಿ ಜೋಡಿಸಿ.

6. ನಕ್ಷಾ ಕೌಶಲ

ಜಿ.ಪಿ.ಎಸ್. ನಕ್ಷೆ ಬಳಸಿ ಗೊತ್ತುಪಡಿಸುವ ದಾರಿಯನ್ನು ಅನುಸರಿಸಿ.

ಅಥವಾ

ಕಂಪಾಸ್ ಬಳಸಿ ತ್ರಿಕೋನ ವಿಧಾನ / ಸಾಮಾನ್ಯ ಮೇಜು ವಿಧಾನ (ಪ್ಲೇನ್ ಟೇಬಲ್ ಮೆಥೆಡ್)ದಲ್ಲಿ ಕ್ಷೇತ್ರ ನಕ್ಷೆಯನ್ನು ತಯಾರಿಸಿ.

ಅಥವಾ

ರಸ್ತೆ ಹಾಯಿ ವಿಧಾನದಲ್ಲಿ (ರೋಡ್ ಟ್ರಾವರ್ಸ್) 4 ಕಿ.ಮೀ. ದೂರದ ಮಾರ್ಗ ನಕ್ಷೆ ತಯಾರಿಸಿ.

7. ಮಾತನಾಡುವುದು

ನೀವು ದಳದ ಸಭೆಯಲ್ಲಿ ಕೆಳಗೆ ಕೊಟ್ಟಿರುವ ವಿಷಯಗಳಲ್ಲಿ ಯಾವುದಾದರೂ ಒಂದನ್ನು ಆಯ್ಕೆಮಾಡಿಕೊಂಡು 5 ನಿಮಿಷಗಳ ಕಾಲ ಮಾತನಾಡಿ.

a) ರಾಷ್ಟ್ರೀಯ ಭಾವೈಕ್ಯತೆ

b) ಮಗುವಿನ ನಿಂದನೆ – ಮಗುವಿನ ಸಾಮಾಜಿಕ ಸುರಕ್ಷತೆ
ಮಗುವಿನ ಶಿಕ್ಷಣ – ಬಾಲ ಕಾರ್ಮಿಕತೆ
ಮಗುವಿನ ಆರೋಗ್ಯ

c) ಅವಾಚ್ಯ ಬೈಗುಳ

d) ನಿಮ್ಮ ಭವಿಷ್ಯದ ಗೈಡ್ ತರಬೇತಿ

e) ಲಿಂಗ ಸಮಾನತೆ

f) ನನ್ನ ಮುಕ್ತ ಇರುವಿಕೆ (Free being me)

8. ಹೊರಾಂಗಣ

a) ಒಂದು ರಾತ್ರಿ ತಂಗುವ ಪಟಾಲಂ ಶಿಬಿರದ ಯೋಜನೆ ಸಿದ್ಧಮಾಡಿ

b) 10 ಕಿ.ಮೀ. ನಡಿಗೆಯಲ್ಲಿ ಪಟಾಲಂವಾರು/ದಳದೊಡನೆ ಹೊರ ಸಂಚಾರ ಮಾಡಿ ಊಟ ಮತ್ತು ಚಹ/ಕಾಫಿಯನ್ನು ನಿಮ್ಮ ಪಟಾಲಂಗೆ ಬೇಕಾಗುವಷ್ಟು ತಯಾರಿಸಿ ಒಂದು ವಾರದಲ್ಲಿ ಇದರ ವರದಿಯನ್ನು ಸಲ್ಲಿಸಿ. ಹೊರ ಸಂಚಾರ ಮಾರ್ಗವನ್ನು ಪರೀಕ್ಷಕರು ನೀಡುತ್ತಾರೆ.

c) ಕತ್ತಲೆಯಲ್ಲಿ ಆಡುವ ಆಟದಲ್ಲಿ ಭಾಗವಹಿಸಿ

9. ಅಡುಗೆ

ಆದಿಮಾನವರು/ಕಾಡುಜನರು (ಬ್ಯಾಕ್ ವುಡ್ಸ್‌ಮನ್ ಕುಕಿಂಗ್) ಅನುಸರಿಸುತ್ತಿದ್ದ ವಿಧಾನದಲ್ಲಿ ಒಂದು ಪಟಾಲಂಗೆ ಬೇಕಾಗುವಷ್ಟು ಆಹಾರವನ್ನು ತಯಾರಿಸಿ.

10. ಮೋರ್ಸ್ ಸಂಕೇತ ಭಾಷೆ ಕಲಿತು 10 ಪದಗಳ ಸರಳ ಸಂದೇಶವನ್ನು ಕಳುಹಿಸಿ, ಸ್ವೀಕರಿಸಿ

11. ಪ್ರಾವೀಣ್ಯತಾ ಪದಕ

1) ಈ ಕೆಳಗಿನವುಗಳಲ್ಲಿ **ಯಾವುದಾದರೂ ಎರಡು ಪ್ರಾವೀಣ್ಯತಾ ಪದಕ**ಗಳನ್ನು ಗಳಿಸಿ

ಪ್ರತಿ **ಗುಂಪಿನಿಂದ ಒಂದನ್ನು ಆಯ್ಕೆಮಾಡಿ** (ಮೊದಲು ಗಳಿಸದೆ ಇರುವ)

ಗುಂಪು–ಎ

i) ನಾಗರಿಕ ರಕ್ಷಣೆ (ಸಿವಿಲ್ ಡಿಫೆನ್ಸ್)

ii) ಸಮುದಾಯ ಕಾರ್ಯಕರ್ತೆ (ಕಮ್ಯುನಿಟಿ ವರ್ಕರ್)

iii) ಜೀವ ಪರಿಸರ ತಜ್ಞೆ (ಎಕಾಲಿಜಿಸ್ಟ್)

iv) ಅಗ್ರಗಾಮಿ (ಪಯನಿಯರ್)

v) ಸುರಕ್ಷತಾ ಜ್ಞಾನ (ಸೇಫ್ಟಿ ನಾಲೆಡ್ಜ್)

vi) ಸ್ವರಕ್ಷಣೆ (ಸೆಲ್ಫ್ ಡಿಫೆನ್ಸ್)

vii) ವಿಶ್ವ ಸಂರಕ್ಷಣೆ (ವರ್ಲ್ಡ್ ಕನ್ಸರ್ವೇಷನ್)

ಗುಂಪು–ಬಿ

i) ಏಡ್ಸ್ ಜಾಗೃತಿ (ಏಡ್ಸ್ ಅವೇರ್ನೆಸ್)

ii) ರಟ್ಟು ಕಟ್ಟುವವರು (ಬುಕ್ ಬೈಂಡರ್)

iii) ನಾಗರಿಕ (ಸಿಟಿಜ಼ನ್)

iv) ಕಂಪ್ಯೂಟರ್ ಅವೇರ್ನೆಸ್

v) ಮಾದಕ ದ್ರವ್ಯ ಜಾಗೃತ (ಡ್ರಗ್ ಅವೇರ್ನೆಸ್)

vi) ಆರೋಗ್ಯಕರ ಮಹಿಳೆ (ಹೆಲ್ಥಿ ವುಮೆನ್)

vii) ಅತಿಥೇಯ (ಹೋಸ್ಟಸ್)

viii) ಪ್ರಕೃತಿ ಪ್ರಜ್ಞೆ (ನ್ಯಾಚುರಲಿಸ್ಟ್)

ix) ಮಾರ್ಗಾನ್ವೇಷಣೆ (ಪಾತ್ ಫೈಂಡರ್)

12. ಜ್ಞಾನ : ಭಾರತದಲ್ಲಿ ಗೈಡಿಂಗ್ ಮತ್ತು ವಿಶ್ವ ಗೈಡಿಂಗ್ (WAGGGS) ಬಗ್ಗೆ ಅರಿವು

13. ಬೆಂಕಿ

ಕೆಳಗಿನವುಗಳಲ್ಲಿ ಯಾವುದಾದರೂ ಮೂರನ್ನು ಪೂರ್ಣಗೊಳಿಸಿ

a) ಬೆಂಕಿಯ ಬಗ್ಗೆ ಎಚ್ಚರಿಕೆ

b) ಬಕೆಟ್ ಚೈನ್ ವಿಧಾನದಿಂದ ಬೆಂಕಿ ಆರಿಸುವುದನ್ನು ಪ್ರತ್ಯಕ್ಷವಾಗಿ ತೋರಿಸಿ.

c) ಒಣ ಹುಲ್ಲಿಗೆ ಬಿದ್ದ ಬೆಂಕಿಯನ್ನು ತಡೆಯುವ ಕ್ರಮ

d) ಅಗ್ನಿಶಾಮಕಗಳ ವಿಧಗಳು ಮತ್ತು ಉಪಯೋಗ

14. ಸೇವೆ

ಕ್ಷಯರೋಗದ ಕಾರಣ, ಲಕ್ಷಣ, ಚಿಕಿತ್ಸೆ ಮತ್ತು ಎಚ್ಚರಿಕೆಯ ಬಗ್ಗೆ ತಿಳಿಯಿರಿ

15. ದ್ವಿತೀಯ ಸೋಪಾನ ಮುಗಿಸಿದ ನಂತರ **ತೃತೀಯ ಸೋಪಾನದ ಗೈಡಾಗಿ ಆರು ತಿಂಗಳು ಸೇವೆ ಸಲ್ಲಿಸುವುದು.**

ಜಲಗೈಡ್: ಮೇಲಿನ ತೃತೀಯ ಸೋಪಾನ ಪರೀಕ್ಷೆಗಳ ಜೊತೆಗೆ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯಬೇಕು.

1. ಹಿಮ್ಮುಖ ಮತ್ತು ವಿವಿಧ ರೀತಿಯಲ್ಲಿ 30 ಮೀಟರ್ ಈಜುವುದು.
2. ನೀರಿಗೆ ಜಿಗಿಯುವುದನ್ನು ಕಲಿಯುವುದು.
3. ವಿವಿಧ ರೀತಿಯ ದೋಣಿ, ಪಟ ಲಂಗರಿನ ಬಗ್ಗೆ ತಿಳಿಯುವುದು.
4. ಸೆಮಫೋರ್ ವಿಧಾನದಿಂದ ಸರಳವಾದ ಸುದ್ದಿ ಕಳುಹಿಸುವುದು ಮತ್ತು ಸ್ವೀಕರಿಸುವುದು.
5. ನಾವಿಕರಿಗೆ ಉಪಯುಕ್ತವಾದ ಕನಿಷ್ಠ ಮೂರು ನಕ್ಷತ್ರಗಳ ಬಗ್ಗೆ ತಿಳಿಯುವುದು.

ವಾಯುಗೈಡ್ : ಮೇಲಿನ ತೃತೀಯ ಸೋಪಾನ ಪರೀಕ್ಷೆಗಳ ಜೊತೆಗೆ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯಬೇಕು.

1. ಕನಿಷ್ಟ ಎರಡು ಬೇರೆ ಬೇರೆ ವಿಧದ ವಿಮಾನಗಳ ಹಾರಾಟದ ಇತಿಹಾಸ ತಿಳಿಯುವುದು.
2. ಹಾರಾಟದ ತತ್ವದ ಬಗ್ಗೆ ತಿಳಿಯುವುದು.
3. ಹಾರಾಟದ ಸುರಕ್ಷತೆ ಬಗ್ಗೆ ತಿಳಿಯುವುದು.
4. ರಾಷ್ಟ್ರೀಯ, ಅಂತಾರಾಷ್ಟ್ರೀಯ ನಾಗರಿಕ ವಾಯುಯಾನದ ಬಗ್ಗೆ ತಿಳಿಯುವುದು.

ಸೂಚನೆ: ಸಂದರ್ಭಕ್ಕೆ ತಕ್ಕಂತೆ ಸ್ಥಳೀಯ ಅಥವಾ ಜಿಲ್ಲಾ ಸಂಸ್ಥೆಯು ನೇಮಕ ಮಾಡಿದ ಪ್ರಾವೀಣ್ಯತಾ ಪದಕದ ಸಮಿತಿಯವರು, ನಿಯೋಜಿಸಿದ ಸ್ವತಂತ್ರ ಪರೀಕ್ಷಕರು ಪರೀಕ್ಷಿಸಿ ಯಶಸ್ವಿಯಾಗಿ ತೃತೀಯ ಸೋಪಾನದ ಪರೀಕ್ಷೆ ಮುಗಿಸಿದ್ದಾರೆಂದು ನೀಡಿದ ಪ್ರಮಾಣಪತ್ರದ ಆಧಾರದ ಮೇಲೆ ಪದಕವನ್ನು ನೀಡಲಾಗುವುದು. **ತೃತೀಯ ಸೋಪಾನದ ಪದಕವನ್ನು ಎಡತೋಳಿನ ದ್ವಿತೀಯ ಸೋಪಾನದ ಪದಕ ತೆಗೆದು ಅದೇ ಸ್ಥಳದಲ್ಲಿ ಹಾಕುವುದು.**

ತೃತೀಯ ಸೋಪಾನ ಮುಗಿಸಿದ ನಂತರ **ರಾಜ್ಯ ಪುರಸ್ಕಾರ ಗೈಡಾಗಿ 9** ತಿಂಗಳ ಕಾಲ ಸೇವಾ ಕಾರ್ಯ ಮಾಡುವುದು.

1. ಶಿಬಿರ ಕೌಶಲ

ಅ. ಹಗ್ಗ ಕೌಶಲ :

1. ತುದಿಕಟ್ಟು – ಪಾಶ್ಚಾತ್ಯ ಕಟ್ಟು (Western Whipping)



ಒಂದು ಅಡಿಯಷ್ಟು ಟ್ವೈನ್ ದಾರವನ್ನು ತೆಗೆದು ಕೊಂಡು ಹಗ್ಗದ ತುದಿಯಿಂದ ಒಂದರ ಕೆಳಗೆ ಅದರ ಎರಡು ಎಳೆಗಳ ಮಧ್ಯೆ ಟ್ವೈನ್ ದಾರವನ್ನು ಪೋಣಿಸಿಕೊಂಡು ಅದರ ಎರಡು ತುದಿಯನ್ನು ಸಮಮಾಡಿಕೊಂಡು ಒಂದು ಅರೆಗಂಟು ಹಾಕಿ ಹಿಂದಕ್ಕೆ ತೆಗೆದುಕೊಂಡು ಮತ್ತೊಂದು ಅರೆಗಂಟುಹಾಕಿ. ಹೀಗೆ ಹಿಂದಕ್ಕೆ ಮುಂದಕ್ಕೆ ಅರೆಗಂಟು ಹಾಕುತ್ತಾ ಗಂಟುಗಳನ್ನು ಒತ್ತಾಗಿ ಜೋಡಿಸುತ್ತಾ ಕಟ್ಟುಕಟ್ಟುವುದು.

2. ಹೆದ್ದಾರಿ ಹೋಕರ ಗಂಟು (Draw hitch or High way man's hitch):

ಹೆದ್ದಾರಿ ಹೋಕರು ಕುದುರೆಗಳನ್ನು ಈ ಗಂಟಿನಿಂದ ಮರಕ್ಕೆ ಕಟ್ಟುತ್ತಾರೆ. ಗಂಟು ಸುಲಭವಾಗಿ ಬಿಚ್ಚುತ್ತದೆ.



3. ಅಗ್ನಿಶಾಮಕ ಆಸನಗಂಟು (Firemen's Chair Knot)

ಗಂಟನ್ನು ಎದೆಯ ಭಾಗಕ್ಕೆ ತಂದು ಗಾಯಾಳುವನ್ನು ಕುರ್ಚಿಯಲ್ಲಿ ಕುಳಿತಿರುವಂತೆ ಆರಾಮವಾಗಿ ಕೂರಿಸಿದನಂತರ ಹಗ್ಗವನ್ನು ನಿಧಾನವಾಗಿ ಬಿಡುತ್ತಾ ಇಳಿಸಬೇಕು. ಸಂದರ್ಭಕ್ಕೆ ತಕ್ಕಂತೆ ಹಗ್ಗ ಎಳೆದು ಮೇಲಕ್ಕೂ ಎತ್ತಬಹುದು, ಬೆಂಕಿಯಲ್ಲಿ ಸಿಕ್ಕಿಬಿದ್ದವರನ್ನು, ಭೂಗತ ಅಪಘಾತಕ್ಕೆ ಒಳಗಾದವರನ್ನು ರಕ್ಷಿಸಲು, ಈ ಗಂಟು ಉಪಯುಕ್ತವಾಗುತ್ತದೆ. ಹಡಗುಗಳಿಗೆ ಕೆಳಗಿನಿಂದ ಮೂಟೆಗಳನ್ನು ಮೇಲೆ ಸಾಗಿಸುವಾಗ ಈ ಗಂಟನ್ನು ಕಟ್ಟುತ್ತಾರೆ.



ಏಣಿ ಗಂಟು (Man harness knot)

ಇದನ್ನು ಹಗ್ಗದ ಏಣಿ ಮಾಡಲು ಉಪಯೋಗಿಸಲಾಗುವುದು.



ಚಿತ್ರದಲ್ಲಿ ತೋರಿಸಿದಂತೆ ಹಗ್ಗದ ಎಳೆಗಳನ್ನು ಹೆಣಿಗೆ ಹಾಕುವ ಮೊದಲು ಸಡಿಲಮಾಡಿಕೊಂಡು ಮೂರು ರೀತಿಯ ಹೆಣಿಗೆಯನ್ನು ಹೆಣೆಯಿರಿ. ಹಿಮ್ಮುಖ ಹೆಣಿಗೆಯ ತುದಿಗಳನ್ನು ಭದ್ರಪಡಿಸುತ್ತದೆ. ಗಿಡ್ಡ ಹೆಣಿಗೆಗಳಿಂದ ಹಿಡಿಯನ್ನೂ ತಯಾರಿಸಬಹುದು. ಕಣ್ಣು ಹೆಣಿಗೆಯಿಂದ ಉಂಗುರ ಅಥವಾ ಕುಣಿಕೆಯನ್ನು ತಯಾರಿಸಬಹುದು. ಈ ಎಲ್ಲಾ ಹೆಣಿಗೆಗಳನ್ನು ಕರಕುಶಲತೆಯಲ್ಲಿ ಬಳಸಬಹುದು.

ಹೆಣಿಗೆ (Splicing)



ಹೆಣಿಗೆಗೆ ಹಗ್ಗದ ಸಿದ್ಧತೆ ಹಿಮ್ಮುಖ ಹೆಣಿಗೆ



ಗಿಡ್ಡ ಹೆಣಿಗೆ



ಕಣ್ಣು ಹೆಣಿಗೆ

ಆ. ಗುಡಾರಗಳು :

1. **ಸಿದ್ಧ ಗುಡಾರ – Tent ಹಾಕುವುದು, ಬಿಚ್ಚುವುದು, ಮಡಚುವುದು :** ಗೈಡಾದವರು ಶಿಬಿರವಾಸ ಮಾಡಲೇ ಬೇಕು. ಶಿಬಿರವಾಸ ಮಾಡಲು ಆಶ್ರಯಬೇಕು. ಆಶ್ರಯಕ್ಕಾಗಿ ಗುಡಾರ ಹಾಕಿ ಕೊಳ್ಳಲಾಗುವುದು. ಸಿದ್ಧ ಗುಡಾರವನ್ನು ಸಾಡ್, ನೈಲಾನ್‌ನಂತಹ ನೀರು ನಿರೋಧಕ (Water Proof) ಗಳಿಂದ ಮಾಡಲಾಗಿರುತ್ತದೆ. ಇದರಲ್ಲಿ ಅನೇಕ ವಿಧಗಳಿರುತ್ತವೆ. ಒಬ್ಬರಿಂದ 8 ಜನರವರೆಗೆ ಅಥವಾ ಇನ್ನು ಹೆಚ್ಚು ಜನರು ವಾಸಿಸುವ ಗುಡಾರವಿರುತ್ತದೆ. ಗುಡಾರ ತ್ರಿಕೋನ ಅಥವಾ ಚೌಕಾಕಾರವಾಗಿರುತ್ತದೆ.

ಚಿತ್ರ ಗುಡಾರದ ಭಾಗಗಳು :

1) ಛಾವಣಿ (Roof)
2) ಪಾರ್ಶ ಮುಚ್ಚಿಕೆ (Side Flap)
3) ಆಧಾರ ಸ್ತಂಭ (Supporting Pole)
4) ತೊಲೆ (Ridge pole)
5) ಮಧ್ಯ ಬಂಧಕ (Centre Guy)
6) ಮೂಲೆ ಬಂಧಕ (Corner Guy)
7) ಪಾರ್ಶ್ವ ಬಂಧಕ (Side Guy)
8) ದ್ವಾರ ಮುಚ್ಚಿಕೆ (Door flap)
9) ಬಾಗು ಮೊಳೆ / ಗೂಟ (Peg)

ಗುಡಾರ ಹಾಕುವ ಅಭ್ಯಾಸ ಮಾಡಿ

ಸ್ಥಳ ಆಯ್ಕೆ :

ಸ್ಥಳ ಸಮತಟ್ಟಾಗಿರಬೇಕು.

ಹುಲ್ಲುಗಾವಲಿನ ಮೇಲೆ ಗುಡಾರ ಹಾಕಿದರೆ ಹುಳುಹುಪ್ಪಟೆಗಳಿಂದ ತೊಂದರೆಯಾಗುತ್ತದೆ.

ನೇರವಾಗಿ ಮರದ ಕೆಳಗೆ ಹಾಕಬಾರದು. ಅದರ ನೆರಳಿನಲ್ಲಿ ಹಾಕಬಹುದು

ನೀರಿನ ಆಸರೆಗೆ ಹತ್ತಿರವಾಗಿರಬೇಕು.

ಪ್ರಾಣಿಗಳು ವಾಸವಾಗಿಲ್ಲದ ಸ್ಥಳದಲ್ಲಿ ಶಿಬಿರವನ್ನು ಏರ್ಪಡಿಸಬೇಕು.

ಹತ್ತಿರದಲ್ಲಿ ಗಿಡಮರಗಳಿರಬೇಕು. ಆಗ ಶಿಬಿರವಾಸ ಆನಂದದಾಯಕ ವಾಗಿರುತ್ತದೆ.

ಗುಡಾರ ಹಾಕಲು ಜಗಲಿ (base) ಇಲ್ಲದಿದ್ದರೆ ಗೂಡಾರದ ಸುತ್ತಲು ಕಾಲುವೆ (Trench) ತೆಗೆಯಬೇಕು. ಮಳೆ ನೀರು ಹರಿಯಲು ಮತ್ತು ಹರಿಯುವ ಹುಳು ಹುಪ್ಪಟೆಗಳನ್ನು ತಡೆಯಲು ಕಾಲುವೆ ಸಹಾಯ ಮಾಡುತ್ತದೆ.

ನಿಮ್ಮ ಚಟುವಟಿಕೆಗೆ ಸಾಕಷ್ಟು ಸ್ಥಳವಿರಬೇಕು.

2. ತಾತ್ಕಾಲಿಕ ಗುಡಾರ –

ಎಲ್ಲಾ ಸಂದರ್ಭದಲ್ಲೂ ಸಿದ್ಧಗುಡಾರವಿರುವ ಸಾಧ್ಯತೆ ಇರುವುದಿಲ್ಲ ಸಾಹಸ ಯಾತ್ರೆ, ಅನ್ವೇಷಣೆಗಳಿಗೆ ಹೋದಾಗ ವಿಶ್ರಾಂತಿಗಾಗಿ, ತಂಗುವ ಸಂದರ್ಭಗಳಲ್ಲಿ ನಮ್ಮ ಬಳಿ ಇರುವ ವಸ್ತುಗಳಿಂದ ಗುಡಾರ ಹಾಕಿಕೊಳ್ಳುತ್ತೇವೆ.



ಈ ರೀತಿ ಗುಡಾರವನ್ನು ಹಾಕಿಕೊಳ್ಳುವುದನ್ನು ಕಲಿತಿರಬೇಕು. ಎಲ್ಲಿ ಬೇಕಾದರೂ ಹಾಕಿಕೊಂಡು ಬಳಸಿ, ಬಿಚ್ಚಿ, ಹೊತ್ತು ಮುಂದೆ ಸಾಗಬಹುದು. ಬೆಡ್‌ಶೀಟ್, ನೈಲಾನ್ ಬಟ್ಟೆ, ಟಾರ್ಪಾಲು, ಚಾಪೆ, ಒಣ ಹುಲ್ಲು, ಎಲೆಗಳಿಂದ ಕೂಡಿದ ಕೊಂಬೆ, ಗರಿಗಳನ್ನು ಛಾವಣಿ ಹಾಕಲು ಬಳಸಬಹುದು.

ಚಿತ್ರನೋಡಿ ಆಧಾರಕೊಡಲು ದಂಡಗಳನ್ನು ಬಳಸಿ ಬೇಕಾದ ರೀತಿಯ ಗುಡಾರ ಹಾಕಿಕೊಳ್ಳಿ. ಮರಗಳಿಗೆ ಆನಿಸಿಯು ಗುಡಾರ ಹಾಕಬಹುದು. ಮರಗಳ ಮೇಲೂ ಗುಡಿಸಲು ಹಾಕಿಕೊಳ್ಳಬಹುದು.

3. ಊರೆ ಕಟ್ಟು –

ಚಿತ್ರ ನೋಡಿ ಊರೆಕಟ್ಟು ಕಟ್ಟಿ. ಇದನ್ನು ತಯಾರಿಸಲು ಸೂಕ್ತಗಂಟು ಮತ್ತು ಕಟ್ಟುಗಳನ್ನು ಸರ್ವೆ ಕಂಭ ಅಥವಾ ದಂಡಗಳನ್ನು ಬಳಸಿ. ಇದನ್ನು ಸೇತುವೆ ಕಟ್ಟಲು, ಸಾಮಾನು ಸಾಗಿಸಲು ಉಪಯೋಗಿಸಲಾಗುವುದು.



ಗುಡಾರ ಕಟ್ಟುವುದು ಒಂದು ಮಜ. ಅದರಲ್ಲಿ ವಾಸಿಸುವುದು ಒಂದು ಮೋಜು
'ನಮ್ಮಯ ಜೀವನ ಹೇಗಿದೆಯೆಂಬುದು ಶಿಬಿರಕ್ಕೆ ಬಂದು ನೋಡಿ.'.

---

2. ಈಜುವುದು - Swimming

1. 50 ಮೀಟರ್ ಈಜುವುದು.
2. ಈಜುವಿಕೆಯ ಸುರಕ್ಷತಾ ನಿಯಮಗಳನ್ನು ತಿಳಿದಿರುವುದು.
3. ಸೆಡೆತಕ್ಕೆ (Cramps) ಚಿಕಿತ್ಸೆ ತಿಳಿದಿರುವುದು.

ನಿಮಗೆ ಆನಂದಬೇಕೆ? ದೇಹಕ್ಕೆ ಅಂದಬೇಕೆ? ನೀವು ದೃಢಕಾಯರಾಗಬೇಕೆ? ನಿಮ್ಮ ಆರೋಗ್ಯವೃದ್ಧಿಯಾಗಬೇಕೆ? ಹಾಗಾದರೆ ಈಜುವುದನ್ನು ಕಲಿಯಿರಿ. ಇದನ್ನು ಸರಿಯಾದ ಈಜುತಜ್ಞರಿಂದ ಕಲಿಯಿರಿ. ಇದು ಸ್ನಾಯುಗಳಿಗೆ ಕಾಲುಗಳಿಗೆ ಒಳ್ಳೆಯ ವ್ಯಾಯಾಮ ನೀಡುತ್ತದೆ. ಗಿಡ್ಡ ಇರುವವರು ಈಜುವುದರಿಂದ ಸ್ವಲ್ಪ ಉದ್ದವಾಗುತ್ತಾರೆ. ಇದನ್ನು ಇಚ್ಛೆ ಮತ್ತು ಆಸಕ್ತಿ ಉಳ್ಳವರೆಲ್ಲರೂ ಕಲಿಯಬಹುದು.

ಈಜನ್ನು ಈಜುಕೊಳ, ಕೆರೆ, ನದಿ, ನಾಲೆ, ಸಮುದ್ರ ತೀರಗಳಲ್ಲಿ ತಜ್ಞರ ಮಾರ್ಗದರ್ಶನದಲ್ಲಿ ಅಭ್ಯಾಸ ಮಾಡಬೇಕು. ನೀರಿಗೆ ಇಳಿಯಲು ಧೈರ್ಯ ಮತ್ತು ದೃಢತೆ ಇರಬೇಕು. ಆಳವಾದ ನೀರಿನಲ್ಲಿ ಅಭ್ಯಾಸಕ್ಕೆ ಹೋಗಬಾರದು. ಪ್ರಾರಂಭದಲ್ಲೇ ನೀರಿಗೆ ಜಿಗಿಯಬಾರದು. ವಿವಿಧ ರೀತಿಯ ಈಜುಪಟ್ಟುಗಳನ್ನು ಕಲಿಯಿರಿ. ಉಸಿರು ಬಿಗಿಹಿಡಿದು ನೀರಿನ ಮೇಲೆ ತೇಲುವುದನ್ನು ಅಭ್ಯಾಸಮಾಡಿ. ಈಜುವುದನ್ನು ಚೆನ್ನಾಗಿ ಕಲಿಯಿರಿ.

ವಿಶ್ವ ಪ್ರಧಾನ ಸ್ಕೌಟ್ ಬಿ.ಪಿ.ಯವರು ಮತ್ತು ವಿಶ್ವಪ್ರಧಾನ ಗೈಡ್ ಲೇಡಿ ಬಿ.ಪಿ.ಯವರು **"ಸಂಸ್ಥೆಯ ಪ್ರತಿಯೊಬ್ಬ ಸದಸ್ಯರೂ ಈಜುವುದನ್ನು ಕಲಿಯಬೇಕು"** ಎಂದು ಒತ್ತಿ ಹೇಳಿದ್ದಾರೆ.

ಈಜುವುದಕ್ಕೆ ಬದಲಾಗಿ ಕೆಳಗಿನ ಪ್ರಾವೀಣ್ಯತಾ ಪದಕಗಳಲ್ಲಿ ಒಂದನ್ನು ಗಳಿಸಬಹುದು.

1. ಕ್ರೀಡಾಪಟು – Athlete
2. ಆರೋಹಿ – Climber
3. ಅಂಗಸಾಧಕಿ – Gymnast
4. ಹೊರಸಂಚಾರಿ – Hiker
5. ಯೋಗಪಟು – Yoga

3. ಅಳತೆಯ ಅಂದಾಜು

ಈಗಾಗಲೇ ದೂರದ ಮತ್ತು ಅಗಲದ ಅಂದಾಜು ಮಾಡುವುದನ್ನು ಅಭ್ಯಾಸಮಾಡಿದ್ದೀರಿ. ಅದರಂತೆ ಈಗ ಎತ್ತರ, ತೂಕ ಮತ್ತು ರಾಶಿಯಲ್ಲಿನ ವಸ್ತುಗಳ ಸಂಖ್ಯೆಯನ್ನು ಅಂದಾಜು ಮಾಡುವ ಅಭ್ಯಾಸ ಮಾಡಿ.

1. ಎತ್ತರದ ಅಂದಾಜು

ಅ) ಸೀಸದ ಕಡ್ಡಿ ವಿಧಾನ – (Pencil method)

ಅಂದಾಜು ಮಾಡಬೇಕಾದ ಎತ್ತರದ ವಸ್ತುವಿನ (ಮರ / ಗೋಡೆ / ಕಂಭ) ಎದುರು ನಿಲ್ಲಿ. ಕೈಯಲ್ಲಿ ಒಂದು ಸೀಸದ ಕಡ್ಡಿಯನ್ನು ಹಿಡಿದು ನೇರವಾಗಿ ಭುಜದ ಎತ್ತರಕ್ಕೆ ಚಾಚಿ. ಒಂದು ಕಣ್ಣು ಮುಚ್ಚಿ ಇನ್ನೊಂದು ಕಣ್ಣಿನಿಂದ ಸೀಸದ ಕಡ್ಡಿಯ ಮೇಲಿನ ತುದಿ ವಸ್ತುವಿನ ಮೇಲಿನ ತುದಿ 'ಎ', ಕೆಳತುದಿ' ಸೀಸದ ಕಡ್ಡಿಗೆ ಹೊಂದಿಕೊಳ್ಳುವ ವರೆಗೂ ಹಿಂದಕ್ಕೆ ಸರಿದು ನಿಲ್ಲಿ. ಸೀಸದ ಕಡ್ಡಿಯ ಮೇಲೆ ಕೆಳತುದಿ ಗುರುತಿಸಿಕೊಳ್ಳಿ. ನಂತರ ಕೈಯನ್ನು ಅಲುಗಾಡಿಸದಂತೆ ಗುರುತಿಸಿದ ಭಾಗಹಿಡಿದುಕೊಂಡೇ ಎಡಕ್ಕೆ ಅಥವಾ ಬಲಕ್ಕೆ ನೆಲಕ್ಕೆ ಸಮನಾಂತರವಾಗುವವರೆಗೂ ಬಾಗಿಸಿ. ಬಾಗಿದ ಪಾರ್ಶ್ವಕ್ಕೆ ಸೀಸದ ಕಡ್ಡಿಯ ತುದಿಯ ನೇರಕ್ಕೆ ಒಬ್ಬರು ನಡೆದು ವಸ್ತುವಿನ ಪಾರ್ಶ್ವನೇರದಲ್ಲಿ ನಿಂತು ನೆಲದ ಮೇಲೆ ಗುರುತು ಮಾಡಿಕೊಂಡು ಈ ಗುರುತಿನಿಂದ ವಸ್ತುವಿನವರೆಗೂ ನಡೆದರೆ ಅದು ಆ ವಸ್ತುವಿನ ಅಂದಾಜು ಎತ್ತರವಾಗಿರುತ್ತದೆ.

ಆ) 'T' ವಿಧಾನ – ('T' Method)

6 ರಿಂದ 8 ಉದ್ದದ ಸಮ ಅಳತೆಯ 2 ಕಡ್ಡಿ ತೆಗೆದುಕೊಳ್ಳಿ. ಇದಕ್ಕೆ ಬದಲಾಗಿ ಹಳೆಯ ಅಳತೆಪಟ್ಟಿ ಉಪಯೋಗಿಸಬಹುದು. ಇವುಗಳನ್ನು 'T' ಆಕಾರದಲ್ಲಿ ಜೋಡಿಸಿ. 'T'ಯನ್ನು ಹೀಗೆ ಹಿಡಿದುಕೊಳ್ಳಿ ಮತ್ತು ಮೂಗಿನ ತುದಿಯ ಮೇಲೆ ಇಟ್ಟುಕೊಂಡು ಒಂದು ಕಣ್ಣುಮುಚ್ಚಿ ಇನ್ನೊಂದು ಕಣ್ಣಿನಿಂದ ವಸ್ತುವನ್ನು ನೋಡುತ್ತಾ ಹಿಂದಕ್ಕೆ ಸರಿಯುತ್ತಾ ಹೋಗಿ. ವಸ್ತುವಿನ ಮೇಲ್ತುದಿಯ ಮತ್ತು ಕೆಳತುದಿಯ ಲಂಬ

ಕಡ್ಡಿಯ ಬಿಂದುಗಳೊಡನೆ ಸಂಗಮಿಸಿದ ಸ್ಥಳದಲ್ಲಿ ನಿಂತು ನೆಲದ ಮೇಲೆ ಗುರುತು ಮಾಡಿ ಅಲ್ಲಿಂದ ವಸ್ತುವಿನವರೆಗೆ ನಡೆದರೆ ಅದು ಆ ವಸ್ತುವಿನ ಎತ್ತರವಾಗಿರುತ್ತದೆ.

ಇ) ಅಂಗುಲದಿಂದ ಅಡಿ ವಿಧಾನ – (Inch to foot Method)

ಎತ್ತರ ಅಂದಾಜಿಸಬೇಕಾದ ವಸ್ತುವಿನಿಂದ ನೇರವಾಗಿ ನಡೆದು 11 ದಂಡ ಗುರುತಿಸಿ, ಗುರುತಿನ ಮೇಲೆ ದಂಡವನ್ನು ಹಿಡಿಸಿ ಅಲ್ಲಿ ಒಬ್ಬರನ್ನು ನಿಲ್ಲಿಸಿ. ಅಲ್ಲಿಂದ ಮತ್ತೊಂದು ದಂಡ ಹಾಕಿ ಮುಂದಕ್ಕೆ ನಡೆದು ಗುರುತುಮಾಡಿ. ನೆಲದ ಮೇಲೆ ವಸ್ತ್ರ ಹಾಕಿ ಬೋರಲಾಗಿ ಮಲಗಿ ಮುಖ ಪಕ್ಕಕ್ಕೆ ಮಾಡಿ ನೆಲದ ಗುರುತಿನ ಮೇಲೆ ಕಣ್ಣು ಹೊಂದಿಸಿ ದಂಡದ ಮೂಲಕ ವಸ್ತುವಿನ ಮೇಲಿನ ತುದಿಯನ್ನು ನೋಡಿ

ಆ ಮೇಲಿನ ತುದಿ ಸಂಧಿಸಿದ ಬಿಂದುವನ್ನು ದಂಡದ ಮೇಲೆ ಗುರುತಿಸಲು ಹೇಳಿ. ಗುರಿತಿಸಿದ ಭಾಗದಿಂದ ದಂಡದ ಕೆಳತುದಿಯವರೆಗೆ ಅಳತೆಮಾಡಿ. ಒಂದು ಇಂಚು ಒಂದು ಅಡಿಗೆ ಸಮ. ಇಂಚನ್ನು ಅಡಿಗೆ ಪರಿವರ್ತಿಸಿ. ಆ ಅಳತೆ ವಸ್ತುವಿನ ಅಂದಾಜು ಎತ್ತರವಾಗಿರುತ್ತದೆ.

2. ತೂಕದ ಅಂದಾಜು – (Estimation of weight)

50 ಗ್ರಾಂನಿಂದ 2 ಕೆ.ಜಿ. ವರೆಗಿನ ಮನೆಗೆ ತರುವ ಅನೇಕ ವಸ್ತುಗಳ ಪೊಟ್ಟಣಗಳನ್ನು ಕೈಯಲ್ಲಿ ಎತ್ತಿ ಅಂದಾಜು ತೂಕವನ್ನು ತಿಳಿಯುವ ಅಭ್ಯಾಸ ಮಾಡಿಕೊಳ್ಳಿ. ಆಗ ಅಂಗಡಿಯವನು ನಿಮಗೆ ಮೋಸ ಮಾಡಲಾರ. ಗಾತ್ರ ನೋಡಿ, ಭಾರನೋಡಿ ಅಂದಾಜು ಮಾಡುವ ಕೌಶಲ ನಿತ್ಯ ಜೀವನಕ್ಕೆ ಹೆಚ್ಚು ಲಾಭಕರ.

3. ವಸ್ತುರಾಶಿಯಲ್ಲಿ ವಸ್ತುಗಳ ಸಂಖ್ಯೆಯ ಅಂದಾಜು – (Estimation of number in collective things)

ವಿವಿಧ ಕಾಳುಗಳು, ಬೀಜಗಳು, ಚಿಕ್ಕಚಿಕ್ಕ ಕಲ್ಲುಗಳು, ಬಿಸ್ಕತ್ ಹೀಗೆ ಯಾವುದನ್ನಾದರೂ ಒಂದು ಹಿಡಿ ಅಥವಾ ಯಾವುದಾದರೂ ಅಳತೆಯಲ್ಲಿ ರಾಶಿ ಹಾಕಿಕೊಳ್ಳಿ. ಅದರಲ್ಲಿ ಎಷ್ಟಿರಬಹುದು ಎಂದು ಅಂದಾಜು ಮಾಡಿ. ನಂತರ ಎಣಿಸಿ ನೋಡಿ. ನಿಮ್ಮ ಅಂದಾಜು ಎಷ್ಟು ನಿಖರವಾಗಿದೆ ಎಂದು ತಿಳಿಯಿರಿ. ಹೀಗೆಯೇ ಗುಂಪಿನಲ್ಲಿರುವ ಜನರ ಸಂಖ್ಯೆ ಅಂದಾಜು ಮಾಡುವುದನ್ನು ಅಭ್ಯಾಸಮಾಡಿ.

4. ಪ್ರಥಮ ಚಿಕಿತ್ಸೆ – (First Aid)

ಸರಳ ಸನ್ನಿವೇಶಗಳಲ್ಲಿ ಸರಳ ಅಪಘಾತಗಳಿಗೆ ಪ್ರಥಮ ಚಿಕಿತ್ಸೆ ನೀಡಲು ಸಮರ್ಥರಾಗಿರುವಿರಿ. ಈ ಹಂತದಲ್ಲಿ ಜೀವಕ್ಕೆ ಅಪಾಯವುಂಟಾದಾಗ ಮಾಡಬಹುದಾದ ಜೀವರಕ್ಷಕ ಪ್ರಥಮ ಚಿಕಿತ್ಸೆಯ ಬಗ್ಗೆ ತಿಳಿದುಕೊಳ್ಳುವಿರಿ. ಇಂತಹ ಸಂದರ್ಭಗಳನ್ನು ಕೃತಕವಾಗಿ ಸೃಷ್ಟಿಸಿ, ಪ್ರಾಯೋಗಿಕವಾಗಿ ನಿಮ್ಮ ನಿಮ್ಮಲ್ಲೇ ಸರಿಯಾಗಿ ಅಭ್ಯಾಸ ಮಾಡಿ. ಎಂದಾದರೂ, ಎಲ್ಲಾದರೂ, ಯಾರಿಗಾದರೂ ಸಹಾಯವಾಗುತ್ತದೆ.

ಆಘಾತ – (Shock)

ಆಘಾತಗಳ ತೀವ್ರತೆ ಹೆಚ್ಚಾದಾಗ ಅಥವಾ ತಡೆಯಲು ಸಾಧ್ಯವಾಗದೇ ಇದ್ದಾಗ, ಅತ್ಯಂತ ಅಹಿತಕರ ಅಥವಾ ಅತಿಸಂತಸದ ಸುದ್ದಿ ಕೇಳಿದಾಗ ಆಘಾತವಾಗುತ್ತದೆ. ಈ ಸ್ಥಿತಿಯಲ್ಲಿ ದೇಹದಲ್ಲಿ ಆಮ್ಲಜನಕದ ಕೊರತೆ ಉಂಟಾಗುತ್ತದೆ.

ಆಘಾತಕ್ಕೆ ಒಳಪಟ್ಟ ವ್ಯಕ್ತಿ ನಿಶ್ಯಕ್ತನಾಗುತ್ತಾನೆ. ತಲೆತಿರುಗು, ಕಣ್ಣುಕತ್ತಲೆ, ಮುಖ ಬಿಳುಚುವುದು, ಚಳಿ, ನಡೆಯಲಾಗದಿರುವುದು ಇದರ ಲಕ್ಷಣಗಳು. ಹೆಚ್ಚಿನ ಆಘಾತವಾದ ಸಂದರ್ಭದಲ್ಲಿ ಸ್ಮೃತಿತಪ್ಪಬಹುದು.

ರೋಗಿ ಕಾಲು ಎತ್ತರಿಸಿ ಗಾಳಿ ಬೆಳಕಿನಲ್ಲಿ ಮಲಗಿಸಿ ಹೊದ್ದಿಸಬೇಕು. ಸಂದರ್ಭಕ್ಕೆ ತಕ್ಕಂತೆ ಕೂರಿಸಲೂಬಹುದು.

ಪ್ರಜ್ಞೆ ಇದ್ದರೆ ಆತಂಕ ದೂರ ಮಾಡುವ ಪ್ರಯತ್ನ ಮಾಡಬೇಕು. ಆಘಾತಕ್ಕೆ ಸಾಧ್ಯವಿದ್ದರೆ, ಕಾರಣ ತಿಳಿದುಕೊಳ್ಳಬೇಕು.

ರಕ್ತಸ್ರಾವ, ಮೂಳೆ ಮುರಿತವಾಗಿದ್ದರೆ ಪ್ರಥಮ ಚಿಕಿತ್ಸೆ ನೀಡಬೇಕು.

ಪ್ರಜ್ಞೆ ಇದ್ದರೆ ನೀರು/ಬಿಸಿ ಪಾನೀಯ ಕುಡಿಸಬೇಕು.

ವಾಂತಿಯಾಗುತ್ತಿದ್ದರೆ ಏನನ್ನೂ ಕುಡಿಸಬಾರದು.

ವೈದ್ಯರನ್ನು ಆದಷ್ಟು ಜಾಗ್ರತೆ ಸಂಪರ್ಕಿಸಲು ಮರೆಯಬಾರದು.

ಪ್ರಜ್ಞಾಶೂನ್ಯತೆ – (Fainting)

ಹೆಚ್ಚು ಬಳಲಿಕೆ, ಬಿಸಿಲು, ಆತಂಕ, ಹಸಿವು ಆದಾಗ ಹೆಚ್ಚು ಹೊತ್ತು ಬಿಸಿಲಿನಲ್ಲಿ ಚಲಿಸದೇ ನಿಲ್ಲುವುದರಿಂದಲೂ ಈ ಸ್ಥಿತಿ ಉಂಟಾಗುತ್ತದೆ. ಬಲಹೀನತೆ, ಬೆವರುವಿಕೆ, ತಲೆಸುತ್ತು, ಕಣ್ಣು ಕತ್ತಲೆ, ಅತಿ ಹಸಿವು ಈ ಕಾರಣಗಳಿಂದ ಪ್ರಜ್ಞೆ ಕಳೆದುಕೊಂಡು ಬೀಳುವ ಸಾಧ್ಯತೆಗಳಿವೆ.

ಅಪಸ್ಮಾರ (fits) ಹಾಗೂ ಮಧುಮೇಹಿಗಳಲ್ಲಿ (Diabetes) ಸಕ್ಕರೆ ಪ್ರಮಾಣ ಕಡಿಮೆಯಾದಾಗ ಈ ಸ್ಥಿತಿ ಕಾಣಿಸಿಕೊಳ್ಳಬಹುದು.

ಗಾಳಿಯಲ್ಲಿ ಕಾಲು ಎತ್ತರಿಸಿ ಮಲಗಿಸಿ.
ಬಟ್ಟೆಯನ್ನು ಸಡಿಲಿಸಿ.
ಹಣೆಗೆ ನೀರು ಚಿಮುಕಿಸಿ.
ಕೈ ಕಾಲು ತಣ್ಣಗಿದ್ದರೆ ಉಜ್ಜಿ ಬಿಸಿಮಾಡಿ.
ಎಚ್ಚರವಾದ ಮೇಲೆ ಬಿಸಿಪಾನೀಯ ಕೊಡಿ.

ಅಪಸ್ಮಾರ ರೋಗಿಗಳು ಅದುರುತ್ತಿರುವಾಗ ಕೈಕಾಲುಗಳನ್ನು ಬಿಗಿಯಾಗಿ ಹಿಡಿದಿಡಬಾರದು. ಅದುರು ನಿಂತ ಮೇಲೆ ಉಪಚರಿಸಿ. ಅದುರುತ್ತಿರುವಾಗ ಅಪಾಯವಾಗದಂತೆ ನೋಡಿಕೊಳ್ಳಿ, ಬಿಸಿಪಾನೀಯವನ್ನು ಎಚ್ಚರವಾದ ಮೇಲೆ ಕೊಡಿ.

ಶ್ವಾಸ ಬದ್ಧತೆ – (Choking)

ಆಹಾರದ ಚೂರು ದಾರಿತಪ್ಪಿ ಶ್ವಾಸಕೋಶ ಪ್ರವೇಶಿಸಿದಾಗ, ಗಟ್ಟಿಯಾದ ಪದಾರ್ಥ ಶ್ವಾಸನಾಳಕ್ಕೆ ಹೋಗಿ ತಡೆ ಉಂಟು ಮಾಡಿದಾಗ ಈ ಸ್ಥಿತಿ ಉಂಟಾಗುತ್ತದೆ. ದಟ್ಟ ಹೊಗೆ ಅಥವಾ ಅನಿಲ ಶ್ವಾಸನಾಳದಲ್ಲಿ ತುಂಬಿದಾಗಲೂ ಈ ಸ್ಥಿತಿ ಉಂಟಾಗುತ್ತದೆ ಈ ಸ್ಥಿತಿಯಿಂದ ಸಾವೂ ಉಂಟಾಗಬಹುದು.

1. ಈ ಸ್ಥಿತಿಯಲ್ಲಿರುವವರ ಕತ್ತನ್ನು ಹಿಂದಕ್ಕೆ ಬಾಗಿಸಿ ಕುತ್ತಿಗೆಯನ್ನು ಪೂರ್ಣವಾಗಿ ಚಾಚುವಂತೆ ಮಾಡಿ, ನಾಲಿಗೆ ಮೇಲಕ್ಕೆ ಬರುತ್ತದೆ ಆಗ ಉಸಿರಾಟ ಪ್ರಾರಂಭವಾಗುತ್ತದೆ.

2. ನೆತ್ತಿಯಮೇಲೆ ತಟ್ಟುವುದರಿಂದ, ಮಕ್ಕಳಿಗೆ ಬೆನ್ನು ಬಾಗಿಸಿ ತೂಗಾಡಿಸಿ ಬೆನ್ನಿನ ಮೇಲೆ ತಟ್ಟುವುದರಿಂದ ಆಹಾರದ ಚೂರು ಹೊರಬೀಳುತ್ತದೆ. ನಂತರ ಆರಾಮವಾಗಿ ಕೂರಿಸಿ ಸ್ವಲ್ಪ ಸ್ವಲ್ಪ ನೀರು ಕುಡಿಸಬೇಕು.

3. ರೋಗಿಯನ್ನು ಮಲಗಿಸಿ ಹೊಕ್ಕಳಿನ ಮೇಲೆ ಕೈಇಟ್ಟು ಎರಡು ಕೈಗಳಿಂದ 3–4 ಬಾರಿ ವೇಗವಾಗಿ ಬಲವಾಗಿ ಒತ್ತಡ ಹಾಕಿದಾಗ ಆಹಾರದ ತುಣುಕು ಹೊರಬೀಳುವ ಸಾಧ್ಯತೆ ಇರುತ್ತದೆ. ಅನಿಲವೂ ಹೊರಕ್ಕೆ ಬರುತ್ತದೆ.

ಕೃತಕ ಉಸಿರಾಟ – ಬಾಯಿಂದ ಬಾಯಿಗೆ

ಉಸಿರಾಟ: ರೋಗಿಯನ್ನು ಮಲಗಿಸಬೇಕು. ಬಾಯಿಯ ಮೇಲೆ ಸ್ವಚ್ಛವಾದ ಹತ್ತಿಬಟ್ಟೆ ಅಥವಾ ತೆಳು ವಸ್ತ್ರಹಾಕಬೇಕು. ನಿಮ್ಮ ಬಾಯಿಯನ್ನು ಅವರ ಬಾಯಿಗೆ ಜೋಡಿಸಿ ಬಲವಾಗಿ ಉಸಿರು ಎಳೆದುಕೊಂಡು ಉಸಿರನ್ನು ತುಂಬಬೇಕು. ಈ ರೀತಿ 5 ರಿಂದ 6 ಬಾರಿ ಮಾಡಿ ಉಸಿರಾಡುವ ಸೂಚನೆ ಕಂಡುಬಂದರೆ, ಸರಿಯಾಗಿ ಉಸಿರಾಡಲು ಪ್ರಾರಂಭಿಸುವವರೆಗೂ ಮಾಡಬೇಕು. ಇದನ್ನು ಮಾಡುವಾಗ ನಿಮ್ಮ ಬಾಯಿ ಆರೋಗ್ಯಕರವಾಗಿರಬೇಕು. ಹುಳುಕುಹಲ್ಲು, ದಂತಕ್ಷಯ ಮುಂತಾದವುಗಳು ಇರಬಾರದು. ಶ್ವಾಸೋಚ್ಛ್ವಾಸದ ತೊಂದರೆ ಇರಬಾರದು.

ಅಸ್ಥಿಭಂಗ : ಮೂಳೆಯಲ್ಲಿ ಒಂದೇ ಮುರಿತ ಉಂಟಾದರೆ ಸರಳ ಅಸ್ಥಿಭಂಗವಾಗುತ್ತದೆ. ಒಂದಕ್ಕಿಂತ ಹೆಚ್ಚು ಮುರಿತ ಅಥವಾ ಮುರಿತವು ಗಾಯಗಳಿಂದ ಕೂಡಿದ್ದರೆ ಸಂಕೀರ್ಣ ಅಸ್ಥಿಭಂಗವಾಗುತ್ತದೆ. ಸರಳ ಅಸ್ಥಿಭಂಗದಲ್ಲಿ ಊತ, ಆಕಾರವಿಕಲತೆ, ವಿಪರೀತ ನೋವು ಉಂಟಾಗುತ್ತದೆ.

ನೀರಿನಲ್ಲಿ ಮುಳುಗಿದಾಗ: ನೀರಿನಲ್ಲಿ ಮುಳುಗಿದವರನ್ನು ಹೊರತೆಗೆದಾಗ ಅವರು ಕುಡಿದ ನೀರು ಶ್ವಾಸಕೋಶಗಳನ್ನು ತುಂಬಿರುತ್ತದೆ. ಆದ್ದರಿಂದ ಉಸಿರಾಡಲಾಗದೆ ತೊಂದರೆಗೆ ಈಡಾಗಿರುತ್ತಾರೆ. ಈ ಸ್ಥಿತಿ ಹೊಗೆ ಅನಿಲ ಶ್ವಾಸ ಕೋಶಗಳಲ್ಲಿ ತುಂಬಿದಾಗಲೂ ಉಂಟಾಗುತ್ತದೆ. ಮುಖದ ಕೆಳಗೆ ಅವರ ಕೈಗಳನ್ನು

ಕೆಳ ದವಡೆ ಅಸ್ಥಿ ಭಂಗ



ಅಥವಾ ಬಟ್ಟೆ ಮಡಿಕೆ ಇಟ್ಟು, ಮುಖ ಪಕ್ಕಕ್ಕೆ ಮಾಡಿ ಮಲಗಿಸಿ. ಸಮತಟ್ಟಿನಲ್ಲಿ ಬೋರಲಾಗಿ ಮಲಗಿಸಿ ಅವರ ಬಾಯಿಗೆ ಮತ್ತು ಮೂಗಿಗೆ ಮಣ್ಣು ಧೂಳು ಅಂಟಿದ್ದರೆ ಒರೆಸಿ. ಹೊಟ್ಟೆಯ ಕೆಳಗೆ ಬಟ್ಟೆಯ ಮಡಿಕೆ ಅಥವಾ ತೆಳು ದಿಂಬು ಇಟ್ಟು, ಮಲಗಿಸಿ. ಎರಡೂ ಕೈಗಳನ್ನು ಬೆನ್ನಿನ ಮೇಲಿಟ್ಟು, ಗಟ್ಟಿಯಾಗಿ ಬಿಟ್ಟು ಬಿಟ್ಟು ಅದುಮಿ. ಒಂದೆರಡು ನಿಮಿಷ ಹೀಗೆ ಮಾಡಿ ಒಂದೆರಡು ಸೆಕೆಂಡು ಬಿಡಿ. ಪುನಃ ಒತ್ತಿ ನೀರು ಬಾಯಿ ಅಥವಾ ಮೂಗಿನಿಂದ ಬರುವವರೆಗೂ ಮಾಡಿ. ನೀರು/ಹೊಗೆ/ಅನಿಲ ಪೂರ್ಣವಾಗಿ ಹೊರ ಬಂದಮೇಲೆ, ಮೂಗಿಗೆ ಅಡ್ಡಲಾಗಿ ಬೆರಳು ಇಡಿ ಉಸಿರಾಟ ಪ್ರಾರಂಭ ವಾಯಿತೆಂದು ಖಾತ್ರಿ ಮಾಡಿಕೊಂಡು ಚಿಕಿತ್ಸೆ ನಿಲ್ಲಿಸಿ, ಉಸಿರಾಟ ಸರಿಯಾಗಿ ಪ್ರಾರಂಭವಾದ ಮೇಲೆ ಸ್ವಲ್ಪ ಸ್ವಲ್ಪ ಬಿಸಿಪಾನೀಯ ಕುಡಿಸಿ. ಈ ಚಿತ್ರಗಳನ್ನು ನೋಡಿ ಕ್ರಮವಾಗಿ ಎಣಿಕೆ ಮಾಡಿಕೊಂಡು ಕೃತಕ ಉಸಿರಾಟ ನೀಡಬಹುದು. ಉಸಿರಾಟ ನೀಡುವಾಗ ಎಣಿಕೆ, ಸಮಯ ಮತ್ತು ಮಾಡುವ ಕ್ರಮವನ್ನು ಕರಾರುವಕ್ಕಾಗಿ ಅನುಸರಿಸಬೇಕು. ಈ ಚಿಕಿತ್ಸೆ ನೀಡಲು ಅಭ್ಯಾಸ ಮಾಡಿಕೊಳ್ಳಬೇಕು.



ಚಿತ್ರ ೧



ಚಿತ್ರ ೨



ಚಿತ್ರ ೩

ವಿದ್ಯುತ್ ಆಘಾತ:

ತಕ್ಷಣವೇ ಕ್ರಮ ತೆಗೆದುಕೊಳ್ಳಬೇಕು.

- ವ್ಯಕ್ತಿಗೂ ವಿದ್ಯುತ್ ಪ್ರವಾಹಕ್ಕೂ ಮಧ್ಯೆ ಇರುವ ಸಂಪರ್ಕವನ್ನು ತಪ್ಪಿಸಬೇಕು. ಹೀಗೆ ಮಾಡಲು ಉದ್ದ ಒಣ ಕಟ್ಟಿಗೆ / ಚರ್ಮದ, ಮೊಳೆ ಇಲ್ಲವೆ ಬೂಟುಗಳಿಂದ ಸಂಪರ್ಕವಾಗಿರುವ ಸ್ಥಳದಲ್ಲಿ ರಭಸವಾಗಿ ಬಡಿಯಬೇಕು ಇದರಿಂದ ವಿದ್ಯುತ್ ಸಂಪರ್ಕ ತಪ್ಪಿ ವ್ಯಕ್ತಿ ಬೇರ್ಪಡುತ್ತಾಳೆ/ನೆ.
- ಬಡಿಯುವಾಗ ನಿಮ್ಮ ಕೈ ವಿದ್ಯುತ್ ಸಂಪರ್ಕ ಹೊಂದಬಾರದು. ವ್ಯಕ್ತಿಯನ್ನು ನೇರವಾಗಿ ಮುಟ್ಟಬಾರದು.
- ಪ್ರಜ್ಞೆ ಇದ್ದರೆ ಆತಂಕ ದೂರ ಮಾಡಬೇಕು, ಬಟ್ಟೆ ಸಡಿಲಿಸಬೇಕು. ಗಾಯವಾಗಿದ್ದರೆ ಚಿಕಿತ್ಸೆ ನೀಡಬೇಕು.
- ತಂಪು ಪಾನೀಯ ಕುಡಿಸಬೇಕು.
- ಕೂಡಲೆ ವೈದ್ಯರನ್ನು ಸಂಪರ್ಕಿಸಬೇಕು.
- ಉಸಿರಾಟ ನಿಂತಿದ್ದರೆ ಕೃತಕ ಉಸಿರಾಟ ನೀಡಬೇಕು.

5. ನಕ್ಷಾ ಕೌಶಲ

ದ್ವಿತೀಯ ಸೋಪಾನದಲ್ಲಿ ನಕ್ಷೆ ಹಾಗೂ ನಕ್ಷಾ ಕೌಶಲದ ಪರಿಚಯ ಮಾಡಿಕೊಂಡಿರಿ. ಈ ಹಂತದಲ್ಲಿ ನಕ್ಷೆಯನ್ನು ಓದುವ ಮತ್ತು ರಚಿಸುವ ಕೌಶಲಗಳನ್ನು ಕಲಿತು. ಪಟಾಲಂದೊಡನೆ ಬಯಲಿನಲ್ಲಿ ಪ್ರತ್ಯಕ್ಷವಾಗಿ ಅಭ್ಯಾಸ ಮಾಡುವಿರಿ.

ಈ ಕೌಶಲಗಳನ್ನು ಕರಗತ ಮಾಡಿಕೊಳ್ಳಲು ಕೆಳಗಿನ 5 ಅಂಶಗಳಲ್ಲಿ ಪರಿಣತಿಯನ್ನು ಪಡೆಯಬೇಕು.

1. **ಗುರಿ (Destination)**: ನಕ್ಷೆ ಓದಲು ಅಥವಾ ರಚಿಸಲು ಗೊತ್ತು ಪಡಿಸಿಕೊಳ್ಳುವ ಕ್ಷೇತ್ರ / ಸ್ಥಳ ಮತ್ತು ಅದರಲ್ಲಿನ ವಸ್ತುಗಳು.
2. **ದಿಕ್ಕು (Direction)** : 16 ದಿಕ್ಕುಗಳು ಅವುಗಳನ್ನು ಆಧರಿಸಿದ ವಸ್ತುಗಳ ದಿಕ್ಕೋನಸ್ಥಾನ (bearing)
3. **ದೂರ (Distance):** ಎರಡು ಸ್ಥಳ ಅಥವಾ ವಸ್ತುಗಳ ನಡುವಿನ ಅಂತರ. ಇವುಗಳನ್ನು ಅಳೆಯುವ ಸಾಧನಗಳು ಅಳತೆ ಪಟ್ಟಿ, ಅಳತೆ ಸರಪಳಿ, ಸ್ಕೌಟ್

ದಂಡ, ಚೌಕುಳಿ ಜಾಲ (Grid net), ಸಮಪಾತಳಿ ರೇಖೆ (Contours), ಹೆಜ್ಜೆಗಳು. ನಿಜದೂರವನ್ನು ಹಾಳೆಯ ಮೇಲೆ ಪ್ರತಿನಿಧಿಸುವ ಪ್ರಮಾಣ ಮಾಪಕದ ನಿರ್ಧಾರ.

4. **ವರ್ಣನೆ (Description) :** ಭೂಸ್ವರೂಪ ಮತ್ತು ಮಾನವ ನಿರ್ಮಿತಗಳನ್ನು ನಕ್ಷೆಯ ಮೇಲೆ ಪ್ರತಿನಿಧಿಸುವ ಚಿಹ್ನೆ, ಬಣ್ಣ, ಅವುಗಳ ಅರ್ಥ.

5. **ವಿವರಣೆ (Details) :** ಸಮಗ್ರ ನಕ್ಷೆಯ ಪರಿಚಯ ಶೀರ್ಷಿಕೆ, ಉತ್ತರ ದಿಕ್ಕು, ದೂರಮಾಪಕ, ಸಮಪಾತಳಿ ಮಾಪಕ, ಗ್ರಿಡ್ ಮಾಪಕ, ಚಿಹ್ನೆಗಳ ಅರ್ಥ (legend) ರಚಿಸಿದವರ ಹೆಸರು–ವ್ಯಕ್ತಿ/ತಂಡ/ಇಲಾಖೆ, ಪ್ರಕಟಣಾ ದಿನಾಂಕ.

ಮಾಪಕ (Scale): ನಿಜದೂರದ ಎರಡು ಬಿಂದುವಿನ ಅಂತರವನ್ನು ನಕ್ಷೆಯ ಮೇಲೆ ಪ್ರತಿನಿಧಿಸುವ ಪ್ರಮಾಣ. ಇದನ್ನು ನಮೂದಿಸುವಾಗ ನಮ್ಮ ಎಡಗಡೆ ಮಾಪವನ್ನು (Unit) ಬಲಗಡೆ ಮಾನಕ್ಕೆ ನಿರ್ಧರಿಸಿದ ಪ್ರಮಾಣವನ್ನು ಬರೆಯಬೇಕು. ಹಾಳೆಯ ಅಳತೆ ಸ್ಥಿರವಾಗಿರುವುದರಿಂದ ಮಾನವು ಸ್ಥಿರವಾದ ಅಂಶ. ಆದರೆ ಪ್ರಮಾಣವು ದೂರ ಅಥವಾ ವಿಸ್ತೀರ್ಣ ಹೆಚ್ಚಿದಂತೆ ಹೆಚ್ಚುತ್ತಾ ಹೋಗುತ್ತದೆ.

ಮಾಪಕ = ಮಾನ : ನಿಜದೂರ / ವಿಸ್ತೀರ್ಣ

Scale = Unit : True Distance / Area

ಉದಾ: 1 ಸೆಂ.ಮೀ= 1/5/10/100/1000/10,000 ಕಿ.ಮೀ

ಮಾಪಕ ರಚನೆಯಲ್ಲಿ ಮೂರು ವಿಧಾನಗಳಿವೆ.

1. **ವಿವರ ಮಾಪಕ** (Statement Scale) : ಇದರಲ್ಲಿ ಮಾನ ಮತ್ತು ನಿಜದೂರದ ಪ್ರಮಾಣವನ್ನು ಹೆಸರಿಸಲಾಗುವುದು.

   ಉದಾ : 1 ಸೆಂ.ಮೀ = 1/5/10/100/1000/10000 ಕಿ.ಮೀ

   1 ಚ.ಸೆಂ.ಮೀ = 1/5/10/100/1000/10000 ಚ.ಕಿ.ಮೀ

2. **ಪ್ರಾತಿನಿಧಿಕ ಭಿನ್ನಾಂಶ ಮಾಪಕ** (Representative Fraction) : ಈ ಮಾಪಕದಲ್ಲಿ ಮಾನ ಮತ್ತು ಪ್ರಮಾಣವನ್ನು ಸೆಂ.ಮೀ / ಚ.ಕಿ.ಮೀ / ಅಂಗುಲ / ಎಂದು ಹೆಸರಿಸಲಾಗುವುದಿಲ್ಲ. ಮಾನವನ್ನು ಯಾವಾಗಲು ಒಂದು ಎಂದೇ ಪ್ರತಿನಿಧಿಸಲಾಗುತ್ತದೆ.

ಉದಾ : ಪ್ರಾ.ಭಿ. (RF) = $\frac{\text{ನಕ್ಷೆಯ ಮೇಲಿನ ದೂರ}}{\text{ನಿಜ ದೂರ}}$

ಪ್ರಾ.ಭಿ = 1/100 ಅಥವಾ 1 : 100

ಸಾಮಾನ್ಯವಾಗಿ ನಕ್ಷೆ ರಚಿಸುವಾಗ ಪ್ರಾತಿನಿಧಿಕ ಭಿನ್ನಾಂಶ ಮಾಪಕವನ್ನು ಬಳಸಲಾಗುವುದು.

3. **ರೇಖಾ ಮಾಪಕ (Lenear Scale) :** ಈ ಅಳತೆ ಪಟ್ಟಿಯಲ್ಲಿ ನೇರವಾಗಿ ನಿಜ ದೂರವನ್ನು ಪಡೆಯಬಹುದು ಈ ಅಳತೆ ಪಟ್ಟಿಯನ್ನು ನಕ್ಷೆಯ ಕೆಳಗೆ ಕೊಡಲಾಗಿರುತ್ತದೆ.

ಚೌಕುಳಿ ಪದ್ಧತಿ (Grid System):

ಭೂನಕ್ಷೆಯನ್ನು ಲಂಬರೇಖೆ ಮತ್ತು ಅಡ್ಡರೇಖೆಗಳಿಂದಾದ ಚೌಕುಳಿಗಳ (Grid Net) ಜಾಲದಲ್ಲಿ ಅಳವಡಿಸಿಲಾಗಿದೆ. ಗೋಲಾಕಾರದ ಭೂಮಿಯನ್ನು ಸಮತಲದ ಮೇಲೆ ಮೂಡಿಸುವಾಗ ಈ ಪದ್ಧತಿಯನ್ನು ಅನುಸರಿಸಲಾಗಿದೆ. ಈ ಪದ್ಧತಿಯನ್ನು ನಕ್ಷೆ ರಚಿಸಲು ಮತ್ತು ಓದಲು ಬಳಸಲಾಗುವುದು.

ಪೂರ್ವಾಂಕಿತ ರೇಖೆಗಳು (Eastings):

ಪಶ್ಚಿಮದಿಂದ ಪೂರ್ವಕ್ಕೆ ಸಂಖ್ಯೆಗಳು ಹೆಚ್ಚುತ್ತಾ ಹೋಗುವ ಲಂಬ ರೇಖೆಗಳೇ ಪೂರ್ವಾಂಕಿತ ರೇಖೆಗಳು.

ಉತ್ತರಾಂಕಿತ ರೇಖೆಗಳು (Northings):

ದಕ್ಷಿಣದಿಂದ ಉತ್ತರಕ್ಕೆ ಸಂಖ್ಯೆಗಳು ಹೆಚ್ಚುತ್ತಾ ಹೋಗುವ ಅಡ್ಡ ರೇಖೆಗಳೇ ಉತ್ತರಾಂಕಿತ ರೇಖೆಗಳು.

ಚೌಕುಳಿ ಜಾಲ (Grid Net):

ಪೂರ್ವಾಂಕಿತ ಮತ್ತು ಉತ್ತರಾಂಕಿತ ರೇಖೆಗಳಿಂದ ಗ್ರಿಡ್ ಜಾಲ ರಚಿಸಲಾಗುತ್ತದೆ.

ಚೌಕುಳಿ ನಿರ್ದೇಶನ (Grid Reference) :

ಜಾಲದಲ್ಲಿ ಚೌಕುಳಿಗಳಿಗೆ ಪಶ್ಚಿಮ ಮೂಲೆಯಿಂದ ಪೂರ್ವಕ್ಕೆ / ಎಡದಿಂದ ಬಲಕ್ಕೆ, ದಕ್ಷಿಣದಿಂದ ಉತ್ತರಕ್ಕೆ/ಕೆಳಗಿನಿಂದ ಮೇಲಕ್ಕೆ ಸಂಖ್ಯೆಗಳನ್ನು



ಕೊಡಲಾಗುವುದು. ನೀವು ನೋಡುವ ನಕ್ಷೆ, ಭೂನಕ್ಷೆಯ ಒಂದು ಭಾಗವಾದ್ದರಿಂದ ನಿಮಗೆ '0' ಯಿಂದ ಪ್ರಾರಂಭವಾಗುವ ಚೌಕುಳಿ ಸಿಗುವುದಿಲ್ಲ. ಚೌಕುಳಿ ಮಾಪಕವನ್ನು ಜಾಲದ ಕೆಳಗೆ ಕೊಡಲಾಗಿರುವುದು. ಪ್ರತಿ ಚೌಕುಳಿಯನ್ನು 100 ಭಾಗವಾಗಿ ಮಾಡಲಾಗುವುದು. ಇವುಗಳ ಚೌಕುಳಿಯ ಭಿನ್ನಾಂಶಗಳು.

ಜಾಲ ಓದುವುದು (Grid Reading) :

* ಇದನ್ನು ಓದುವಾಗ ನಿಮ್ಮ ಮುಂದಿರುವ ಜಾಲದ ಪಶ್ಚಿಮ ಅಥವಾ ಎಡ ಮೂಲೆಯಿಂದ ಪೂರ್ವಕ್ಕೆ ಸಾಗಿ ನಂತರ ತಿರುಗಿ ದಕ್ಷಿಣದಿಂದ ಉತ್ತರಕ್ಕೆ ಸಾಗಿ, ಇದನ್ನು (Bottom up) 'ಅಡ್ಡ ಹಾದು ಮೇಲಕ್ಕೇರುವ' ವಿಧಾನವೆಂದು ನೆನಪಿಡಿ.

* ಚೌಕುಳಿ ನಿರ್ದೇಶನ ಸಂಖ್ಯೆಯನ್ನು ನೀಡಿದಲ್ಲಿ ಆ ನಿರ್ದೇಶನದಲ್ಲಿರುವ ಸ್ಥಳ / ವಸ್ತುವನ್ನು ಗುರುತಿಸಬಹುದು.

ಉದಾ: 4 ಅಂಕಿಗಳ ನಿರ್ದೇಶನ: ಮೊದಲ ಎರಡು ಸಂಖ್ಯೆ ಪೂರ್ವಾಂಕಿತ ಸಂಖ್ಯೆ ಎರಡನೆಯ ಎರಡು ಸಂಖ್ಯೆ ಉತ್ತರಾಂಕಿತ ಸಂಖ್ಯೆ.

ಉದಾ: 7080

ಪೂರ್ವಾಂಕಿತ ರೇಖೆಗಳು



ಉತ್ತರಾಂಕಿತ ರೇಖೆಗಳು



ಚೌಕುಳಿ ಜಾಲ

6 ಅಂಕಿಗಳ ನಿರ್ದೇಶನ: ಮೊದಲ ಎರಡು ಸಂಖ್ಯೇ ಪೂರ್ವಾಂಕಿತ ಸಂಖ್ಯೆ, ಮೂರನೇ ಸಂಖ್ಯೆ ಅದರ ಭಿನ್ನಾಂಶ. ಎರಡನೆಯ ಎರಡು ಸಂಖ್ಯೇ ಉತ್ತರಾಂಕಿತ ಸಂಖ್ಯೆ, ಮೂರನೆಯ ಸಂಖ್ಯೆ ಅದರ ಭಿನ್ನಾಂಶ.

ಉದಾ: 805608

(ಭಿನ್ನಾಂಶಕ್ಕೆ ಬಿಂದು ಕೊಡುವ ಪದ್ಧತಿ ಇರುವುದಿಲ್ಲ)

ಈ ಸಂಖ್ಯೆ ಅನುಸರಿಸಿ ಜಾಲದಲ್ಲಿ ಸ್ಥಳ ಗುರುತಿಸಿ, ನಿಮ್ಮ ನಾಯಕಿಯವರು ನಕ್ಷೆಕೊಟ್ಟು ಚೌಕುಳಿ ನಿರ್ದೇಶನಕೊಟ್ಟು ಆ ಸ್ಥಳ ತಲುಪಿ ಎಂದು ತಿಳಿಸಿದರೆ ಮೊದಲು ನಕ್ಷೆ ಓದಿ ನಂತರ ಮಾಪಕ ಮತ್ತು ದಿಕ್ಕು ಗಮನಿಸಿ ಆ ಸ್ಥಳ ತಲುಪಿ.



ನಿರ್ದೇಶನ : 7080



ನಿರ್ದೇಶನ : 805608

ಸಮಪಾತಳಿ ರೇಖೆ (Contour):

ಭೂಮಿಯ ಮೇಲ್ಮೈ ಗುಡ್ಡ, ಬೆಟ್ಟ, ಕಣಿವೆ, ಮೈದಾನ ಮುಂತಾದ ಉಬ್ಬು ತಗ್ಗುಗಳಿಂದ (Relief feature) ಕೂಡಿದೆ. ಇವುಗಳನ್ನು ನಕ್ಷೆಯ ಮೇಲೆ ಮೂಡಿಸಲು ಅನೇಕ ವಿಧಾನಗಳಿವೆ. ಅವುಗಳಲ್ಲಿ ಸಮಪಾತಳಿ ರೇಖಾ ವಿಧಾನವನ್ನು ಸಾಮಾನ್ಯವಾಗಿ ಬಳಸಲಾಗುವುದು. ಬೆಟ್ಟ ಗುಡ್ಡಗಳ ಮೇಲೆ ಗುರುತಿಸುವ ಸಮಾನ ಅಂತರದ ಬಿಂದುಗಳೇ ಲಂಬಾಂತರಗಳು.



ಉಬ್ಬನ್ನು ಅಳೆಯಲು ಲಂಬಾಂತರವನ್ನು ಗುರುತಿಸಿಕೊಳ್ಳಲಾಗುವುದು. ಇದರ ಸಾಮಾನ್ಯ ಮಾಪಕ. 1:50. ಎತ್ತರಕ್ಕೆ ಅನುಗುಣವಾಗಿ ಇದನ್ನು ವ್ಯತ್ಯಾಸ ಮಾಡಿಕೊಳ್ಳಬಹುದು. ಈ ಲಂಬಾಂತರ ಬಿಂದುಗಳ ಸಹಾಯದಿಂದ ವಕ್ರತೆಯಿಂದ ಕೂಡಿದ ವೃತ್ತಗಳನ್ನು ಹಾಳೆಯ ಮೇಲೆ ರಚಿಸಲಾಗುವುದು. ಈ ವೃತ್ತಗಳ ಅಂತರ ಕೆಲವು ಕಡೆ ಕಿರಿದಾಗುತ್ತದೆ. ಈ ವೃತ್ತಗಳ ವಕ್ರತೆಯಿಂದ ಇಳಿಜಾರು, ಕಡಿದಾದ ಪ್ರದೇಶಗಳನ್ನು ಗುರುತಿಸಬಹುದು.

ಚಿತ್ರದಲ್ಲಿ ಜೊತೆಗೂಡಿರುವ ಗುಡ್ಡಗಳನ್ನು ಕಾಣಬಹುದು. ಇವುಗಳ ಲಂಬಾಂತರಗಳನ್ನು ಆಧರಿಸಿ ಮಾಪಕದ ಸಹಾಯದಿಂದ ಹಾಳೆಯ ಮೇಲೆ ಸಮಪಾತಳಿ ರೇಖೆಯನ್ನು ರಚಿಸಲಾಗುವುದು. ಇದರ ಮಧ್ಯೆ ಎರಡು ಶಿರ ಬಿಂದುಗಳಿವೆ. ಅದರ ಸುತ್ತಲೂ ವೃತ್ತಗಳು ರಚಿತವಾಗಿವೆ. ಹೊರ ವೃತ್ತ ಸೇರಿಕೊಂಡಿರುವುದರಿಂದ ಗುಡ್ಡಗಳು ಸೇರಿವೆ ಎಂದು ಸೂಚಿಸುತ್ತದೆ. ಎರಡು ಗುಡ್ಡ ಮಧ್ಯೆ ಇರುವ ತಗ್ಗು/ಕಣಿವೆಯನ್ನು ಅಳೆಯಬಹುದು.



ಸಾಂಪ್ರದಾಯಿಕ ಚಿಹ್ನೆಗಳು (Conventional Signs): ನಕ್ಷೆಯಲ್ಲಿ ಭೂಮಿಯಲ್ಲಿ ಮೇಲಿನ ಪ್ರಾಕೃತಿಕ ಮತ್ತು ಮಾನವ ನಿರ್ಮಿತ ಸ್ವರೂಪಗಳನ್ನು ನಿಜ ಸ್ವರೂಪಕ್ಕೆ ಹತ್ತಿರವಾಗಿ ಪ್ರತಿನಿಧಿಸುವ ವಿಶ್ವಮಾನ್ಯ ಚಿತ್ರ ಸಂಕೇತಗಳನ್ನು ಮತ್ತು ಬಣ್ಣಗಳನ್ನು ಸಾಂಪ್ರದಾಯಿಕ ಚಿಹ್ನೆಗಳು ಎಂದು ಕರೆಯಲಾಗಿದೆ. ವಿಶ್ವದ ಎಲ್ಲಾ ಭೂಪಟದಲ್ಲೂ ಈ ಚಿಹ್ನೆಗಳ ಆಕಾರ ಮತ್ತು ಬಣ್ಣಗಳ ಅರ್ಥ ಒಂದೇ ಆಗಿರುತ್ತದೆ.

ಕೆಲವೊಮ್ಮೆ ನಾವು ಸ್ಥಳೀಯ ನಕ್ಷೆಗಳನ್ನು ರಚಿಸುವಾಗ ಸ್ಥಳೀಯ ವಿಶಿಷ್ಠತೆಯನ್ನು ಪ್ರತಿನಿಧಿಸಲು ಸಾಂಪ್ರದಾಯಿಕ ಚಿಹ್ನೆಗಳು ದೊರೆಯದೇ ಇರಬಹುದು. ಆಗ ನಾವೇ ಸ್ಥಳೀಯ ವಿಶಿಷ್ಠ ಚಿಹ್ನೆಗಳನ್ನು (Local specific Signs) ರಚಿಸಿಕೊಳ್ಳಬಹುದು.

ನಕ್ಷೆಯಲ್ಲಿ ಬಳಸಿದ ಪ್ರತಿಯೊಂದು ಸಂಕೇತಗಳು ಮತ್ತು ಬಣ್ಣಗಳ ಅರ್ಥವನ್ನು ನಕ್ಷೆಯ ಕೆಳಗೆ ಬಲಭಾಗದಲ್ಲಿ ನೀಡಬೇಕು.

ಬಣ್ಣಗಳು:

ಹಸಿರು – ಕಾಡು

ಹಳದಿ – ಕೃಷಿ ಭೂಮಿ

ಕಂದು – ನೆಲ ಮತ್ತು ಸಮಪಾತಳಿ ರೇಖೆ

ನೀಲಿ – ನೀರು

ನೇರಳೆ – ಚೌಕುಳಿ ಜಾಲ

ಕೆಂಪು – ಮಾನವ ನಿರ್ಮಿತಗಳು

ಕಪ್ಪು – ಹಸಿರು ಮತ್ತು ಸೀಮಾ ರೇಖೆಗಳು

ಚೌಕುಳಿಯನ್ನು ಹಾಕಿ ಅದರಲ್ಲಿ ನೀವು ಗುರುತಿಸಬೇಕಾದ ಸಂಕೇತಾಕ್ಷರಗಳನ್ನು ನಮೂದಿಸಬಹುದು:

ಉದಾ: = PS = ಆರಕ್ಷಕ ಠಾಣೆ TB = ಪ್ರವಾಸಿ ಮಂದಿರ

RF = ಆರಕ್ಷಿತ ಅರಣ್ಯ PO = ಅಂಚೆ ಕಛೇರಿ

ಉತ್ತರ ದಿಕ್ಕಿನ ವೈಪರಿತ್ಯ (Variation of North Direction):

ಮೂರು ರೀತಿಯ ಉತ್ತರಗಳನ್ನು ಬಳಸುತ್ತೇವೆ. ನಿಜ ಉತ್ತರ, ಕಾಂತೀಯ ಉತ್ತರ ಮತ್ತು ಚೌಕುಳಿ ಉತ್ತರ. ಈ ಉತ್ತರಗಳು ಕೆಲವು ಡಿಗ್ರಿಯಲ್ಲಿ ವ್ಯತ್ಯಾಸ ಹೊಂದಿರುತ್ತದೆ.

1. ಧ್ರುವ ತಾರೆ ಇರುವ ದಿಕ್ಕು ನಿಜ ಉತ್ತರ. ಇದು ಸ್ಥಿರವಾಗಿರುತ್ತದೆ.
2. ಭೂಮಿಯ ಒಂದು ಅಯಸ್ಕಾಂತ ದಿಕ್ಸೂಚಿಯ ಕಾಂತಿಯ ದರ್ಶಿನಿ ಇದಕ್ಕೆ ಆಕರ್ಷಿಸಲ್ಪಟ್ಟು ಸೂಚಿಸುವ ಉತ್ತರವೇ ಕಾಂತೀಯ ಉತ್ತರ, ಇದು ನಿಜ ಉತ್ತರಕ್ಕಿಂತ ಕೆಲವು ಡಿಗ್ರಿ ವ್ಯತ್ಯಾಸವಾಗಿರುತ್ತದೆ. ಕಾಂತೀಯ ಆಕರ್ಷಣಾ ಬಲದಿಂದಾಗಿ ಉತ್ತರವು ಸ್ಥಳದಿಂದ ಸ್ಥಳಕ್ಕೆ ಸ್ವಲ್ಪ ವ್ಯತ್ಯಾಸವಾಗುತ್ತದೆ. ಈ ವ್ಯತ್ಯಾಸವನ್ನು ಕಾಂತೀಯ ವೈಪರಿತ್ಯ ಎನ್ನಲಾಗುವುದು.
3. ನಕ್ಷೆಯ ಮೇಲಿನ ಚೌಕುಳಿಗಳು ತೋರಿಸುವ ಉತ್ತರದಲ್ಲು ಸ್ಥಳದಿಂದ ಸ್ಥಳಕ್ಕೆ ವ್ಯತ್ಯಾಸವಾಗುತ್ತದೆ.

ನೀವು ನಕ್ಷೆಯನ್ನು ರಚಿಸುವಾಗ ಬಳಸುವ ಉತ್ತರ ಕಾಂತೀಯ ಉತ್ತರವಾಗಿರುತ್ತದೆ.



ಚಿತ್ರ ಸಾಂಪ್ರದಾಯಿಕ ಚಿಹ್ನೆಗಳು

ನಕ್ಷೆಯನ್ನು ಓದುವುದು.

1. ನಿಮಗೆ ಬೇಕಾದ ನಕ್ಷೆಯನ್ನು ಆಯ್ಕೆ ಮಾಡಿ
2. ನಕ್ಷೆಯನ್ನು ಗಟ್ಟಿಯಾದ ಸಮತಲ ಮೇಲೆ ಹರಡುವುದು.
3. ದಿಕ್ಸೂಚಿಯ ಉತ್ತರಕ್ಕೆ ನಕ್ಷೆಯ ಉತ್ತರವನ್ನು ಹೊಂದಿಸಿ ನಕ್ಷೆಯನ್ನು ಭದ್ರಪಡಿಸಿ.
4. ನಕ್ಷೆಯ ವಿವರಣೆಯನ್ನು ವರ್ಣನೆಯನ್ನು ಓದಿ.
5. ಚೌಕುಳಿ ಜಾಲವನ್ನು ವೀಕ್ಷಿಸಿ.
6. ನಿಮಗೆ ಬೇಕಾದ ಮಾಹಿತಿಗಳನ್ನು ಗುರುತಿಸಿ.
7. ಚೌಕುಳಿ ನಿರ್ದೇಶನ ಕೊಟ್ಟಿದ್ದರೆ ಅವಶ್ಯಕತೆ ಇದ್ದರೆ ಪ್ರತ್ಯಕ್ಷವಾಗಿ ಸ್ಥಳವನ್ನು ಪತ್ತೆ ಮಾಡಿ.

ಅಟ್ಲಾಸ್, ಭೂಪಟ, ನಗರನಕ್ಷೆ, ಕ್ಷೇತ್ರ ನಕ್ಷೆಗಳನ್ನು ಓದುವ ಅಭ್ಯಾಸ ಮಾಡಿಕೊಳ್ಳಿ. ಈ ಹವ್ಯಾಸ ಬೆಳೆಸಿಕೊಳ್ಳಿ. ಭೂಗೋಳದ ಎಲ್ಲಾ ವಾಹಿತಿಯುನ್ನು ತಿಳಿದುಕೊಳ್ಳಬಹುದು. ನಕ್ಷೆಯ ಸಹಾಯದಿಂದ ಪ್ರವಾಸ ಮಾಡಬಹುದು. ಅಪರಿಚಿತ ಸ್ಥಳಗಳನ್ನು ಪತ್ತೆ ಮಾಡಬಹುದು.

ನಕ್ಷಾ ರಚನೆ: ನಕ್ಷೆಯನ್ನು ಮೂರು ವಿಧಾನಗಳಿಂದ ರಚಿಸಬಹುದು.

1. ತ್ರಿಕೋನ ವಿಧಾನ (Traiangulation Method)
2. ಸಾದಾ ಮೇಜು ವಿಧಾನ (Plain table Method)
3. ರಸ್ತೆ ಹಾಯಿ ವಿಧಾನ (Road traverse Method)

ತ್ರಿಕೋನ ವಿಧಾನ : ಈ ವಿಧಾನದಲ್ಲಿ ನಕ್ಷೆಯನ್ನ ತ್ರಿಕೋನ ರಚಿಸುವುದರ ಮೂಲಕ ತಯಾರಿಸಲಾಗುವುದು ತ್ರಿಕೋನದ ಶಿರಬಿಂದು ವಸ್ತು ಸ್ಥಾನವಾಗಿರುತ್ತದೆ. ಈ ವಿಧಾನದ ಮೂಲಕ ಕ್ಷೇತ್ರ ನಕ್ಷೆ, ಶಿಬಿರ ನಕ್ಷೆಗಳನ್ನು ತಯಾರಿಸಬಹುದು. ಇದು, ನಕ್ಷಾ ತಯಾರಿಕೆಯ ಮೂಲವಿಧಾನ, ನಕ್ಷೆಯನ್ನು ಪಟಾಲಂದವರೆಲ್ಲರೂ ಸೇರಿ ರಚಿಸಿ. ಇದು ನಿಮ್ಮ ಬುದ್ಧಿಗೆ ಸವಾಲು ನೀಡುವ ಆನಂದದಾಯಕ ಚಟುವಟಿಕೆ.

ಸಾಮಗ್ರಿಗಳು : ಮೇಜು, ಚಿತ್ರ ಫಲಕ (Drawing Board), ಬಿಳಿಹಾಳೆ, ಅಳತೆ ಪಟ್ಟಿ, ಸೀಸದ ಕಡ್ಡಿ, ಎರಡು ಗುಂಡು ಸೂಜಿ, ದಿಕ್ಸೂಚಿ

ವಿಧಾನ : 1) ಕ್ಷೇತ್ರ ವೀಕ್ಷಣೆ : ನಕ್ಷೆ ಮಾಡಬೇಕಾದ ಕ್ಷೇತ್ರವನ್ನು ವೀಕ್ಷಿಸಿ. ಕ್ಷೇತ್ರದ ಗರಿಷ್ಠ ಅಂತರ ಗೊತ್ತು ಮಾಡಿಕೊಂಡು ಹಾಳೆಗೆ ಹೊಂದುವಂತೆ ಮಾಪಕ (Scale) ರಚಿಸಿ. (ಹಾಳೆಯ ಸುತ್ತಲೂ ಒಂದು ಅಂಗುಲ ಅಂಚು ಬಿಡಿ) ಕ್ಷೇತ್ರ ವಿಸ್ತಾರಕ್ಕೆ ತಕ್ಕಂತೆ ಮಾಪಕ ರಚಿಸಿ ಉದಾ: 1ಸೆಂ.ಮೀ : 50ಮೀ/100ಮೀ ಕ್ಷೇತ್ರದ ಮಧ್ಯೆ ಎಲ್ಲಾ ವಸ್ತುಗಳು ಕಾಣುವಂತೆ ಸ್ಕೌಟ್ ದಂಡದಿಂದ ನೆಲದ ಮೇಲೆ ಉದ್ದವಾದ ತಳರೇಖೆ ಎಳೆಯಿರಿ. ಇದರ ಎರಡು ಬಿಂದುಗಳನ್ನು ಗುರುತಿಸಿ.

2) ನಕ್ಷಾ ಹಾಳೆಯ ಸಿದ್ಧತೆ: ಚಿತ್ರ ಫಲಕವನ್ನು Drawing Board ಮೇಜಿನ ಮೇಲೆ ಇಡಿ. ದಿಕ್ಸೂಚಿ ಸಹಾಯದಿಂದ ಉತ್ತರ ಗುರುತಿಸಿ. ಬಿಳಿ ಹಾಳೆ ಹರಡಿ, ಹಾಳೆಯನ್ನು ಭದ್ರಪಡಿಸಿ. ನಂತರ ಮಾಪಕಾನುಸಾರ ಹಾಳೆಯ ಮೇಲೆ ಕ್ಷೇತ್ರದ ಗರಿಷ್ಠ ಅಂತರಕ್ಕೆ ಪ್ರಮಾಣವನ್ನು ಪ್ರತಿನಿಧಿಸುವಂತೆ ತಳ ರೇಖೆಯನ್ನು ಎಳೆದು ಅಂತ್ಯ ಬಿಂದುಗಳನ್ನು AB ಎಂದು ಗುರುತಿಸಿ.

3) ಅಳತೆಪಟ್ಟಿ ಸಿದ್ಧತೆ : ಮರದ ಅಳತೆ ಪಟ್ಟಿ / ನೇರವಾದ ಕಡ್ಡಿ ತೆಗೆದುಕೊಂಡು ಕೊನೆಯಲ್ಲಿ ಗುಂಡು ಸೂಜಿ ಹಾಯುವಷ್ಟು ಎರಡು ರಂಧ್ರ ಮಾಡಿ ಎರಡು ಗುಂಡು ಸೂಜಿಯನ್ನು P1, P2, ಎಂದು ಗುರುತಿಸಿಕೊಳ್ಳಿ.



4) A ಬಿಂದುವಿನಿಂದ ವೀಕ್ಷಣೆ : ಮೇಜನ್ನು A ಬಿಂದುವಿಗೆ ಸರಿಸಿ ಹಾಳೆಯ ಮೇಲಿನ A ಬಿಂದುವನ್ನು ನೆಲದ ಮೇಲಿನ ಬಿಂದುವಿನ ನೇರಕ್ಕೆ ಹೊಂದಿಸಿ (Plumb line ಉಪಯೋಗಿಸಿ) A ಬಿಂದುವಿನಿಂದ ನಕ್ಷೆಯಲ್ಲಿ ಗುರುತಿಸಬೇಕಾದ ಎಲ್ಲಾ ವಸ್ತುಗಳನ್ನು ಒಂದಾದ ಮೇಲೆ ಒಂದರಂತೆ ವೀಕ್ಷಿಸಿ. A ಬಿಂದುವಿನ ಮೇಲೆ ಅಳತೆ ಪಟ್ಟಿ ಇಟ್ಟು P1 ವಸ್ತುವನ್ನು ವೀಕ್ಷಿಸಿ, ಹಾಳೆಯ ಮೇಲೆ ಗುರುತಿಸಿ A ಮೂಲಕ P2 ವಸ್ತುವನ್ನು ವೀಕ್ಷಿಸಿ, ಗುರುತಿಸಿ ವಸ್ತು ಒಂದೇ ನೇರದಲ್ಲಿ ಬಂದಾಗ P2 ವನ್ನು ಹಾಳೆಯ ಮೇಲೆ ಗುರುತಿಸಿ ಎಲ್ಲಾ ವಸ್ತುಗಳ ಸ್ಥಾನ ಗುರುತಿಸಿದ ಮೇಲೆ B ಬಿಂದುವಿಗೆ ಮೇಜನ್ನು ಸಾಗಿಸಿ.

5) B ಬಿಂದುವಿನಿಂದ ವೀಕ್ಷಣೆ : B ಬಿಂದುವಿನಿಂದ ಎಲ್ಲಾ ವಸ್ತುಗಳನ್ನು A ಬಿಂದುವಿನಿಂದ ವೀಕ್ಷಿಸಿದಂತೆ ವೀಕ್ಷಿಸಿ. B ಬಿಂದುವಿನಿಂದ ವಸ್ತುಗಳ ಬಿಂದುಗಳನ್ನು ಹಾಳೆಯ ಮೇಲೆ ಗುರುತಿಸಿಕೊಳ್ಳಿ.

ಚಿತ್ರ ತ್ರಿಕೋನ ವಿಧಾನದ ನಕ್ಷೆ



AB : ತಳರೇಖೆ, 01, ರಿಂದ 08 ರ ವರೆಗೆ = ವಸ್ತುಗಳ ಸ್ಥಾನ (ತ್ರಿಕೋನದ ಶಿರಬಿಂದು)

6) ವಸ್ತುವಿನ ಸ್ಥಾನ : ಚಿತ್ರವನ್ನು ನೋಡಿ A ಬಿಂದುವಿನಿಂದ ಎಲ್ಲಾ ಬಿಂದುಗಳಿಗೆ ಗೆರೆ ಎಳೆಯಿರಿ. B ಬಿಂದುವಿನಿಂದ ಎಲ್ಲಾ ಬಿಂದುಗಳಿಗೆ ಗೆರೆ ಎಳೆಯಿರಿ. ಒಂದೊಂದು ವಸ್ತುವಿಗೆ ಒಂದೊಂದು ತ್ರಿಕೋನ ರಚನೆಯಾಗುತ್ತದೆ. ತ್ರಿಕೋನದ ಶಿರ ಬಿಂದುವೇ ವಸ್ತು ಸ್ಥಾನ. ಈ ಸ್ಥಾನದ ಮೇಲೆ ಆಯಾ ವಸ್ತುವನ್ನು ಪ್ರತಿನಿಧಿಸುವ ಸಾಂಪ್ರದಾಯಿಕ ಚಿಹ್ನೆಯನ್ನು ಚಿತ್ರಿಸಿ. ಗೆರೆಗಳನ್ನು ಅಳಿಸಿ.

7) ಕ್ಷೇತ್ರದ ಆಕೃತಿ ಮತ್ತು ಕ್ಷೇತ್ರ ಫಲ : ಎಲ್ಲಾ ಬಾಹ್ಯ ಬಿಂದುಗಳನ್ನು ಸರಳ ರೇಖೆಯಿಂದ ಸೇರಿಸಿ ಕ್ಷೇತ್ರದ ಆಕಾರ ಬರುತ್ತದೆ. ಅವಶ್ಯವಿದ್ದರೆ ಗಣಿತದ ಆಧಾರದ ಮೇಲೆ ಕ್ಷೇತ್ರ ಫಲ ಕಂಡು ಹಿಡಿಯಿರಿ.

8) ನಕ್ಷೆಯ ಅಂತಿಮ ಸಿದ್ಧತೆ : ನಕ್ಷಾ ವಿವರದಲ್ಲಿ ಹೇಳಿದಂತೆ ಕ್ಷೇತ್ರದ ಹೆಸರು, ಮಾಡಿದ ಪಟಾಲಂನ / ಗೈಡ್‌ಗಳ ಹೆಸರು, ದಿನಾಂಕ, ಮಾಪಕ, ಸಾಂಪ್ರದಾಯಿಕ ಚಿಹ್ನೆಗಳ ವರ್ಣನೆ ಬರೆಯಿರಿ. ನಿಮ್ಮ ಕ್ಷೇತ್ರ ನಕ್ಷೆ ತಯ್ಯಾರ್

ಸಾದ ಮೇಜು ವಿಧಾನ (Plain Table Method) : ಇದು ಸರ್ವೇಕ್ಷಣಾ ವಿಧಾನ ಇದರಲ್ಲೂ ತ್ರಿಕೋನ ರಚಿಸುವುದರ ಮೂಲಕ ವಸ್ತುಸ್ಥಾನಗಳನ್ನು ಗುರುತಿಸಿ ನಕ್ಷೆ ರಚಿಸಲಾಗುವುದು. ಆದರೆ ಇದನ್ನು ರಚಿಸಲು ಉಪಕರಣಗಳು ಬೇಕು.

1) ಸಮಪಟಲ (Plain Table)
2) ದರ್ಶ ರೇಖಕ (Adilade)
3) ಸರಪಣಿ ಮತ್ತು ಅಳತೆ ಪಟ್ಟಿ (Chain And Tape)

4) ದೋಣಿ ದಿಕ್ಸೂಚಿ (Trough Compass)

5) ರಸಮಟ್ಟ (Spirit level)[1]

6) ಲಕ್ಷದೂರ ಶಲಾಕೆಗಳು ಮತ್ತು ಮರದ ಕೋಲುಗಳು (Ranging Rods & Wodden Rods)

7) ಸೀಸ ಗೋಲ (Plumb bob)

8) ಫೀಲ್ಡ್ ಗ್ಲಾಸ್ (Field Glass)

9) ಬರೆಯುವ ಸಲಕರಣೆಗಳು

ಮಾರ್ಗಹಾಯಿ ವಿಧಾನ : ಈ ವಿಧಾನದಿಂದ ಮಾರ್ಗ ನಕ್ಷೆಯನ್ನು ಮಾರ್ಗ ಕ್ರಮಿಸುತ್ತಲೇ ಸರಳವಾಗಿ, ನಿಖರವಾಗಿ ತಯಾರಿಸಬಹುದು. ಚಿತ್ರ 1 ರಲ್ಲಿ ತೋರಿಸಿದಂತೆ ದಳದ/ಪಟಾಲಂನ, ನಡಿಗೆಯ/ಸೈಕಲ್ಲಿನ ಹೊರಸಂಚಾರ, ಸಾಹಸಯಾನ ಮುಂತಾದ ಸಂದರ್ಭಗಳಲ್ಲಿ ಈ ನಕ್ಷೆ ತಯಾರಿಸಬಹುದು.

ಮಾರ್ಗಹಾಯಿ ನಕ್ಷೆಯನ್ನು ಅನುಸರಿಸಿ ಮಾರ್ಗವನ್ನು ತಯಾರಿಸಿ. ಅನುಸರಿಸಬಹುದು.

ವಿಧಾನ :

- ಪ್ರಾರಂಭದಲ್ಲೂ ಹಾಗೂ ಪ್ರತಿ ತಿರುವಿನಲ್ಲೂ ದಿಕ್ಸೂಚಿಯ ಸಹಾಯದಿಂದ ದಿಕ್ಕೋನ ಅಳೆದು ಕೊಂಡು ಹಾಳೆಯ ಮೇಲೆ ಎಳೆದಿರುವ ಲಂಬ ಗೆರೆಯ ಎಡಭಾಗದಲ್ಲಿ ಗುರುತು ಹಾಕಿಕೊಳ್ಳಿ
- ಎರಡು ತಿರುವಿನ ಮಧ್ಯ ಕ್ರಮಿಸುವ ಹೆಜ್ಜೆಯನ್ನು ಎಣಿಸಿ ಎರಡು ಬಿಂದುಗಳ ಮಧ್ಯೆ ಎಡಭಾಗದಲ್ಲಿ ಗುರುತು ಹಾಕಿಕೊಳ್ಳಿ.
- ದಾರಿಯಲ್ಲಿ ಕಂಡು ಬರುವ ಸನ್ನಿವೇಶ ವಸ್ತುಗಳು ಮತ್ತು ವಿಶೇಷತೆಗಳನ್ನು ಸಂಕ್ಷಿಪ್ತವಾಗಿ ಬರೆದುಕೊಳ್ಳಿ

ಚಿತ್ರ :1

ಮಾರ್ಗಮಾಹಿತಿ ಪಟ್ಟಿ	
ದೂರ	ದಿಕ್ಕೋನ
ಎ	
900	
ಋ	292.5°
1000	
ಊ	360°
1600	
ಉ	315°
800	
ಈ	67.5°
1400	
ಇ	365°
1000	
ಆ	45°
1200	
ಅ	292.5°

- ಗುರಿತಲುಪಿದ ನಂತರ ಮಾರ್ಗ ಮಾಹಿತಿ ಪಟ್ಟಿ ಇಟ್ಟುಕೊಂಡು ಮಾಹಿತಿ ವಿವರಗಳ ಅಂಕಣವನ್ನು (ಟೇಬಲ್‌ನ್ನು) ತಯಾರಿಸಿಕೊಳ್ಳಿ.
- ನಂತರ ಬಿಳಿಹಾಳೆಯನ್ನು ತೆಗೆದುಕೊಂಡು ದಿಕ್ಸೂಚಿಯ ಸಹಾಯದಿಂದ ಉತ್ತರ ದಿಕ್ಕನ್ನು ಗುರುತಿಸಿಕೊಂಡು ದಿಕ್ಕೋನವನ್ನು ನಮೂದಿಸುತ್ತಾ ಮಾಪಕಾನುಸಾರ ಗೆರೆ ಎಳೆಯುತ್ತಾ ನಕ್ಷೆ ತಯಾರಿಸಿ ಸಾಂಪ್ರದಾಯಿಕ ಚಿಹ್ನೆಗಳಿಂದ ನೀವು ಸಂಗ್ರಹಿಸಿದ ವಿಶೇಷಗಳನ್ನು ಚಿತ್ರಿಸಿ,

ಈ ನಕ್ಷೆಯ ವಿವರಗಳನ್ನು ಬರೆಯಿರಿ. ಎಲ್ಲಿಂದ ಎಲ್ಲಿಗೆ? ಒಟ್ಟು ಕ್ರಮಿಸಿದ ದೂರ, ಮಾಪಕ, ನಿಮ್ಮ / ಪಟಾಲಂನ ಹೆಸರು, ದಿನಾಂಕ, ಚಿಹ್ನೆಗಳ ವಿವರಣೆಗಳನ್ನು ಬರೆಯಿರಿ. ಇದರಿಂದ ನಿಮ್ಮ ಮಾರ್ಗ ನಕ್ಷೆ ಪೂರ್ಣಗೊಳ್ಳುತ್ತದೆ ಹಾಗೂ ಅನುಸರಿಸಲೂ ಯೋಗ್ಯವಾಗಿರುತ್ತದೆ.

6. ಅಗ್ರಗಾಮಿತ್ವ – Pioneering

1. ಸಲಕರಣೆಗಳನ್ನು ಉಪಯೋಗಿಸುವ ಕ್ರಮ ಮತ್ತು ಸುರಕ್ಷತಾ ನಿಯಮ:

(ಅ) ಕತ್ತಿ, ಚಾಕು ಮತ್ತು ಮಚ್ಚುಗಳ ಸುರಕ್ಷತೆ:

- ಇವುಗಳ ಹಿಡಿಕೆ ಭದ್ರವಾಗಿರಬೇಕು.
- ಹಿಡಿಕೆಯನ್ನು ಭದ್ರವಾಗಿ ಹಿಡಿಯಬೇಕು
- ಇವುಗಳ ಅಲಗನ್ನು (blade) ಮೊನಚಾಗಿಡಬೇಕು, ಶುಚಿಯಾಗಿಡಬೇಕು.
- ಲೋಹಭಾಗವನ್ನು ಯಾವಾಗಲೂ ಒಣಗಿಸಿಡ ಬೇಕು. ತೈಲ ಸವರಿಡಬೇಕು. ತೇವವಾದರೆ ತುಕ್ಕು ಹಿಡಿಯುತ್ತದೆ.



- ಉಪಯೋಗಿಸದೇ ಇದ್ದಾಗ ಕವಚದಲ್ಲಿ ಹಾಕಿಡಬೇಕು.
- ಕೊಡುವಾಗ ಹಿಡಿಕೆಯನ್ನು ಮುಂದೆ ಮಾಡಿ ಕೊಡಬೇಕು.
- ಮಚ್ಚಾದರೆ ಮರದತುಂಡಿಗೆ ಕಚ್ಚಿಸಿ ಇಡಬೇಕು.
- ಅನಾವಶ್ಯಕವಾಗಿ ಇವುಗಳೊಂದಿಗೆ ಆಡಬಾರದು.
- ಇವುಗಳ ಅಲಗನ್ನು ಕಾಯಿಸಬಾರದು.

- ಚಾಕುವಿನ ತುದಿಯನ್ನು ಸ್ಕ್ರೂಡ್ರೈವರ್‌ನಂತೆ ಬಳಸಬಾರದು.
- ಎಲ್ಲೆಂದರಲ್ಲಿ ಇಡಬಾರದು. ಗೊತ್ತು ಪಡಿಸಿದ ಸ್ಥಳದಲ್ಲೇ ಇಡಬೇಕು.

ಕೈಗೊಡಲಿ :

(i) ಕೈಗೊಡಲಿ ಕನಿಷ್ಟ 150 ಗ್ರಾಂ ತೂಕವಿರಬೇಕು. ಹಿಡಿಕೆ 50 ಸೆಂ.ಮೀ ಇರಬೇಕು.

ಬಳಸುವಾಗ ಗಮನಿಸಬೇಕಾದ ಅಂಶ:

- ಅಲಗನ್ನು ಹರಿತವಾಗಿಡಬೇಕು.
- ಕತ್ತರಿಸುವಾಗ ಅದರ ಮೇಲೆ ಸುತ್ತಿಗೆಯಿಂದ ಹೊಡೆಯಬಾರದು.
- ದೇಹದ ಮುಂದಕ್ಕೆ ಸಾಧ್ಯವಾದಷ್ಟು ದೂರಕ್ಕೆ ಕೊಡಲಿಯಿಂದ ಹೊಡೆಯಿರಿ.
- ಕಡಿಯುತ್ತಿರುವಾಗ ಎದುರಿಗೆ ಅಥವಾ ಹತ್ತಿರದಲ್ಲಿ ಯಾರೂ ನಿಲ್ಲದಂತೆ ನೋಡಿಕೊಳ್ಳಬೇಕು.

(ii) ಎರಡು ಸಾಧಾರಣವಾದ ಪಟಾಲಂದ ಯೋಜನೆ ಸಿದ್ಧಗೊಳಿಸಿ, ಅದರ ಉಪಯೋಗವನ್ನು ಪ್ರದರ್ಶಿಸಬೇಕು.

- ಕಪಿ ಸೇತು (Monkey Bridge)
- ಮರದಿಂದ ಮರಕ್ಕೆ ಸೇತುವೆ (Bush Bridge)
- ತೂಗು ಸೇತುವೆ (Suspension bridge)
- ತಾತ್ಕಾಲಿಕ ಗುಡಾರ (Improvised shelter)
- ಏಣಿ (Ladder)
- ಉಯ್ಯಾಲೆ (Swing)
- ಚಲಿಸುವ ಧ್ವಜ ಸ್ತಂಭ (Portable Flag staff)
- ವಿವಿಧೋದ್ದೇಶ ಪೀಠೋಪಕರಣಗಳು (Multipurpose Gadgets)

ಇವುಗಳಲ್ಲಿ ಅಥವಾ ಇವುಗಳಲ್ಲದೆ ಮತ್ತಾವುದಾದರೂ ಸಾಧನಗಳು ತಿಳಿದಿದ್ದರೆ ಎರಡನ್ನು ಮಾತ್ರ ಸಿದ್ಧ ಮಾಡಿ. ಈ ಚಿತ್ರಗಳು ನಿಮಗೆ ವಿನ್ಯಾಸ ರಚಿಸಲು ಸಹಾಯ ಮಾಡುತ್ತವೆ. ಇವುಗಳನ್ನು ರಚಿಸಲು ಉಪಯೋಗಿಸಿದ ಕಂಭ ಮತ್ತು ದಂಡಗಳ ಅಳತೆ, ಸಂಖ್ಯೆ, ಕಟ್ಟಿದ ಗಂಟು, ಕಟ್ಟುಗಳ ಹೆಸರು ಮತ್ತು ಅವುಗಳ ಸಂಖ್ಯೆಗಳನ್ನು ಸೂಚಿಸುವ ಚಿತ್ರಪಟ ತಯಾರಿಸಿ.







ಈ ರಚನೆಗಳನ್ನು ಬಳಸಿ ಪರೀಕ್ಷಕರಿಗೆ ತೋರಿಸಿ. ಈ ವಿನ್ಯಾಸಗಳನ್ನು ಕಟ್ಟುವಾಗ ಶ್ರಮ ಎನ್ನಿಸುತ್ತದೆ ಆದರೆ ಇವುಗಳನ್ನು ಬಳಸುವಾಗ ಆನಂದವಾಗುತ್ತದೆ.

7. ರಾತ್ರಿ ತಂಗುವ ಶಿಬಿರವಾಸ (Over Night Camp)

ಒಂದು ರಾತ್ರಿ ಶಿಬಿರದಲ್ಲಿ ತಂಗುವ ದಳದ ಕಾರ್ಯಕ್ರಮದಲ್ಲಿ ಭಾಗವಹಿಸಿ. ಈ ಕಾರ್ಯಕ್ರಮವನ್ನು ಗೈಡ್ ನಾಯಕಿಯೊಡನೆ ಸಮಾಲೋಚಿಸಿ, ಗೌರವ ನ್ಯಾಯಸಭೆಯಲ್ಲಿ ಚರ್ಚಿಸಿ, ಅನುಮೋದನೆ ಪಡೆದು ನಂತರ ವಿವರವಾದ ಯೋಜನೆಯನ್ನು ಸಿದ್ಧಗೊಳಿಸಿ ಕಾರ್ಯಗತಗೊಳಿಸಿ.

ಪೂರ್ವ ಸಿದ್ಧತೆ:

- v ಸ್ಥಳ, ವೇಳೆ, ದಿನಾಂಕ, ಪ್ರಯಾಣದ ವಿಧಾನವನ್ನು ಗೊತ್ತು ಪಡಿಸುವುದು.
- v ಪೋಷಕರಿಂದ ಅನುಮತಿ ಪತ್ರ ಪಡೆಯುವುದು.
- v ಶಿಬಿರದ ಉದ್ದೇಶ, ಕಾರ್ಯಕ್ರಮ, ತಿನಿಸುಗಳ ಪಟ್ಟಿ ತಯಾರಿಸುವುದು.
- v ಶಿಬಿರ ಸಲಕರಣೆ, ಊಟೋಪಹಾರ ಸಾಮಾನುಗಳ, ಪಾತ್ರೆಗಳ, ಪಟಾಲಂನ ಸಾಮಾನುಗಳ, ವೈಯಕ್ತಿಕ ಸಾಮಾನುಗಳ ಪಟ್ಟಿ ಸಿದ್ಧಪಡಿಸಿಕೊಳ್ಳುವುದು.
- v ಮುಖ್ಯ ಶಿಕ್ಷಕರ, ಪೋಷಕರ ಮತ್ತು ಸ್ಥಳದ ಮಾಲೀಕರ ಅನುಮತಿ ಪಡೆಯುವುದು.
- v ಅತಿಥಿಗಳ, ಸಂಪನ್ಮೂಲ ವ್ಯಕ್ತಿಗಳ ಪಟ್ಟಿ ಸಿದ್ಧಗೊಳಿಸಿಕೊಳ್ಳುವುದು. ಅವರಿಗೆ ವಿಷಯ ಕೊಟ್ಟು ಆಹ್ವಾನಪತ್ರ ಕಳುಹಿಸಿ ಅವರು ಬರುವ ಬಗ್ಗೆ ಖಚಿತಪಡಿಸಿಕೊಳ್ಳಿ.

ಸ್ಥಳ ತಲುಪಿದನಂತರ:

- v ತಂಗಳು, ಅಡಿಗೆ, ಊಟ, ಶೌಚ, ಸ್ನಾನಗಳ ಸ್ಥಳ ಗೊತ್ತು ಪಡಿಸಿಕೊಂಡು ಅವಶ್ಯವಿದ್ದರೆ ಸ್ವಚ್ಛ ಮಾಡಿಕೊಳ್ಳುವುದು. ಬಿಡಾರ ಹೂಡುವುದು.
- v ಶಿಬಿರವಾಸದ ಸಮಯದಲ್ಲಿ ಸುರಕ್ಷತಾವ್ಯವಸ್ಥೆ ಬಗ್ಗೆ ಗಮನವಿರಲಿ. ಪ್ರಥಮ ಚಿಕಿತ್ಸೆ, ಬೆಂಕಿ ಬಗ್ಗೆ ಮುಂಜಾಗ್ರತೆ, ರಾತ್ರಿಗಸ್ತು, ಶಿಬಿರಕ್ಕೆ ಹಗಲಿನಲ್ಲಿ ಕಾವಲು ವ್ಯವಸ್ಥೆ ಇತ್ಯಾದಿಗಳನ್ನು ಸ್ಥಳಕ್ಕೆ ತಕ್ಕಂತೆ ಮಾಡಿಕೊಳ್ಳಬೇಕು.
- v ಪ್ರತಿದಿನ ಬೆಳಗ್ಗೆ ಧ್ವಜಾರೋಹಣ ಸಂಜೆ ಧ್ವಜಾವರೋಹಣ ಮಾಡಬೇಕು.
- v ಕಾರ್ಯಕ್ರಮ ನಡೆಸಿ ವರದಿ ಸಿದ್ಧಗೊಳಿಸಬೇಕು.
- v ಅಂತಿಮವಾಗಿ ಸಭೆಸೇರಿ, ಕಾರ್ಯಕ್ರಮ ಹೇಗೆ ನಡೆಯಿತೆಂದು ವಿಚಾರ ವಿನಿಮಯ ಮಾಡಿಕೊಳ್ಳುವುದು.

ದಳನಾಯಕಿ, ದಳದ ಸಹನಾಯಕಿ, ಪಟಾಲಂ ನಾಯಕಿಯರು ಈ ಶಿಬಿರದಲ್ಲಿ ಜವಾಬ್ದಾರಿಯಿಂದ ಕಾರ್ಯಕ್ರಮ ನಡೆಸುವರು. ನಾಯಕಿ ಇವರಿಗೆ ಬೆಂಗಾವಲಾಗಿದ್ದು ಮಾರ್ಗದರ್ಶನ ನೀಡುವರು.

ಇಂತಹ ಶಿಬಿರಗಳು ಜೀವನ ಕೌಶಲಗಳನ್ನು (Life Skills) ಚೆನ್ನಾಗಿ ಬೆಳೆಸುತ್ತವೆ. ಧೈರ್ಯ, ಸಾಹಸ, ಸವಾಲೆದುರಿಸುವ ಸಾಮರ್ಥ್ಯಗಳನ್ನು ಬೆಳೆಸುತ್ತದೆ

ಹೊಂದಾಣಿಕೆಯನ್ನು ನೈಜವಾಗಿ ಬೆಳೆಸುತ್ತದೆ. ಸ್ವತಂತ್ರವಾಗಿ ಯೋಚಿಸುವ, ಚರ್ಚಿಸುವ, ನಿರ್ಧಾರ ಕೈಗೊಳ್ಳುವ, ನಾಯಕತ್ವದ ಸಾಮರ್ಥ್ಯಗಳನ್ನು ಬೆಳೆಸುತ್ತದೆ.

8. ಹೊರಸಂಚಾರ – (Hike)

10 ಕಿ.ಮಿ ನಡಿಗೆಯಲ್ಲಿ ಅಥವಾ ಸೈಕಲ್ಲಿನಲ್ಲಿ ಒಬ್ಬ ಗೈಡ್ ಸೋದರಿಯೊಡನೆ ಹೊರಸಂಚಾರ ಮಾಡಿ 10 ದಿನಗಳಲ್ಲಿ ಗೈಡ್ ನಾಯಕಿಯವರಿಗೆ ವರದಿ ಸಲ್ಲಿಸುವುದು.

ಹಿರಿಯ ನಾಯಕಿ ಅನುಮತಿ ಪಡೆದು, ಗೌರವನ್ಯಾಯುಸಭೆಯ ಅನುಮೋದನೆ ಪಡೆದು ಈ ಹೊರಸಂಚಾರದ ಯೋಜನೆ ಸಿದ್ಧಗೊಳಿಸಿ. ಪೋಷಕರ ಅನುಮತಿ ಪಡೆಯುವುದನ್ನು ಮರೆಯಬೇಡಿ.

ನಡಿಗೆ ಅಥವಾ ಸೈಕಲ್ಲಿನಲ್ಲಿ ಹೋಗುವಾಗ ಅತ್ಯಗತ್ಯವಾದ ಸಾಮಾನುಗಳನ್ನು ಮಾತ್ರ ತೆಗೆದುಕೊಳ್ಳಿ. ಸಾಮಾನಿನ ಹೊರೆ ಹಗುರವಾಗಿರಲಿ. ಜೊತೆಗೆ ಪ್ರಥಮಚಿಕಿತ್ಸೆ ಪೆಟ್ಟಿಗೆ, ದಂಡ, ಕೈದೀಪ (torch) ಗಳನ್ನು ಮರೆಯಬೇಡಿ. ಸಮವಸ್ತ್ರವನ್ನು ಅಚ್ಚುಕಟ್ಟಾಗಿ ಧರಿಸಿ ಹೊರಡಿ.

ದಾರಿಯಲ್ಲಿ ಹೋಗುವಾಗ ಸುತ್ತಮುತ್ತಾ ನೋಡುತ್ತಾ ಹೋಗಿ. ಸೈಕಲ್ಲಿನಲ್ಲಿ ಹೋಗುವವರು ಸೈಕಲನ್ನು ಸರಿಯಾದ ಸ್ಥಿತಿಯಲ್ಲಿದೆಯೇ ಎಂದು ಖಾತ್ರಿ ಮಾಡಿಕೊಳ್ಳಿ. ಹವಾ ಮತ್ತು ಪಂಕ್ಚರ್‌ಗಳನ್ನು ಪರೀಕ್ಷಿಸಿಕೊಂಡು ಹೊರಡಿ. ಒಂದು ವೇಳೆ ಸೈಕಲ್‌ನಲ್ಲಿ ತೊಂದರೆಯಾದರೆ ಪಂಕ್ಚರ್‌ಆದರೆ ದುರಸ್ತಿ ಮಾಡಿಕೊಳ್ಳುವುದನ್ನು ತಿಳಿದಿರಬೇಕು. ಜೊತೆಗೆ ದುರಸ್ತಿ ಸಲಕರಣೆಗಳನ್ನು ತೆಗೆದುಕೊಂಡು ಹೋಗಬೇಕು. ಪ್ರಕೃತಿಯ ದೃಶ್ಯಾವಳಿಗಳನ್ನು ಆನಂದಿಸಿ.

ಸ್ಥಳ ತಲುಪಿದ ನಂತರ ಇಬ್ಬರೇ ಇದ್ದರೂ ಧ್ವಜವನ್ನು ಹಾರಿಸಿ ಕಾರ್ಯಕ್ರಮನ್ನು, ಊಟೋಪಹಾರಗಳನ್ನು ಮಾಡಿಕೊಂಡು, ಸ್ಥಳವನ್ನು ಸ್ವಚ್ಛವಾಗಿಟ್ಟು, ಧ್ವಜ ಇಳಿಸಿ ಹಿಂದಿರುಗಬೇಕು. ಕತ್ತಲಾಗುವ ಮುನ್ನ ಮನೆ ಸೇರಿಕೊಳ್ಳಬೇಕು. ಹೊರಸಂಚಾರದ ವರದಿಯನ್ನು ಸಿದ್ಧಗೊಳಿಸಬೇಕು.

ಈ ಕಾರ್ಯಕ್ರಮದಿಂದ ನಾಯಕತ್ವ, ಪರಿಸರ ಸ್ನೇಹ, ಸಹಕಾರ, ಕಷ್ಟಗಳನ್ನು ಎದುರಿಸುವ ಸಾಮರ್ಥ್ಯ, ಸಮಸ್ಯೆ ಪರಿಹಾರ ಮಾಡಿಕೊಳ್ಳುವ ಚತುರತೆ, ಸ್ವತಂತ್ರವಾಗಿ ಸಂಚರಿಸುವ ಸ್ವಾವಲಂಬನೆಯೂ ಅಭಿವೃದ್ಧಿಗೊಳ್ಳುತ್ತದೆ. ಕಾಲ್ನಡಿಗೆಯ ಈ ಸಂಚಾರ ಸಾಮಾನ್ಯವಾಗಿ ಕಾಡಿನಲ್ಲಿ, ಪ್ರಕೃತಿ ಪ್ರಧಾನ ಗ್ರಾಮೀಣ ಪ್ರದೇಶಗಳಲ್ಲಿ ಏರ್ಪಡಿಸುವುದರಿಂದ ಕಣಿವೆ, ಬೆಟ್ಟ, ಗಿಡಮರಗಳನ್ನು, ಪಕ್ಷಿಗಳನ್ನು ಮತ್ತು ನದಿ ಕೊಳಗಳನ್ನು ನೋಡುತ್ತಾ ಆನಂದಿಸುತ್ತಾ ಅವುಗಳ ಬಗ್ಗೆ ತಿಳಿಯುತ್ತಾ ಸಾಗುತ್ತಾರೆ.

ಅಲ್ಲಲ್ಲಿ ಸಿಗುವ ಜನರ ಆಸ್ತಿಪಾಸ್ತಿಗಳನ್ನು ಕಾಪಾಡುತ್ತಾ ಸಾಗುತ್ತಾರೆ. ಇದರಿಂದ ಸಾಹಸ ಪ್ರವೃತ್ತಿ, ಪ್ರಕೃತಿ ಪ್ರೇಮ, ಆತ್ಮವಿಶ್ವಾಸ ವೃದ್ಧಿಸುತ್ತದೆ.

9. ಅಡಿಗೆ (Cooking)

ಅಡಿಗೆ ಮಾಡುವುದು ಜೀವನಕ್ಕೆ ಅವಶ್ಯಕವಾದ ಕಲೆ ಮತ್ತು ಕೌಶಲ. ಸಮತೋಲನ, ಪೌಷ್ಟಿಕ, ರುಚಿಕರ ಮತ್ತು ಶುಚಿಯಾದ ಊಟವು ಶಕ್ತಿಯನ್ನು, ಆರೋಗ್ಯವನ್ನು, ಚುರುಕುತನವನ್ನು ಕೊಡುತ್ತದೆ. ಒಲೆ ಮತ್ತು ಪಾತ್ರೆಗಳನ್ನು ಬಳಸಿ ಅಡಿಗೆ ಮಾಡುವುದು ಸಾಮಾನ್ಯವಿಧಾನ. ಇವೆರಡೂ ಇಲ್ಲದೇ ಅಡಿಗೆ ಮಾಡಬಹುದೇ? ಯೋಚಿಸಿ!

ಸೈನಿಕರು, ಸಾಹಸಿಗರು, ಕೆಲವು ಸಂದರ್ಭಗಳಲ್ಲಿ ಬೆಂಕಿ ಇಲ್ಲದೆ, ಪಾತ್ರೆ ಇಲ್ಲದೆ ತಿನಿಸುಗಳನ್ನು ಮಾಡಿ ತಿನ್ನುತ್ತಾರೆ. ನೀವು ಶಿಬಿರವಾಸಕ್ಕೆ ಅಥವಾ ಹೊರಸಂಚಾರಕ್ಕೆ ಹೋದಾಗ ಹೀಗೆ ಮಾಡಿ ಆನಂದಿಸಿ.

ಬಯಲಿನಲ್ಲಿ ಇಬ್ಬರಿಗಾಗುವಷ್ಟು ಅಡಿಗೆ ಮಾಡಿ.

ಬೆಂಕಿ ಬಳಸಿ ಪಾತ್ರೆ ಇಲ್ಲದೆ ಅಡಿಗೆ : ಕೆಂಡವನ್ನು ಮಾಡಿಕೊಂಡು, ಉದ್ದನೆಯ, ನೇರ, ದಪ್ಪ ಹಸಿರು ಕಡ್ಡಿಯನ್ನು ತೆಗೆದುಕೊಂಡು ಶುಚಿಮಾಡಿ ಅದರ ಮೇಲೆ ಕಲೆಸಿದ ಗೋಧಿಹಿಟ್ಟು ಅಥವಾ ಮೈದಾಹಿಟ್ಟಿನ ಪಟ್ಟಿಯನ್ನು ಮಾಡಿ ಸುತ್ತಿ ಬೆಂಕಿಯಲ್ಲಿ ಬೇಯಿಸಿ. ಇದನ್ನು ಚಪಾತಿ/ರೊಟ್ಟಿ/ಬ್ರೆಡ್‌ಗೆ ಬದಲಾಗಿ ತಿನ್ನಿ, ಹಸಿರು ಕಡ್ಡಿಗೆ ಮಾಂಸ/ಆಲೂಗಡ್ಡೆ/ಗೆಣಸು/ಬದನೆಕಾಯಿ/ಮೀನುಗಳನ್ನು ಪೋಣಿಸಿ ಬೇಯಿಸಿ ರುಚಿಗೆ ಬೇಕಾದ ಉಪ್ಪು, ಮೆಣಸು, ಈರುಳ್ಳಿ, ಟೊಮೇಟೋ, ಇತ್ಯಾದಿಗಳನ್ನು ಬೆರೆಸಿಕೊಳ್ಳಿ. ಸುರುಳಿ ರೊಟ್ಟಿಯೊಡನೆ ತಿನ್ನಿ. ಕೆಮ್ಮಣ್ಣು ಸವರಿ ಅಲೂಗಡ್ಡೆ, ಮೊಟ್ಟೆ ಬೇಯಿಸಬಹುದು. ದಪ್ಪಕಾಗದದ ಬಟ್ಟಲುಮಾಡಿ, ಅದನ್ನ ಹಸಿರು ಕಡ್ಡಿಗೆ ಸಿಕ್ಕಿಸಿ, ನೀರುತುಂಬಿ, ಬೆಂಕಿಯ ಮೇಲೆ ಕುದಿಸಿ, ಚಹ/ಕಾಫಿ ಮಾಡಿಕೊಳ್ಳಿ. ಅಲ್ಯೂಮಿನಿಯಂ ತೆಳುತಗಡಿನ ಡಬ್ಬದಲ್ಲೂ ಅಡಿಗೆ ಮಾಡಬಹುದು. ಮೂಸಂಬಿ, ಕಿತ್ತಲೆ ಹಣ್ಣಿನ ಸಿಪ್ಪೆಯನ್ನು ಬಟ್ಟಲಿನಂತೆ ತೆಗೆದು ಅದರಲ್ಲಿ ಮೊಟ್ಟೆ ಒಡೆದು ಹಾಕಿ, ಬೇಯಿಸಿ, ಉಪ್ಪು, ಮೆಣಸು ಹಾಕಿ ತಿನ್ನಬಹುದು. ಹೀಗೆ ಮಾಡಲು ಪ್ರಯತ್ನಿಸಿ, ಆನಂದಿಸಿ, ಹೊಸ ರುಚಿಗಳನ್ನು ಕಂಡುಹಿಡಿಯಿರಿ.

ಬೆಂಕಿ ಮತ್ತು ಪಾತ್ರೆ ಇಲ್ಲದ ಅಡಿಗೆ:

ಹೀಗೆ ಮಾಡಲು ಸಾಧ್ಯವೆ? ಯೋಚಿಸಿ! ಇಂತಹ ತಿನಿಸುಮಾಡಿ ಆನಂದಿಸಿ.

v ಸಾಮಾನುಗಳನ್ನು ಸಾಧ್ಯವಾದಷ್ಟು ಪೊಟ್ಟಣಗಳಲ್ಲಿ ತಂದು ಅಚ್ಚುಕಟ್ಟಾಗಿ ಇಟ್ಟುಕೊಂಡು ಕೆಲಸಮಾಡಿ. ದ್ರವಪದಾರ್ಥಗಳನ್ನು ಬಿಗಿಯಾಗಿ ಮುಚ್ಚಳದ ಡಬ್ಬಿ/ಸೀಸೆಯಲ್ಲಿ/ಪ್ಲಾಸ್ಟಿಕ್ ಚೀಲದಲ್ಲಿ ಇಟ್ಟುಕೊಳ್ಳಿ.

- v ಪಟಾಲಂನಲ್ಲಿ ಎಲ್ಲರೂ ಕೆಲಸ ಹಂಚಿಕೊಳ್ಳಿ.
- v ಅಡಿಗೆಗೆ ಸಾಕಷ್ಟು ನೀರು ಸಂಗ್ರಹಿಸಿ.
- v ಆಯ್ಕೆ ಮಾಡಿರುವ ತಿನಿಸು ಮಾಡಲು ಸರಳವಾಗಿರಲಿ, ತಿನ್ನಲು ರುಚಿಕರವಾಗಿರಲಿ.

ಬೇಲ್‌ಪುರಿ, ಮೊಸರವಲಕ್ಕಿ (ಸಿಹಿ, ಕಾರ), ತೆಳು ಅವಲಕ್ಕಿ (ಸಿಹಿ, ಕಾರ) ರಾಗಿ, ಗೋಧಿ, ಅಕ್ಕಿ, ಹುರಿ ಹಿಟ್ಟು (ಸಿಹಿ, ಕಾರ), ಕೊಸುಂಬರಿ–ಮೊಳಕೆಕಾಳು, ನೆನೆಸಿದ ಬೇಳೆ ಜೊತೆಗೆ ಸೌತೆಕಾಯಿ, ಕ್ಯಾರೆಟ್, ಎಳೆ ಮುಸುಕಿನ ಜೋಳ, ಹಸಿಮೆಣಸಿನಕಾಯಿ, ಕೊತ್ತಂಬರಿಸೊಪ್ಪು, ಮಾವಿನಕಾಯಿ, ನಿಂಬೆಹಣ್ಣು ಬಳಸಬಹುದು. ಹಣ್ಣಿನ ರಸಾಯನ (fruit Salad) ಮತ್ತು ರಸಗಳನ್ನು ತಯಾರಿಸಬಹುದು. ಹಸಿ ಆಹಾರ ಪದಾರ್ಥಗಳನ್ನು ತಿನ್ನುವುದು ಆರೋಗ್ಯಕ್ಕೆ ಒಳ್ಳೆಯದು. ಇವುಗಳಿಂದ ರುಚಿಯಾದ ತಿನಿಸು ಮಾಡಿ ಉಣ ಬಡಿಸಿ. ಸೇವಿಸಿ ಆನಂದಿಸಿ.

ಪಾತ್ರೆಗೆ ಬದಲಾಗಿ ಪ್ಲಾಸ್ಟಿಕ್ ಹಾಳೆ, ಅಲ್ಯೂಮಿನಿಯಂ ತೆಳುತಗಡು, ಬಾಳೆಎಲೆ, ಮುತ್ತಗದೆಲೆ, ದೊನ್ನೆ, ಹಲಸಿನಕೊಟ್ಟೆ ಇತ್ಯಾದಿಗಳನ್ನು ಉಪಯೋಗಿಸಿ. ತಿನಿಸು ಮಾಡಲು ಬಳಸುವ ಹೊಸ ಹೊಸ ಸಾಧನ ಮತ್ತು ರುಚಿಗಳನ್ನು ಅನ್ವೇಷಿಸಿ. ನೀವು ಮಾಡಿದ ಈ ಚಟುವಟಿಕೆಯನ್ನು ದಿನಚರಿಯಲ್ಲಿ ಬರೆಯಿರಿ.

10. ಪಟಾಲಂನ ಅನ್ವೇಷಣಾಯಾನ : Patrol expedition

ಶಿಬಿರವಾಸ, ಹೊರಸಂಚಾರಗಳಂತೆ ಅನ್ವೇಷಣಾ ಸಾಹಸ ಯೋಜನೆಯನ್ನು ಸಿದ್ಧಪಡಿಸಿ. ಈ ಯಾನದ ಉದ್ದೇಶ ಪ್ರಕೃತಿಸಂಚಾರ ಮತ್ತು ಅಧ್ಯಯನದ ಜೊತೆಗೆ ಪ್ರಕೃತಿಯನ್ನು ಅನ್ವೇಷಿಸುವುದಾಗಿರುತ್ತದೆ.

ಯಾನದ ಸಮಯದಲ್ಲಿ ಸಸ್ಯಗಳ ಮತ್ತು ಮರಗಳ ಪರಿಚಯ ಮಾಡಿಕೊಳ್ಳುವುದು. ಪ್ರಾಣಿ ಪಕ್ಷಿಗಳ ಪರಿಚಯ ಮಾಡಿಕೊಳ್ಳುವುದು. ನದಿ, ಝರಿ, ಹಳ್ಳ, ಕೊಳ್ಳಗಳನ್ನು, ವೈವಿಧ್ಯಮಯವಾದ ಕಲ್ಲು, ಕಡ್ಡಿಗಳನ್ನು ಪತ್ತೆಮಾಡುವುದು. ತಿನ್ನಬಹುದಾದ ಹಣ್ಣು, ಕಾಯಿ, ಎಲೆ, ಗೆಡ್ಡೆ ಸಂಗ್ರಹಿಸುವುದು. ಹೀಗೆ ಮಾಡುವಾಗ ಗಿಡ ಮರಗಳನ್ನು ಹಾಳು ಮಾಡಬೇಡಿ. ಪಶುಪಕ್ಷಿಗಳ ವಿಶ್ರಾಂತಿಗೆ ಭಂಗ ತರಬೇಡಿ. ಅಲ್ಲಿನ ಹಿರಿಯರು ಮತ್ತು ತಜ್ಞರಿಂದ ಈ ಬಗ್ಗೆ ಹೆಚ್ಚು ವಿಷಯಗಳನ್ನು ತಿಳಿಯಿರಿ.

ಔಷಧಿಗಿಡಗಳು ಹಾಗೂ ಉಪಯೋಗಿಸುವ ಸಸ್ಯಗಳನ್ನು ಗುರುತಿಸಿ. ವಿಷಯುಕ್ತ ಸಸ್ಯಗಳ ಬಗ್ಗೆ ತಿಳಿದುಕೊಳ್ಳಿ, ಯಾನದ ಸಮಯದಲ್ಲಿ ಮುಳ್ಳು ಚುಚ್ಚುವುದು, ಗೀರುವುದು, ಕಾಡು ಪ್ರಾಣಿಗಳು ಇದಿರಾಗುವುದು, ಪರಚುವುದು ಇತ್ಯಾದಿ

ಸಮಸ್ಯೆಗಳನ್ನು ಎದುರಿಸುವುದನ್ನು ತಿಳಿದಿರಬೇಕು. ಇವುಗಳಿಗೆ ಪ್ರಥಮ ಚಿಕಿತ್ಸೆ ಮಾಡಲು ತಿಳಿದಿರಬೇಕು. ಪ್ರಾಣಿಗಳ ಪಾದಗಳ ಗುರುತು ಸಿಕ್ಕಿದರೆ ಅವುಗಳಿಗೆ ಪ್ಲಾಸ್ಟರ್ ಆಫ್ ಪ್ಯಾರಿಸ್ ಹಾಕಿ ಅಚ್ಚು ತೆಗೆಯಿರಿ. ಮಾರ್ಗನಕ್ಷೆ ತಯಾರಿಸಿ, ನಿಮ್ಮ ಯಾನದ ವರದಿ ಬರೆಯಿರಿ, ಚಿತ್ರಗಳನ್ನು ಬಿಡಿಸಿ. ಅನ್ವೇಷಣಾ ಯಾನವನ್ನು ಆನಂದಿಸಿ.

11. ಕತ್ತಲೆ ಆಟ – Night Game

ಈಗಾಗಲೇ ಅನೇಕ ರೀತಿಯ ಆಟಗಳನ್ನು ಆಡಿ ಲಾಭ ಪಡೆದಿದ್ದೀರಿ. ಈಗ ಕತ್ತಲೆಯಲ್ಲಿ ಆಟವನ್ನು ಆಡಿ. ಇದರ ಉದ್ದೇಶ ಕತ್ತಲೆಯ ಭಯ ಹೋಗಲಾಡಿಸುವುದು ಮತ್ತು ಕತ್ತಲೆಗೆ ಕಣ್ಣನ್ನು ಹೊಂದಿಸುವ ಅಭ್ಯಾಸ ಮಾಡಿಸುವುದಾಗಿದೆ. ಈ ಆಟವನ್ನು ಆಡಲೂ ವ್ಯಾಪಕ ಆಟಕ್ಕೆ ಮಾಡಿಕೊಳ್ಳುವ ಎಲ್ಲಾ ಸಿದ್ಧತೆಯನ್ನು ಮಾಡಿಕೊಳ್ಳಬೇಕು. ಈ ಆಟವನ್ನು ಕಡಿಮೆ ವಿಸ್ತಾರದಲ್ಲಿ ಆಡಿಸಬೇಕು. ಕತ್ತಲೆಯಾದ್ದರಿಂದ ಹೆಚ್ಚು ಎಚ್ಚರಿಕೆ ವಹಿಸಬೇಕು. ರಾತ್ರಿ ಆಟ ಆಡುವಾಗ ಪ್ರತಿಯೊಬ್ಬರೂ ಕೈ ದೀಪ ಮತ್ತು ಸೀಟಿಗಳನ್ನು ಹೊಂದಿರಬೇಕು. ಕತ್ತಲೆ ಆಟವನ್ನು ಕಣ್ಣು ಕಟ್ಟಿಯೂ ಆಡಬಹುದು.

ಈ ರೀತಿಯ ಆಟಗಳಿಂದ ಧೈರ್ಯ ಹೆಚ್ಚುತ್ತದೆ. ಸವಾಲನ್ನು ಎದುರಿಸುವ ಚಾಕಚಕ್ಯತೆ ಮತ್ತು ಸಾಮರ್ಥ್ಯಗಳು ಬೆಳೆಯುತ್ತವೆ.

ವ್ಯಾಪಕ ಆಟದಲ್ಲಿ ಕೊಟ್ಟಿರುವ ಆಟಗಳನ್ನು ಆಯ್ಕೆ ಮಾಡಿ ಕತ್ತಲಾದ ನಂತರ ಅಥವಾ ಕತ್ತಲೆ ಕೋಣೆಯಲ್ಲಿ ಆಡಬಹುದು. ಅವುಗಳಲ್ಲದೆ ಇನ್ನೂ ಕೆಲವು ಆಟಗಳನ್ನು ಆಡಬಹುದು.

1. ಕಣ್ಣು ಕಟ್ಟಿ ಮರದಿಂದ ಮರಕ್ಕೆ, ಹಾಗೂ ಕಂಬಗಳಿಗೆ ಹಗ್ಗ ಸುತ್ತಿ, ಹಗ್ಗ ಹಿಡಿದು ನಡೆಯುವುದು. ನಡೆಯುತ್ತಿರುವಾಗ ನಾಯಕಿ ಏರು, ತಗ್ಗು, ನೀರಿನ ಹಳ್ಳ, ಗುಹೆ ಎಂಬ ಭ್ರಮೆ ಹುಟ್ಟಿಸುತ್ತಾ ಆಡಿಸಬಹುದು. ಸುಮಾರು ಅರ್ಧ ಘಂಟೆ ಆಡಿಸಬಹುದು. ಈ ಆಟದಿಂದ ಕುರುಡುತನದ ಅನುಭವವಾಗುತ್ತದೆ. ನಮ್ಮ ದೃಷ್ಟಿಯು ಒಂದು ಅದೃಷ್ಟವೆಂದು ದೇವರನ್ನು ವಂದಿಸುವಂತಾಗುತ್ತದೆ. ಕುರುಡರ ಬಗ್ಗೆ ಅನುಕಂಪ ಹುಟ್ಟಿ, ಸಹಾಯ ಮಾಡುವ ಮನೋಭಿಲಾಷೆ ಬೆಳೆಯುತ್ತದೆ. ಧೈರ್ಯ, ಸಾಹಸಗಳ ಸಾಮರ್ಥ್ಯ ಹೆಚ್ಚುತ್ತದೆ. ಕಣ್ಣಿನ ಪಟ್ಟಿಯನ್ನು ಒಂದು ಒಳ್ಳೆಯ ಸುಂದರ ದೃಶ್ಯಾವಳಿಯ ಮಧ್ಯೆ ಬಿಚ್ಚಿದರೆ ಆನಂದ ಮತ್ತು ಆಶ್ಚರ್ಯ ಉಂಟಾಗುತ್ತವೆ.
2. ಕಣ್ಣುಕಟ್ಟಿ ಕಳ್ಳನನ್ನು ಹಿಡಿಯುವ ಆಟ. ಗುರಿ ಇಡುವ ಆಟ.
3. ರಾತ್ರಿಯಲ್ಲಿ ಒಂದು ದೊಡ್ಡಕೋಣೆಯಲ್ಲಿ ದೀಪ ಆರಿಸಿ, ಆಡಿಸಿ.

ಅ) ಕತ್ತಲೆಯಲ್ಲಿ ಚಿತ್ರ ಬಿಡಿಸುವುದು: 1) ದೀಪ ಆರಿಸಿ ಆನೆ ಬರೆಸಿ, ದೀಪ ಹಾಕಿ. ಆನೇ ನೋಡಿ. ನಂತರ ದೀಪ ಆರಿಸಿ, ಅಂಬಾರಿ ಬರೆಸಿ ದೀಪಹಾಕಿ. ಅಂಬಾರಿ ನೋಡಿ. 2) ಇದೇ ರೀತಿ ಕುದುರೆ ಮತ್ತು ಸವಾರನನ್ನು ಬರೆಸಿ. ಚಿತ್ರ ನೋಡಿ ಆನಂದಿಸಿ. ಉತ್ತಮ ಚಿತ್ರಗಳನ್ನು ಆಯ್ಕೆ ಮಾಡಿ ಅಭಿನಂದಿಸಿ

ಆ) ಅಲಂಕಾರದ ವಸ್ತುಗಳನ್ನು ತರಲು ಹೇಳಿ, ದೀಪ ಆರಿಸಿ, ಮುಖ ಶೃಂಗಾರ, ಕೇಶಾಲಂಕಾರ ಹಾಗೂ ಉಡುಪಿನ ಮಾದರಿ ಬದಲಾಯಿಸಲು ಹೇಳಿ (ಸಮಯ 5 ನಿಮಿಷ). ದೀಪ ಹಾಕಿ ಆನಂದಿಸಿ.

ಇ) ವಸ್ತುಗಳನ್ನು ಅಲ್ಲಲ್ಲಿ ಬಚ್ಚಿಟ್ಟು ದೀಪ ಆರಿಸಿ ಹುಡುಕಿ ತರಲು ಹೇಳಿ. ಹೆಚ್ಚು ತಂದವರನ್ನು ಅಭಿನಂದಿಸಿ.

4. ರಾತ್ರಿ ಬಯಲಿನಲ್ಲಿ ಅಥವಾ ಕೋಣೆಯಲ್ಲಿ ಪಟಾಲಂ ನಾಯಕಿಯರು ಮಾತ್ರ ಕೈದೀಪ (Torch) ಹತ್ತಿಸುತ್ತಾ, ಆರಿಸುತ್ತಾ ವೇಗವಾಗಿ ಚಲಿಸಬೇಕು. ಅವರ ಜೊತೆಜೊತೆಯಲ್ಲಿ ಪಟಾಲಂಗಳನ್ನು ಚದುರಿಸಿ ಬಿಡಬೇಕು. ನಾಯಕಿಯನ್ನು ಗುರುತಿಸಿ, ಸದಸ್ಯರೆಲ್ಲಾ ಕೂಡಿ, ಪಟಾಲಂವನ್ನು ರಚಿಸಿಕೊಳ್ಳಬೇಕು. ನಿಶ್ಯಬ್ದವಾಗಿ ಆಡಬೇಕು. ಶಬ್ದ ಆಟಕ್ಕೆ ಸುಲಭವಾಗಿ ಸುಳುಹು ನೀಡುತ್ತದೆ.

12. ಸಂಕೇತಭಾಷೆ – (Signalling)

ಸಂಕೇತ ಭಾಷೆಯುನ್ನು ಶೀಘ್ರವಾಗಿ ಗುಪ್ತಸಂದೇಶ ಕಳುಹಿಸಲು ಬಳಸಲಾಗುವುದು. ಗೈಡಿಂಗ್ ಒಂದು ಹೊರಾಂಗಣ ಚಟುವಟಿಕೆ. ತುರ್ತುಸ್ಥಿತಿಗಳಲ್ಲಿ ಸಾಮಾನ್ಯರಿಗೆ ತಿಳಿಯದಂತೆ ಗುಪ್ತ ಭಾಷೆಯ ಮೂಲಕ ಸಂಕೇತವನ್ನು ಸ್ವೀಕರಿಸುವ ಮತ್ತು ಕಳುಹಿಸುವ ಕೌಶಲಗಳನ್ನು ಬೆಳೆಸಿಕೊಳ್ಳುವುದು ಪ್ರತಿಯೊಬ್ಬ ಗೈಡಿನ ಅವಶ್ಯಕತೆಯಾಗಿದೆ.

ಮೋರ್ಸ್ ಸಂಕೇತ ಭಾಷೆ : ಆಂಗ್ಲ ಭಾಷೆಯ ಅಕ್ಷರ ಮಾಲೆಯನ್ನು ಮತ್ತು ಸಂಖ್ಯಾಮಾಲೆಯುನ್ನು "." (ಚುಕ್ಕೆ) ಹ್ರಸ್ವ ಅಲ್ಪಾವಧಿ "----" (ಗೆರೆ) ದೀರ್ಘಾವಧಿ ಸಂಕೇತಿಸಲಾಗಿದೆ. ಈ ಹ್ರಸ್ವ ಮತ್ತು ದೀರ್ಘ ಸಂಕೇತಗಳನ್ನು ವಿವಿಧ ಕ್ರಮ ಮತ್ತು ಸಂಖ್ಯೆಯಲ್ಲಿ ಜೋಡಿಸಿದಾಗ ವಿವಿಧ ಅಕ್ಷರಗಳಾಗುತ್ತವೆ.

ರೈಲ್ವೆಸ್ಟೇಷನ್, ತಂತಿಕಛೇರಿ, ಸೈನ್ಯ ಕಛೇರಿಗಳಲ್ಲಿ ಉಪಕರಣದ ಮೂಲಕ ಮೋರ್ಸ್ ಸಂಕೇತ ಕಳುಹಿಸುತ್ತಾರೆ. ಈ ಸೌಲಭ್ಯ ಇಲ್ಲದೇ ಇದ್ದಾಗ ಸೀಟಿ, ಬ್ಯುಗಲ್ (ಶಬ್ದ) ಕೈದೀಪ (Torch), ಲಾಂದ್ರ (ಬೆಳಕು) ಝೇಂಕಾರಕ (Buzzer), ಬೀಸುತಟ್ಟೆ, ಧ್ವಜ ಹಾಗೂ ಹೊಗೆಯು ಮೂಲಕ ಕಳುಹಿಸಬಹುದು. ಸ್ವೀಕರಿಸುವವರು ಇರುವ ದೂರಕ್ಕೆ ತಕ್ಕಂತೆ ಸಾಧನ ಬಳಸಬಹುದು. ಕನ್ನಡಿಯ

ಮೇಲೆ ಬೆಳಕಿನ ಪ್ರತಿಫಲನದ (ಹೀಲಿಯೋಗ್ರಫಿ) ಮೂಲಕ 40 ಮೈಲಿ ದೂರದವರೆಗೆ ಈ ವಿಧಾನದಿಂದ ಸುದ್ದಿಯನ್ನು ಕಳುಹಿಸಬಹುದು. ಬಿ.ಪಿ.ಯವರು ಯುದ್ಧ ಭೂಮಿಯಲ್ಲಿ ಈ ತಂತ್ರವನ್ನು ಬಳಸುತ್ತಿದ್ದರು.

ಹಿಂದಿನಕಾಲದಲ್ಲಿ ರಾಜರು ಸಂದೇಶ ಕಳುಹಿಸುತ್ತಿದ್ದ ವಿವಿಧ ಸಾಧನಗಳನ್ನು ತಿಳಿಯಿರಿ.

ಮೋರ್ಸ್ ಸಂಕೇತ ಮತ್ತು ಅಕ್ಷರಮಾಲೆ

ಸಂಕೇತ ಭಾಷೆಯನ್ನು ಸುಲಭವಾಗಿ ಕಲಿಯಲು ಮತ್ತು ನೆನಪಿಟ್ಟುಕೊಳ್ಳಲು ಅಕ್ಷರಸಂಕೇತಗಳನ್ನು ವರ್ಗೀಕರಿಸಿ ಗುಂಪುಗಳನ್ನಾಗಿ ಮಾಡಿದೆ. ಈ ಕೆಳಗೆ ಗುಂಪುಗಳನ್ನು ಕೊಟ್ಟಿದೆ.



i) ಡಿಟ್ ಒಂದರಿಂದ ಏರಿಕೆ ಕ್ರಮದಲ್ಲಿ ಅಕ್ಷರಗಳು : E, I, S, H.

ii) ಒಂದು ಡಾ ಯಿಂದ ಏರಿಕೆ ಕ್ರಮದಲ್ಲಿ ಅಕ್ಷರಗಳು : T, M, O.

iii) ದರ್ಪನ ಪ್ರತಿಬಿಂಬ (Mirror Image) : A-N, B-V, D-U, F-L, G-W, Q-Y.

iv) ಇರುಕು (Sandwitch=ಹೂರಣ) ವಿರುದ್ಧಾಕ್ಷರಗಳು : K-R, P-X.

v) ಇಜ್ಜೋಡು (Stray) : CJZ

ಈ ಅಕ್ಷರಗಳಿಗೆ ಅಕ್ಷರವಾಲೆ ನೋಡಿಕೊಂಡು ಸಂಕೇತಗಳನ್ನು ಬರೆದುಕೊಂಡು ಅಭ್ಯಾಸಮಾಡಿ.

ಈ ಹೊಸ ರೀತಿಯು ಸಂಕೇತ ಭಾಷೆಯಲ್ಲಿ ಸಂಪರ್ಕಿಸಲು ಆನಂದವಾಗುತ್ತದೆ.

ಮೋರ್ಸ್ ಸಂಕೇತದ ಧ್ವಜ : ಧ್ವಜದ ಅಳತೆ. 70:40 ಸೆಂ.ಮೀ. ಇದನ್ನು ಬಿಳಿ ಹತ್ತಿ ಬಟ್ಟೆಯಿಂದ ತಯಾರಿಸಬೇಕು ಇದರ ಮಧ್ಯದಲ್ಲಿ 7"ನ ನೀಲಿಬಣ್ಣದ ಅಡ್ಡಪಟ್ಟಿ ಇರಬೇಕು. ಇದರ ಹಿಡಿಕೆಯ ದಂಡ (ಬೊಂಬು / ಅಲ್ಯುಮಿನಿಯಮ್ ಪೈಪ್) 31/2' ಇರಬೇಕು ಧ್ವಜವನ್ನು ನೇರವಾಗಿ ತಲೆಯ ಮೇಲೆ ಬರುವಂತೆ ಹಿಡಿಯಬೇಕು 900 ಬಲಕ್ಕೆ ಚಲಿಸಿದರೆ ಡಿಟ್ / 1350 ಬಲಕ್ಕೆ ಚಲಿಸಿದರೆ ಡಾ. ಸಂದೇಶ ಕಳುಹಿಸಲು ಇಬ್ಬರು ಸ್ವೀಕರಿಸಲು ಇಬ್ಬರ ಎರಡು ಗುಂಪು ಇರಬೇಕು. ಕಳುಹಿಸುವವರಲ್ಲಿ ಒಬ್ಬರು ಸಂದೇಶದಲ್ಲಿರುವ ಅಕ್ಷರಗಳ ಸಂಕೇತ ಹೇಳುತ್ತಾ ಹೋಗುವರು ಇನ್ನೊಬ್ಬರು ಸಂಕೇತವನ್ನು ಓದುವರು. ಮತ್ತೊಬ್ಬರು ಬರೆದು ಕೊಳ್ಳುವರು. ಪೂರ್ಣವಾದ ನಂತರ ಸ್ವೀಕರಿಸಿದವರು, ಅಕ್ಷರ, ಪದ ಮತ್ತು ವಾಕ್ಯಗಳನ್ನು ಜೋಡಿಸಿ ಸಂದೇಶಕ್ಕೆ ಅನುಸಾರವಾಗಿ ಕಾರ್ಯನಿರ್ವಹಿಸುವರು. ಈ ವಿಧಾನವನ್ನು ಬರವಣಿಗೆಯಲ್ಲಿ ಚೆನ್ನಾಗಿ ಅಭ್ಯಾಸ ಮಾಡಬೇಕು. ಈ ಕೆಳಗಿನ ಸಂಕೇತವಾಕ್ಯಗಳನ್ನು ಅಕ್ಷರಮಾಲೆಯ ಸಹಾಯದಿಂದ ಓದಿರಿ.

1)

2)


15. ಭಾರತದಲ್ಲಿ ಗೈಡಿಂಗ್ ಇತಿಹಾಸ

ಗೈಡಿಂಗ್ ಅಂದು : ಬಾಯ್ಸ್ ಸ್ಕೌಟಿಂಗ್ ಜೊತೆಜೊತೆಗೆ ಬಾಲಕಿಯರು ಸ್ಕೌಟಿಂಗ್ ಚಟುವಟಿಕೆಯನ್ನು 1908 ಅನಧಿಕೃತವಾಗಿ ಲಂಡನ್ನಿನಲ್ಲಿ ಪ್ರಾರಂಭಿಸಿದರು. 1909ರಲ್ಲಿ ಇಂಗ್ಲೆಂಡಿನ ಸ್ವಯಂ ಘೋಷಿತ ಸ್ಕೌಟ್ ಬಾಲಕಿಯರು ಕ್ರಿಸ್ಟಲ್ ಪ್ಯಾಲೆಸ್‌ನಲ್ಲಿ ನಡೆದ ಪ್ರಥಮ ಸ್ಕೌಟಿಂಗ್ ರ್‍ಯಾಲಿಯಲ್ಲಿ ಆಹ್ವಾನವಿಲ್ಲದೆ ಭಾಗವಹಿಸಿದರು. ನಂತರ ಬಿ.ಪಿ.ಯವರು ಮಾನ್ಯತೆ ಪಡೆದು ಅಧಿಕೃತವಾಗಿ ಗರ್ಲ್‌ಸ್ಕೌಟಿಂಗ್ ಪ್ರಾರಂಭವಾಯಿತು. 1910ರಲ್ಲಿ ಸ್ಕೌಟ್ ಚಳವಳಿಯು ಇಂಡಿಯಾದಲ್ಲಿ ಪ್ರಾರಂಭವಾಯಿತು. ಇದೇ ವರ್ಷದಲ್ಲಿ ಗೈಡ್ ಚಳವಳಿಗೆ ಸಮನಾದ "ಗರ್ಲ್ ಮೆಸೆಂಜರ್" ಸಂಸ್ಥೆಯನ್ನು ಮಿಸ್ ಡೇವಿಸ್‌ರವರು ಮಧ್ಯಪ್ರದೇಶದ ಲಕ್ನೋದಲ್ಲಿದ್ದ "ಅಮೇರಿಕನ್ ಮಿಷನ್" ಶಾಲೆಯಲ್ಲಿ ಪ್ರಾರಂಭಿಸಿದರು. ಇದರ ಸದಸ್ಯರನ್ನು "ಗರ್ಲ್ ಮೆಸೆಂಜರ್" ಎಂದೇ ಕರೆಯಲಾಯಿತು. ಈ ಸಂಸ್ಥೆಯ ಸ್ಥಾಪಕಿ ಮಿಸ್ ಡೇವಿಸ್ ಅವರು ಮುಂದಾಲೋಚನೆಮಾಡಿ ಭಾರತೀಯ ಬಾಲಕಿಯರನ್ನು ತಮ್ಮ ಸಂಸ್ಥೆಯಲ್ಲಿ ನೋಂದಾಯಿಸಿಕೊಂಡರು. ಈ ಚಳವಳಿಯ ಕಾರ್ಯಕ್ರಮಗಳನ್ನು ಭಾರತೀಯರಿಗೆ ಹೊಂದುವಂತೆ ಮಾರ್ಪಡಿಸಿ "ಗರ್ಲ್ ಮೆಸೆಂಜರ್ ಕೈಪಿಡಿ" ಪ್ರಕಟಿಸಿದರು.

1911ರಲ್ಲಿ ಮಧ್ಯ ಪ್ರದೇಶದ ಜಬ್ಬಲ್‌ಪುರದಲ್ಲಿ ಮೊದಲ ಭಾರತೀಯ ಗೈಡ್‌ದಳ ಪ್ರಾರಂಭವಾಯಿತು. ಡಾ॥ ಕುಲನ್ ಇದನ್ನು ಉದ್ಘಾಟಿಸಿದರು. ಆ ದಳವನ್ನು "Primus India Guide Company" "ಭಾರತದಲ್ಲಿ ಪ್ರಥಮ ಗೈಡ್‌ದಳ" ಎಂದು ಕರೆಯಲಾಗಿದೆ. ಇಂದಿಗೂ ಆ ದಳಧ್ವಜದ ಮೇಲೆ Primus India ಎಂದು ಪದಗಳನ್ನು ಕಾಣಬಹುದು. 1912ರವರೆಗೆ ಅನೇಕದಳಗಳು ಹುಟ್ಟಿಕೊಂಡವು. ಈ ದಳಗಳೆಲ್ಲವೂ ಇಂಗ್ಲೆಂಡಿನ ಪ್ರಧಾನ ಕಛೇರಿಯ ಮೂಲಕ ನಿರ್ವಹಿಸಲ್ಪಡುತ್ತಿತ್ತು.

1913 ಜುಲೈಯಲ್ಲಿ ಗೈಡ್ ಚಳವಳಿ ಕಲ್ಕತ್ತಾದಲ್ಲಿ ಪ್ರಾರಂಭವಾಯಿತು. 1914ರ ವೇಳೆಗೆ ಕಲ್ಕತ್ತಾದಲ್ಲಿ ದಳಗಳ ಸಂಖ್ಯೆ 50ಕ್ಕೆ ಬೆಳೆಯಿತು. ಅದೇ ಸಮಯಕ್ಕೆ ಮುಂಬಯಿ, ಮದ್ರಾಸು ಮತ್ತು ಇತರ ದೊಡ್ಡ ನಗರಗಳಲ್ಲೂ ಪ್ರಾರಂಭವಾಯಿತು. ದಳದ ಸಂಖ್ಯೆ 50ಕ್ಕೂ ಮೀರಿ, ಗೈಡ್‌ಗಳ ಸಂಖ್ಯೆ 1250ಕ್ಕೂ ಮೀರಿ ಬೆಳೆಯಿತು. ಈ ದಳಗಳು ಇಂಗ್ಲೆಂಡಿನಿಂದ ಆಳಲ್ಪಡುತ್ತಿರುವ ಸಂಗತಿಯು ಭಾರತೀಯರಲ್ಲಿ ಅಸಮಾಧಾನವನ್ನು ಉಂಟುಮಾಡಿತು. ಇದರಿಂದಾಗಿ ಸ್ಥಳೀಯ ಆಡಳಿತದ ಅವಶ್ಯಕತೆಯನ್ನು ಮನಗಂಡು ಇಂಗ್ಲೆಂಡಿನ ಪ್ರಧಾನ ಕಚೇರಿಯು 1915ರಲ್ಲಿ ಕಲ್ಕತ್ತಾದ ಜಿಲ್ಲಾ ಕಮೀಷನರ್ ಆಗಿದ್ದ ಮಿಸೆಸ್ ಎಮ್.ಎಮ್. ಬೇರ್ ಅವರನ್ನು ಭಾರತದ ಮೊದಲ ಪ್ರಧಾನ ಚೀಫ್ ಕಮೀಷನರ್ ಆಗಿ ನೇಮಕಮಾಡಿತು. ಅನಂತರ

ಭಾರತದಲ್ಲೇ ಭಾರತದ ಪ್ರಧಾನ ಕಛೇರಿ ಇರಬೇಕೆಂದು ಬೇಡಿಕೆ ಸಲ್ಲಿಸಲಾಯಿತು. ಭಾರತದಲ್ಲಿ YWCA ನಡೆಸುತ್ತಿದ್ದ ಗೈಡ್ಸ್ ಸಂಸ್ಥೆಯು ಇದಕ್ಕೆ ಒಪ್ಪಿಗೆ ನೀಡಲು ನಿರಾಕರಿಸಿತು. 1916ರಲ್ಲಿ ಮುಂಬಯಿಯಲ್ಲಿ ನಡೆದ ಸಭೆಯಲ್ಲಿ ಭಾರತದ ಗೈಡ್ ಸಂಸ್ಥೆ ಮತ್ತು YWCA ಗೈಡ್ ಸಂಸ್ಥೆಯ ಅಧಿಕಾರಿಗಳು ಪರಸ್ಪರ ಚರ್ಚಿಸಿ YWCA ಗೈಡ್ ಸಂಸ್ಥೆಯ ಪ್ರತಿನಿಧಿಗಳಿಗೆ ಗೈಡ್ ಕೌನ್ಸಿಲ್‌ನಲ್ಲಿ ಸಾಕಷ್ಟು ಪ್ರಾತಿನಿಧ್ಯ ನೀಡಲು ತೀರ್ಮಾನಿಸಲಾಯಿತು. ಇದರ ಪರಿಣಾಮವಾಗಿ ಕಲ್ಕತ್ತಾದಲ್ಲಿ ರಾಷ್ಟ್ರೀಯ ಆಯುಕ್ತರು ಇದ್ದುದರಿಂದ ಮತ್ತು ಅಲ್ಲಿ ಹೆಚ್ಚು ದಳಗಳು ಇದ್ದುದರಿಂದ ಪ್ರಧಾನ ಕಚೇರಿಯನ್ನು ಕಲ್ಕತ್ತಾದಲ್ಲಿ ತೆರೆಯಲಾಯಿತು.

1916ರಲ್ಲಿ ರಾಷ್ಟ್ರೀಯ ಆಯುಕ್ತರಾದ ಭಾರತದ ಮಿಸೆಸ್ ಬೇರ್ ಅವರನ್ನು ಗರ್ಲ್‌ಗೈಡ್ಸ್‌ನ ಪ್ರಧಾನ ಕಮೀಷನರ್ ಆಗಿ ನೇಮಕ ಮಾಡಲಾಯಿತು. ಇಂಗ್ಲೆಂಡಿನ ಗರ್ಲ್ ಗೈಡ್ ಸಭೆಯ ಅಧ್ಯಕ್ಷರಾಗಿ ಬೇಡನ್ ಪಾವೆಲ್ಲರು ಭಾರತದ ಸಾಂಸ್ಕೃತಿಕ ಸ್ಥಿತಿಗಳಿಗೆ ಅನುಗುಣವಾಗಿ ನಿಯಮಾವಳಿಯನ್ನು ರೂಪಿಸಿಕೊಳ್ಳಲು ಹಾಗೂ ಪದಕಗಳನ್ನೂ ಬದಲಾವಣೆ ಮಾಡಿಕೊಳ್ಳಲು ಮಿಸೆಸ್ ಬೇರ್ ಅವರಿಗೆ ಅಧಿಕಾರ ನೀಡಿದರು. ಭಾರತೀಯ ಗರ್ಲ್ ಗೈಡ್ ಸಂಸ್ಥೆ ರಚಿಸಿದ ಸಂವಿಧಾನವನ್ನು ಬೇಡನ್ ಪಾವೆಲ್ಲರು ಪರಿಶೀಲಿಸಿ ಸ್ವಲ್ಪ ಮಾರ್ಪಡಿಸಿ ಅನುಮೋದನೆ ನೀಡಿದರು. ಹೀಗೆ ಭಾರತದಲ್ಲಿ ಗರ್ಲ್‌ಗೈಡ್ ಸಂಸ್ಥೆಯನ್ನು ಸ್ವತಂತ್ರವಾಗಿ ಅಂಕುರಿಸಿತು. ಈ ಸಂಸ್ಥೆಯನ್ನು ಚೌಕಟ್ಟಿನಲ್ಲಿ ಅಳವಡಿಸಲಾಯಿತು.

1. ರಾಷ್ಟ್ರೀಯ ಮಂಡಳಿಗೆ – ಒಬ್ಬ ಪ್ರಧಾನ ಆಯುಕ್ತರು.
2. ಪ್ರಾಂತೀಯ ಮಂಡಳಿಗೆ – ಒಬ್ಬ ಪ್ರಾಂತೀಯ ಆಯುಕ್ತರು.
3. ಜಿಲ್ಲಾ ಮಂಡಳಿಗೆ – ಒಬ್ಬ ಜಿಲ್ಲಾ ಆಯುಕ್ತರು.
4. ದಳ ಸಮಿತಿಗೆ – ಒಬ್ಬ ಹಿರಿಯ ನಾಯಕಿ.
5. ದಳ – ಒಬ್ಬ ದಳನಾಯಕಿ
6. ಪಟಾಲಂ – ಒಬ್ಬ ಪಟಾಲಂ ನಾಯಕಿ.

1918 ಇಂಗ್ಲೆಂಡಿನಲ್ಲಿ ಗರ್ಲ್ ಗೈಡಿಂಗ್ ಕೈಪಿಡಿಯನ್ನು ಪ್ರಕಟಿಸಲಾಯಿತು. ಆ ದಿನಗಳಲ್ಲಿ ಭಾರತದಲ್ಲಿ ಚಳವಳಿ ವೇಗವಾಗಿ ಬೆಳೆಯುತ್ತಿತ್ತು. ಹೀಗಾಗಿ ಭಾರತಕ್ಕೂ ಒಂದು ಗರ್ಲ್ ಗೈಡ್ ಕೈಪಿಡಿಯ ತುರ್ತು ಅವಶ್ಯಕತೆ ಏರ್ಪಟ್ಟಿತು. ಪ್ರಧಾನ ಸ್ಕೌಟ್ ಆದ ಬೇಡನ್ ಪಾವೆಲ್ಲರು ಇದನ್ನು ತಯಾರಿಸುವ ಮುನ್ನ ಭಾರತದ ಪ್ರಧಾನ ಗೈಡ್ ಆಯುಕ್ತರು, ವೈಯಕ್ತಿಕವಾಗಿ ವಿವಿಧ ಸ್ಥಳಗಳಿಗೆ ಭೇಟಿ ನೀಡಿ, ಸ್ಥಳೀಯ ಸಂಸ್ಕೃತಿಯನ್ನು

ಅಧ್ಯಯನ ಮಾಡಿ, ಮಾಹಿತಿಗಳನ್ನು ಸಂಗ್ರಹಿಸಿ, ಗರ್ಲ್ ಗೈಡಿಂಗ್ ಕೈಪಿಡಿಯ ಆಧಾರದ ಮೇಲೆ, ಭಾರತೀಯತೆಗೆ ಅನುಗುಣವಾಗಿ ಕೈಪಿಡಿ ರಚಿಸಿಕೊಳ್ಳಬೇಕೆಂಬ ಅಭಿಪ್ರಾಯ ನೀಡಿದರು. ಅದರಂತೆ 1918ರಲ್ಲಿ 'Steps to girl guiding in India' ಎಂಬ ಕೈಪಿಡಿಯನ್ನು ಪ್ರಕಟಿಸಲಾಯಿತು. ನಂತರದ ಪ್ರಕಟಣೆಯು Girl Guiding in India ಎಂಬ ಶೀರ್ಷಿಕೆಯಲ್ಲಿ ಮುಂದುವರಿಯಿತು. ಇಲ್ಲಿದೆ. 'Aims, Rules, policy & organisation' ಎಂಬ ಪುಸ್ತಕವನ್ನು ಪ್ರತ್ಯೇಕವಾಗಿ ಪ್ರಕಟಿಸಲಾಯಿತು. ಜೊತೆಗೆ ನಿಯಮಾವಳಿ (Rules Books) ಪ್ರಕಟಿಸಲಾಯಿತು.

ಜನಸಾಮಾನ್ಯರಲ್ಲಿ ಈ ಚಳವಳಿಯು ಆಂಗ್ಲರಿಗೆ ಮಾತ್ರ ಮೀಸಲಾದ ಚಳವಳಿ ಎಂಬ ಬಲವಾದ ಭಾವನೆ ಇತ್ತು. ಈ ಚಳವಳಿ ಆಂಗ್ಲ ಶಾಲೆಗಳಲ್ಲಿ ಸಾಧಿಸುತ್ತಿರುವ ಪ್ರಗತಿಯನ್ನು ಕಂಡು, ಡಾ॥ ಅನಿಬೆಸೆಂಟ್ ಡಾ॥ ಜಿ.ಎಸ್. ಅರುಂಡೇಲ್ ಮತ್ತು ಇತರ ಭಾರತೀಯ ನಾಯಕರು ಭಾರತೀಯ ಹೆಣ್ಣು ಮಕ್ಕಳನ್ನು ಸೇರಿಸಿ 1916ರಲ್ಲಿ ಭಗಿನಿ ಗೈಡ್ಸ್ (Sister Guide) ಚಳವಳಿಯನ್ನು ಪ್ರಾರಂಭ ಮಾಡಿದರು. 1916ರಲ್ಲಿ ದಕ್ಷಿಣ ಭಾರತದಲ್ಲಿ Boys Scout Association ಉದ್ಘಾಟಿಸಿದರು. ಭಾರತೀಯ ಗೈಡ್ ದಳಗಳು ಪ್ರಾರಂಭವಾದವು. ಎರಡನೆಯದಾದ ಪೂನಾ ದಳವು ಮೊದಲನೆಯ ಭಾರತೀಯ ಬಾಲಕಿಯರಿಂದ ಕೂಡಿದ ಗೈಡ್ ದಳವಾಗಿದೆ.

1917 ರಲ್ಲಿ ಶ್ರೀಯುತ ಮದನ ಮೋಹನ ಮಾಳವೀಯರು ಮತ್ತು ಬಾಜಪೇಯರು "ಸೇವಾಸಮಿತಿ ಸ್ಕೌಟ್ಸ್" ಸಂಸ್ಥಾಪಿಸಿ ಇದರಲ್ಲಿನ ಹೆಣ್ಣು ಮಕ್ಕಳ ದಳವನ್ನು "ಸೇವಾ ಸಮಿತಿ ಗೈಡ್ಸ್ ಎಂದು ಕರೆದರು.

1919ರಲ್ಲಿ ಭಾರತೀಯ ಗೈಡ್ ಸಂಸ್ಥೆ ಬೇರ್ಪಟ್ಟು ಕಲ್ಕತ್ತಾದಲ್ಲಿ ಆಯುಕ್ತರನ್ನು ನೇಮಕ ಮಾಡಲಾಯಿತು. ಶ್ರೀಮತಿ "ಬ್ರಿವ್ಸ್"ರವರು ಈ ಸಂಸ್ಥೆಯ ಕಮಿಷನರಾದರು ಮತ್ತೆ ಭಾರತೀಯ ಮೂಲದ ಆಯುಕ್ತರು ಬೇಕೆಂದು ಬೇಡಿಕೆ ಸಲ್ಲಿಸಿದರು. ಇದನ್ನು ಮನ್ನಿಸಿ ಖ್ಯಾತ ವಿಜ್ಞಾನಿ ಶ್ರೀ ಜೆ.ಸಿ. ಬೋಸ್‌ರವರ ಪತ್ನಿ ಶ್ರೀಮತಿ ಅಬಲಾಬೋಸ್ ಶಿಕ್ಷಣ ತಜ್ಞೆ ಹಾಗೂ, ಸಮಾಜಸೇವಕಿಯವರನ್ನು ಪ್ರಥಮ ಭಾರತೀಯ ಆಯುಕ್ತರನ್ನಾಗಿ ನೇಮಕ ಮಾಡಲಾಯಿತು. ಶ್ರೀಮತಿ ಬ್ಯಾನರ್ಜಿಯವರು 1914ರಲ್ಲಿ 8ನೇ ಕಲ್ಕತ್ತಾ ದಳದ ಮೊದಲ ಭಾರತೀಯ ಗೈಡ್ ಕ್ಯಾಪ್ಟನ್ ಆಗಿ ನೇಮಕಗೊಂಡರು.

ಸ್ಕೌಟ್ ಮತ್ತು ಗೈಡ್ ಸಂಸ್ಥೆಗಳ ವಿಲೀನ ಪ್ರಕ್ರಿಯೆ:

ಗರ್ಲ್ಸ್ ಮೆಸೆಂಜರ್ ಸಂಸ್ಥೆ, ಸಿಸ್ಟರ್ ಗೈಡ್ಸ್, ಸೇವಾಸಮಿತಿ ಗೈಡ್, ಭಾರತೀಯ ಗೈಡ್ಸ್ ಎಂಬ ವಿವಿಧ ಪ್ರತ್ಯೇಕ ಸಂಘಟನೆಯಲ್ಲಿ ಗೈಡ್ ಚಳವಳಿಯು ಕಾರ್ಯ ನಿರ್ವಹಿಸುತ್ತಿದ್ದವು. 1921ರಲ್ಲಿ ಶ್ರೀಮತಿ ಮತ್ತು ಶ್ರೀ ಬೇಡನ್ ಪಾವೆಲ್‌ರು ಭಾರತಕ್ಕೆ

ಆಗಮಿಸಿ, ಈ ಸಂಸ್ಥೆಯ ಅಧಿಕಾರಿಗಳನ್ನು ಭೇಟಿಯಾಗಿ, ಇವುಗಳನ್ನು ಒಟ್ಟುಗೂಡಿಸುವ ಪ್ರಯತ್ನ ಮಾಡಿದರು. ಸೇವಾಸಮಿತಿ ಗೈಡ್ಸ್ ಸಂಸ್ಥೆಯನ್ನು ಹೊರತುಪಡಿಸಿ ಉಳಿದವುಗಳು ಒಂದು ಗೂಡಿ ಭಾರತೀಯ ಗೈಡ್ ಸಂಸ್ಥೆ ರಚನೆಯಾಯಿತು. ಈ ಸಂಸ್ಥೆಯು ಭಾರತೀಯ ಸಾಮಾಜಿಕ, ಸಾಂಸ್ಕೃತಿಕ ಪರಂಪರೆ ಹಾಗೂ ಸ್ಥಿತಿಗೆ ಅನುಸಾರವಾಗಿ ಕಾರ್ಯಕ್ರಮ ರೂಪಿಸಿತು. ಈ ಚಳವಳಿಯು ಬ್ರಿಟಿಷ್ ಮೂಲದಿಂದ ಬಂದಿರುವುದರಿಂದ ಹೆಚ್ಚು ಜನರ ಮೆಚ್ಚುಗೆಗೆ ಪಾತ್ರವಾಗಲಿಲ್ಲ. ಕಾರಣವೆಂದರೆ ಆಗಲೇ ಭಾರತೀಯರಲ್ಲಿ ಸ್ವಾತಂತ್ರ್ಯ ಪ್ರಜ್ಞೆ ಜಾಗೃತವಾಗಿತ್ತು.

ಸ್ವಾತಂತ್ರ್ಯ ಪ್ರಜ್ಞೆಯಿಂದಾಗಿ 1928ರಲ್ಲಿ ಕಲ್ಕತ್ತಾದ ಪ್ರಮುಖ ಶಾಲೆಗಳಲ್ಲಿ ಒಂದಾದ ಬ್ರಹ್ಮೋಬಾಲಿಕಾ ಪಾಠಶಾಲೆಯ ವಿದ್ಯಾರ್ಥಿನಿಯರು "ಚಕ್ರವರ್ತಿಗೆ ನಿಷ್ಠೆ" ಎಂದು ಪ್ರತಿಜ್ಞೆ ಮಾಡಲು ನಿರಾಕರಿಸಿದರು.

1937ರಲ್ಲಿ ಶ್ರೀಮತಿ ಮತ್ತು ಶ್ರೀ ಬೇಡನ್ ಪಾವೆಲ್‌ರವರು ಪುನಃ ಭಾರತಕ್ಕೆ ಭೇಟಿನೀಡಿ ತೀವ್ರವಾಗಿ ಪ್ರಯತ್ನಿಸಿ ಸೇವಾಸಮಿತಿ ಸ್ಕೌಟ್ಸ್ ಮತ್ತು Indian National Scoutsಗಳನ್ನು ಒಂದಾಗಲು ಒಪ್ಪಂದಮಾಡಿಸಿದರು. 1939ರಲ್ಲಿ ಇವರೊಡನೆ Boy's Scout Association ಸೇರಿ ವಿಧಿವತ್ತಾಗಿ Hindustan scouts Association ಎಂಬ ಹೊಸಸಂಸ್ಥೆ ಉದಯಿಸಿತು. ಈ ಸಂಸ್ಥೆಯು ಬಾಲಕಿಯರಿಗೂ ಸದಸ್ಯತ್ವವನ್ನು ನೀಡುತ್ತಿತ್ತು.

1938ರಲ್ಲಿ ಲಕ್ನೋದಲ್ಲಿ ನಡೆದ ಗೈಡ್ ಸಂಸ್ಥೆಗಳ ಸಾಮಾನ್ಯ ಸಭೆಯಲ್ಲಿ ಗರ್ಲ್‌ಗೈಡ್ ಕಾರ್ಯಕ್ರಮವನ್ನು ಮತ್ತು ಪ್ರತಿಜ್ಞೆಯನ್ನು ಪುನರ್‌ಪರಿಶೀಲಿಸಲಾಯಿತು. ಪ್ರತಿಜ್ಞೆಯಲ್ಲಿ "ಚಕ್ರವರ್ತಿಗೆ ನಿಷ್ಠೆ" ಎಂಬ ಅಂಶವನ್ನು ತೆಗೆದು ಹಾಕಬೇಕೆಂಬ ನಿರ್ಣಯವನ್ನೂ ಹಾಗೂ ಪ್ರತಿಜ್ಞೆಯು ಕೆನಡಾ, ಆಸ್ಟ್ರೇಲಿಯ ಮುಂತಾದ ರಾಷ್ಟ್ರಗಳಲ್ಲಿ ಇರಬೇಕೆಂದು ನಿರ್ಣಯಿಸಲಾಯಿತು.

1946ರಲ್ಲಿ ಹೈದರಾಬಾದಿನಲ್ಲಿ ನಡೆದ ಗೈಡ್ ಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಪ್ರತಿಜ್ಞೆಯ ಬಗ್ಗೆ ಪುನರ್ ಚರ್ಚೆಯಾಯಿತು. ಭಾರತದಲಿ "ರಾಜನಿಗೆ ನಿಷ್ಠೆ" ಬದಲಾಗಿ "ದೇಶಕ್ಕೆ ಕರ್ತವ್ಯ" ಅಥವಾ "ಧರ್ಮಕ್ಕೆ ಕರ್ತವ್ಯ"ವೆಂದು ಬದಲಾಯಿಸಿ ಕೊಳ್ಳಬಹುದೆಂದು ತೀರ್ಮಾನಿಸಲಾಯಿತು. ಶಾಸನಾತ್ಮಕವಾದ ತಾಂತ್ರಿಕ ಕಾರಣಕ್ಕಾಗಿ ಈ ಪ್ರತಿಜ್ಞೆ ಜಾರಿಗೆ ತರುವುದು ಕಷ್ಟಕರವಾಯಿತು. ಈ ತೊಡಕುಗಳನ್ನು ನಿವಾರಿಸಿಕೊಂಡು ಜಯಪುರದ ಸಾಮಾನ್ಯ ಸಭೆಯಲ್ಲಿ ಬದಲಾದ ಪ್ರತಿಜ್ಞೆಯನ್ನು ದೃಢೀಕರಿಸಲಾಯಿತು. ಇಂದಿಗೂ ಭಾರತದಲ್ಲಿ ಬದಲಾದ ಈ ಪ್ರತಿಜ್ಞೆ ಮುಂದುವರಿಸಿದೆ.

ಸಂಸ್ಥೆಯ ಅಭಿವೃದ್ಧಿಯ ಹಿತಾಸಕ್ತಿಯಿಂದ ಎಲ್ಲಾ ಗೈಡ್ ಸಂಸ್ಥೆಗಳನ್ನು ಒಂದು ಗೂಡಿಸುವ, ಪ್ರಯತ್ನ ನಡೆದೇ ಇತ್ತು. 1947ರ ಮೇ 9ರಂದು ಲೇಡಿ ಮೌಂಟ್ ಬ್ಯಾಟನ್‌ರವರು ಮಾಡಿದ ಸಲಹೆಯ ಮೇರೆಗೆ, ಭಾರತದ ಗೈಡ್ಸ್ ಸಂಸ್ಥೆ ಮತ್ತು ಭಾರತ್ ಸ್ಕೌಟ್ ಸಂಸ್ಥೆಗಳು, ಅಂದಿನ ವಿದ್ಯಾಮಂತ್ರಿಗಳಾದ ಮೌಲಾನಾ ಉಬ್ದುಲ್ ಕಲಾಂ ಆಜಾದ್‌ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಸುದೀರ್ಘವಾಗಿ ಚರ್ಚಿಸಿ ಇದಕ್ಕಾಗಿ ಒಂದು ಸಮಿತಿಯನ್ನು ರಚಿಸಿದರು

- v ಅಧ್ಯಕ್ಷರು .... ಶ್ರೀ ಮಂಗಳದಾಸ ಪಕ್ವಾಸ್
- v ಸಚಿವಾಲಯ ಕಾರ್ಯದರ್ಶಿ .... ಶೀ ತಾರಾಚಂದ್
- v ಹಿಂ.ಸ್ಕೌ.ಸಂ. ಪ್ರತಿನಿಧಿ .... ಡಾ॥ ಹೆಚ್. ಎನ್. ಕುಂಜುರು
- v ಭಾ.ಸ್ಕೌ.ಸಂ. ಪ್ರತಿನಿಧಿ .... ಜಸ್ಟೀಸ್ ವಿನಯ್ ಬೋಸ್
- v ಗ.ಗೈ.ಸಂ. ಪ್ರತಿನಿಧಿ .... ಶ್ರೀಮತಿ ಎಚ್.ಸಿ. ಕ್ಯಾಪ್ಟನ್

ಈ ಸಮಿತಿಯು ದೀರ್ಘಕಾಲ ಚರ್ಚೆ ನಡೆಸಿದ ಬಳಿಕ 7ನೇ ನವೆಂಬರ್ 1950ರಂದು All India Boys Scout Association ಮತ್ತು Hindustan Scout Association ವಿಲೀನವಾಗಿ (Bharat Scouts and Guides) ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆ ಸ್ಥಾಪನೆಯಾಯಿತು. ಆದರೆ ಗೈಡ್ ಸಂಸ್ಥೆ ಇದಕ್ಕೆ ಪೂರ್ಣ ಸಮ್ಮತಿ ನೀಡಲಿಲ್ಲ. ಅಖಿಲ ಭಾರತ ಗೈಡ್ಸ್ ಸಂಸ್ಥೆಯು ದೆಹಲಿಯಲ್ಲಿ 1950 ಫೆಬ್ರವರಿ ತಿಂಗಳಲ್ಲಿ ಸಭೆ ಸೇರಿ ತರಬೇತಿ ಮತ್ತು ಆಡಳಿತಕ್ಕೆ ಸ್ವಾಯತ್ತ ಅವಕಾಶ ಕೊಡುವವರೆಗೂ ವಿಲೀನಗೊಳ್ಳುವುದು ಸಾಧ್ಯವಿಲ್ಲ ಎಂಬ ನಿರ್ಧಾರವನ್ನು ಕೈಗೊಂಡಿತು. ಡಿಸೆಂಬರ್ 1950ರಲ್ಲಿ ಎಲ್ಲಾ ರಾಜ್ಯಗಳ ಗೈಡ್ ಆಯುಕ್ತರು ಸೇರಿ ತರಬೇತಿ ಮತ್ತು ಆಡಳಿತ ವಿಭಾಗವು ಮಹಿಳೆಯರ ಗುರುತರ ಜವಾಬ್ದಾರಿಯಾಗಿರಬೇಕೆಂದು ವಿಲೀನ ಸಮಿತಿಯ ಮುಂದೆ ಬೇಡಿಕೆಯನ್ನು ಸಲ್ಲಿಸಿದರು. ಈ ಅಂಶವನ್ನು ಒಪ್ಪಿಕೊಂಡು ನಂತರ 1951ರಲ್ಲಿ ಅಖಿಲ ಭಾರತ ಗರ್ಲ್‌ಗೈಡ್ಸ್ ಸಂಸ್ಥೆಯು ಲಕ್ನೋದಲ್ಲಿ ಸಭೆ ಸೇರಿ ವಿಲೀನೀಕರಣದ ನಿಯಮಗಳನ್ನು ಒಪ್ಪಿಕೊಳ್ಳುವ ನಿರ್ಣಯವನ್ನು ಕೈಗೊಂಡರು. 1951 ಆಗಸ್ಟ್ 15 ರಂದು ಅಖಿಲಭಾರತ ಗರ್ಲ್‌ಗೈಡ್ಸ್ ಸಂಸ್ಥೆಯು ಭಾರತ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯೊಡನೆ ವಿಲೀನಗೊಂಡಿತು.

ಅಖಿಲ ಭಾರತ ಗೈಡ್ಸ್ ಸಂಸ್ಥೆಯು ವಿಶ್ವ ಗರ್ಲ್ ಸ್ಕೌಟ್ ಮತ್ತು ಗರ್ಲ್‌ಗೈಡ್ ಸಂಸ್ಥೆಯ ಸಂಸ್ಥಾಪಕ ಸದಸ್ಯತ್ವವನ್ನು ಪಡೆದಿದೆ. ವಿಲೀನದ ನಂತರ ವಿ.ಗ.ಗೈ ಮತ್ತು ಗ.ಸ್ಕೌ ಸಂಸ್ಥೆಯ ಸದಸ್ಯತ್ವವನ್ನು ಕಳೆದುಕೊಂಡಿತು. ಇದಕ್ಕೆ ಕಾರಣ ವಿಶ್ವ ಸಂಸ್ಥೆಯು ಪ್ರತಿ ರಾಷ್ಟ್ರದಲ್ಲಿ ಗೈಡ್ ಸಂಸ್ಥೆಯನ್ನು ಮಹಿಳೆಯರೆ ಪ್ರತ್ಯೇಕವಾಗಿ, ಸ್ವತಂತ್ರವಾಗಿ

ನಡೆಸಬೇಕೆಂಬ ಸಂವಿಧಾನಾತ್ಮಕ ಕರಾರನ್ನು ಹೊಂದಿತ್ತು. ವಿಶ್ವ.ಗ.ಗೈ.ಗ.ಸ್ಕೌ.ನ್ನು ಸಂಸ್ಥೆಯು, ಜಂಟಿ ಸಂಸ್ಥೆಯಲ್ಲಿ, ಗೈಡ್‌ಗಳ (ಮಹಿಳೆಯರ) ಸ್ಥಾನಮಾನದ ಬಗ್ಗೆ ಅನುಮಾನವನ್ನು ವ್ಯಕ್ತಪಡಿಸಿತು. 1952ರಲ್ಲಿ ನಾರ್ವೆಯಲ್ಲಿ ನಡೆದ 4ನೇ ವಿಶ್ವ ಗೈಡ್ಸ್ ಸಮ್ಮೇಳನದಲ್ಲಿ ಭಾರತದ ಪ್ರತಿನಿಧಿಯಾದ ಶ್ರೀಮತಿ ಲಕ್ಷ್ಮೀ ಮುಜುಮ್ದಾರ್ ರಾಷ್ಟ್ರೀಯ ಪ್ರಧಾನ ಆಯುಕ್ತರು ಅನುಮಾನಗಳನ್ನು ಪರಿಹರಿಸಿದರು. ಆದರೂ ಕೆಲವು ತಾಂತ್ರಿಕ ತೊಂದರೆಗಳು ತಲೆದೋರಿದವು. ಶ್ರೀಮತಿ ಡೇಮ್ ಲಿಸ್ಲಿ ವಾಟ್ಲೆಯವರ ಸಂಧಾನದಿಂದ ಈ ತೊಡಕುಗಳು ಪರಿಹಾರವಾದವು. ನಂತರ 1953ರಲ್ಲಿ ಭಾ.ಗೈ ಸಂಸ್ಥೆಯು ವಿಶ್ವಗೈಡ್ ಸಂಸ್ಥೆಯಲ್ಲಿ ಮರಳಿ ಪೂರ್ಣ ಸದಸ್ಯತ್ವವನ್ನು (full member) ಪಡೆಯಿತು.

ಗೈಡಿಂಗ್ ಇಂದು : ಇಂದು ಭಾರತದಲ್ಲಿ 52 ರಾಜ್ಯಗಳಲ್ಲಿ ಗೈಡ್ ಸಂಸ್ಥೆಗಳಿವೆ. ಒಟ್ಟು ಭಾರತದಲ್ಲಿ ಸುಮಾರು 25 ಲಕ್ಷ ಗೈಡ್ಸ್‌ಗಳಿದ್ದಾರೆ. ಭಾರತವು ಗಣತಿಯ ಪ್ರಕಾರ ವಿಶ್ವದಲ್ಲಿ ಮೂರನೆ ಸ್ಥಾನವನ್ನು ಪಡೆದಿದೆ. ಭಾರತದಲ್ಲಿ ಅತಿಹೆಚ್ಚು ಪ್ರಮಾಣದ ದಳಗಳು ಶಿಕ್ಷಣ ಇಲಾಖೆಯಿಂದ ಪ್ರಾಯೋಜಿಸಲ್ಪಟ್ಟಿವೆ. ಮುಕ್ತದಳಗಳೂ (Open Unit) ಜಾರಿಯಲ್ಲಿವೆ. ಸಾವಿರಾರು ಶಿಕ್ಷಕಿಯರು ಸ್ವಯಂ ಸೇವಕರಾಗಿ ನಿಷ್ಠೆಯಿಂದ ಸೇವಾಮನೋಭಾವದಿಂದ ತಮ್ಮ ವಿರಾಮವೇಳೆಯಲ್ಲಿ ಚಳವಳಿಯನ್ನು ಮುನ್ನಡೆಸುತ್ತಾ ಅದರ ಬೆಳವಣಿಗೆಗಾಗಿ ಮತ್ತು ಅಭಿವೃದ್ಧಿಗಾಗಿ ಶ್ರಮಿಸುತ್ತಿದ್ದಾರೆ. ಶಿಕ್ಷಕರಲ್ಲದ ನೂರಾರು ಸ್ವಯಂಸೇವಕರು ಇದರ ಅಭಿವೃದ್ಧಿಕಾರ್ಯದಲ್ಲಿ ತೊಡಗಿದ್ದಾರೆ. ಭಾರತದಲ್ಲಿ ಗೈಡಿಂಗ್ ಪ್ರಾರಂಭವಾಗಿ 100 ವರ್ಷಗಳು ಸಂದಿವೆ. ಸ್ಥಳೀಯದಿಂದ ಅಂತಾರಾಷ್ಟ್ರೀಯ ಮಟ್ಟದವರೆಗೆ ಎಲ್ಲಾ ಕಾರ್ಯಕ್ರಮಗಳಲ್ಲೂ ಭಾಗವಹಿಸುತ್ತಾ, ಉತ್ತಮ ತರಬೇತಿ ಪಡೆಯುತ್ತಾ, ಈ ಚಳವಳಿಯ ಹಿರಿಯ ಹಾಗೂ ಕಿರಿಯ ಸದಸ್ಯರು ಉತ್ತಮ ನಾಗರಿಕರಾಗಿ ದೇಶದ ಹೆಮ್ಮೆಯ ಪ್ರಜೆಗಳಾಗುತ್ತಿದ್ದಾರೆ. ವಿಶ್ವ ಗರ್ಲ್‌ಗೈಡ್ ಸಂಸ್ಥೆಯಲ್ಲಿ ಭಾರತ ಸ್ಕೌಟ್ ಮತ್ತು ಗೈಡ್ಸ್‌ನ ಕೊಡುಗೆ ಮಹತ್ವ ಪೂರ್ಣವಾಗಿದೆ. ಗೈಡ್ ಚಳವಳಿಯು 2010 ರಿಂದ 2012 ರ ವರೆಗೆ ವಿಶ್ವ ಗರ್ಲ್ ಗೈಡ್, ಗರ್ಲ್ ಸ್ಕೌಟ್ ಸಂಸ್ಥೆಯು ಶತಮಾನೋತ್ಸವವನ್ನು ಆಚರಿಸುತ್ತಿದೆ. 21ನೇ ಶತಮಾನದಲ್ಲಿ ಪ್ರಗತಿಪರವಾಗಿ ಮುನ್ನಡೆಯಲು ಸಜ್ಜಾಗಿದೆ, ಸದೃಢವಾಗತ್ತಿದೆ, ಸಾಧನೆಯತ್ತ ಸಾಗುತ್ತಿದೆ.

10 ಏಪ್ರಿಲ್ 1910ರಿಂದ ಇಂಗ್ಲೆಂಡಿನಲ್ಲಿ ಗೈಡ್ ಸಂಸ್ಥೆ ಅಧಿಕೃತವಾಗಿ ಪ್ರಾರಂಭವಾಯಿತು. 1911ರಲ್ಲಿ ಭಾರತದಲ್ಲಿ ಗೈಡಿಂಗ್ ಪ್ರಾರಂಭವಾಯಿತು. ಹೀಗೆ ಅನೇಕ ರಾಷ್ಟ್ರಗಳಲ್ಲಿ 11 ಮತ್ತು 12ರಲ್ಲಿ ಪ್ರಾರಂಭವಾದ್ದರಿಂದ ಮೂರು ವರ್ಷ ಶತಮಾನೋತ್ಸವವನ್ನು ಹಮ್ಮಿಕೊಳ್ಳಲಾಗಿತ್ತು. ಇದರ ವಿಚಾರ ಬಿತ್ತಿ ಬೆಳೆಯಿರಿ, ಹಂಚಿಕೊಳ್ಳಿ Plant Grow share ನಮ್ಮ ನಿಮ್ಮ ಸಮುದಾಯದಲ್ಲಿ ಸೇವೆಯನ್ನು ಬಿತ್ತಿ ಪ್ರಾಮಾಣಿಕವಾಗಿ ಮಾಡಿ ಅದರ ಫಲವನ್ನು ಸಮುದಾಯಿಗಳೆಲ್ಲರೂ

ಹಂಚಿಕೊಳ್ಳಿ. ಜೊತೆಗೆ ಸಾಹಸ, ವಿನೋದ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಆನಂದಿಸಿ. ಭಾರತದಲ್ಲಿ ಏಪ್ರಿಲ್ 2010ಕ್ಕೆ ಪ್ರಾರಂಭಿಸಲಾಗುವುದು.

ಭಾರತದಲ್ಲಿ ಎಲ್ಲಿ? ಏನು?

1. ದೆಹಲಿ – ರಾಷ್ಟ್ರೀಯ ಕೇಂದ್ರ ಕಛೇರಿ,
2. ಲಕ್ನೋ – ಮೊದಲ ಬಾಲಕಿಯರ ಮೆಸೆಂಜರ್ ದಳ,
3. ಜಬ್ಬಲ್ ಪುರ – ಪ್ರಥಮ ಭಾರತೀಯ ಗೈಡ್ ದಳ,
4. ಕಲ್ಕತ್ತ – ಪ್ರಥಮ ರಾಷ್ಟ್ರೀಯ ಗೈಡ್ ಕಛೇರಿ,
5. ಮಧ್ಯಪ್ರದೇಶ – ಪಚ್ಚಮಡಿ – ರಾಷ್ಟ್ರೀಯ ತರಬೇತಿ ಕೇಂದ್ರ
6. ಕರ್ನಾಟಕ – ಬೆಂಗಳೂರು ಅ) ರಾಜ್ಯ ಮುಖ್ಯ ಕಛೇರಿ ಆ) ರಾಜ್ಯ ಗೈಡ್ ಕಛೇರಿ ಹಾಗು ತರಬೇತಿ ಕೇಂದ್ರ, ಶಾಂತಿಗೃಹ, ಈ) ದೊಡ್ಡಬಳ್ಳಾಪುರ – ರಾಜ್ಯ ತರಬೇತಿ ಕೇಂದ್ರ, ಕೊಂಡಜ್ಜಿ – ರಾಜ್ಯ ತರಬೇತಿ ಕೇಂದ್ರ

ಹೆಜ್ಜೆ–6: ರಾಜ್ಯ ಪುರಸ್ಕಾರದ ಪರೀಕ್ಷೆಗಳು

1. ತೃತೀಯ ಸೋಪಾನದವರೆಗಿನ ಪ್ರಾವೀಣ್ಯತೆ ಬಗ್ಗೆ ಖಚಿತಪಡಿಸಿಕೊಳ್ಳಿ.
2. ತೃತೀಯ ಸೋಪಾನ ಪದಕವನ್ನು ಪಡೆದಿರುವುದು.
3. ಆಂಬುಲೆನ್ಸ್ (ಚರಚಿಕಿತ್ಸಾ) ಪದಕ ಗಳಿಸುವುದು.
4. 10 ಮೀ. ನಡಿಗೆ ಅಥವಾ 25 ಕಿ.ಮೀ. ಸೈಕಲ್‌ನಲ್ಲಿ ಒಂದು ರಾತ್ರಿ ತಂಗುವ ಹೊರ ಸಂಚಾರದಲ್ಲಿ ನಿಮ್ಮ ದಳದೊಂದಿಗೆ ಭಾಗವಹಿಸಿ ಹತ್ತು ದಿನದೊಳಗೆ ವರದಿಯನ್ನು ಗೈಡ್ ಶಿಕ್ಷಕಿಗೆ ಸಲ್ಲಿಸುವುದು.
5. ಕೆಳಗಿನವುಗಳಲ್ಲಿ ಯಾವುದಾದರೂ ಒಂದು ಯೋಜನೆಯನ್ನು **6 ತಿಂಗಳು** ಮಾಡಿ ವರದಿಯನ್ನು ಸಲ್ಲಿಸುವುದು.
   - ಕೈತೋಟ (ಕಿಚನ್ ಗಾರ್ಡನ್)
   - ತಾರಸಿ ತೋಟ (ರೂಫ್ ಗಾರ್ಡನ್)
   - ತೂಗುತೋಟ (ಹ್ಯಾಂಗಿಂಗ್ ಗಾರ್ಡನ್)
6. **ನಕ್ಷಾ ಕೌಶಲ (ಮ್ಯಾಪಿಂಗ್):** ಕೆಳಗಿನ ಯಾವುದಾದರೂ ಒಂದು ವಿಧಾನವನ್ನು ಅನುಸರಿಸಿ ನಕ್ಷೆಯನ್ನು ತಯಾರಿಸಿ ಮೊದಲು ಮಾಡಿರುವುದನ್ನು ಹೊರತುಪಡಿಸಿ.
   - ಸಾಮಾನ್ಯ ಮೇಜು ವಿಧಾನ
   - ತ್ರಿಕೋನ ವಿಧಾನ
   - ಮಾರ್ಗ ನಕ್ಷೆ
7. ಶಿಬಿರ ಕೌಶಲ (ಕ್ಯಾಂಪ್ ಕ್ರಾಫ್ಟ್)
   * ಒಂದು ಅಥವಾ ಎರಡು ಭಾವಣಿಯ ಗುಡಾರವನ್ನು (ಟೆಂಟ್) ಬಿಚ್ಚಿ ಹಾಕಿ ಮಡಚಿ ಇಡುವುದನ್ನು ಮಾಡುವುದು.
   * ಹೆಣಿಗೆ (ಸ್ಪ್ಲೈಸಿಂಗ್) ಮೊದಲು ಮಾಡದೆ ಇರುವ ಯಾವುದಾದರೂ ಒಂದನ್ನು ಮಾಡಿ ಕಣ್ಣು/ಹಿಮ್ಮುಖ/ಗಿಡ್ಡ ಹೆಣಿಗೆ.

* ಯಾವುದಾದರೂ ಅಗ್ರಗಾಮಿ ಯೋಜನೆಯ ಮಾದರಿ ತಯಾರಿಸಿ ವಾನರ ಸೇತುವೆ (ಮಂಕಿ ಬ್ರಿಡ್ಜ್), ಕಮಾಂಡೊ ಬ್ರಿಡ್ಜ್, ಟ್ರೆಸಲ್
* ವೀಕ್ಷಣಾ ಗೋಪುರ (ವಾಚ್ ಟವರ್) ಮರದ ಮೇಲಿನ ಅಟ್ಟಣಿಕೆ (ಟ್ರೀಟಾಪ್ ಹಟ್)

8. ಹಿಂದಿನ ಪರೀಕ್ಷೆಗಳಲ್ಲಿ ಗಳಿಸದೆ ಇರುವ ಕೆಳಗಿನ ಪ್ರಾವೀಣ್ಯತಾ ಪದಕಗಳಲ್ಲಿ ಯಾವುದಾದರೂ ಮೂರನ್ನು ಗಳಿಸಿ.

a) ಶಿಶುದಾದಿ (ಚೈಲ್ಡ್ ನರ್ಸ್)
b) ಸಮುದಾಯದ ಕಾರ್ಯಕರ್ತೆ (Community Worker)
c) ಜೀವಪರಿಸರ ಶಾಸ್ತ್ರ (ಎಕಾಲಜಿ)
d) ಸಾಕ್ಷರತೆ (ಲಿಟ್ರಸಿ)
e) ಸಮುದಾಯ ಹಾಡುಗಾರಿಕೆ (ಕಮ್ಯುನಿಟಿ ಸಿಂಗಿಂಗ್)
f) ನೈರ್ಮಲ್ಯ ವರ್ಧಕ (ಸ್ಯಾನಿಟೇಷನ್ ಪ್ರಮೋಟರ್)
g) ಸಾರ್ವಜನಿಕ ಆರೋಗ್ಯ (ಪಬ್ಲಿಕ್ ಹೆಲ್ತ್)
h) ಮಣ್ಣಿನ ಸಂರಕ್ಷಕಿ (ಸಾಯಿಲ್ ಕನ್ಸರ್‌ವೇಟರ್)
i) ಸೌರಶಕ್ತಿ ಜಾಗೃತಿ (ಸೋಲಾರ್ ಎನರ್ಜಿ ಅವೇರ್‌ನೆಸ್)
j) ಸುರಕ್ಷತಾ ಅರಿವು (ಸೇಫ್ಟಿ ನಾಲೆಡ್ಜ್)
k) ಗ್ರಾಮ ಕಾರ್ಯಕರ್ತೆ (ರೂರಲ್ ವರ್ಕರ್)
l) ರಕ್ಷಕರು (ರೆಸ್ಕ್ಯುಯರ್)

9. ಕೆಳಗಿನವುಗಳಲ್ಲಿ ಗಳಿಸದೇ ಇರುವ ಯಾವುದಾದರೂ ಎರಡು ಪ್ರಾವೀಣ್ಯತಾ ಪದಕಗಳನ್ನು ಗಳಿಸುವುದು.

* ಶಿಬಿರವಾಸಿ (ಕ್ಯಾಂಪರ್)
* ಅಗ್ರಗಾಮಿ (ಪಯೋನಿಯರ್)
* ನಕ್ಷತ್ರ ವೀಕ್ಷಕ (ಸ್ಟಾರ್ ಗೇಝರ್)
* ಪ್ರಕೃತಿ ತಜ್ಞೆ (ನ್ಯಾಚುರಲಿಸ್ಟ್)
* ಜಾಡುಗಾತಿ (ಟ್ರೇಲರ್)
* ವಿದ್ಯುನ್ಮಾನ (ಎಲೆಕ್ಟ್ರಾನಿಕ್ಸ್)

* ಸಂಕೇತಗಾರ್ತಿ (ಸಿಗ್ನಲರ್)
* ಕ್ಯಾನ್ಸರ್ ಜಾಗೃತಿ (ಕ್ಯಾನ್ಸರ್ ಅವೇರ್‌ನೆಸ್)
* ಆರೋಗ್ಯ (ಹೆಲ್ತ್)
* ಪೌಷ್ಠಿಕ ಆಹಾರ ಶಿಕ್ಷಕಿ (ನ್ಯೂಟ್ರಿಷನ್ ಎಜುಕೇಟರ್)
* ಕೃಷಿಕ (ಫಾರ್‌ಮರ್)
* ಹೈನುಗಾರ್ತಿ (ಡೈರಿಮೇಡ್)
* ಬರಹಗಾರ್ತಿ (ರೈಟರ್)
* ಸೌಂದರ್ಯ ವರ್ಧಕಿ (ಬ್ಯುಟೀಷಿಯನ್)
* ನಾನು ಮುಕ್ತವಾಗಿರುವಿಕೆ (ಫ್ರೀ ಬೀಯಿಂಗ್ ಮಿ)
* ನೃತ್ಯಗಾರ್ತಿ (ಡ್ಯಾನ್ಸರ್)

ಜಲಗೈಡ್: ಮೇಲಿನ ರಾಜ್ಯ ಪುರಸ್ಕಾರ್ ಪರೀಕ್ಷೆಗಳ ಜೊತೆಗೆ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯಬೇಕು.

1. ಹಿಮ್ಮುಖ ಮತ್ತು ವಿವಿಧ ರೀತಿಯಲ್ಲಿ 50 ಮೀಟರ್ ಈಜುವುದು.
2. ನೀರಿಗೆ ಜಿಗಿದು ಒಂದು ನಿಮಿಷ ನೀರಿನಲ್ಲೇ ಇರುವುದು.
3. ಮುಳುಗುತ್ತಿರುವ ವ್ಯಕ್ತಿಯನ್ನು ರಕ್ಷಿಸುವ ಕ್ರಮವನ್ನು ತಿಳಿಯುವುದು.
4. ಸೆಮಫೋರ್ ವಿಧಾನದಿಂದ ಸರಳವಾದ ಸುದ್ದಿ ಕಳುಹಿಸುವುದು ಮತ್ತು ಸ್ವೀಕರಿಸುವುದು.
5. ನೆರೆರಾಷ್ಟ್ರಗಳ ಧ್ವಜಗಳ ಬಗ್ಗೆ ತಿಳಿಯುವುದು.
6. ಕನಿಷ್ಠ ನಾವಿಕರಿಗೆ ಉಪಯುಕ್ತವಾದ ಮೂರು ನಕ್ಷತ್ರಗಳ ಬಗ್ಗೆ ತಿಳಿಯುವುದು.

ವಾಯುಗೈಡ್: ಮೇಲಿನ ರಾಜ್ಯ ಪುರಸ್ಕಾರ ಪರೀಕ್ಷೆಗಳ ಜೊತೆ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯಬೇಕು.

1. ಕನಿಷ್ಟ ಎರಡು ಬೇರೆ ಬೇರೆ ವಿಧದ ವಿಮಾನಗಳ ಮಾದರಿ ಮಾಡುವುದು.
2. ವಾಯುಬಯಲು ಮತ್ತು ಅದರ ಸಂಕೇತ ವಿಧಾನ ತಿಳಿದಿರುವುದು.

3. ವಾಯುಬಯಲಿನ ಯೋಜನೆ ಹಾಕಿ ಮಾದರಿ ತಯಾರಿಸುವುದು.

4. ರಾಷ್ಟ್ರೀಯ ನಕ್ಷೆಯಲ್ಲಿ ವಿಮಾನ ನಿಲ್ದಾಣ ಮತ್ತು ವಾಯುಪಡೆಯ ಮೈದಾನವನ್ನು ಗುರುತಿಸುವುದು.

ಸೂಚನೆ:(i) ರಾಜ್ಯ ಪುರಸ್ಕಾರ ಪದಕದಲ್ಲಿ ಮೇಲೆ ಅಶೋಕ ಚಕ್ರ ಕೆಳಗೆ ಭಾರತ ಸ್ಕೌಟ್ ಮತ್ತು ಗೈಡ್ ಲಾಂಛನವಿರುತ್ತದೆ. ಇವೆರಡನ್ನೂ ಎಲೆಯ ಎರಡು ಗುಚ್ಛಗಳಿಂದ (Laurel) ಸೇರಿಸಲಾಗಿರುತ್ತದೆ. ಮಧ್ಯದಲ್ಲಿ ದೇವನಾಗರಿ ಲಿಪಿಯಲ್ಲಿ **ಸೇವಾ** ಎಂದು ಬರೆದಿರುತ್ತದೆ.

(ii) ಸ್ಥಳೀಯ/ಜಿಲ್ಲಾ ಸಂಸ್ಥೆಯ ಪದಕ ಸಮಿತಿ ನೇಮಕ ಮಾಡಿದ ಸ್ವತಂತ್ರ ಪರೀಕ್ಷಕರಿಂದ ಪಡೆಯುವ ಪ್ರಮಾಣ ಪತ್ರದ ಆಧಾರದ ಮೇಲೆ ಪದಕವನ್ನು ನೀಡಲಾಗುವುದು.

(iii) ಅರ್ಹತಾ ಪದಕವನ್ನು ಪಡೆದ ಗೈಡ್ ರಾಜ್ಯ ಮೇಲ್ವಿಚಾರಣೆಯಲ್ಲಿ ನಡೆಯುವ ರಾಜ್ಯ ಪುರಸ್ಕಾರ ಪರೀಕ್ಷಾ ಶಿಬಿರದಲ್ಲಿ ಭಾಗವಹಿಸುವುದು. ಅಲ್ಲಿ ಗೈಡ್‌ನ ಜ್ಞಾನ ಮತ್ತು ಕೌಶಲವನ್ನು ಮರುಪರೀಕ್ಷಿಸಲಾಗುವುದು. ಈ ಶಿಬಿರದಲ್ಲಿ ಅರ್ಹತೆಯನ್ನು ಪಡೆದರೆ ಗೈಡ್ ರಾಜ್ಯ ಪುರಸ್ಕಾರ ಪದಕವನ್ನು ಮತ್ತು ಅರ್ಹತಾ ಪತ್ರವನ್ನು ಪಡೆಯಲು ಅರ್ಹಳಾಗುವಳು.

(iv) ರಾಜ್ಯ ಪುರಸ್ಕಾರ ಪದಕವನ್ನು ತೃತೀಯ ಸೋಪಾನದ ಪದಕ ತೆಗೆದು ಅದೇ ಸ್ಥಳದಲ್ಲೇ ಧರಿಸುವುದು.

(v) ರಾಜ್ಯ ಪ್ರಧಾನ ಆಯುಕ್ತರಿಂದ ಶಿಫಾರಸ್ಸು ಮಾಡಲ್ಪಟ್ಟ ಈ ಪದಕವನ್ನು ಅವರು ನಿರ್ದೇಶಿಸುವಂತೆ ತೃತೀಯ ಸೋಪಾನದ ಜ್ಞಾನ ಮತ್ತು ಕೌಶಲಗಳನ್ನು ಗೈಡ್ ಹೊಂದಿರುವಳೆಂದು ಖಚಿತಪಡಿಸಿಕೊಳ್ಳುವುದು.

vi) ರಾಜ್ಯ ಪುರಸ್ಕಾರ ಪ್ರಶಸ್ತಿಯನ್ನು ರಾಜ್ಯಪಾಲರು ನೀಡುತ್ತಾರೆ ಅಥವಾ ರಾಜ್ಯದ ಪ್ರಧಾನ ಆಯುಕ್ತರ ಶಿಫಾರಸ್ಸಿನ ಮೇರೆಗೆ ರಾಜ್ಯ ಸಂಸ್ಥೆಯ ಅಧ್ಯಕ್ಷರು ನೀಡುತ್ತಾರೆ.

ಹೆಜ್ಜೆ–7 : ರಾಷ್ಟ್ರಪತಿ ಗೈಡ್ ಪುರಸ್ಕಾರದ ಪರೀಕ್ಷೆಗಳು

ರಾಜ್ಯ ಪುರಸ್ಕಾರ ಪದಕ ಪಡೆದಿರಬೇಕು. ಅದರ ಗುಣಮಟ್ಟವನ್ನು ಕಾಪಾಡಬೇಕು.

. **ಶಿಬಿರ ವಾಸ:**

a. ದಳ/ಪಟಾಲಂನ ಜೊತೆ **3 ರಾತ್ರಿ ತಂಗುವ** ಶಿಬಿರ ವಾಸವನ್ನು ಮಾಡುವುದು (ಜಾಂಬೂರಿ ರ್‍ಯಾಲಿಗಳ ಶಿಬಿರವಾಸವನ್ನು ಪರಿಗಣಿಸಲಾಗುವುದಿಲ್ಲ)

b. ಪ್ರಕೃತಿದತ್ತವಾದ ವಸ್ತುಗಳಿಂದ ಗುಡಾರ/ ಗುಡಿಸಲು, ಮರಕ್ಕೆ ಕಟ್ಟಿ ಇಬ್ಬರು ಮಲಗುವಷ್ಟಿರಬೇಕು.

. a. ಪ್ರಕೃತಿ ವಿಕೋಪ ನಿರ್ವಹಣ ಪದಕವನ್ನು ಪಡೆದಿರುವುದು.

b. ಆಂಬುಲೆನ್ಸ್ ಪದಕವನ್ನು ಪುನಃ ಪಾಸುಮಾಡಿ.

. ಈ ಹಿಂದೆ ಗಳಿಸದ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಾವೀಣ್ಯತಾ ಪದಕವನ್ನು ಗಳಿಸುವುದು.

* ಏಡ್ಸ್ ಜಾಗೃತಿ (ಏಡ್ಸ್ ಅವೇರ್‌ನೆಸ್)
* ಗೃಹ ಕುಶಲಿ (ಹ್ಯಾಂಡಿ ವುಮನ್)
* ಸೌಂದರ್ಯ ವರ್ಧಕಿ (ಬ್ಯುಟೀಷಿಯನ್)
* ಮಾರ್ಗಾನ್ವೇಷಕಿ (ಪಾತ್ ಫೈಂಡರ್)
* ಹೊರ ಸಂಚಾರಿಕ (ಹೈಕರ್)
* ಸಮುದ್ರ ಮೀನುಗಾರ್ತಿ
* ವಿಶ್ವ ಸಂರಕ್ಷಕಿ (ವರ್ಲ್ಡ್ ಕನ್ಸರ್‌ವೇಟರ್)
* ದುಭಾಷಿ/ ಭಾಷಾಂತರಿ (ಇಂಟರ್ ಪ್ರೀಟರ್)
* ಕೃಷಿಕ (ಫಾರ್‌ಮರ್)

* ನಾನು ಮುಕ್ತವಾಗಿರುವಿಕೆ (ಫ್ರೀ ಬಿಯಿಂಗ್ ಮಿ)
* ಸೌರಶಕ್ತಿ ಜಾಗೃತಿ (ಸೋಲಾರ್ ಎನರ್ಜಿ ಅವೇರ್‌ನೆಸ್)
* ಸಮಾರಂಭ ನಿರ್ವಾಹಕಿ (ಈವೆಂಟ್ ಮ್ಯಾನೇಜರ್)
* ಸ್ವ-ರಕ್ಷಣೆ (ಸೆಲ್ಫ್ ಡಿಫೆನ್ಸ್)

5. ವಾರಕ್ಕೆ ಎರಡು ಘಂಟೆಯಂತೆ 6 ತಿಂಗಳ ಕಾಲ ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಸೇವಾ ಯೋಜನೆಯಲ್ಲಿ ನಿರಂತರವಾಗಿ ಭಾಗವಹಿಸಿ.
   * ಲಿಂಗ ಸಮಾನತೆ ಜಾಗೃತಿ ಮೂಡಿಸಿ ಮಹಿಳಾ ಸಬಲಿಕೃತರನ್ನಾಗಿ ಮಾಡಿ
   * ಮಕ್ಕಳ ಸಾವನ್ನು ತಡೆಯುವುದು.
   * ಬಾಣಂತಿಯರ ಆರೋಗ್ಯವನ್ನು ಸುಧಾರಿಸಿ.
   * ಮಲೇರಿಯಾ ಎಚ್.ಐ.ವಿ. ಏಡ್ಸ್ ಮುಂತಾದ ರೋಗಗಳನ್ನು ಸಮರೋಪಾದಿಯಲ್ಲಿ ತಡೆಗಟ್ಟಿ.
   * ಪ್ರಕೃತಿ ಸಂಪತ್ತು ನಿರಂತರತೆಯನ್ನು ಕಾಪಾಡುವುದು.
6. ಗೈಡ್ ಶಿಕ್ಷಕಿಯವರ ಮಾರ್ಗದರ್ಶನದಲ್ಲಿ ಮಕ್ಕಳಿಗೆ 15 ದಿನಗಳ ಕಾಲ ಆಟವನ್ನು ಆಡಿಸಿ

   ಅಥವಾ

   ಆಂತರಿಕ ಅಲಂಕರಣ ಮತ್ತು ಕಲಾತ್ಮಕ ಅಡುಗೆ ಮಾಡಿ ತೋರಿಸುವುದು.

7 ವ್ಯಾಗ್ಸ್ (WAGGGS) ವಿಶ್ವ ಕೇಂದ್ರಗಳ ಪರಿಚಯ ಮಾಡಿಕೊಡಿ. ಮಾಹಿತಿ ಟಿಪ್ಪಣಿ ಬರೆಯಿರಿ.

8. ರಾಜ್ಯ ಪುರಸ್ಕಾರ ಗೈಡ್ ಆಗಿ ಕನಿಷ್ಠ 12 ತಿಂಗಳ ಸೇವೆ ಸಲ್ಲಿಸಬೇಕು.

ಸೂಚನೆ: (i) ರಾಷ್ಟ್ರಪತಿ ಪುರಸ್ಕಾರವನ್ನು ಭಾರತದ ರಾಷ್ಟ್ರಪತಿಯವರು ಪ್ರದಾನ ಮಾಡುತ್ತಾರೆ. (ii) ಈ ಪ್ರಶಸ್ತಿಯನ್ನು ಮತ್ತು ಪದಕವನ್ನು ರಾಷ್ಟ್ರ ಸಂಸ್ಥೆಯ ಆಸ್ತಿ ಎಂದು ಪರಿಗಣಿಸಲಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಆದೇಶಿಸಿದಲ್ಲಿ ಪ್ರಶಸ್ತಿ ಮತ್ತು ಪದಕವನ್ನು ಹಿಂತಿರುಗಿಸತಕ್ಕದ್ದು. (iii) ಎಲ್ಲಾ ಅವಶ್ಯಕತೆ ಪೂರೈಸಿರುವ, ಅವಶ್ಯಕ ಪ್ರಾವೀಣ್ಯತಾ ಪದಕವನ್ನು ಪಡೆದಿರುವ

ನಿಬಂಧನೆಗಳನ್ನು ಅನುಸರಿಸಿರುವ ರಾಜ್ಯ ಪುರಸ್ಕಾರ ಗೈಡ್ ರಾಷ್ಟ್ರೀಯ ಸಂಸ್ಥೆ ಸಹಾಯಕ ನಿರ್ದೇಶಕರ ಮೇಲ್ವಿಚಾರಣೆಯಲ್ಲಿ ಏರ್ಪಡಿಸುವ ಪರೀಕ್ಷಾ ಶಿಬಿರದಲ್ಲಿ ಭಾಗವಹಿಸುವುದು.

ಜಲಗೈಡ್: ಮೇಲಿನ ರಾಷ್ಟ್ರಪತಿ ಗೈಡ್ ಪುರಸ್ಕಾರದ ಪರೀಕ್ಷೆಗಳ ಜೊತೆ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯುವುದು

1. ಹಿಮ್ಮುಖ ವರಸೆಯಲ್ಲಿ ನೂರು ಮೀಟರ್ ಈಜುವುದು.
2. ವಿವಿಧ ರೀತಿಯಲ್ಲಿ ನೀರಿಗೆ ಜಿಗಿಯುವುದು.
3. ನೌಕಾಪಡೆಯ ಬಗ್ಗೆ ಮತ್ತು ಅದರಲ್ಲಿನ ಶ್ರೇಣಿಯ ಬಗ್ಗೆ ಸಾಮಾನ್ಯ ತಿಳಿವಳಿಕೆ ಪಡೆಯುವುದು.
4. ಮೋರ್ಸ್ ಸಂಕೇತಗಳನ್ನು ಉಪಯೋಗಿಸುವುದರ ಮೂಲಕ ಸಂಕೇತ ಭಾಷೆಯನ್ನು ಕಲಿಯುವುದು.
5. ಹಡಗುಗಳ ಬಗ್ಗೆ ಸಾಮಾನ್ಯ ಮಾಹಿತಿ ತಿಳಿಯುವುದು
6. ಹವಾಮಾನ, ವಾಯುಗುಣ, ಇಳಿತಭರತಗಳ ಬಗ್ಗೆ ಸಾಮಾನ್ಯ ತಿಳಿವಳಿಕೆ ಪಡೆಯುವುದು.
7. ನಕ್ಷತ್ರ ಪುಂಜಗಳ ಬಗ್ಗೆ ತಿಳಿಯುವುದು.

ವಾಯುಗೈಡ್ : ಮೇಲಿನ ರಾಷ್ಟ್ರಪತಿ ಗೈಡ್ ಪುರಸ್ಕಾರದ ಪರೀಕ್ಷೆಗಳ ಜೊತೆ ಕೆಳಗಿನ ಪರೀಕ್ಷೆಗಳಲ್ಲೂ ಅರ್ಹತೆ ಪಡೆಯುವುದು.

1. ಎರಡು ವಿಧದ ವಿಮಾನದ ಮಾದರಿ ಮಾಡುವುದು.
2. ಕನಿಷ್ಠ 3 ವಿಮಾನ ಮಾದರಿ ಹಾರಿಸುವ ಕವಾಯಿತಿಯಲ್ಲಿ ಭಾಗವಹಿಸುವುದು; ಗೈಡ್ ನಾಯಕಿಗೆ ವರದಿ ನೀಡುವುದು.
3. ಒಂದು ಇಂಧನ ಮಿಶ್ರಣವನ್ನು (fuel mixture) ತಯಾರಿಸಿ, ಒಂದು ವಾಯು ಮಾದರಿಯನ್ನು ಮಾಡಿ ಪ್ರಯೋಗಿಸಿ ಅದನ್ನು ಕಾರ್ಯಗತ ಗೊಳಿಸುವುದು.

1. ರಾಜ್ಯಪುರಸ್ಕಾರ ಪದಕವನ್ನು ಹೊಂದಿರಬೇಕು.

ಹೆಜ್ಜೆ–8 : ಸ್ಕೌಟ್–ಗೈಡ್ ವಿಶೇಷತೆಗಳು

ಜಾಂಬೂರಿ : ಜಾಂಬೂರಿ ಎಂದರೆ ರಾಷ್ಟ್ರೀಯ ಮಟ್ಟದಲ್ಲಿ ಸ್ಕೌಟ್ಸ್ ಮತ್ತು ಗೈಡ್ಸ್, ಅಂತಾರಾಷ್ಟ್ರೀಯ ಮಟ್ಟದಲ್ಲಿ ಸ್ಕೌಟ್ಸ್‌ಗಳು, ಗೈಡ್ಸ್‌ಗಳು ಸಮಾವೇಶಗೊಳ್ಳಲು ಕಲ್ಪಿಸುವ ಒಂದು ಸುವರ್ಣಾವಕಾಶ. ಜಾಂಬೂರಿ ಎಂಬ ಪದವು ಸಂಸ್ಥಾಪಕರಿಂದಲೇ ಸಂಯೋಜಿಸಲ್ಪಟ್ಟ ಪದ. ಈ ಸಮಾವೇಶದಲ್ಲಿ ಭಾಗವಹಿಸುವವರು ಒಳ್ಳೆಯ ನಡವಳಿಕೆಗಳ ರಾಯಭಾರಿಗಳಾಗಿರುತ್ತಾರೆ. ಇವರು ಜಾತಿ ಮತ, ವರ್ಗ, ವರ್ಣ, ಭಾಷೆ, ರಾಷ್ಟ್ರ, ಧರ್ಮಗಳ ಅಂತರವನ್ನು ಮೀರಿ, ಸ್ನೇಹ ಮತ್ತು ಸೌಹಾರ್ದತೆಗಳನ್ನು ಬೆಳೆಸುತ್ತಾ, ಜಾಗತಿಕ ಶಾಂತಿಯ ದೂತರಾಗುವರು. ಈ ಸಮಾವೇಶದಲ್ಲಿ ಮಕ್ಕಳು ಪ್ರತಿಜ್ಞೆ ಮತ್ತು ನಿಯಮ ಪಾಲನೆ ಮಾಡುತ್ತಾ ಒಂದಾಗಿರುವುದನ್ನು ಕಾಣಬಹುದು.

ಜಾಂಬೂರಿಯಲ್ಲಿ ಸ್ಕೌಟ್ ಮತ್ತು ಗೈಡ್ ನಗರವನ್ನು ಸ್ಥಾಪಿಸಲಾಗುವುದು. ಇದು ಸ್ವಯಂ ಪೂರಿತ ನಗರವಾಗಿರುವುದು. ಇದರಲ್ಲಿ ಎಲ್ಲಾ ಅನುಕೂಲತೆಗಳಿದ್ದು ಗುಡಾರದಲ್ಲಿ ವಾಸ, ನಿಸರ್ಗ ಸಂಚಾರ, ಪಥಸಂಚಲನ, ಜಾನಪದ ಹಬ್ಬ, ಸಾಹಸಮಯ ಚಟುವಟಿಕೆ, ಸರ್ವಧರ್ಮ ಪ್ರಾರ್ಥನೆ, ಆಕರ್ಷಕ ಮೋಜು, ಮಜ, ಜಾತ್ರೆ, ದೃಶ್ಯ ಮೆರವಣಿಗೆ, ಕೌಶಲ ಪ್ರದರ್ಶನ, ವಿಶೇಷ ಶಿಬಿರಾಗ್ನಿ, ರಸಪ್ರಶ್ನೆ ವಿನೋದಗಳಿಗೆ ಕೊನೆ ಮೊದಲು ಇರುವುದಿಲ್ಲ.

ಈ ಕಾರ್ಯಕ್ರಮಗಳಲ್ಲಿ ಮಕ್ಕಳು ಪ್ರತಿದಿನವೂ ಜೇನುನೊಣಗಳಂತೆ ಗುಂಪುಕಟ್ಟಿಕೊಂಡು ಕೆಲಸಮಾಡುತ್ತಾ, ಮುಗಿದ ನಂತರ ಮತ್ತೊಂದು ಚಟುವಟಿಕೆ ಯಲ್ಲಿ ಭಾಗವಹಿಸಲು ಮುಂದೆ ಸಾಗುತ್ತಾರೆ. ಈ ಸಮಾವೇಶದಲ್ಲಿ ವೈವಿಧ್ಯಮಯ ತಿನಿಸು, ಉಣಿಸು, ಭಾಷೆ, ವೇಷಭೂಷಣ ಸಂಸ್ಕೃತಿಗಳು ಮೇಳೈಸಿರುವುದನ್ನು ಕಾಣಬಹುದು. ಜಾಂಬೂರಿ ರಾಷ್ಟ್ರೀಯ ಭಾವೈಕ್ಯತೆ ಹಾಗೂ ವಿಶ್ವ ಬಂಧುತ್ವವನ್ನು ಸಾರುವ ಶಿಸ್ತಿನಿಂದ ಕೂಡಿದ ತಾಣವಾಗಿರುತ್ತದೆ.

ಸ್ಕೌಟ್ ಮತ್ತು ಗೈಡ್ ಸಮಾವೇಶಗಳನ್ನು ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಜಾಂಬೂರಿ ಎಂದೂ ರಾಜ್ಯ ಮಟ್ಟದಲ್ಲಿ ಜಾಂಬೋರೇಟ್ ಎಂದೂ ಜಿಲ್ಲಾ ಮಟ್ಟದಲ್ಲಿ ಕ್ಯಾಂಪೂರಿ ಮತ್ತು ತಾಲ್ಲೂಕು ಮಟ್ಟದಲ್ಲಿ ರ್‍ಯಾಲಿ ಎಂದೂ ಸಂಘಟಿಸಲಾಗುವುದು. ಸ್ಕೌಟ್ ಮತ್ತು ಗೈಡ್‌ಗಳು ಈ ಸಮಾವೇಶಗಳನ್ನು ಜಾತಕ ಪಕ್ಷಿಯಂತೆ ಕಾಯುತ್ತಿರುತ್ತಾರೆ.

ಈ ಸಮಾವೇಶಗಳ ಅಂತರ : ರಾಷ್ಟ್ರ – 3 ವರ್ಷ, ರಾಜ್ಯ – 4 ವರ್ಷ, ಜಿಲ್ಲೆ ಮತ್ತು ತಾಲ್ಲೂಕ್ – ಪ್ರತಿವರ್ಷ



ಶಿಬಿರಾಗ್ನಿ : ಬಿ.ಪಿ.ಯವರು ಮೊದಲಿಗೆ ಸೈನಿಕರಿಗಾಗಿ ಸ್ಕೌಟಿಂಗ್ ಪ್ರಾರಂಭಿಸಿದರು. ಸಂಜೆಗೆ ದಣಿದು ಶಿಬಿರಕ್ಕೆ ಮರಳಿ ಬರುವ ಸೈನಿಕರ ನಿರಾಶೆ, ಆತಂಕ, ಭಯಗಳನ್ನು ಹೋಗಲಾಡಿಸಿ ಅವರಲ್ಲಿ ಉತ್ಸಾಹ ಮತ್ತು ಚೈತನ್ಯ ತುಂಬಲು ಅವರ ಮನವನ್ನು ರಂಜಿಸಲು ಶಿಬಿರಾಗ್ನಿ ಕಾರ್ಯಕ್ರಮವನ್ನು ರೂಪಿಸಿದರು. ಈ ಕಾರ್ಯಕ್ರಮದಲ್ಲಿ ಅವರೇ ಭಾಗವಹಿಸಿ ಹಾಡಿ ಕುಣಿದು ನಕ್ಕು ನಲಿಯುವ ಅವಕಾಶವನ್ನು ಕಲ್ಪಿಸಿದರು. ಈ ಕಾರ್ಯಕ್ರಮವನ್ನು ಬಾಲಕರಿಗಾಗಿ ಸ್ಕೌಟಿಂಗ್‌ನ್ನು ರೂಪಿಸಿದಾಗ ಅದರಲ್ಲಿ ಅಳವಡಿಸಿದರು.

ಉದ್ದೇಶ :

1) ಪ್ರಕೃತಿಯ ಮಡಿಲಲ್ಲಿ ಶಿಬಿರವಾಸ ಮಾಡುತ್ತೇವೆ. ಶಿಬಿರದ ಮಧ್ಯದಲ್ಲಿ ಎತ್ತರವಾಗಿ ಉರಿಯುವ ಬೆಂಕಿಯನ್ನು ಹಾಕುವುದರಿಂದ ಕಾಡುಪ್ರಾಣಿ ಮತ್ತು ಕ್ರಿಮಿಕೀಟಗಳನ್ನು ದೂರವಿಡಬಹುದು.

2) ದಿನದ ದಣಿವನ್ನು ದೂರ ಮಾಡುವುದು

3) ಪ್ರತಿಭೆಯನ್ನು ಪ್ರೋತ್ಸಾಹಿಸುವುದು

4) ತಕ್ಷಣದಲ್ಲಿ ದೊರೆಯುವ ವಸ್ತುಗಳಿಂದ ವೇಷ ಭೂಷಣಗಳನ್ನು ತಯಾರಿಸುವುದು, ದಿಢೀರ್ ಕಾರ್ಯಕ್ರಮ ರೂಪಿಸುವ ಕೌಶಲ ಮತ್ತು ಸಾಮರ್ಥ್ಯ ಬೆಳೆಸುವುದು.

ಶಿಬಿರಾಗ್ನಿಯು ಶಿಸ್ತಿನಿಂದ ಕೂಡಿದ ಮನರಂಜನೆ ಆಗಿರಬೇಕು. ಇದರಲ್ಲಿ ವ್ಯಕ್ತಿಯ ಧರ್ಮ, ಅಂಗವಿಕಲತೆ, ಬುದ್ಧಿ ವಿಕಲತೆಯ ಅವಹೇಳನಕ್ಕೆ ಅವಕಾಶವಿಲ್ಲ, ವೈಯಕ್ತಿಕ ಪ್ರತಿಭೆಯನ್ನು ಪ್ರೋತ್ಸಾಹಿಸಲಾಗುವುದಿಲ್ಲ. ಆದರೆ ವಿಶೇಷವಾದ ಪ್ರತಿಭೆಗಳನ್ನು ಪ್ರೋತ್ಸಾಹಿಸಬಹುದು. ಪ್ರತಿ ಕಾರ್ಯಕ್ರಮವು ಪಟಾಲಂದ ಕಾರ್ಯಕ್ರಮವಾಗಿರಬೇಕು. ಸಮಾಜ ಬಾಹಿರ ಚಟುವಟಿಕೆಗಳಾದ, ಕುಡಿತ, ಕಳ್ಳತನ,

ಧೂಮಪಾನ, ಮುಂತಾದವುಗಳ ಪರವಾದ ಯಾವುದೇ ಕಾರ್ಯಕ್ರಮಗಳಿಗೂ ಅವಕಾಶವಿರುವುದಿಲ್ಲ. ದುಃಖದ ಸನ್ನಿವೇಶವನ್ನು ಕೈ ಬಿಡಬೇಕು. ಅವಾಚ್ಯ ಶಬ್ದಗಳನ್ನು ಬಳಸಬಾರದು, ಒಟ್ಟಿನಲ್ಲಿ ಕಾರ್ಯಕ್ರಮ ನಕ್ಕುನಲಿಯುವಂತೆ ಇರಬೇಕು. ಅಲ್ಲದೆ ಇವುಗಳು ರಚನಾತ್ಮಕವಾಗಿ ಒಳ್ಳೆಯ ಸಂದೇಶವನ್ನು ನೀಡಬೇಕು. ಶಿಬಿರಾಗ್ನಿಯು ಎಲ್ಲರಿಗು ಪ್ರಿಯವಾದ ಕಾರ್ಯಕ್ರಮ. ಈ ಕಾರ್ಯಕ್ರಮವನ್ನು ಹಿರಿಯ ನಾಯಕಿಯವರ ಮಾರ್ಗದರ್ಶನದಲ್ಲಿ ಏರ್ಪಡಿಸಿ ಭಾಗವಹಿಸಿ ನಲಿಯಿರಿ.

ಚಿಂತನಾ ದಿನಾಚರಣೆ : ಫೆಬ್ರವರಿ 22ನ್ನು ವಿಶ್ವದಾದ್ಯಂತ ಎಲ್ಲಾ ಗೈಡ್ಸ್‌ಗಳು ಚಿಂತನಾ ದಿನಾಚರಣೆ ಎಂದು ಆಚರಿಸುತ್ತೇವೆ. ಈ ದಿನದ ಮಹತ್ವ ನೆನಪಿದೆಯೆ. ಲಾರ್ಡ್ ಮತ್ತು ಲೇಡಿ ಬಿ.ಪಿ.ಯವರ ಹುಟ್ಟು ಹಬ್ಬ. ಇಬ್ಬರ ಜನ್ಮ ದಿನವೂ ಒಂದೇ!

1926ರಲ್ಲಿ ವಿಶ್ವಗೈಡ್ ಸಂಸ್ಥೆ ಈ ದಿನಾಚರಣೆ ಪ್ರಾರಂಭಿಸಿತು. 1932ರಲ್ಲಿ ಡೆನ್ ಮಾರ್ಕ್‌ನ ಓರ್ವ ಗೈಡರ್‌ಗೆ ಒಂದು ಅಪರೂಪದ ವಿಚಾರ ಹೊಳೆಯಿತು. ಅದುವೆ "Penny for a thought"– 'ಒಂದು ಚಿಂತನೆಗೆ ಒಂದು ಕಾಸು,' ಹನಿಗಳು ಸೇರಿ ಮಹಾಸಾಗರ –ವಾಗುವಂತ ಒಂದು Penny / ಒಂದು ರೂಪಾಯಿವಂತಿಕೆ ಸೇರಿ ಚಿಂತನಾ ನಿಧಿಯಾಗಿ WAGGGS ಸಂಸ್ಥೆಗೆ ಪ್ರತಿರಾಷ್ಟ್ರವು ಪ್ರತಿವರ್ಷವು ಸಮರ್ಪಿಸುತ್ತದೆ. WAGGGSಗೆ ಈ ನಿಧಿ ಒಂದು ಪ್ರಧಾನ ಹಣಕಾಸಿನ ಸಂಪನ್ಮೂಲವಾಗಿ ಪರಿಣಮಿಸಿದೆ.

1976ರಲ್ಲಿ ಈ ದಿನಕ್ಕೆ ಸಾಂಕೇತಿಕವಾಗಿ ಒಂದು ಲಾಂಛನವನ್ನು ತಯಾರಿಸಲಾಯಿತು. ಈ ಲಾಂಚನದಲ್ಲಿ 8 ಬಾಣದ ಗುರುತುಗಳು ಇದ್ದು ವಿಶ್ವ ಗೈಡ್ ಲಾಂಛನವನ್ನು ಸುತ್ತುವರಿದಿದೆ. ವಿಶ್ವದಲ್ಲಿರುವ ಎಲ್ಲಾ ಸದಸ್ಯ ರಾಷ್ಟ್ರಗಳು ಈ ಸಂಸ್ಥೆಗೆ ಸಹಾಯ ಹಸ್ತ ನೀಡಿ ಅದರ ಅಸ್ತಿತ್ವವನ್ನು ಬಲಪಡಿಸುತ್ತಿದೆ ಎಂಬುದು ಇದರ ಸಂಕೇತವಾಗಿದೆ.

ಈ ದಿನಾಚರಣೆಯಂದು ಸರ್ವಧರ್ಮ ಪ್ರಾರ್ಥನೆ, ಶಾಂತಿ ಜ್ಯೋತಿ ಬೆಳಗುವುದು, ಬಿ.ಪಿ. ತ್ರಯರ ಜೀವನದ ಬಗ್ಗೆ ಪ್ರಬಂಧ, ಭಾಷಣ, ರಸಪ್ರಶ್ನೆ ಏರ್ಪಡಿಸುವುದು ಅಂತರವಲೋಕನೆ ಮಾಡಿಕೊಳ್ಳುವುದು, ಹಿಂದಿನ ವರ್ಷಮಾಡಿದ ಕಾರ್ಯಕ್ರಮದ ವರದಿ ಮುಂದೆ ಮಾಡಬೇಕೆಂದಿರುವುದನ್ನು ಚರ್ಚಿಸುವುದು, ಮನರಂಜನೆ ಏರ್ಪಡಿಸುವುದು, ತ್ರಯರಿಗೆ ಕೃತಜ್ಞತೆ ಅರ್ಪಿಸುವುದು. ಪ್ರತಿಯೊಬ್ಬರೂ ಕೈಲಾದಷ್ಟು ವಂತಿಕೆ ನೀಡಿ ಚಿಂತನಾ ನಿಧಿ ಸಂಗ್ರಹಿಸುವುದು. ಈ ಕಾರ್ಯಕ್ರಮಕ್ಕೆ

ನಿಮ್ಮ ಶಿಕ್ಷಕ ವರ್ಗವನ್ನು, ಪೋಷಕರನ್ನು ಮತ್ತು ಗೆಳತಿಯರನ್ನು ಆಹ್ವಾನಿಸಿ, ಹಿರಿಯ ನಾಯಕಿಯರ ಮಾರ್ಗದರ್ಶನದಲ್ಲಿ ಮಾಡಿ.

ವಿಶ್ವ ಗರ್ಲ್ ಗೈಡ್ಸ್ ಮತ್ತು ಗರ್ಲ್ ಸ್ಕೌಟ್ಸ್ ಸಂಸ್ಥೆ (ವಿ.ಗ.ಗೈಗ.ಸ್ಕೌ.ಸಂ.)

World Association of Girl Guides Girls Scouts (WAGGGS) :

ಇಂದು, ಏನುಮಹಾ ಪ್ರಪಂಚ ಚಿಕ್ಕದು ಎನ್ನುತ್ತೇವೆ, ಹಿಂದೆಲ್ಲಾ ಪ್ರಪಂಚ ಬಹಳ ದೊಡ್ಡದು ಎನ್ನುತ್ತಿದ್ದೆವು. ಎಷ್ಟು ಚಿಕ್ಕದು ಎಂದರೆ, ಕಂಪ್ಯೂಟರ್‌ನಲ್ಲಿ ಅಡಗಿಸುವಷ್ಟು ಚಿಕ್ಕದು, ನಾಲ್ಕಾರು ದಿನಗಳಲ್ಲಿ ಸುತ್ತಿ ಬರುವಷ್ಟು ಚಿಕ್ಕದು. ವಿದೇಶ ಯಾತ್ರೆಗೆ ಇತ್ತೀಚಿನ ದಿನಗಳಲ್ಲಿ ನಿಮಗೆ ಹೋಗುವ ಅವಕಾಶ ವಿಪುಲವಾಗಿದೆ. ಆದ್ದರಿಂದ ನಮ್ಮ ಅಂತಾರಾಷ್ಟ್ರೀಯ ಸಂಘಟನೆಯ ಪರಿಚಯ ನಿಮಗೆ ಅಗತ್ಯ. ಲಂಡನ್ನಿನಲ್ಲಿ ವಿಶ್ವಸಂಸ್ಥೆಯ ಕಛೇರಿ ಇದೆ. ಇದು 5 ಅಂತರ ರಾಷ್ಟ್ರೀಯ ಕೇಂದ್ರಗಳನ್ನು ಸ್ಥಾಪಿಸಿದೆ – ಅಲೇವ್ ಹೌಸ್ – ಲಂಡನ್, ಅವರ್ ಕಬಾನ ಮೆಕ್ಸಿಕೋ, ಅವರ್ ಶಾಲೆ– ಸ್ವಿಡ್ಜರ್ ಲ್ಯಾಂಡ್ ಹಾಗೂ ಸಂಗಮ್ – ಪೂನ, ಭಾರತ, Kusafir, Arab ಈ ದೇಶಗಳಿಗೆ ಹೋಗುವ ಅವಕಾಶ ಸಿಕ್ಕಿದರೆ ರಾಜ್ಯ ಕಛೇರಿಯಿಂದ ಇವುಗಳ ಬಗ್ಗೆ ವಿವರ ಮಾಹಿತಿ ಪಡೆದು, ಪರಿಚಯ ಪತ್ರ ಪಡೆದುಕೊಂಡು ಹೋಗಿ ಈ ಕೇಂದ್ರಗಳಿಗೆ ಭೇಟಿ ನೀಡಬಹುದು ಅಲ್ಲದೆ ಈ ಕೇಂದ್ರಗಳಲ್ಲಿ ತಂಗಲೂ ಬಹುದು.

WAGGGS ಕಛೇರಿ ಲಂಡನ್ನಿನ ಪ್ಯಾಕ್ಸ್ ಲಾಡ್ಜ್‌ನಲ್ಲಿದೆ. ಇದನ್ನು ಲೇಡಿ ಬಿ.ಪಿ.ಯವರು ಅಂತಾರಾಷ್ಟ್ರೀಯ ಸಂಸ್ಥೆಗಳನ್ನು ಸಂಘಟಿಸಲು 1928ರಲ್ಲಿ ಸ್ಥಾಪಿಸಿದರು. ಇದು ಮೂರು ಅಂಗಗಳಲ್ಲಿ ಹೊಂದಿದೆ.

1. ವಿಶ್ವ ಸಮ್ಮೇಳನ (World Conference) ಪ್ರತಿ ರಾಷ್ಟ್ರದ ಚುನಾಯಿತ ಮಹಿಳಾ ಅಂತಾರಾಷ್ಟ್ರೀಯ ಆಯುಕ್ತರುಗಳಿಂದ ರಚನೆಯಾಗುತ್ತದೆ.

2. ವಿಶ್ವ ಸಮಿತಿ (World Committee) ವಿಶ್ವ ಸಮ್ಮೇಳನದಿಂದ ಚುನಾಯಿತರಾದ ಪ್ರತಿನಿಧಿಗಳಿಂದ ರಚನೆಯಾಗುವ ಕಾರ್ಯಕಾರಿ ಸಮಿತಿ

3. ವಿಶ್ವ ಕಾರ್ಯಾಲಯ (World Beareau) ಇದು ದೈನಿಕ ಆಗುಹೋಗುಗಳನ್ನು ನೋಡಿಕೊಳ್ಳುತ್ತದೆ ಮತ್ತು ಅಂತಾರಾಷ್ಟ್ರೀಯ ಸಂಪರ್ಕ ಸೇತುವಾಗಿದೆ.

ಕಾರ್ಯಕಾರಿ ಸಮಿತಿ ನಿರ್ಣಯಗಳನ್ನು, ಕಾರ್ಯಕ್ರಮಗಳನ್ನು, ಯೋಜನಾ ಕಾರ್ಯಗಳನ್ನು ವಿಶ್ವ ಸಮ್ಮೇಳನದ ಅನುಮೋದನೆಯ ನಂತರ ಅನುಷ್ಠಾನಕ್ಕೆ ತರುವ ಕಾರ್ಯವನ್ನು ನಿರ್ವಹಿಸುತ್ತದೆ.

ಈ ಅಂತಾರಾಷ್ಟ್ರೀಯ ಸಂಸ್ಥೆಗೆ ನೀವು ಸದಸ್ಯತ್ವ ಹೊಂದಿರುವಿರಿ! ಹೇಗೆಂದರೆ, ನೀವು ನೀಡುವ ವಾರ್ಷಿಕ ನೋಂದಣಿ ಶುಲ್ಕದಲ್ಲಿ ಒಂದು ಭಾಗವನ್ನು WAGGGSಗೆ ಕಳುಹಿಸಲಾಗುತ್ತದೆ. ನೀವು ಸಂಗ್ರಹಿಸುವ ಚಿಂತನ ದಿನಾಚರಣೆ ನಿಧಿಯನ್ನು ಇದಕ್ಕೆ ಕಳುಹಿಸಲಾಗುತ್ತದೆ. ಈ ಸಂಸ್ಥೆಗೆ ಸೇರಿದ ಎಲ್ಲಾ ಸದಸ್ಯರೂ ಸಂಸ್ಥಾಪಕರು ರೂಪಿಸಿರುವ ಮೂಲ ತತ್ತ್ವವನ್ನು ಪಾಲಿಸಬೇಕು. ನೀವು ಸದಸ್ಯರೆಂದ ಮೇಲೆ ಅಂತಾರಾಷ್ಟ್ರೀಯ ಯೋಜನಾ ಕಾರ್ಯದಲ್ಲಿ ಭಾಗವಹಿಸಬಹುದು. ಅಂತಾರಾಷ್ಟ್ರೀಯ ಕಾರ್ಯಕ್ರಮಗಳಿಗಾಗಿ ಭಾರತದ ಪ್ರತಿನಿಧಿಯಾಗಿ ದೇಶವಿದೇಶಗಳಿಗೆ ಹೋಗಬಹುದು.

WAGGGS ಉದ್ಘೋಷಣೆ : ನಮ್ಮ ಕರ್ತವ್ಯ ನಮ್ಮ ಹಕ್ಕು ಒಂದು ವಿಶ್ವ, ಒಂದು ಪ್ರತಿಜ್ಞೆ.

ಸೇವಾ ಯೋಜನಾಕಾರ್ಯಗಳು (Service Projects) :

★ ಸಾಕ್ಷರತೆ
★ ಪರಿಸರ ಸಂರಕ್ಷಣೆ
★ ಮಾಲಿನ್ಯ ನಿಯಂತ್ರಣ
★ ಆರೋಗ್ಯ ಶಿಬಿರ
★ ರಕ್ತದಾನ ಶಿಬಿರ
★ ಮೂಲಭೂತ ಸೌಲಭ್ಯಗಳಾದ ರಸ್ತೆ + ನೀರು ಅಭಿವೃದ್ಧಿ
★ ಸಾರ್ವಜನಿಕ ಸ್ಥಳಗಳ ಸಂರಕ್ಷಣೆ
★ ಬಾಲಕಾರ್ಮಿಕರ ರಕ್ಷಣೆ
★ ಅನಾಥಾಲಯ ವೃದ್ಧಾಶ್ರಮ ಸೇವೆ
★ ಜಾತ್ರೆ ಮೇಳಗಳಲ್ಲಿ ಸೇವೆ
★ ನೈರ್ಮಲೀಕರಣ
★ ಔಷಧಿ ಮತ್ತು ಬಟ್ಟೆ ಸಂಗ್ರಹ ಹಂಚಿಕೆ
★ ಜನಸಂಖ್ಯಾ ಶಿಕ್ಷಣ
★ ಅಂಗವಿಕಲರಿಗೆ ಸಹಾಯ
★ ಕುಟುಂಬ ಶಿಕ್ಷಣ
★ ಹಸಿವಿಗೆ ಪರಿಹಾರ
★ ಸ್ವಯಂ ಶಿಬಿರದ–ಕರಕುಶಲ
★ ಹೆಣ್ಣುಮಕ್ಕಳ ಶಿಕ್ಷಣ–ವೃತ್ತಿ
★ ಹೆಣ್ಣು ಮಗುವಿನ ಉಳಿವು.

★ ಸಾರ್ವಜನಿಕ ಅಪಘಾತದಲ್ಲಿ ಸೇವೆ ★ ಉದ್ಯೋಗ ಮಾಹಿತಿ, ಮಾರ್ಗದರ್ಶನ ★ ಪ್ರಕೃತಿ ವಿಕೋಪದಲ್ಲಿ ಸೇವೆ.

ವಿಶ್ವ ಗೈಡ್ ಸಂಸ್ಥೆ ಹಾಗೂ ಮಹಿಳೆಯರ ಹಕ್ಕುಗಳನ್ನು ಎತ್ತಿ ಹಿಡಿದು ಅದಕ್ಕೆ ಒತ್ತು ಕೊಡುವ ಕಾರ್ಯಕ್ರಮಗಳನ್ನು ರೂಪಿಸುತ್ತದೆ.

ಧ್ಯೇಯೋದ್ದೇಶ : ಬಾಲಕಿಯರ ಹಾಗೂ ಯುವತಿಯರ ಆಂತರಿಕ ಸಾಮರ್ಥ್ಯಗಳನ್ನು ಪೂರ್ಣ ಪ್ರಮಾಣದಲ್ಲಿ ಬೆಳೆಸುವುದರ ಮೂಲಕ ಅವರನ್ನು ಜವಾಬ್ದಾರಿಯುತ ಪ್ರಜೆಯನ್ನಾಗಿ ಮಾಡುವುದಾಗಿದೆ. ವಿ.ಗ.ಗೈ.ಗ.ಸ್ಕೌ.ಸಂ. (WAGGGS)

ಸೇವೆ: ಎಂದರೆ ನಿಸ್ವಾರ್ಥ ಸಹಾಯ. ಇದು ನಮ್ಮ ಸ್ವಯಂಸೇವೆಯಿಂದ ಪ್ರಾರಂಭವಾಗಿ ಸಮುದಾಯ, ಸಮಾಜ, ರಾಜ್ಯ, ರಾಷ್ಟ್ರ ಹಾಗೂ ವಿಶ್ವದವರೆಗೂ ವಿಸ್ತರಿಸುತ್ತದೆ. ಯುದ್ಧಗಳಿಂದಾಗುವ ಹಾನಿ, ಸಾಂಕ್ರಾಮಿಕ ರೋಗರುಜಿನಗಳು, ಪ್ರಾಕೃತಿಕ ವಿಕೋಪಗಳಿಗೆ ಬಲಿಯಾದಾಗ ಯಾರಾದರೇನು? ಎಲ್ಲರೂ ಸ್ಪಂದಿಸುತ್ತೇವೆ. ಇತ್ತೀಚೆಗೆ ಬಂದ ಸುನಾಮಿ, ಅಮೇರಿಕಾಕ್ಕೆ ಅಪ್ಪಳಿಸಿ ರೀಟಾ ದೈತ ಅಲೆಗಳು, ಪಾಕಿಸ್ತಾನದ ಭೂಕಂಪ, ಇವೆಲ್ಲಕ್ಕೂ ನಾವು ಸ್ಪಂದಿಸಿದ್ದೇವೆ. ಸೇವೆಗೆ, ಜಾತಿ, ಮತ, ಧರ್ಮ ದೇಶ, ವೈಪಲ್ಯತೆಗಳ ಭೇದವಿಲ್ಲ. ಇದು ಮಾನವನ ಪರಮ ಧರ್ಮವೆಂದು ಎಲ್ಲಾ ಧರ್ಮಗಳೂ ಸಾರಿವೆ. ಮಾನವ ಜನ್ಮ ದೊಡ್ಡದು! ಏಕೆ? ಎಂದರೆ ಸೇವೆ ಮಾಡುವ ಅವಕಾಶವಿದೆ. ನಮ್ಮ ಸೇವೆ ಮನುಷ್ಯರಿಗೆ ಮಾತ್ರ ಸೀಮಿತವಲ್ಲ, ಪ್ರಾಣಿಗಳಿಗೂ, ಸಸ್ಯಗಳಿಗೂ ನಮ್ಮ ಸೇವೆಯ ಅವಶ್ಯಕತೆ ಇದೆ. ಕೆಲವೊಮ್ಮೆ ನೀವೇ ನಿಮ್ಮ ದಳದಿಂದ, ಕೆಲವೊಮ್ಮೆ ಇತರೆ ಸೇವಾ ಸಂಸ್ಥೆಗಳೊಡನೆ ಸೇರಿ, ಕೆಲವೊಮ್ಮೆ ಸರ್ಕಾರದ ಯೋಜನೆಗಳನ್ನು ತೆಗೆದುಕೊಂಡು ಸೇವಾ ಕಾರ್ಯಮಾಡಬಹುದು. ದೀರ್ಘಾವಧಿ ಸೇವಾ ಪಟ್ಟಿಯನ್ನು WAGGGS ಯೋಜನಾ ಕಾರ್ಯದಲ್ಲಿ ಕೊಡಲಾಗಿದೆ. ಇವುಗಳಲ್ಲೂ ಆಯ್ಕೆ ಮಾಡಿಕೊಳ್ಳಬಹುದು. ಸೇವಾ ಯೋಜನೆಗಳನ್ನು ಪ್ರೋತ್ಸಾಹಿಸಲು ರಾಷ್ಟ್ರ ಹಾಗೂ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪುರಸ್ಕಾರಗಳಿವೆ. ನೀವು ಮಾಡಿದ ಸೇವಾ ಕಾರ್ಯಗಳ ಸವಿವರ ವರದಿಯನ್ನು ತಯಾರಿಸಿ ಈ ಕೆಳಗಿನ ಸೇವಾ ಪುರಸ್ಕಾರಗಳಿಗೆ ಸಲ್ಲಿಸಬಹುದು.

1) ಉಪರಾಷ್ಟ್ರಪತಿ ಪುರಸ್ಕಾರ 2) ಪ್ರಧಾನ ಮಂತ್ರಿ ಪಾರಿತೋಷಕ 3) ಲಕ್ಷ್ಮೀ ಮಜುಂದಾರ್ ಪುರಸ್ಕಾರ 4) ಅಂತಾರಾಷ್ಟ್ರೀಯ ಅಲೇವ್ ಪುರಸ್ಕಾರ.

ಸ್ಕೌಟಿಂಗ್ – ಗೈಡಿಂಗ್ ತ್ರಯರು

1. ಸ್ಕೌಟಿಂಗ್ ಸಂಸ್ಥಾಪಕರು : ರಾಬರ್ಟ್ ಸ್ಟೀಫನ್‌ಸನ್ ಸ್ಮಿತ್ ಬೇಡನ್ ಪಾವೆಲ್:

ಇವರು 22.2.1857ರಲ್ಲಿ ಹರ್ ಬರ್ಟ್ ಜಾರ್ಜ್ ಬೇಡನ್ ಪಾವೆಲ್ ಮತ್ತು ಹೆನರಿಟ್ ಗ್ರೇಸ್ ಸ್ಮಿತ್ ದಂಪತಿಗಳಿಗೆ 5ನೇಯ ಮಗುವಾಗಿ ಜನಿಸಿದರು. ತಂದೆ ತಾಯಿಯರ ಉತ್ತಮ ಮಾರ್ಗದರ್ಶನದಲ್ಲಿ, ಸಾಹಸಿ ಸೋದರರೊಡನೆ ಉತ್ತಮವಾಗಿ ಓದುತ್ತಾ, ಆಡುತ್ತಾ ಬೆಳೆದರು. ಇವರ ಬಾಲ್ಯದ ಪ್ರತಿಭೆ, ಪ್ರಕೃತಿ ಒಡನಾಟ, ಸಾಹಸ ಪ್ರವೃತ್ತಿ ಇವರನ್ನು ಉತ್ತಮ ವಿದ್ಯಾರ್ಥಿ ನಾಯಕರನ್ನಾಗಿ ಮಾಡಿತು. ಅಧ್ಯಯನದಲ್ಲಿ ಸಾಧಾರಣ ವಿದ್ಯಾರ್ಥಿಯಾದ ಇವರು ಸ್ವಯಂ ಪ್ರತಿಭೆಯಿಂದ ಸೈನ್ಯಾಧಿಕಾರಿಯಾಗಿ ಆಯ್ಕೆ ಆದರು. ಇವರು ಭಾರತದಲ್ಲಿ ತಮ್ಮ ಸೇವೆಯನ್ನು ಪ್ರಾರಂಭಿಸಿದರು. ಇವರು ಯುದ್ಧನೀತಿಯನ್ನು ಅನುಸರಿಸಿ ಉತ್ತಮ ರೀತಿಯಲ್ಲಿ ಯುದ್ಧ ಮಾಡುತ್ತಿದ್ದರು. ತಮ್ಮ ತುಕಡಿಯ ಸೈನಿಕರನ್ನು ಉತ್ಸಾಹ ಭರಿತರನ್ನಾಗಿ ಸಂತೋಷವಾಗಿಡಲು ಸ್ಕೌಟಿಂಗ್ ಚಟುವಟಿಕೆ ಪ್ರಾರಂಭಿಸಿದರು. ಇವರು ದಕ್ಷಿಣ **ಆಫ್ರಿಕಾದ ಜೂಲು** ಮತ್ತು **ಅಶಾಂತಿ ಗುಡ್ಡಗಾಡಿನ** ಜನಾಂಗದ ಜೊತೆ ಯುದ್ಧ ಮಾಡಿದರು. ಈ ಯುದ್ಧದಲ್ಲಿ ಗೆದ್ದರು ನಂತರ ಜೂಲು **ನಾಯಕ ಡಿನಿಜೂಲುವಿನ ಮರದ ಮಣಿಹಾರ**ವನ್ನು ಸಂಗ್ರಹಿಸಿದರು. ಅಶಾಂತಿ ದಳದ **ನಾಯಕ ಪ್ರೆಂಫೆ**ಯವರು ನೀಡಿದ ಎಡಗೈ ಹಸ್ತಲಾಘವದ ಅಪರೂಪದ ಶುಭಕೋರುವ ಸಂಕೇತ ಪಡೆದರು. ಅವರಿಂದ ಗುಡ್ಡಗಾಡಿನಲ್ಲಿ ಓಡಾಡಿ. ದಂಡದ (Staff) ಉಪಯೋಗ ತಿಳಿದುಕೊಂಡರು. ಮೆಟಬಲ್ ಯುದ್ಧದ ನಂತರ ಎಂಟಿಲೋಪ್ ಪ್ರಾಣಿಯನ್ನು ಹೋಲುವ ಕಾಡುಪ್ರಾಣಿಯ ಸುಂದರವಾದ ಕೊಂಬನ್ನು ಸಂಗ್ರಹಿಸಿದರು. ಅವರನ್ನು "ಯುದ್ಧನಾಯಕ"ನನ್ನಾಗಿ ಮಾಡಿದ ಮೇಫ್ಕಿಂಗ್ ಯುದ್ಧದಲ್ಲಿ, ಬಾಯ್ಸ್ ಕೆಡಟ್ ಕಾರ್ಪನ ಕಾರ್ಯವನ್ನು ಮೆಚ್ಚಿ ಬಾಲಕರಿಗಾಗಿ ಸ್ಕೌಟಿಂಗ್ ಚಳವಳಿಯನ್ನು ರೂಪಿಸಿದರು. ಯುದ್ಧದಲ್ಲಿ ಪಡೆದ ಎಲ್ಲಾ ವಿಶೇಷತೆಗಳನ್ನು, ಅಂದರೆ, ಮರದ ಮಣಿ, ದಂಡ, ಎಡಗೈ ಹಸ್ತ ಲಾಘವ, ಕುಡುಕೊಂಬುಗಳನ್ನು ಬಾಲಕರ ಸ್ಕೌಟಿಂಗ್‌ಗೆ ಉಡುಗೊರೆಯಾಗಿ ನೀಡಿದರು. ಇವರು ರೂಪಿಸಿದ. ಸ್ಕೌಟಿಂಗ್ ಚಟುವಟಿಕೆ, ಹೆಣ್ಣು ಮಕ್ಕಳನ್ನು ಆಕರ್ಷಿಸಿ ಗರ್ಲ್ಸ್ ಸ್ಕೌಟ್ ಆರಂಭಕ್ಕೆ ಪ್ರೇರಣೆ ನೀಡಿತು. ಎಡಗೈ ಹಸ್ತಲಾಘವ ಮತ್ತು ದಂಡಗಳನ್ನು ಗರ್ಲ್ಸ್ ಸ್ಕೌಟಿಂಗ್ ಮತ್ತು ಗೈಡಿಂಗ್‌ನಲ್ಲೂ ಅಳವಡಿಸಲಾಗಿದೆ.

ಇವರು ವೃತ್ತಿಯಿಂದ ಯೋಧರು ಪ್ರವೃತ್ತಿಯಿಂದ ಶಾಂತಿ ಪ್ರಿಯರಾಗಿದ್ದರು. ಸೈನಿಕನಾಗಿದ್ದುಕೊಂಡೇ ಬಾಲಕರ ಹಾಗೂ ವಿಶ್ವದ ಭವಿಷ್ಯದ ಬಗ್ಗೆ ಚಿಂತನೆ

ಮಾಡಿದರು. ಅವರು ಬೀಜ ಮಂತ್ರವೆಂದರೆ ವಿಶ್ವ ಭ್ರಾತೃತ್ವ ಮತ್ತು ವಿಶ್ವ ಶಾಂತಿ. ಇದನ್ನು ಪ್ರತಿ ಬಾರಿಯೂ ತಮ್ಮ ಭಾಷಣಗಳಲ್ಲಿ ಪುನರುಚ್ಚರಿಸುತ್ತಿದ್ದರು.

ಇವರು ಉತ್ತಮ ಮನಶಾಸ್ತ್ರಜ್ಞರಾಗಿದ್ದರು. ಆದ್ದರಿಂದಲೇ ಮಕ್ಕಳಿಗೆ ಬೇಕಾದ ಚಟುವಟಿಕೆಗಳನ್ನು ಅವರ ವಯೋಧರ್ಮ ಮತ್ತು ಮನೋಧರ್ಮಕ್ಕೆ ಅನುಗುಣವಾಗಿ ರೂಪಿಸಿ ಅವರಿಗೆ ಬೇಕಾದ ರೀತಿಯಲ್ಲಿ ನೀಡಿದರು. ಇದರಿಂದಾಗಿ ಸಂಸ್ಥೆ ವಿಶ್ವಪ್ರಿಯತೆ ಸಾಧಿಸಿ ಒಂದು ಶತಮಾನ ತುಂಬಿ ಎರಡನೆ ಶತಮಾನದತ್ತ ಸಾಗುತ್ತಿದೆ. ಸಾಹಿತ್ಯ ಶಿರೋಮಣಿ ಬರ್ನಾಡ್ ಷಾ ಬಿ.ಪಿ.ಯವರನ್ನು **'19ನೇ ಶತಮಾನದ ಉತ್ತಮ ಶಿಕ್ಷಣ ತಜ್ಞರೆಂದು ಕರೆದಿದ್ದಾರೆ.'**

ಅವಿಶ್ರಾಂತವಾಗಿ ವಿಶ್ವದ ಯುವಜನಾಂಗದ ಅಭಿವೃದ್ಧಿಗಾಗಿ ಶ್ರಮಿಸಿದ ಇವರು 8–1–1941ರಲ್ಲಿ ದೈವಾಧೀನರಾದರು ನಾವು ವಿಶ್ವ ಭ್ರಾತೃತ್ವವನ್ನು ವಿಶ್ವ ಶಾಂತಿಯನ್ನು ಸ್ಥಾಪಿಸಲು ಕೈಲಾದ ಪ್ರಯತ್ನ ಮಾಡುತ್ತಾ ಅವರಿಗೆ ನಮ್ಮ ಕೃತಜ್ಞತೆ ಸಲ್ಲಿಸೋಣ

2. ಗೈಡಿಂಗ್‌ನ ಮಹಾಮಾತೆ : ಆಗ್ನೇಸ್ ಬೇಡನ್ ಪಾವೆಲ್

ಆಗ್ನೇಸ್ ಬೇಡನ್ ಪಾವೆಲ್ ಅವರು ಬಿ.ಪಿ.ಯವರ ಕಿರಿಯ ಸೋದರಿ. ಇಂಗ್ಲೆಂಡಿನ ಬಾಲಕಿಯರ 1909ರಲ್ಲಿ ತಾವೆ ಸ್ಕೌಟಿಂಗ್ ಪ್ರಾರಂಭಿಸಿ ಬಿ.ಪಿಯವರನ್ನು ಮಣಿಸಿ ಮನ್ನಣೆ ಪಡೆದರು. ಈ ಬಾಲಕಿಯರ ವಿಭಾಗದ ಜವಾಬ್ದಾರಿಯನ್ನು ಆಗ್ನೇಸ್ ಬಿ.ಪಿ.ಯವರಿಗೆ ವಹಿಸಿದ್ದರು. ಅಗ್ನೇಸ್ ಬಿ.ಪಿ.ಯವರು ಬಿ.ಪಿ.ಯವರೊಡನೆ ಸಮಾಲೋಚಿಸಿ ಅಂದಿನ ವಿಕ್ಟೋರಿಯನ್ ಸಮಾಜ ಅಂದರೆ ಬಾಲಕಿಯರನ್ನು ಗಂಡುಬೀರಿಯರನ್ನಾಗಿ ಮಾಡಲು ವಿರೋಧಿಸುತ್ತಿದ್ದ ಸಮಾಜ ಒಪ್ಪುವಂತೆ ಸ್ಕೌಟಿಂಗ್ ಚಟುವಟಿಕೆಯನ್ನು ಬಾಲಕಿಯರಿಗೆ ಅಳವಡಿಸಿದರು. ಸ್ಕೌಟ್ ಕಛೇರಿಯ ಒಂದು ಕೊಠಡಿಯಲ್ಲಿ 10 ಏಪ್ರಿಲ್ 1910ರಲ್ಲಿ ಗೈಡ್ ಕಛೇರಿ ಪ್ರಾರಂಭಿಸಿದರು. ಸುಮಾರು 6000 ಮಕ್ಕಳು ನೋಂದಣಿಯಾದರು. ಆಗ್ನೇಸ್‌ರವರು ಈ ಗೈಡಿಂಗ್ ಶಿಶುವನ್ನು ತಾಯಿಯಂತೆ ವಿಶ್ವಾಸದಿಂದ ಮಮತೆಯಿಂದ ಬೆಳೆಸಿದರು. ಅದಕ್ಕೆ ಅವಶ್ಯಕವಾದ ನೀತಿ ನಿಯಮ ಸಾಹಿತ್ಯಗಳನ್ನು ರಚಿಸಿದರು. 1912 "How Girls can help to build the empire" ಎಂಬ ಪುಸ್ತಕವನ್ನು ಬರೆದು ಪ್ರಕಟಿಸಿದರು.

1920ರ ವರೆಗೆ ಆಗ್ನೆಸ್ ಬಿ.ಪಿ.ಯವರು ಅಧ್ಯಕ್ಷರಾಗಿದ್ದು ಗೈಡಿಂಗ್ ಸದೃಢವಾಗಿ ಬೇರೂರುವಂತೆ ಮಾಡಿದರು. ಯುವರಾಣಿ ಮೇರಿಯವರು ಅಧ್ಯಕ್ಷರಾದನಂತರ ಇವರು ಕೊನೆಯುಸಿರಿನತನಕ ಉಪಾಧ್ಯಕ್ಷರಾಗಿ ಮುಂದುವರೆದು ತಮ್ಮ ನಿಷ್ಠಾವಂತ ಸೇವೆಯನ್ನು ಸಲ್ಲಿಸಿದರು. 1945ರಲ್ಲಿ ದೈವಾಧೀನರಾದರು.

ಇವರು ಮಾತೃಮಮತೆಯಿಂದ ಪೋಷಿಸಿದ ಗೈಡಿಂಗ್ ಇಂದಿಗೂ ಬೆಳೆಯುತ್ತಲೇ ಇದೆ. ಇದೀಗ 2010 ರಿಂದ 2012 ರಲ್ಲಿ ಶತಮಾನೋತ್ಸವವನ್ನು ಆಚರಿಸಿದ್ದೇವೆ. ಈ ಮಮತಾಮಯಿ ಮಾತೆಗೆ ನಾವೆಲ್ಲರೂ ಚಿರಋಣಿಗಳಾಗಿದ್ದೇವೆ.

3. ಸ್ಕೌಟಿಂಗ್ – ಗೈಡಿಂಗ್‌ನ ಲೋಕಮಾತೆ : ಅಲೇವ್ ಸೇಂಟ್ ಕ್ಲೇರ್ ಸೋಮ್ಸ್ 22.2.1889 – 25.6.1977

ಇವರು ಬಿ.ಪಿ.ಯವರ ಪತ್ನಿ, ಇವರು 20ನೇ ಶತಮಾನದ ಅದ್ಭುತ ಮಹಿಳೆ ಎಂದು ಪ್ರಶಂಶಿಸಲ್ಪಟ್ಟಿದ್ದಾರೆ. ಇವರು ಮೇಫ್‌ಕಿಂಗ್ ಯುದ್ಧ ನಾಯಕ ಬೇಡನ್ ಪೊವೆಲ್ಲರನ್ನು ಆರಾಧಿಸಿ ನಂತರ ಪ್ರೇಮಿಸಿ ಮದುವೆಯಾದರು. ಆಶ್ಚರ್ಯವೆಂದರೆ ಇಬ್ಬರ ಹುಟ್ಟಿದ್ದು ಒಂದೇ ದಿನ 22 ಫೆಬ್ರವರಿ! ವಯಸ್ಸಿನ ಅಂತರ 32 ವರ್ಷ! ಈ ಅಂತರ ಅವರ ಸುಖೀ ದಾಂಪತ್ಯಕ್ಕೆ ಅಡ್ಡಿಯಾಗಲಿಲ್ಲ. ಇವರ ಪತಿಯವರು ಮಕ್ಕಳಿಗಾಗಿ ರೂಪಿಸಿದ ಸ್ಕೌಟಿಂಗ್ ಮತ್ತು ಗೈಡಿಂಗ್ ಚಳವಳಿಯನ್ನು ಬಲಪಡಿಸುತ್ತಾ ಪ್ರಸಾರ ಮಾಡುತ್ತಾ ಅವಿಶ್ರಾಂತವಾಗಿ ವಿಶ್ವ ಪರ್ಯಟನೆ ಮಾಡಿದ್ದಾರೆ. ಪತಿಯವರ ಕಾರ್ಯದಲ್ಲಿ ಭುಜಕ್ಕೆ ಭುಜಕೊಟ್ಟು ಅವರೊಡನೆ ದುಡಿದಿದ್ದಾರೆ.

ಅಂದಿನ ಕಾಲದಲ್ಲಿ 654 ವಿಮಾನಗಳಲಿ 5 ಲಕ್ಷ ಮೈಲಿಗೂ ಹೆಚ್ಚು ಪ್ರಯಾಣ ಮಾಡಿರುವ ಮಹಿಳೆ ಎಂಬ ದಾಖಲೆಯನ್ನು ಮಾಡಿದ್ದಾರೆ. ರೀಡರ್ಸ್ ಡೈಜಸ್ಟ್ ಪತ್ರಿಕೆಯ ಅಂದಿನ ವರದಿಗಾರ್ತಿ ಜೇನೆಟ್ ಗ್ರಹಾಮ್ ಅವರ ಅಲೇವ್ ಬಿ.ಪಿ.ಯವರ ಬಗ್ಗೆ ಈ ರೀತಿ ಹೇಳಿದ್ದಾರೆ "ಸಮವಸ್ತ್ರ ಧರಿಸಿ, ಹಗುರವಾದ ಪ್ರಯಾಣ ಸಂಚಿ (hold all) ಹಿಡಿದು, ಒಂದು ಪುಟ್ಟ ಟೈಪ್ ರೈಟರ್ ಇಟ್ಟುಕೊಂಡು ದೇಶದಿಂದ ದೇಶಕ್ಕೆ ಹಾರುವಾಗಿನ ಸಂತಸವನ್ನು ಅವರಲ್ಲಿ ಮತ್ಯಾವಾಗಲೂ ಕಾಣುವ ಸಾಧ್ಯತೆ ಇರಲಿಲ್ಲ" ಮತ್ತೋರ್ವ ವರದಿಗಾರ್ತಿಗೆ ಅಲೇವ್ ಅವರ ಬಗ್ಗೆ ಹೀಗೆ ಹೇಳಿದ್ದಾರೆ, "ನನ್ನ ಕೆಲಸವೇ ಈ ಚಳವಳಿಯನ್ನು ವಿಸ್ತರಿಸುವುದು (oomph) ನಿಜವಾಗಿಯೂ ನನ್ನನ್ನು ಪ್ರಧಾನ ವಿಸ್ತಾರಕಿ (chief oompher) ಎಂದೇ ಕರೆಯಬೇಕು".

80 ವರ್ಷದ ನಂತರ, "ನಾನು ಸತ್ತಾಗ ದುಃಖಿಸಬೇಡಿ, ಬದಲಿಗೆ ಸಂತೋಷವಾಗಿರಿ. ನನ್ನ ಬಳಿ ಕೊಡುವುದಕ್ಕೆ ಏನೂ ಉಳಿದಿಲ್ಲ. ಸ್ಕೌಟಿಂಗ್ ಗೈಡಿಂಗ್ ಚಳವಳಿ ಈಗ ಬಲಶಾಲಿಯಾಗಿದೆ. ನನ್ನ ಮಕ್ಕಳು ಬೆಳೆದು ತಮ್ಮ ತಮ್ಮ

ಉದ್ಯೋಗ ಮಾಡುತ್ತಾ ಸ್ವತಂತ್ರವಾಗಿ ಜೀವಿಸುತ್ತಿರುವಂತೆ, ನನ್ನ ನೆರವಿಲ್ಲದೆ ಚಳವಳಿಯೂ ಬೆಳೆಯಲು ಸಮರ್ಥವಾಗಿದೆ. ನಿಮಗೆ ನನ್ನ ಸಂದೇಶ ಎಂದರೆ, ಇದೇ ಆಗಿದೆ".

ಇವರು ಅನೇಕ ರಾಷ್ಟ್ರಗಳ ಪುರಸ್ಕಾರಕ್ಕೆ ಪಾತ್ರರಾದರು. ಇವರನ್ನು 1930ರಲ್ಲಿ ವಿಶ್ವ ಪ್ರಧಾನ ಗೈಡ್ ಎಂದು ಗೌರವಿಸಲಾಯಿತು. ಈ ಮಹಾನ್ ಮಹಿಳೆ ವಿಶ್ವದ ಮಕ್ಕಳ ಚಿಂತಕಿ 1977ರಲ್ಲಿ ದೈವಾಧೀನರಾದರು. ಅವರಿಲ್ಲವಾದರೂ ಅವರ ಕಾರ್ಯ, ಆದರ್ಶ, ನಮಗೆ ಇಂದಿಗೂ ಮಾರ್ಗದರ್ಶನ ನೀಡುತ್ತಿರುವ ದಾರಿ ದೀಪವಾಗಿದೆ.

ಹೆಜ್ಜೆ–9 : ಕರ್ನಾಟಕದಲ್ಲಿ ಸ್ಕೌಟಿಂಗ್ – ಗೈಡಿಂಗ್

1907ರಲ್ಲಿ ಇಂಗ್ಲೆಂಡಿನಲ್ಲಿ ಬಿ.ಪಿ.ಯವರು ಪ್ರಾರಂಭಿಸಿದ ಸ್ಕೌಟ್ ಚಳವಳಿ ಮತ್ತು ಇದರ ಪ್ರೇರಣೆಯಿಂದ ಇಂಗ್ಲೆಂಡಿನ ಬಾಲಕಿಯರು ಪ್ರಾರಂಭಿಸಿದ ಗರ್ಲ್ ಸ್ಕೌಟ್/ಗರ್ಲ್ ಗೈಡ್ ಚಳವಳಿಯು ಭಾರತಕ್ಕೆ 1910ರಲ್ಲಿ ಪಾದಾರ್ಪಣೆ ಮಾಡಿತು. 1911ರಲ್ಲಿ ಮೈಸೂರು ಸಂಸ್ಥಾನಕ್ಕೆ ಸೇರಿದ ಬೆಂಗಳೂರಿನ ಬಿಷಪ್ ಕಾಟನ್ ಬಾಲಕರ ಶಾಲೆಯಲ್ಲಿ ಪ್ರಪ್ರಥಮ ಬಾರಿಗೆ ಸ್ಕೌಟಿಂಗ್ ಆರಂಭವಾಯಿತು.

ಅಂದಿನ ಮೈಸೂರಿನ ಮಹಾರಾಜರಾಗಿದ್ದ ನಾಲ್ಮಡಿ ಶ್ರೀ ಕೃಷ್ಣದೇವರಾಜ ಒಡೆಯರ ಕೃಪಾ ಪೋಷಣೆಯಲ್ಲಿ ಈ ಚಳವಳಿಯು ಬೆಳೆಯಲಾರಂಭಿಸಿತು. ಶ್ರೀ ಕಠೀರವ ನರಸಿಂಹರಾಜ ಒಡೆಯರು ಪ್ರಧಾನ ಸ್ಕೌಟ್ ಆದರು. ಶ್ರೀ ಜಯಚಾಮರಾಜೇಂದ್ರ ಒಡೆಯರು ಪ್ರಧಾನ ಕಬ್ ಆದರು. ಶ್ರೀ ಜಿ. ಪರಶುರಾಮ ರವರು ಸ್ಕೌಟ್–ಗೈಡ್ ಚಳವಳಿಯ ಸಂಘಟನಾ ನಿರ್ದೇಶಕರಾಗಿ ನೇಮಕಗೊಂಡರು. 1914ರಲ್ಲಿ ಬೆಂಗಳೂರಿನ ಬಾಲ್ಡ್‌ವಿನ್ ಬಾಲಕಿಯರ ಶಾಲೆಯಲ್ಲಿ ಪ್ರಪ್ರಥಮವಾಗಿ ಗೈಡಿಂಗ್ ಆರಂಭವಾಯಿತು. (1922ರಲ್ಲಿ ಬಿಷಪ್ ಕಾಟನ್ ಬಾಲಕಿಯರ ಶಾಲೆಯಲ್ಲಿ ಗೈಡಿಂಗ್ ಆರಂಭವಾಯಿತು.) ಕ್ರಮೇಣ ರಾಜ್ಯಾದ್ಯಂತ ಚಳವಳಿಯು ಹಬ್ಬಿತು.

1918ರಿಂದ 1926ರ ವರೆಗೆ ಎಷ್ಟೋ ತರಬೇತಿ ಶಿಬಿರಗಳು, ಮೇಳಗಳೂ, ಪರಿಷತ್ತುಗಳು ನಡೆದವು. 1919ರಲ್ಲಿ ಕು॥ ಜಿಮ್ಮ ಲಾಜರಸರವರು ಗೈಡ್ ಚಳವಳಿಯ ತರಬೇತಿ ಪಡೆದುಕೊಂಡು ಬಂದರು. ಇವರು ಇಂಪೀರಿಯಲ್ ಮುಖ್ಯ ಕಚೇರಿಯಿಂದ ಸಂಘಟನಾ ಆಯುಕ್ತರಾಗಿ ನೇಮಕಗೊಂಡರು. ಗೈಡ್ ಸಂಸ್ಥೆಯನ್ನು ಪುನರ್ ಸಂಘಟಿಸಿ, "1927ರಲ್ಲಿ ದಿ ಗರ್ಲ್ ಗೈಡ್ ಆಫ್ ಮೈಸೂರ್" ಎಂಬ ರಾಜ್ಯ ಸಂಸ್ಥೆಯನ್ನು ಸ್ಥಾಪಿಸಿದರು. ಈ ಸಂಸ್ಥೆಯ ಆಡಳಿತಕ್ಕಾಗಿ ನಿಯಮಗಳನ್ನು ಮತ್ತು ಅಧಿನಿಯಮಗಳನ್ನು ರಚಿಸಲಾಯಿತು. ಗೈಡ್ ಪುಸ್ತಕಗಳನ್ನು ಕನ್ನಡ, ಇಂಗ್ಲಿಷ್, ಉರ್ದು ಭಾಷೆಗಳಲ್ಲಿ ಪ್ರಕಟಿಸಲಾಯಿತು. 1924ರಲ್ಲಿ ಗಾಂಧೀಜಿಯವರು ಬೆಳಗಾಂ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದಾಗ ಸ್ಕೌಟ್ ಮತ್ತು ಗೈಡ್‌ಗಳು ಸಲ್ಲಿಸಿದ ಸೇವೆಯನ್ನು ಕಂಡು ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. "ಭಾರತದ ಪ್ರತಿ ಮನೆಯಲ್ಲೂ ಸ್ಕೌಟ್–ಗೈಡ್ ಮಕ್ಕಳು ಇರಲಿ ಎಂದು ನಾನು ಪ್ರಾರ್ಥಿಸುತ್ತೇನೆ" ಎಂಬ ಆಶಯವನ್ನು ವ್ಯಕ್ತಪಡಿಸಿದರು.

1928ರಲ್ಲಿ ದೊಡ್ಡಬಳ್ಳಾಪುರದಲ್ಲಿ ಅನಿಬೆಸೆಂಟ್‌ರ ಹೆಸರಿನಲ್ಲಿ "ಅನಿಬೆಸೆಂಟ್ ಪಾರ್ಕ್" ಎಂಬ ಸ್ಕೌಟ್ ಗೈಡ್ ತರಬೇತಿ ಕೇಂದ್ರವನ್ನು ಸ್ಥಾಪಿಸಲಾಯಿತು. ಈ ಕೇಂದ್ರಕ್ಕೆ ಜಮೀನನ್ನು ಶ್ರೀ ಕಂಠೀರವ ನರಸಿಂಹರಾಜ ಒಡೆಯರವರು ಚಳವಳಿಯ ಚಟವಟಿಕೆಗಳಿಗಾಗಿ ನೀಡಿದರು. ಅಂದಿನ ಕಂದಾಯ ಕಾರ್ಯದರ್ಶಿಗಳಾದ ಶ್ರೀ ಅನಂತರಾಮರವರು ಮಂಜೂರು ಮಾಡಿದರು. ಈ ಕೇಂದ್ರವನ್ನು ರಾಷ್ಟ್ರದಲ್ಲಿಯೇ ಅತ್ಯುತ್ತಮ ತರಬೇತಿ ಕೇಂದ್ರವಾಗಿ ಅಭಿವೃದ್ಧಿಗೊಳಿಸಲ್ಪಟ್ಟಿದೆ. ಬರಲಿರುವ ದಿನಗಳಲ್ಲಿ ಅಂತಾರಾಷ್ಟ್ರೀಯ ಮಟ್ಟಕ್ಕೆ ಅಭಿವೃದ್ಧಿಗೊಳ್ಳಲಿದೆ.

1924ರಲ್ಲಿ ಈ ಚಳವಳಿಯು ತುರ್ತುಸ್ಥಿತಿಯಲ್ಲಿ ಪ್ರಥಮ ಚಿಕಿತ್ಸಾ ಕೇಂದ್ರ ಮತ್ತು ಸಂತ್ರಸ್ತರಿಗೆ ಪರಿಹಾರ ಕೇಂದ್ರಗಳನ್ನು ಮೊದಲ ಬಾರಿಗೆ ಸಂಘಟಿಸಿತು. 1947 ಆಗಸ್ಟ್ 15ರಂದು ಪ್ರಪ್ರಥಮ ಸ್ವಾತಂತ್ರ್ಯೋತ್ಸವವನ್ನು ಆಚರಿಸಲು ಮೊಟ್ಟಮೊದಲ ಸ್ಕೌಟ್-ಗೈಡ್ ಮೇಳವು ಬೆಂಗಳೂರಿನಲ್ಲಿ ಜರುಗಿತು. 1947ರಲ್ಲಿ ಕಂಟೋನ್ಮೆಂಟ್ ಸಂಸ್ಥೆಯು ಮೈಸೂರು ರಾಜ್ಯದ ಗೈಡ್ ಸಂಸ್ಥೆಯೊಂದಿಗೆ ವಿಲೀನವಾಯಿತು. ಸಪ್ಟೆಂಬರ್ 1952ರಲ್ಲಿ ಮೈಸೂರಿನಲ್ಲಿ "ಬಾಯ್ಸ್ ಸ್ಕೌಟ್" ಸಂಸ್ಥೆಯು ಹೊಸದಾಗಿ ರಚನೆಯಾದ "ರಾಷ್ಟ್ರೀಯ ಭಾರತ್ ಸ್ಕೌಟ್ ಗೈಡ್" ಸಂಸ್ಥೆಯನ್ನು ಸೇರಲು ನಿರ್ಧರಿಸಿತು.

1960ರಲ್ಲಿ ಲೇಡಿ ಬಿ.ಪಿ.ಯವರು ಸದಾಶಿವ ನಗರ, ಬೆಂಗಳೂರಿನಲ್ಲಿ ನಡೆದ ರಾಷ್ಟ್ರೀಯ ಜಾಂಬೂರಿಯಲ್ಲಿ ಭಾಗವಹಿಸಿರುವುದು ಐತಿಹಾಸಿಕ ವಿಶೇಷತೆಯಾಗಿದೆ. 1989ರಲ್ಲಿ ಮೈಸೂರು ಅರಮನೆಯ ಆವರಣದಲ್ಲಿ ವಿಶ್ವ ಗರ್ಲ್ ಗೈಡ್ ಮತ್ತು ವಿಶ್ವ ಗರ್ಲ್ ಸ್ಕೌಟ್ ಸಂಸ್ಥೆಯ 50ನೇ ವಾರ್ಷಿಕೋತ್ಸವವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. 2003ರಲ್ಲಿ ರಾಜ್ಯ ಗೈಡ್ ಸಂಸ್ಥೆ ಶಾಂತಿಗೃಹದಲ್ಲಿ ಗೈಡ್‌ಗಳು ವ್ಯಾಗ್ಸ್‌ನ 75ನೇ ವಾರ್ಷಿಕೋತ್ಸವವನ್ನು ಆಚರಿಸಿದರು. ಈ ಸಂದರ್ಭದಲ್ಲಿ ಈ ಸಂಸ್ಥೆಗಾಗಿ ಶ್ರಮಿಸಿದ ವಯೋವೃದ್ಧ ಸ್ವಯಂಸೇವಕಿಯರಾದ ಶ್ರೀಮತಿ ಲೀಲಾ ಆಂಜನಪ್ಪ, ಶ್ರೀಮತಿ ಲಲಿತಾ ಕೃಷ್ಣಸ್ವಾಮಿ, ಶ್ರೀಮತಿ ಬೋಪಯ್ಯ, ಶ್ರೀಮತಿ ಆಕ್ಟೇವಿಯಾ ಆಲ್ಬುಕರ್ಕ್ ರವರನ್ನು ಸನ್ಮಾನಿಸಲಾಯಿತು.

1971ರಲ್ಲಿ ಅಂದಿನ ರಾಜ್ಯಪಾಲರಾದ ಶ್ರೀ ಧರ್ಮವೀರ ಅವರ ಕಾಲದಲ್ಲಿ "ಶಾಂತಿಗೃಹ" ವನ್ನು ಗೈಡ್ ವಿಭಾಗಕ್ಕೆ ನೀಡಲಾಯಿತು. ಈ ಆವರಣದಲ್ಲಿ ಗೈಡ್ ರಾಜ್ಯ ಕಛೇರಿಯನ್ನು ಸ್ಥಾಪಿಸಲಾಗಿದೆ. ಈ ಆವರಣವನ್ನು ತರಬೇತಿ ಕೇಂದ್ರವಾಗಿ ಅಭಿವೃದ್ಧಿಗೊಳಿಸಲಾಗುತ್ತಿದೆ. ಇದು ಮಹಾರಾಣಿ ಕಾಲೇಜಿನ ಪಕ್ಕದಲ್ಲಿದೆ ಇದರ ಅಂಗಳದಲ್ಲಿ ಹೆಮ್ಮರಗಳಿವೆ. ವಾಸಕ್ಕಾಗಿ ಕುಟೀರಗಳನ್ನು ನಿರ್ಮಿಸಲಾಗಿದೆ.

ಶಿಬಿರವಾಸಕ್ಕೆ ಬೇಕಾದ ಎಲ್ಲಾ ಅನುಕೂಲತೆಗಳನ್ನು ಮಾಡಲಾಗುತ್ತಿದೆ. ಅತಿಥಿಗೃಹ ಮತ್ತು ಸಭಾಂಗಣಗಳು ನಿರ್ಮಿತವಾಗಿವೆ.

1974ರ ಸೆಪ್ಟೆಂಬರ್ 8ರಂದು ದಾವಣಗೆರೆ ಜಿಲ್ಲೆಯಲ್ಲಿರುವ "ಕೊಂಡಜ್ಜಿ" ಗ್ರಾಮದಲ್ಲಿ 2ನೇ ರಾಜ್ಯ ತರಬೇತಿ ಕೇಂದ್ರವನ್ನು ಉದ್ಘಾಟಿಸಲಾಯಿತು. ಈ ತರಬೇತಿ ಕೇಂದ್ರದ ಸ್ಥಾಪನೆಗಾಗಿ ಮತ್ತು ಅಭಿವೃದ್ಧಿಗಾಗಿ ಶ್ರಮಿಸಿದ ಅಂದಿನ ರಾಜ್ಯ ಪ್ರಧಾನ ಆಯುಕ್ತರಾದ ದಿವಂಗತ ಶ್ರೀ ಕೊಂಡಜ್ಜಿ ಬಸಪ್ಪನವರು ಮತ್ತು ಅವರ ತಂಡದವರ ಈ ಸಾಧನೆಯನ್ನು ಮರೆಯುವಂತಿಲ್ಲ. ಇದು ಗುಡ್ಡ ಮತ್ತು ಕಣಿವೆಗಳಿಂದ ಕೂಡಿದ ಸುಂದರ ತಾಣವಾಗಿದೆ. ಇಲ್ಲಿ ಅನೇಕ ರಾಜ್ಯ ಮತ್ತು ರಾಷ್ಟ್ರ ಮಟ್ಟದ ಕಾರ್ಯಕ್ರಮಗಳು ನಡೆಯುತ್ತವೆ.

ಈ ಎಲ್ಲಾ ತರಬೇತಿ ಕೇಂದ್ರಗಳು ಸ್ಕೌಟ್ಸ್ ಮತ್ತು ಗೈಡ್ಸ್ ಚಟುವಟಿಕೆಗಳೇ ಅಲ್ಲದೇ ಅನೇಕ ಸಂಘಸಂಸ್ಥೆಗಳ ಚಟುವಟಿಕೆಗಳಿಗೂ ಆಕರ್ಷಣೀಯ ತಾಣವಾಗಿದೆ. ಈ ಕೇಂದ್ರಗಳು ಸದಾ ಚಟುವಟಿಕೆಗಳಿಂದ ನಳನಳಿಸುತ್ತಿರುತ್ತವೆ.

ವಿಶ್ವ ಸ್ಕೌಟಿಂಗ್ 100 ವರ್ಷದ ಶತಮಾನೋತ್ಸವದಲ್ಲಿ ಗೈಡ್ ವಿಭಾಗ ಸಕ್ರಿಯವಾಗಿ ಭಾಗವಹಿಸಿತು. ಇದರ ಅಂಗವಾಗಿ ಶಾಂತಿಗೃಹದ ಅಂಗಳದಲ್ಲಿ ಸ್ಮಾರಕವನ್ನು ರಚಿಸಿದ 22-8-2008ರ ಚಿಂತನಾದಿನಾಚರಣೆಯಂದು ಸ್ಕೌಟ್-ಗೈಡ್ ಲೋಕಕ್ಕೆ ಸಮರ್ಪಣೆ ಮಾಡಲಾಯಿತು.

ಲಾರ್ಡ್ ಹಾಗೂ ಲೇಡಿ ಬಿ.ಪಿ.ಯವರ ಹುಟ್ಟುಹಬ್ಬವನ್ನು ನಮ್ಮ ವಿಭಾಗದಲ್ಲಿ ಸ್ಕೌಟ್‌ಗಳೊಡನೆ ಜಂಟಿ ಕಾರ್ಯಕ್ರಮವಾಗಿ ಪ್ರತಿವರ್ಷವೂ ಆಚರಿಸಲಾಗುತ್ತದೆ.

ಕರ್ನಾಟಕದಲ್ಲಿ ರಾಜ್ಯ ಮಾತ್ರವಲ್ಲ ರಾಷ್ಟ್ರ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ತರಬೇತಿ ನೀಡುವ ತರಬೇತಿದಾರರಿದ್ದಾರೆ. ಗೈಡ್ ಮಕ್ಕಳು ಹಾಗೂ ದಳ ನಾಯಕಿಯರೂ ಅನೇಕ ಅಂತಾರಾಷ್ಟ್ರೀಯ ಕಾರ್ಯಗಳಲ್ಲಿ ಭಾಗವಹಿಸಿ ರಾಷ್ಟ್ರಕ್ಕೆ ಕೀರ್ತಿ ತಂದಿದ್ದಾರೆ. ವಿವಿಧ ಹುದ್ದೆಗಳನ್ನು ಅಲಂಕರಿಸಿ ಅನೇಕ ಸಾಧನೆಗಳನ್ನು ಮಾಡುತ್ತಿದ್ದಾರೆ.

ಗೈಡ್ ಸಾಹಿತ್ಯ ಸಂಪತ್ತನ್ನು ಬೆಳೆಸುವಲ್ಲಿ ಕರ್ನಾಟಕದ ಪಾತ್ರ ಪ್ರಮುಖವಾಗಿದೆ. ರಾಷ್ಟ್ರ ಬರಹಗಾರರ ಕಾರ್ಯಾಗಾರದಲ್ಲಿ ನಮ್ಮ ಲೇಖಕರು ಶ್ರೀಮತಿ ಎಸ್.ಕೆ. ಪ್ರಭಾ ಮತ್ತು ಶ್ರೀಮತಿ ರವಿ ವೆಸ್ಲಿಯವರುಗಳು ಭಾಗವಹಿಸಿದ್ದಾರೆ.

ರಾಷ್ಟ್ರ ಮತ್ತು ರಾಜ್ಯ ಸಾಹಿತ್ಯ ಲೋಕದಲ್ಲಿ ಶ್ರೀಮತಿ ಮೈಥಿಲಿ ಸಂಪತ್ ಅಗ್ರಮಾನ್ಯರು, 60 ಮತ್ತು 70 ರ ದಶಕದಲ್ಲಿ ಅನೇಕ ಪುಸ್ತಕಗಳನ್ನು ಬುಲ್ ಬುಲ್ ಮತ್ತು ಗೈಡ್‌ಗಳಿಗಾಗಿ ಪ್ರಕಟಿಸಿದ್ದಾರೆ. ದಿ॥ ಎಸ್.ಕೆ. ಪ್ರಭಾ, ದಿ॥ ರವಿ ವೆಸ್ಲಿ, ದಿ॥ ಎನ್.ಕೆ. ಛಾಯಾ, ದಿ॥ ನಿರ್ಮಲ ಕಲಾಶೆಟ್ಟಿ, ದಿ॥ ಕಮಲಾಕ್ಷಿ ಹೆಗ್ಗಡೆ ಹಾಗೂ ಶ್ರೀಮತಿಗಳಾದ ಬಿ.ಡಿ. ಶಾಂತ, ಪಿ.ಸಿ. ಮಂಗಳೂರು, ಹಾಗೂ ರೇವತಿ, ಗೈಡ್ ಮತ್ತು ಬುಲ್ ಬುಲ್ ಎಲ್.ಟಿಗಳು ಪಠ್ಯ ನಿರ್ಮಾಣ, ದಿನಚರಿ ಪುಸ್ತಕ ಹಾಗೂ ತರಬೇತಿ ಕೈಪಿಡಿ, ಲೇಡಿ ಬಿ.ಪಿ ಯವರ ಜೀವನ ಸಾಧನೆ, ರೇಂಜರ್‌ಗಳಿಗಾಗಿ "ಪ್ರೇರಣಾ" ಮುಂತಾದ ಪುಸ್ತಕಗಳನ್ನು ಹೊರತಂದಿರುತ್ತಾರೆ.

2019-20 ಪ್ರಪಂಚದಲ್ಲೇ ಕೋವಿಡ್‌ನಿಂದ ಒಂದು ಕಾರ್ಗತ್ತಲಿನ ಅನುಭವ, ಆದರೆ ನಮ್ಮೆಲ್ಲರ ನೆಚ್ಚಿನ ರಾಜ್ಯ ಪ್ರಧಾನ ಆಯುಕ್ತರಾದ ಶ್ರೀ.ಪಿ.ಜಿ.ಆರ್ ಸಿಂಧ್ಯರವರು, "ಸ್ಕೌಟ್ಸ್ ಮತ್ತು ಗೈಡ್ಸ್‌ಗಳು ಧೈರ್ಯವಂತರು ಮತ್ತು ಸೇವೆಗೆ ಸದಾ ಸಿದ್ದರು" ಎಂಬುದನ್ನು ಧೃಡೀಕರಿಸುವಂತೆ ಹಲವಾರು ಕಾರ್ಯಕ್ರಮಗಳನ್ನು ಯೋಜಿಸಿ ನೆರೆಹೊರೆಯ ವೃದ್ಧರಿಗೆ ಸಹಾಯ, ಒಂದು ಕೋಟಿ ಮಾಸ್ಕ ತಯಾರಿಸಿ ಎಲ್ಲರಿಗೂ ಹಂಚಿಕೆ, ಈ ರೀತಿ ಈ ಸಮಯದಲ್ಲೂ ಜನರಿಗೆ ಉಪಕಾರ ಹಾಗೂ ಯಾವಾಗಲೂ ಸ್ಕೌಟ್-ಗೈಡ್‌ಗಳ ಚೂಟಿಯಾಗಿರುವಂತೆ ಅನೇಕ ಆನ್ ಲೈನ್ ಚಟುವಟಿಕೆಗಳನ್ನು ಯೋಜಿಸಿದರು.

ಕೋವಿಡ್‌ನಲ್ಲಿ ಆನ್‌ಲೈನ್ ಕಾರ್ಯಕ್ರಮಗಳನ್ನು ಸವಿದ ಭಾರತ್ ಸ್ಕೌಟ್ಸ್ ಮತ್ತು ಗೈಡ್ ಕರ್ನಾಟಕ, ಈಗಲೂ ಹಲವಾರು ನೂತನ ಕಾರ್ಯಕ್ರಮಗಳನ್ನು ನಡೆಸುತ್ತಾ ಭಾರತದಲ್ಲೇ ಅತ್ಯುತ್ತಮ ರಾಜ್ಯ ಸಂಸ್ಥೆಯಾಗಿದೆ.

ಕರ್ನಾಟಕದಲ್ಲಿ ಗೈಡಿಂಗ್ ಇತಿಹಾಸ ಇಲ್ಲಿಗೆ ನಿಲ್ಲದು, ಹೆಣ್ಣುಮಕ್ಕಳು ಭಾರತದಲ್ಲಿ ಇರುವವರೆಗೂ ಗೈಡಿಂಗ್ ಬೆಳೆಯುತ್ತಲೇ ಇರುತ್ತದೆ.

ಶತಾಯುಷಿ ಗೈಡಿಂಗ್!

ರಾಜ್ಯದಲ್ಲಿ! ರಾಷ್ಟ್ರದಲ್ಲಿ ! ವಿಶ್ವದಲ್ಲಿ!

ಆಧಾರ ಪುಸ್ತಕಗಳು –

1. ಬಾಲಕರಿಗಾಗಿ ಸ್ಕೌಟಿಂಗ್.......... ಮೂಲ : ಲಾರ್ಡ್ ಬೇಡನ್ ಪೋವೆಲ್
   ಅನುವಾದ : ಶ್ರೀ ಚಂದ್ರಶೇಖರನ್ ....ನವಕರ್ನಾಟಕ ಪ್ರಕಾಶನ, ಬೆಂಗಳೂರು
2. Girl Guide in India — BS&G-NHQ. Delhi
3. ಗರ್ಲ್ ಗೈಡ್ ಮಾರ್ಗದರ್ಶಿ — BS&G-SHQ, Karnataka
4. A PRO Part III .... — BS&G-NHQ, Delhi
5. A Dream Came True:
   Edited by Smt. Lakshmi Mazumdar — BS&G-NHQ, Delhi
6. Guiding - How it All Began & Grew
   Mrs. Mythili Sampath — BS&G-SHQ, Karnataka
7. Hand Book of Camping & Hiking
   Mr. Raja Ram — BS&G-SHQ, Karnataka
8. The True Book About : Girl Guiding
   Mrs. Allix Liddle — Fredric Muller, London
9. ಗರ್ಲ್ ಗೈಡ್ ಪ್ರವರ್ಧಿನಿ
   Miss. Ravi Wesley. & S.K.Prabha — Nesara Publication, Bangalore
10. First Aid — St. John's Ambulance, Bangalore
11. Maping & Compass
    Teny Brown & Rob Hunter — Fredric Warne, London
12. Signal & Signs Mr. S.M. Balakrishna — TNBS&G-SHQ, Chennai
13. ನಕ್ಷಾಶಾಸ್ತ್ರದ ಮೂಲತತ್ತ್ವಗಳು
    R.L. Anantha Ramiah — University of Mysore
14. ಪ್ರಥಮ ಚಿಕಿತ್ಸೆ
    ಡಾ. ಸದಾಶಿವಭಟ್ — Udupi. BS&G. Karnataka
15. ರಾಜ್ಯ ರಾಷ್ಟ್ರ ಹಾಗೂ ವಿಶ್ವ ಗೈಡ್ ಸಂಸ್ಥೆಯ ಮಾಸಿಕಗಳು

Left Hand Sleeve (Guide)



Right Hand Sleeve (Guide)



Note:
A. Three Rashtrapati Proficiency Badges will be worn on the left sleeve.
B. Armlets for Company Leader / Assistant Company Leader / Patrol Leader / Second will be Worn over the cuff of the left sleeve as mentioned in the book and explained tn the diagram.

Note:
Company Leader Badge or Assistant Company Leader Badge will be stitched above the cuff of Right Sleeve as mentioned in the book and explained in the diagram.

ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯ
ದೂರದರ್ಶಿತ್ವ

2024ರ ವೇಳೆಗೆ, ಅತ್ಯಂತ ಕ್ರಿಯಾಶೀಲ
ಯುವಚಳವಳಿಯಾದ ಅಂತರರಾಷ್ಟ್ರೀಯ ವ್ಯಾಪ್ತಿಯ
ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಸಂಸ್ಥೆಯು
ಮೌಲ್ಯಾಧಾರಿತವಾದ, ಅತ್ಯಾಕರ್ಷಕ ಗುಣಗಳುಳ್ಳ,
ಸ್ವಾವಲಂಬಿಯಾದ, ಲಿಂಗತಾರತಮ್ಯವಿಲ್ಲದ
ಯುವಜನಾಂಗದ ಅವಶ್ಯಕತೆಗಳಿಗನುಗುಣವಾಗಿ ಬೆಳೆಯುತ್ತದೆ.

ಅಲ್ಲದೆ, ಸಮರ್ಥ ನಾಯಕರುಗಳ ಪರಿಣಾಮಕಾರಿ
ಮಾರ್ಗದರ್ಶನದ ಮೂಲಕ ಮುಂದುವರೆದ ತಂತ್ರಜ್ಞಾನ,
ಉತ್ತಮ ಆಡಳಿತ ವ್ಯವಸ್ಥೆಯುಳ್ಳ ಸವಾಲಿನಿಂದ ಕೂಡಿದ
ಸಂಸ್ಥೆಯಾಗುತ್ತದೆ.

ವಿಶ್ವ ನಮ್ಮದು

ನಾವು ವಿಶ್ವದ ನಾಗರಿಕರು